ದೆಹಲಿ ಕರ್ನಾಟಕ ಸಂಘದ


# ಅಭಿಮತ

ಬೆಲೆ ರೂ.1/-

ಸಾಹಿತ್ಯೋತ್ಸವ ವಿಶೇಷಾಂಕ

ಸೆಪ್ಟೆಂಬರ್ 2025

## -: ಜ್ಞಾನಪೀಠ ಪುರಸ್ಕೃತರ ಕುರಿತು ವಿಚಾರ ಸಂಕಿರಣ :-




ಕುವೆಂಪು
ಶ್ರೀ ರಾಮಾಯಣ ದರ್ಶನಂ-1967



ಡಾ. ಯು.ಆರ್. ಅನಂತಮೂರ್ತಿ
ಸಮಗ್ರ ಸಾಹಿತ್ಯ-1994



ಮಾಸ್ತಿ ವೆಂಕಟೇಶ್ ಅಯ್ಯಂಗಾರ್
ಚಿಕ್ಕವೀರರಾಜೇಂದ್ರ-1983



ಡಾ. ವಿ.ಕೆ. ಗೋಕಾಕ್
ಭಾರತ ಸಿಂಧೂರ ರಶ್ಮಿ-1990




ಸಾಹಿತ್ಯೋತ್ಸವ ಮಾಲಿಕೆ-1





ಸಾಹಿತ್ಯೋತ್ಸವ ಮಾಲಿಕೆ-2




ಡಾ. ದ.ರಾ. ಬೇಂದ್ರೆ
ನಾಕುತಂತಿ-1973



ಡಾ. ಗಿರೀಶ್ ಕಾರ್ನಾಡ್
ಸಮಗ್ರ ಸಾಹಿತ್ಯ-1998



ಡಾ. ಕೆ. ಶಿವರಾಮ ಕಾರಂತ
ಮೂಕಜ್ಜಿಯ ಕನಸುಗಳು-1977



ಡಾ. ಚಂದ್ರಶೇಖರ ಕಂಬಾರ
ಸಮಗ್ರ ಸಾಹಿತ್ಯ-2010




ಸಾಹಿತ್ಯೋತ್ಸವ ಮಾಲಿಕೆ-3



ಸಾಹಿತ್ಯೋತ್ಸವ ಮಾಲಿಕೆ-4

# ಕನ್ನಡ ಸಾಹಿತ್ಯಲೋಕದ ದಿಗ್ಗಜರ ಕುರಿತ 'ಸಾಹಿತ್ಯೋತ್ಸವ' ಸಂಭ್ರಮ



ದೆಹಲಿಗೆ ಬಂದು ಹಲವಾರು ವರ್ಷ ಇಲ್ಲಿ ತಮ್ಮ ಕಾರ್ಯಸಾಧನೆಯಿಂದ ಇಲ್ಲಿನ ಕನ್ನಡಿಗರ ಮನಗೆದ್ದು ಇತ್ತೀಚೆಗೆ 'ಮಧ್ಯಂತರ' ಕಿರುಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಮನ್ನಣೆ ಪಡೆದು ಕನ್ನಡಿಗರ ಹಿರಿಮೆಯನ್ನು ಹೆಚ್ಚಿಸಿ ತಮ್ಮ ಬದುಕಿಗೆ ಒಂದು ಸಾರ್ಥಕತೆಯನ್ನು ಕಂಡುಕೊಂಡು ಇದೀಗ ತಾಯ್ನಾಡಿಗೆ ಮರಳುತ್ತಿರುವ ಸಂಘದ ಆಜೀವ ಸದಸ್ಯರಾದ ಶ್ರೀ ದಿನೇಶ್ ಶೆಣೈ ಅವರನ್ನು ದಿನಾಂಕ 21.09.2026 ರಂದು ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅವರು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಮತ್ತು ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿಗೆ ಭಾಜನರಾಗಿದ್ದಾರೆ. ತಾಯ್ನಾಡಿನಲ್ಲಿನ ಅವರ ಮುಂದಿನ ಜೀವನ ಸುಖಮಯವಾಗಿರಲಿ ಮತ್ತು ಆಯ್ದುಕೊಂಡ ಕಾರ್ಯಕ್ಷೇತ್ರದಲ್ಲಿ ಇನ್ನಷ್ಟು ಯಶಸ್ಸು ಪಡೆಯಲೆಂದು ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಕೆಗಳು.




ಅಮೇರಿಕಾದ ಲಾಸ್ ಎಂಜೆಲೀಸ್‌ನಲ್ಲಿ ಆರಂಭವಾಗಿರುವ ಭಾರತದ ನೂತನ ಕಾನ್ಸುಲೇಟ್ ಕಚೇರಿಯಲ್ಲಿ ಅದರ ಪ್ರಥಮ ಕಾನ್ಸುಲೇಟ್ ಜನರಲ್ ಆಗಿ ನಿಯುಕ್ತರಾದ ಭಾರತದ ವಿದೇಶಾಂಗ ವ್ಯವಹಾರಗಳ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿಗಳಾಗಿದ್ದ ಡಾ. ಕೆ.ಜೆ. ಶ್ರೀನಿವಾಸ, ಐ.ಎಫ್.ಎಸ್. ಅವರು ಇತ್ತೀಚೆಗೆ ಅಮೇರಿಕಾಗೆ ತೆರಳುವ ಮುನ್ನ ಅವರನ್ನು ದಿನಾಂಕ 21.09.2025ರಂದು ಸಂಘದಲ್ಲಿ ನಡೆದ ಸಾಹಿತ್ಯೋತ್ಸವ ಸಮಾರೋಪ ಸಮಾರಂಭದಲ್ಲಿ ದೆಹಲಿ ಕನ್ನಡಿಗರ ಪರವಾಗಿ ಸಂಘದಿಂದ ಸನ್ಮಾನಿಸಿ ಶುಭ ಹಾರೈಕೆಗಳೊಂದಿಗೆ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 35 । ಸಂಚಿಕೆ 12
ಸೆಪ್ಟೆಂಬರ್ 2025

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ

ಸದಸ್ಯರು
ಸರವು ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2024–26**

ಅಧ್ಯಕ್ಷರು
ಸಿ.ಎಂ. ನಾಗರಾಜ
9811325440

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಪೂಜಾ ಪಿ. ರಾವ್
9810882498

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183

ಖಜಾಂಚಿ
ಆಶಾಲತಾ ಎಂ.
9891249149

ಜಂಟಿ ಕಾರ್ಯದರ್ಶಿಗಳು
ನಾರಾಯಣ ಬಿ.
9868393978
ಅಶ್ವಿನಿ ಬಿ.ಎಸ್.
9036235665

ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಕೆ.ಎಸ್. ಮೂರ್ತಿ
9871140222
ಪ್ರಭಾಕರ ಮಡ್ಡಿತೋಟ್
9910091978
ನವೀನ್ ಕುಮಾರ್ ವಿ.
9871945819
ಅರುಣ್ ಸಿ.ಎಸ್.
9741282211
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಮಾಲಿನಿ ಪ್ರಹ್ಲಾದ
9910269085
ಎನ್.ಆರ್. ಶ್ರೀನಾಥ
7836954402
ಶಶಿಕಾಂತ ಪಿ. ಪಾಟೀಲ್
9650182413

# ಸಂಪಾದಕರ ಮನದ ಮಾತು...

## ಕನ್ನಡ ಸಾರಸ್ವತ ಲೋಕದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃರು, ಪ್ರಖ್ಯಾತ ಹಿರಿಯ ಸಾಹಿತಿಗಳು ಮತ್ತು ಸುಪ್ರಸಿದ್ಧ ಕವಿಗಳ ಕುರಿತಾದ ಅಭೂತಪೂರ್ವ ಸಾಹಿತ್ಯೋತ್ಸವದ ರಸದೌತಣ

ಆತ್ಮೀಯ ಅಭಿಮತ ಓದುಗ ಬಂಧುಗಳಿಗೆ ಶಿಕ್ಷಕರ ದಿನಾಚರಣೆ, ಇಂಜಿನಿಯರ್ಸ್ ದಿನಾಚರಣೆ ಮತ್ತು ಕಲ್ಯಾಣ ಕರ್ನಾಟಕ (ಹಿಂದಿನ ಹೈದ್ರಾಬಾದ್ ಕರ್ನಾಟಕ) ವಿಮೋಚನಾ ದಿನಾಚರಣೆಗಳ ಹಾರ್ದಿಕ ಶುಭಾಶಯಗಳು.

ಸಂಘದ ಇತಿಹಾಸದಲ್ಲೇ ಮೊದಲ ಬಾರಿಗೆ ವಿನೂತನವಾಗಿ ಹಮ್ಮಿಕೊಂಡ ಸಾಹಿತ್ಯೋತ್ಸವ ಕಾರ್ಯಕ್ರಮ ಅರ್ಥಪೂರ್ಣವಾಗಿ ಸಂಪನ್ನವಾಗಿ ದೆಹಲಿ ಕನ್ನಡಿಗರ ಮನ ಮುಟ್ಟಿದೆ. ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ನೀಡುವ ಅತ್ಯುನ್ನತವಾದ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಗೆ ಪುರಸ್ಕೃತರಾದ ಎಂಟು ಕನ್ನಡದ ಮೇರು ಸಾಹಿತಿ ಗಣ್ಯರನ್ನು ಹಾಗು ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದ ಇತರ ಅಗ್ರಗಣ್ಯ ಸಾಹಿತಿಗಳನ್ನು ಮತ್ತು ಕವಿ ಪುಂಜರನ್ನು ಸ್ಮರಿಸುವ, ಅವರ ಜೀವನ ಸಾಧನೆ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರುಗಳು ನೀಡಿದ ಕೊಡುಗೆಗಳ ಕುರಿತು ಸಂವಾದ–ಅನುಸಂಧಾನ–ವಿಚಾರ ಸಂಕಿರಣ ಹಾಗು ಸ್ಥಳೀಯ ಕಲಾವಿದರಿಂದ ಅವರ ಕವನಗಳ ಗಾಯನಗಳನ್ನೊಳಗೊಂಡ ಸಾಹಿತ್ಯೋತ್ಸವ ಕಾರ್ಯಕ್ರಮ, ಏಳು ಮಾಲಿಕೆಗಳಲ್ಲಿ ಸಂಘದ ಸೆಮಿನರ್ ಹಾಲ್ ಮತ್ತು ಸಭಾಂಗಣದಲ್ಲಿ ಆಯೋಜನೆಯಾಗಿ ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿದೆ. ಕಳೆದ ಶತಮಾನದಲ್ಲಿ ನಮ್ಮ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮತ್ತು ಕನ್ನಡ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿ, ಪೋಷಿಸಿ ಬೆಳೆಸಿದ್ದಂತಹ ಸಾಹಿತಿಗಳ ಮತ್ತು ಕವಿಗಳ ಕುರಿತಾಗಿ ಸಾಹಿತ್ಯಿಕ ಕಾರ್ಯಕ್ರಮಗಳು ಸಂಘದಲ್ಲಿ ಪ್ರತಿವರ್ಷ ಆಗಾಗ್ಗೆ ನಡೆಯುತ್ತಿದ್ದರಾದರೂ, ಈ ವರ್ಷ ವಿಶೇಷ ರೂಪದಲ್ಲಿ ಆಯೋಜಿಸಬೇಕೆಂದು ನಮ್ಮ ಅಧ್ಯಕ್ಷರ ಪರಿಕಲ್ಪನೆಯನ್ನು 'ಸಾಹಿತ್ಯೋತ್ಸವ'ವೆಂಬ ಶೀರ್ಷಿಕೆ ಅಡಿಯಲ್ಲಿ ಏರ್ಪಡಿಸಲಾಗಿತ್ತು. ಆರಂಭದಲ್ಲಿ ಕನ್ನಡದ ಎಂಟು ಜ್ಞಾನಪೀಠ ಪುರಸ್ಕೃತರನ್ನು ಸ್ಮರಿಸುವ ಮತ್ತು ಅವರ ಕಾರ್ಯಸಾಧನೆ ಕೊಡುಗೆಗಳ ಕುರಿತು ನಾಲ್ಕು ವಿಚಾರ ಸಂಕಿರಣ ಕಾರ್ಯಕ್ರಮಗಳು ನಡೆದವು.

ದಿನಾಂಕ 10.08.2025 ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಸಾಹಿತ್ಯೋತ್ಸವದ ಉದ್ಘಾಟನಾ ಸಮಾರಂಭ ಮತ್ತು ರಾಷ್ಟ್ರಕವಿ ಕುವೆಂಪು ಮತ್ತು ಪ್ರಸಿದ್ಧ ಬರಹಗಾರ ಯು.ಆರ್. ಅನಂತಮೂರ್ತಿ ಕುರಿತಾದ ಒಂದನೇ ಮಾಲಿಕೆಯ ಕಾರ್ಯಕ್ರಮ ಆಯೋಜನೆಯಾಗಿತ್ತು. ದಿನಾಂಕ 17.08.2025 ರಂದು ನಡೆದ ಸಾಹಿತ್ಯೋತ್ಸವದ ಎರಡನೇ ಮಾಲಿಕೆಯಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ವಿ.ಕೆ. ಗೋಕಾಕ್‌ರ ಕುರಿತು, ನಂತರ ದಿನಾಂಕ 24.08.2025 ರಂದು ದ.ರಾ. ಬೇಂದ್ರೆ ಮತ್ತು ಗಿರೀಶ್ ಕಾರ್ನಾಡ್‌ರ ಕುರಿತು ಮೂರನೇ ಮಾಲಿಕೆ ಹಾಗು ದಿನಾಂಕ 31.08.2025 ರಂದು ಶಿವರಾಮ ಕಾರಂತ ಹಾಗು ಚಂದ್ರಶೇಖರ ಕಂಬಾರರ ಕುರಿತಾದ ನಾಲ್ಕನೇ ಮಾಲಿಕೆ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಆಯೋಜನೆಗೊಂಡವು. ಸಾಹಿತ್ಯ ತಜ್ಞರೂ ಮತ್ತು ವಿದ್ವಾಂಸರಿಂದ ಪ್ರಸ್ತುತಗೊಂಡ ವಿಚಾರ ಮಂಡನೆಯಲ್ಲಿ ಅವರ ಕಾರ್ಯ ಸಾಧನೆಯ ಕುರಿತಾಗಿ ಮೆಲುಕು ಹಾಕುವುದರ ಜೊತೆ ಜೊತೆಗೆ ಅವರಿಂದ ರಚಿಸಲ್ಪಟ್ಟ ಪ್ರಸಿದ್ಧ ಕವನಗಳನ್ನು ಮತ್ತು ಗೀತೆಗಳನ್ನು ಸ್ಥಳೀಯ ಕಲಾವಿದರು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಸಾಹಿತ್ಯ–ಸಂಗೀತದ ಸಮಾಗಮ ಮತ್ತು ವಿಚಾರಧಾರೆ ದೆಹಲಿಯ ಸಾಹಿತ್ಯಾಸಕ್ತ ಕನ್ನಡಿಗರಿಗೆ ಮುದ ನೀಡಿತು.

ಈ ಕಾರ್ಯಕ್ರಮಗಳಿಗೆ ಬಂದ ಉತ್ತಮ ಪ್ರತಿಕ್ರಿಯೆಯಿಂದಾಗಿ ಸಾಹಿತ್ಯೋತ್ಸವದ ಮುಂದುವರಿದ ಭಾಗವಾಗಿ ಕನ್ನಡದ ಇತರ ಪ್ರಸಿದ್ಧ ಸಾಹಿತಿಗಳ ಮತ್ತು ಕವಿಗಳ ಕುರಿತಾದ ಮತ್ತೆ ಮೂರು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ದಿನಾಂಕ 07.09.2025 ರಂದು ಹಮ್ಮಿಕೊಂಡ ಸಾಹಿತ್ಯೋತ್ಸವದ ಐದನೇ ಮಾಲಿಕೆಯ ಕಾರ್ಯಕ್ರಮದಲ್ಲಿ ಡಿ.ವಿ.ಜಿ, ಗೋಪಾಲಕೃಷ್ಣ ಅಡಿಗ, ಬಿ.ಎಂ.ಶ್ರೀ, ಭೈರಪ್ಪ, ಗೋವಿಂದ ಪೈ ಮತ್ತು ಸಿದ್ದಲಿಂಗಯ್ಯನವರ ಬಗ್ಗೆ ಐದನೇ ಕಾರ್ಯಕ್ರಮ ಮತ್ತು ದಿನಾಂಕ 14.09.2025ರಂದು ಜರುಗಿದ ಆರನೇ ಮಾಲಿಕೆಯಲ್ಲಿ ಪು.ತಿ.ನ., ಅ.ನ.ಕೃ., ನರಸಿಂಹಸ್ವಾಮಿ, ಪಂಜೆ ಮಂಗೇಶರಾಯ ಮತ್ತು ಚೆನ್ನವೀರ ಕಣವಿ ಕುರಿತು ಸಾಹಿತ್ಯ ಸಂವಾದ ಸಂಘದ ಸೆಮಿನಾರ್ ಹಾಲ್‌ನಲ್ಲಿ ನಡೆದಿತ್ತು. ಸಾಹಿತ್ಯೋತ್ಸವ ಸರಣಿಯ ಏಳನೇ ಮಾಲಿಕೆಯ ಕಾರ್ಯಕ್ರಮ ಮತ್ತು ಸಮಾರೋಪ ಸಮಾರಂಭದಲ್ಲಿ ಸಾಹಿತಿಗಳಾದ ನಿಸಾರ್ ಅಹಮದ್, ಡಿ.ಎಸ್. ಕರ್ಕಿ, ಜಿ.ಪಿ. ರಾಜರತ್ನಂ, ಜಿ.ಎಸ್. ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್ಟ ಮತ್ತು ಪೂರ್ಣಚಂದ್ರ ತೇಜಸ್ವಿ ಅವರ ಕುರಿತು ವಿಚಾರ ಸಂಕಿರಣವು ಆಧುನಿಕ ಧ್ವನಿ ಸಿಸ್ಟಮ್ ಮತ್ತು ನೂತನ ಆಸನಗಳಿಂದ ನವೀಕೃತಗೊಂಡ ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆದು ದೆಹಲಿಗರ ಅಪಾರ ಜನಮನ್ನಣೆಯೊಂದಿಗೆ ಮುಕ್ತಾಯಗೊಂಡಿತು.

ಬಹಳ ಅರ್ಥಪೂರ್ಣವಾಗಿ ನಡೆದ ಈ ಸಾಹಿತ್ಯೋತ್ಸವದಲ್ಲಿ ಸ್ಥಳೀಯ ಪರಿಣಿತರು ಖುದ್ದಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ತಮ್ಮ ವಿಚಾರಧಾರೆ ಹಂಚಿಕೊಂಡರು. ಕರ್ನಾಟಕದ ವಿವಿಧೆಡೆಯಿಂದ ಆನ್‌ಲೈನ್‌ನಲ್ಲಿ ಭಾಗವಹಿಸಿದ್ದ ಸಾಹಿತ್ಯ ತಜ್ಞರು ಮತ್ತು ವಿದ್ವಾಂಸರು ನಿಸ್ತಂತು ಮಾಧ್ಯಮದ ಮೂಲಕ ತಮ್ಮ ವಿಚಾರ ಮಂಡನೆ ಮಾಡಿದರು. ಇದೇ ಸಂದರ್ಭದಲ್ಲಿ ಸ್ಥಳೀಯ ಕಲಾವಿದರು, ಅನೇಕ ದೆಹಲಿ ಕನ್ನಡತಿಯರು ಮತ್ತು ಮಕ್ಕಳು ಕನ್ನಡದ ಈ ಹೆಸರಾಂತ ಕವಿಗಳ ಗೀತೆಗಳನ್ನು ಮತ್ತು ಕವನಗಳನ್ನು ಸುಶ್ರಾವ್ಯವಾಗಿ ಹಾಡಿ ದೆಹಲಿ ಕನ್ನಡಿಗರನ್ನು ಮನರಂಜಿಸಿದರು. ಒಟ್ಟಾರೆಯಾಗಿ ಈ ಸಾಹಿತ್ಯೋತ್ಸವ ಕಾರ್ಯಕ್ರಮ ಅತ್ಯಂತ ಯಶಸ್ಸು ಕಂಡಿದ್ದು, ಕನ್ನಡದ 25 ಸಾಹಿತಿಗಳು ಮತ್ತು ಕವಿಗಳ ಜೀವನ, ಅವರ ಸಾಹಿತ್ಯಲೋಕದ ಸಾಧನೆಯನ್ನು ದೆಹಲಿ ಕನ್ನಡಿಗರು ಸ್ಮರಿಸಲು, ಅವರ ಬಗ್ಗೆ ಈವರೆಗೆ ಕೇಳಿರದ, ಓದಿರದ ಅನೇಕ ವಿಚಾರಗಳನ್ನು ತಿಳಿದುಕೊಳ್ಳಲು ಒಂದು ಉತ್ತಮ ವೇದಿಕೆಯಾಗಿ ಹೊರಹೊಮ್ಮಿದ್ದು ಶ್ಲಾಘನೀಯವಾಗಿದೆ. ಇದಕ್ಕಾಗಿ ನಮ್ಮ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಪದಾಧಿಕಾರಿಗಳು, ಸದಸ್ಯರು ಹಾಗೂ ವಿಚಾರ ಮಂಡಿಸಿದ ವಿಶೇಷ ಆಹ್ವಾನಿತರು, ಮುಖ್ಯ ಅತಿಥಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಸ್ಥಳೀಯ ಕಲಾವಿದರು ಅಭಿನಂದನಾರ್ಹರು.

ಆತ್ಮೀಯರೇ, ಈ ಸಾಹಿತ್ಯೋತ್ಸವದ ಅಭೂತಪೂರ್ವ ಯಶಸ್ಸನ್ನು ಮತ್ತು ಕನ್ನಡ ಸಾಹಿತಿಗಳ ಕುರಿತಾದ ಸಂವಾದ, ಅನುಸಂಧಾನ–ವಿಚಾರ ಸಂಕಿರಣದಲ್ಲಿ ಮಂಡನೆಯಾದ ವಿಚಾರಧಾರೆಗಳನ್ನು ದಾಖಲಿಸಲು ಹೊರತಂದಿರುವ ಅಭಿಮತದ ಈ ಸಾಹಿತ್ಯೋತ್ಸವ ವಿಶೇಷಾಂಕ (ಸೆಪ್ಟೆಂಬರ್ 2025ರ ಸಂಚಿಕೆ) ಸ್ವಲ್ಪ ತಡವಾಗಿ ನಿಮ್ಮ ಕೈ ಸೇರುತ್ತಿದೆ. ತಾಂತ್ರಿಕ ಅನಿವಾರ್ಯತೆ ಮತ್ತು ಇತರ ಕಾರಣಗಳಿಂದ ಇದನ್ನು ಸಿದ್ದಪಡಿಸಲು ಮತ್ತು ಅದರ ಪ್ರಕಟಣೆಯಲ್ಲಿ ವಿಳಂಬವಾಗಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಈ ಸಂಚಿಕೆಯಲ್ಲಿ ಸಾಹಿತ್ಯೋತ್ಸವ ಮಾಲಿಕೆಗಳ ಛಾಯಾಚಿತ್ರಗಳು ಮತ್ತು ವಿಸ್ತೃತಗಳ ವರದಿಗಳ ಜೊತೆಯಲ್ಲಿ, 'ಆರೋಗ್ಯವೇ ಭಾಗ್ಯ' ಅಂಕಣದಲ್ಲಿ ಡಾ. ರೂಪಶ್ರೀ ಅವರು ನೀಡಿರುವ 'ಮಾನಸಿಕ ಸ್ವಾಸ್ಥ್ಯ ಮತ್ತು ಆಯುರ್ವೇದ' ಕುರಿತ ವೈದ್ಯಕೀಯ ಲೇಖನ ಹಾಗು ದೆಹಲಿ ಕನ್ನಡಿಗ ಶ್ರೀಹರಿ ಶೇಖರ್ ಕುರಿತಾಗಿ ತಿಂಗಳ ವ್ಯಕ್ತಿ ಅಂಕಣದಲ್ಲಿ ಶ್ರೀ ಸರವು ಕೃಷ್ಣ ಭಟ್ ಅವರ ಬರಹಗಳನ್ನು ಸಹಾ ನೀವು ಕಾಣಬಹುದು.

ಬಂಧುಗಳೇ, ಈ ಸಾಹಿತ್ಯೋತ್ಸವ ವಿಶೇಷಾಂಕ ಸಂಚಿಕೆ ನಿಮಗೆಲ್ಲಾ ಇಷ್ಟವಾಗಬಹುದೆಂದು ನಂಬಿರುತ್ತೇನೆ. ಮುಂಬರುವ ಅಭಿಮತದ ವಿಶೇಷ ಸಂಚಿಕೆಯಲ್ಲಿ ಸಂಘದ ಗೀತೋತ್ಸವ, ನಾಟಕೋತ್ಸವ ಮತ್ತು ನೃತ್ಯೋತ್ಸವ ಕಾರ್ಯಕ್ರಮಗಳ ವರದಿಗಳನ್ನು ಅಧ್ಯಕ್ಷರ ಸಲಹೆಯಂತೆ ವಿಶಿಷ್ಟ ರೂಪದಲ್ಲಿ ಸದ್ಯದಲ್ಲೇ ಪ್ರಕಟಿಸಲಾಗುವುದು. ಗಾಂಧಿ–ಶಾಸ್ತ್ರಿ ಜಯಂತಿ, ನವರಾತ್ರಿ, ದಸರಾ, ದೀಪಾವಳಿ ಹಬ್ಬಗಳ ಶುಭಾಶಯಗಳೊಂದಿಗೆ...

***ಕೆ. ಶ್ರೀನಿವಾಸ ಮೂರ್ತಿ***
**ಪ್ರಧಾನ ಸಂಪಾದಕ**

**ಒಳಪುಟಗಳಲ್ಲಿ .....**

❑ ಅಧ್ಯಕ್ಷರ ನುಡಿ–4 ❑ ಮುನ್ನೋಟ–5 ❑ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗು ಕನ್ನಡ ಸಾರಸ್ವತ ಲೋಕದ ಅಗ್ರಗಣ್ಯ ಸಾಹಿತಿಗಳು ಮತ್ತು ಕವಿಗಳ ಕುರಿತ 'ಸಾಹಿತ್ಯೋತ್ಸವ'–6 ❑ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ವಿನಾಯಕ ಕೃಷ್ಣ ಗೋಕಾಕ್ ಅವರ ಸಾಧನೆ ಮತ್ತು ಕೊಡುಗೆ: ವಿಚಾರ ಸಂಕಿರಣ–10 ❑ ಜ್ಞಾನಪೀಠ ಪ್ರಶಸ್ತಿಯನ್ನು ನಮ್ಮ ಕನ್ನಡಕ್ಕೆ ಮುಡಿಯಾಗಿಟ್ಟ ಬೇಂದ್ರೆ ಮತ್ತು ಕಾರ್ನಾಡರನ್ನು ನೆನೆಯುವ ಕಾರ್ಯ ಮೂಡಿದ ಸಾಹಿತ್ಯೋತ್ಸವ–14 ❑ ಡಾ. ಕೋಟ ಶಿವರಾಮ ಕಾರಂತ ಹಾಗೂ ಡಾ. ಚಂದ್ರಶೇಖರ ಕಂಬಾರ ಅವರ ಜೀವನ–ಸಾಹಿತ್ಯ ಸಾಧನೆಗಳ ಕುರಿತು ಸಂವಾದ–ಅನುಸಂಧಾನ–ವಿಚಾರ ಸಂಕಿರಣ–20 ❑ ಕನ್ನಡದ ಮೇರು ಸಾಹಿತಿಗಳಾದ ಡಾ. ಡಿ.ವಿ. ಗುಂಡಪ್ಪ, ಡಾ. ಎಂ. ಗೋಪಾಲಕೃಷ್ಣ ಅಡಿಗ, ಶ್ರೀ ಬಿ.ಎಂ.ಶ್ರೀ., ಡಾ. ಎಸ್.ಎಲ್. ಭೈರಪ್ಪ, ಶ್ರೀ ಎಂ. ಗೋವಿಂದ ಪೈ, ಮತ್ತು ಡಾ. ಸಿದ್ದಲಿಂಗಯ್ಯ ಅವರ ಸಾಧನೆಗಳ ಕುರಿತು ಸಾಹಿತ್ಯ ಸಂವಾದ–28 ❑ ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಪುತಿನ, ಅನಕೃ, ಕೆ.ಎಸ್. ನರಸಿಂಹಸ್ವಾಮಿ, ಪಂಜೆ ಮಂಗೇಶರಾಯ ಮತ್ತು ಚೆನ್ನವೀರ ಕಣವಿ ಅವರ ಕುರಿತು ಸಾಹಿತ್ಯ ಸಂಜೆ–36 ❑ ವಿಶೇಷ ವೈದ್ಯಕೀಯ ಲೇಖನ–ಮಾನಸಿಕ ಸ್ವಾಸ್ಥ್ಯ ಮತ್ತು ಆಯುರ್ವೇದ–39 ❑ ತಿಂಗಳ ವ್ಯಕ್ತಿ–ಶ್ರೀ ಶ್ರೀಹರಿ ಶೇಖರ್–41 ❑ ದೆಹಲಿ ಕನ್ನಡಿಗರ ಅಪಾರ ಜನಮನ್ನಣೆ ಪಡೆದ –'ಸಾಹಿತ್ಯೋತ್ಸವ'ದ ಸಮಾರೋಪ ಸಮಾರಂಭ–42

**ಕಾವಲು ಸಮಿತಿ :** ಶ್ರೀ ಎನ್.ಎ. ಮಾಧವ  ಶ್ರೀ ಎಂ.ವಿ. ವೆಂಕಟೇಶ್  ಶ್ರೀಮತಿ ರಾಧಾ ಕೌಜಲಗಿ

## ಅಧ್ಯಕ್ಷರ ನುಡಿ



ಸಮಸ್ತ ದೆಹಲಿ ಕನ್ನಡಿಗರಿಗೆ ನಿಮ್ಮ ಪ್ರೀತಿಯ ಸಿ.ಎಂ. ನಾಗರಾಜ ಮಾಡುವ ನಮಸ್ಕಾರಗಳು. ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮಗಳು ಸತತವಾಗಿ ನಡೆಯುತ್ತಿದ್ದವು. ಆದರೆ ಸಭಾಂಗಣದಲ್ಲಿ ಪ್ರೇಕ್ಷಕರ ಆಸನಗಳ ಪುನರುತ್ಥಾನದ ಸಂದರ್ಭದಲ್ಲಿ ಎರಡು ತಿಂಗಳು ಸಭಾಂಗಣ ಖಾಲಿ ಬಿಡುವ ಅನಿವಾರ್ಯತೆ ಬಂತು. ಆದರೆ ಸಭಾಂಗಣ ಲಭ್ಯವಿಲ್ಲ ಎಂದು ಸಂಘದ ಕಾರ್ಯಕ್ರಮಗಳನ್ನು ಖಾಲಿ ಬಿಡಲಾಗದು. ಇಂತಹ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಿಡುವು ಸಿಕ್ಕರೂ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಬಿಡುವು ಇರಲಿಲ್ಲ. ಸಾಹಿತ್ಯದ ಕಾರ್ಯಕ್ರಮಗಳಿಗೆ ಪ್ರೇಕ್ಷಕರ ಒಲವು ಕಡಿಮೆ ಎನ್ನುವ ಭಾವನೆ ಇದ್ದರೂ ವಿಶಿಷ್ಟವಾಗಿ ಆಯೋಜನೆಗೊಳ್ಳುವ ಸಾಹಿತ್ಯಿಕ ಕಾರ್ಯಕ್ರಮಗಳ ಬಗ್ಗೆ ಪ್ರೇಕ್ಷಕರು ಇದ್ದೇ ಇರುತ್ತಾರೆ ಎಂಬುದಕ್ಕೆ ದೆಹಲಿ ಕರ್ನಾಟಕ ಸಂಘ ಈ ಸಮಯದಲ್ಲಿ ಆಯೋಜಿಸಿದ ಸಾಹಿತ್ಯೋತ್ಸವದ ಯಶಸ್ಸೇ ಸಾಕ್ಷಿ. ಈ ಸಾಹಿತ್ಯೋತ್ಸವದಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ದಿಗ್ಗಜರ ಕೊಡುಗೆಗಳನ್ನು ಸ್ಮರಿಸುವ ವಿಚಾರ ಸಂಕಿರಣ ಮಾಡಿ ದೆಹಲಿಯಲ್ಲಿರುವ ಕನ್ನಡಿಗರ ಮುಂದಿನ ಪೀಳಿಗೆಗೆ ನಮ್ಮ ಸಾಹಿತಿಗಳನ್ನು, ಕವಿಗಳನ್ನು ಪರಿಚಯಿಸುವ ಕಲ್ಪನೆ ಮಾಡಿದೆ. ಏಕೆಂದರೆ ಈ ರೀತಿಯ ಕಾರ್ಯಕ್ರಮಗಳು ಪ್ರತಿ ಐದು ವರ್ಷಕ್ಕೊಮ್ಮೆ ಅಥವಾ ಆಗಾಗ ನಡೆಯುವುದರಿಂದ ನಮ್ಮ ಮುಂದಿನ ಪೀಳಿಗೆಗೆ ನಮ್ಮ ಕನ್ನಡ ಸಾಹಿತ್ಯದ ಅಗಾಧತೆಯನ್ನು ಪರಿಚಯಿಸಬಹುದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿ–ಸಾಹಿತಿಗಳ ಬಗ್ಗೆ ಸಾಹಿತ್ಯೋತ್ಸವ ಕಾರ್ಯಕ್ರಮ ಆರಂಭಿಸಿದೆವು. ಪ್ರತಿ ವಾರ ಎರಡು ಮಹಾನ್ ಕವಿಗಳ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದ್ದೆವು.

ಮೊದಲಿಗೆ ರಾಷ್ಟ್ರಕವಿ ಕುವೆಂಪುರವರ 'ಶ್ರೀರಾಮಾಯಣ ದರ್ಶನಂ' ಮತ್ತು ಡಾ. ಯು.ಆರ್. ಅನಂತಮೂರ್ತಿಯವರ ಸಮಗ್ರ ಸಾಹಿತ್ಯದ ಬಗ್ಗೆ ಅವಲೋಕನದ ವಿಚಾರ ಸಂಕಿರಣ ಮಾಡಿದೆವು. ಈ ಕಾರ್ಯಕ್ರಮಕ್ಕೆ ಕೇಂದ್ರ ಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರ ಆಪ್ತ ಕಾರ್ಯದರ್ಶಿಗಳಾದ ಐಎಎಸ್ ಅಧಿಕಾರಿ ಡಾ. ತೇಜಸ್ವಿ ನಾಯಕ್ ಹಾಗೂ ನೈಸರ್ಗಿಕ ಚಿಕಿತ್ಸಾ ಪದ್ಧತಿ (ನ್ಯಾಚುರೋಪಥಿ)ಯ MDNIYನ ಮಾಜಿ ನಿರ್ದೇಶಕರಾದ, ಯೋಗ ಗುರು ಮತ್ತು ಪ್ರಾಧ್ಯಾಪಕರಾದ ಡಾ. ಈಶ್ವರ ವೀ. ಬಸವರಡ್ಡಿಯವರು ಅತಿಥಿಗಳಾಗಿ ಬಂದರು. ಕನ್ನಡ ಸಾಹಿತ್ಯದ ಬಗ್ಗೆ ಅಭಿರುಚಿ ಹೊಂದಿರುವ ದೆಹಲಿಯ ಅನೇಕ ಸಾಹಿತಿಗಳನ್ನೂ ಸಹಾ ಆಮಂತ್ರಿಸಲಾಗಿತ್ತು. ಇದರಲ್ಲಿ ಡಾ. ಎಸ್. ಎಲ್. ಭಂಡಾರ್‌ಕರ, ಡಾ. ಬಸವರಾಜು, ಡಾ. ವೈ. ಅವನೀಂದ್ರನಾಥ್ ರಾವ್, ಡಾ. ಕಣ್ಣಪ್ಪ ಶೆಟ್ಟಿ, ಶ್ರೀಮತಿ ಸರೋಜ ಮಾಧವ, ಶ್ರೀ ಪ್ರಸಾದ್ ನಾಯ್ಕ್ ಮತ್ತು ಕರ್ನಾಟಕದಿಂದ ಶ್ರೀ ವಿನಯ್ ಕಣಿವೆ ಸೇರಿದಂತೆ ಇನ್ನು ಅನೇಕ ಸ್ಥಳೀಯರು ಪಾಲ್ಗೊಂಡು ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಮೊದಲ ಕಾರ್ಯಕ್ರಮದಲ್ಲಿ ನಮ್ಮ ದೆಹಲಿ ಕರ್ನಾಟಕ ಸಂಘದ ಕನ್ನಡ, ಸಂಗೀತ ಮತ್ತು ನೃತ್ಯ ಕಲಿಯುವ ಮಕ್ಕಳಿಂದ ಮತ್ತು ದೆಹಲಿಯ ಸ್ಥಳೀಯ ಕಲಾವಿದರಿಂದ ಸುಮಧುರವಾದ ಕುವೆಂಪು ಅವರಿಂದ ರಚಿತ ಕವನಗಳ ಮತ್ತು ಗೀತೆಗಳ ಗಾಯನವನ್ನು ಹಮ್ಮಿಕೊಂಡಿದ್ದೆವು. ಮೊದಲ ವಿಚಾರ ಸಂಕಿರಣದ ಕಾರ್ಯಕ್ರಮಕ್ಕೆ ಸಭಾಭವನ ತುಂಬಿ ತುಳುಕಿತ್ತು. ಹೀಗೆ ಆರಂಭಗೊಂಡ ಸಾಹಿತ್ಯೋತ್ಸವದ ಜೈತ್ರಯಾತ್ರೆ ಕನ್ನಡ ಸಾಹಿತ್ಯದ ರಸದೌತಣವನ್ನು ಕನ್ನಡ ಸಾಹಿತ್ಯಪ್ರಿಯರಿಗೆ ಸುಮಾರು ಏಳು ವಾರಗಳು ಎಡೆಬಿಡದೆ ನೀಡಿತು.

ಸರಿಸುಮಾರು 25 ಕವಿಗಳ ಬಗ್ಗೆ 39 ಗೌರವಾನ್ವಿತ ಭಾಷಣಕಾರರು ಹಾಗೂ 25 ಜನ ಮುಖ್ಯ ಅತಿಥಿಗಳು ಸೇರಿದಂತೆ ದೆಹಲಿಯ ನೂರಾರು ಕಲಾವಿದರು ಅನೇಕ ಸಾಹಿತಿಗಳು, ಸಾಹಿತ್ಯ ಪ್ರಿಯರು ಹಾಗು ಮೇರು ಸಾಹಿತಿಗಳು ಮತ್ತು ಕವಿಗಳ ಬಗ್ಗೆ ಮಾತನಾಡಲು ಕರ್ನಾಟಕದಿಂದ ಸಾಹಿತ್ಯ ತಜ್ಞರು ಅಂತರ್ಜಾಲದ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ವಿಚಾರಧಾರೆ ಮಂಡಿಸಿದರು. ಎರಡು ತಿಂಗಳ ಭರ್ಜರಿ ಸಾಹಿತ್ಯೋತ್ಸವ ಕಾರ್ಯಕ್ರಮ ಯಶಸ್ವಿಯಾಯಿತು. ಜ್ಞಾನಪೀಠ ಪುರಸ್ಕೃತರಲ್ಲದೇ ಕನ್ನಡ ಸಾಹಿತ್ಯದ ಬಗ್ಗೆ ಇತರ ಮೇರು ಸಾಹಿತಿಗಳ ಬಗೆಗಿನ ಈ ಕಾರ್ಯಕ್ರಮದ ಆಯೋಜನೆಯನ್ನು ಏಳು ವಾರಗಳಿಗೆ ಸೀಮಿತಗೊಳಿಸಿದೆವು, ಏಕೆಂದರೆ ಕರ್ನಾಟಕದ ಸಾಹಿತ್ಯ ಹಾಗೂ ಸಾಹಿತಿಗಳ ಬಗ್ಗೆ ಇಡೀ ವರ್ಷವಲ್ಲ ನಮ್ಮ ಅವಧಿ ಪೂರ್ತಿ ಕಾರ್ಯಕ್ರಮ ಮಾಡಿದರೂ ಸಮಯ ಸಾಲದಾಗುತ್ತದೆ. ಅಷ್ಟು ಆಗಾಧ ನಮ್ಮ ಕನ್ನಡ ಭಾಷಾ ಸಾಹಿತ್ಯ.

ನಂತರ, ನಡುಗನ್ನಡ ಹಾಗೂ ಹಳೆಗನ್ನಡ ಸಾಹಿತ್ಯದ ಬಗ್ಗೆ ವಿಚಾರ ಸಂಕಿರಣ ಏರ್ಪಡಿಸಲು ಉತ್ತಮವಾದ ಬೇಡಿಕೆ ಬಂತು. ಆದ್ದರಿಂದ ಮುಂಬರುವ ಕಾರ್ಯಕ್ರಮಗಳ ನಂತರ ಈ ಬಗ್ಗೆ ಕಾರ್ಯಕ್ರಮ ಮಾಡುವೆವು. ಜೊತೆಗೆ ನಮ್ಮ ಸಾಹಿತ್ಯದ ಮತ್ತೊಂದು ವಿಶಿಷ್ಟ ಪರಂಪರೆಯಾದ ದಾಸ ಸಾಹಿತ್ಯ. ಸಮಾಜದ ಓರೆಕೋರೆಗಳನ್ನು ನೀತಿಯುತ ಕೀರ್ತನೆಗಳಿಂದ ಸಮಾಜದ ಎಲ್ಲಾ ಜಾತಿಗಳ ವ್ಯಕ್ತಿಗಳು ದಾಸರಾಗಿ ಕೀರ್ತನೆಗಳ ನೀಡಿದ್ದು ನಮ್ಮ ಸಾಹಿತ್ಯದ ವೈಶಿಷ್ಟ್ಯ. ಇದರ ಬಗ್ಗೆ ಮುಂದೆ ದಾಸ ಸಾಹಿತ್ಯ ಪರಂಪರೆಯ ಕೀರ್ತನೋತ್ಸವ ಮಾಡಲಿದ್ದೇವೆ.

ಸಂಘದ ಸಭಾಂಗಣದಲ್ಲಿ ಪುನರುತ್ಥಾನದ ಕೆಲಸ ಮುಗಿದರೂ ಸಾಹಿತ್ಯೋತ್ಸವದ ಕಾರ್ಯಕ್ರಮ ಸಂಪೂರ್ಣ ಮಾಡಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ತುಂಬಾ ಆಸಕ್ತಿಯನ್ನು ಹೊಂದಿದ್ದ ನಮ್ಮ ದೆಹಲಿ ಕನ್ನಡಿಗರ ಬೇಡಿಕೆಯಂತೆ ಮಿಕ್ಕ ಕವಿಗಳ ಸಾಹಿತ್ಯವನ್ನು ಹಾಡಿನ ರೂಪದಲ್ಲಿ ಗೀತೋತ್ಸವ ಕಾರ್ಯಕ್ರಮದ ಮೂಲಕ ಮುಂದುವರಿಸಬೇಕಾಯಿತು. ಈ ಎಲ್ಲಾ ಉತ್ಸವಗಳಿಗೆ ಸಂಚಾಲಕರಾಗಿ ಸಹಕಾರ ನೀಡಿದಂತ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಅರುಣ್ ಸಿ.ಎಸ್., ಶ್ರೀ ಎನ್.ಆರ್. ಶ್ರೀನಾಥ್ ಹಾಗೂ ನಮ್ಮ ಅನೇಕ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಕಾರ್ಯದರ್ಶಿಗಳು ಸೇರಿದಂತೆ ಸಂಪೂರ್ಣ ಕಾರ್ಯಕಾರಿ ಸಮಿತಿಯ ಬೆಂಬಲದಿಂದ ಪೂರ್ಣಗೊಂಡಿದೆ.

ಬಂಧುಗಳೇ, ನಮ್ಮ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದಲ್ಲಿ ನಮ್ಮ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ಎಷ್ಟು ದೊಡ್ಡದು ಎಂಬುದನ್ನು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಹೇಳಿದ್ದರು. ನಮ್ಮ ಸಾಹಿತ್ಯ ಸಂಸ್ಕೃತಿಗೆ ಕೊನೆಯೇ ಇಲ್ಲ... ಸಾಹಿತ್ಯೋತ್ಸವ..... ಗೀತೋತ್ಸವ...... ಹೀಗೆ ಮುಂದುವರಿದು ನಾಟಕೋತ್ಸವ..... ನೃತ್ಯೋತ್ಸವ......... ಆಹಾರೋತ್ಸವಗಳು ನಡೆಯುತ್ತಾ ನಮ್ಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸ್ಥಳೀಯ ಕಲಾವಿದರಿಗೆ ಸಂಪೂರ್ಣ ಅವಕಾಶ ನೀಡಿ ಅವರನ್ನೇ ಹೆಚ್ಚು ಪ್ರೋತ್ಸಾಹಿಸಲಾಯಿತು.

ಕರ್ನಾಟಕದಿಂದ ಬೆರಳೆಣಿಕೆಯಷ್ಟು ಕಲಾವಿದರು ಕಾರ್ಯಕ್ರಮಗಳನ್ನು ನೀಡಿದರು. ಆದರೆ 20 ವರ್ಷಗಳ ಹಿಂದೆ ನಾನು ದೆಹಲಿ ಕರ್ನಾಟಕ ಸಂಘಕ್ಕೆ ಮೊದಲ ಬಾರಿಗೆ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಸ್ಥಳೀಯರಿಗೆ ತರಬೇತಿ ನೀಡಿ ಸ್ಥಳೀಯರಿಂದಲೇ ಕಾರ್ಯಕ್ರಮಗಳನ್ನ ಮಾಡಿಸಲು ಆರಂಭಿಸಿ ಮುಂದುವರೆಸಿದೆ ಕೂಡ. ಮತ್ತೊಂದು ನನ್ನ ಬಯಕೆಯ ಹೊಸ ವಿಚಾರವೇನೆಂದರೆ ಮೈಸೂರು ದಸರಾದ ಮುಖ್ಯ ವೇದಿಕೆಯಲ್ಲಿ ನಮ್ಮ ದೆಹಲಿಯ ಸ್ಥಳೀಯ ಮಕ್ಕಳು ಕಾರ್ಯಕ್ರಮ ನೀಡಬೇಕು ಎಂದು. ಅದರಂತೆ ಈಗ ಕಾರ್ಯಕ್ರಮವನ್ನು ನೀಡುವಷ್ಟು ಅವರು ದೊಡ್ಡ ಕಲಾವಿದರಾಗಿದ್ದಾರೆ, ಇದು ನನಗೆ ಖುಷಿ ಹಾಗೂ ನಮ್ಮ ದೆಹಲಿ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಇದಕ್ಕಾಗಿ ನಾವೆಲ್ಲಾ ಹಿರಿಯರು ಕಟ್ಟಿದ ನಮ್ಮ ದೆಹಲಿ ಕರ್ನಾಟಕ ಸಂಘಕ್ಕೆ ಚಿರಋಣಿಯಾಗಿರಬೇಕು.

ಸಾಹಿತ್ಯೋತ್ಸವ ಸಂಪೂರ್ಣ ಸಮಗ್ರ ನೋಟವನ್ನು ಅಭಿಮತದ ಈ ವಿಶೇಷ ಸಂಚಿಕೆಯಲ್ಲಿ ತರಲಾಗಿದೆ. ಬೇರೆ ಯಾವುದೇ ಕಾರ್ಯಕ್ರಮಗಳನ್ನು ತಂದಿಲ್ಲ. ಇದಾದ ನಂತರ ಮತ್ತೊಂದು ನಾಟಕೋತ್ಸವ, ಗೀತೋತ್ಸವ ಮತ್ತು ನೃತ್ಯೋತ್ಸವದ ವಿಶೇಷ ಅಭಿಮತಗಳು ಪ್ರಕಟಣೆಗೊಳ್ಳಬೇಕಿತ್ತು. ಆದರೆ ನಮ್ಮ ಅಭಿಮತ ಸಂಚಿಕೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳನ್ನು ಒಟ್ಟುಗೂಡಿಸಿ

ಮಾಡುತ್ತಿರುವುದರಿಂದ ಎರಡು ಮೂರು ಸಂಚಿಕೆಗಳು ತಡವಾಗಿ ಬರುತ್ತಿದೆ.

ಇಷ್ಟೆಲ್ಲ ಕಾರ್ಯಕ್ರಮಗಳ ಜೊತೆಗೆ ಮತ್ತೊಂದು ದೊಡ್ಡ ಕಾರ್ಯಕ್ರಮ ನಮ್ಮ ವೀರರಾಣಿ ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಕಿತ್ತೂರಿನಲ್ಲಿ ಗಳಿಸಿದ ವಿಜಯಕ್ಕೆ ಸರಿಯಾಗಿ ಇನ್ನೂರು ವರ್ಷವಾಗಿದೆ. ಈ ವಿಜಯೋತ್ಸವವನ್ನು ಮೊಟ್ಟ ಮೊದಲ ಬಾರಿಗೆ ರಾಷ್ಟ್ರ ರಾಜಧಾನಿಯಲ್ಲಿ ಸಿರಿಫೋರ್ಟ್ ಸಭಾಂಗಣದಲ್ಲಿ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ ಆಚರಿಸಲಾಯಿತು. ಆ ಕಾರ್ಯಕ್ರಮ ಕೇಂದ್ರ ಸರಕಾರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮಂತ್ರಿಗಳಾದ ಶ್ರೀ ಗಜೇಂದ್ರ ಸಿಂಗ್ ಶೇಖಾವತ್‌ರವರ ಭಾಗವಹಿಸುವಿಕೆ ಹಾಗೂ ಈ ವಿಜಯೋತ್ಸವದ ನೆನಪಿಗೆ ರೂ. 200 ರ ನಾಣ್ಯ ಬಿಡುಗಡೆ ಮತ್ತು ನಮ್ಮ ಕನ್ನಡಿಗ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿದೆ. ಮಾನ್ಯ ಕೇಂದ್ರ ಮಂತ್ರಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ. ದೆಹಲಿ ಕರ್ನಾಟಕ ಸಂಘವು ದೆಹಲಿಯಲ್ಲಿ ಕನ್ನಡ ಅಸ್ತಿತ್ವದ ಕಾರ್ಯಕ್ರಮ ಹಾಗೂ ಕುರುಹುಗಳಿಗೆ ಸದಾ ಕೆಲಸ ಮಾಡುತ್ತದೆ. ಜೊತೆಗೆ ಪೂರ್ಣ ಸಹಕಾರ ಬೆಂಬಲ ನೀಡಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿಕೊಳ್ಳುತ್ತದೆ.

ಬಂಧುಗಳೇ, ಸಂಘದಲ್ಲಿ ಕಾರ್ಯಕ್ರಮಗಳು ಸತತವಾಗಿ ನಡೆಯುತ್ತಾ ಬರುತ್ತಿವೆ. ವಿಶ್ವ ಭೂಪಟದಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸುವ ಬೆಳೆಸುವ ಮೊಟ್ಟ ಮೊದಲ ಸಂಘ ಅಂತ ಯಾವುದಾದರೂ ಇದ್ದರೆ ಅದು ದೆಹಲಿ ಕರ್ನಾಟಕ ಸಂಘ. ದೆಹಲಿಯಲ್ಲಿ ಕನ್ನಡದ ಸಾಂಸ್ಕೃತಿಕ ರಾಯಭಾರಿಯಾಗಿ ಇದು ಕೆಲಸ ಮಾಡುತ್ತಿದೆ. ಪ್ರತಿವಾರ, ಪ್ರತಿ ತಿಂಗಳು ಕಾರ್ಯಕ್ರಮಗಳ ಸುರಿಮಳೆ. ಈ ಎಲ್ಲ ಕಾರ್ಯಕ್ರಮಗಳ ನಡುವೆ ದೆಹಲಿ ಕರ್ನಾಟಕ ಸಂಘಕ್ಕೆ ಮತ್ತೊಂದು ಜಾಗ ಪಡೆಯಬೇಕು ಎಂಬುದು ನನ್ನ ಅಭಿಲಾಷೆ. ಬಂಧುಗಳೇ, ಸಂಘಕ್ಕೆ ದುಡಿದಂತ ಮಹನೀಯರಲ್ಲಿ ಒಬ್ಬರಾದ ದಿ. ಕೆ.ಸಿ. ರೆಡ್ಡಿ ಮತ್ತು ಡಾ. ಸರೋಜಿನಿ ಮಹಿಷಿರವರ ಕೊಡುಗೆ ಇಂದು ಲೋಧಿ ಎಸ್ಟೇಟ್‌ನಲ್ಲಿರುವ ಎರಡೂವರೆ ಎಕರೆ ಜಾಗದ ಒಂದು ಕನ್ನಡ ಶಾಲೆ ಮತ್ತು ಮೋತಿಭಾಗ್ ಆರ್.ಕೆ. ಪುರಂನಲ್ಲಿರುವ ದೆಹಲಿ ಕರ್ನಾಟಕ ಸಂಘ. ಆ ಇಬ್ಬರೂ ಸಹ ಕೇಂದ್ರ ಮಂತ್ರಿಗಳಾಗಿದ್ದರು. ಅವರ ಕೃಪಾಕಟಾಕ್ಷದಿಂದ ಇವತ್ತು ರಾಷ್ಟ್ರ ರಾಜಧಾನಿಯಲ್ಲಿ ಅತ್ಯಂತ ಪ್ರತಿಷ್ಠಿತ ಜಾಗದಲ್ಲಿ ನಮ್ಮ ಕುರುಹುಗಳಿವೆ. ಈ ಎರಡು ನಿವೇಶನಗಳನ್ನು ಪಡೆಯುವ ಆ ಸಂದರ್ಭ ಅವರಿಬ್ಬರೂ ಎಷ್ಟು ಶ್ರಮವಹಿಸಿರಬೇಕು ಅಲ್ಲವೇ.. ಏಕೆಂದರೆ ಈಗ ಮತ್ತೊಂದು ಜಾಗ ತೆಗೆಯುವುದು ತುಂಬಾ ಕಠಿಣವಾಗಿದೆ.. ಕಾನೂನುಗಳ ಬೇರೆ ಬೇರೆ ರೀತಿಯ ತೊಂದರೆಗಳಿವೆ. ಆದರೂ ಸಹ ಉನ್ನತ ಮಂತ್ರಿವರ್ಯರನ್ನ, ಹಿರಿಯ ಐಎಎಸ್ ಅಧಿಕಾರಿಗಳನ್ನು ಭೇಟಿ ಮಾಡಿ ಮತ್ತೊಂದು ಜಾಗಕ್ಕೆ ಪ್ರಯತ್ನ ಪ್ರತಿದಿನ ನಡೆಯುತ್ತಿದೆ. ಆ ಪ್ರಯತ್ನ ಆದಷ್ಟು ಬೇಗನೆ ಸಂಪೂರ್ಣಗೊಳ್ಳಲಿ, ದೆಹಲಿ ಕರ್ನಾಟಕ ಸಂಘದಲ್ಲಿ ಮತ್ತೊಂದು ಜಾಗ ಕನ್ನಡಿಗರಿಗೆ ನಿಮ್ಮೆಲ್ಲರ ಸಹಕಾರದಿಂದ ನಿಮ್ಮೆಲ್ಲರ ಆಶೀರ್ವಾದದಿಂದ ಸಿಗಲೆಂದು ಆಶಿಸುತ್ತೇನೆ. ನಿಮ್ಮ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ. ಬರುವ ಕ್ರೀಡೋತ್ಸವ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಎಲ್ಲಾ ಸದಸ್ಯರು ಭಾಗಿಯಾಗಿ... ಇದು ಕೇವಲ ಸಂಘದ ಸದಸ್ಯರಿಗೆ ಮಾತ್ರ.. ಜೊತೆಗೆ ಬರುವ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಪ್ರವಾಸೋತ್ಸವವನ್ನು. ಸಂಘದ ಸದಸ್ಯರಿಗೆ ಪಂಜಾಬಿನ ಅಮೃತಸರಕ್ಕೆ ಹಮ್ಮಿಕೊಳ್ಳಲಿದ್ದೇವೆ. ಸಾವಿರಾರು ಕನ್ನಡಿಗರು ಭಾಗಿಯಾಗಿ ಈ ಪ್ರವಾಸೋತ್ಸವವನ್ನು ಯಶಸ್ವಿಗೊಳಿಸೋಣ. ಐತಿಹಾಸಿಕ ದಾಖಲೆಯನ್ನು ಸೃಷ್ಟಿಸೋಣ. ಬನ್ನಿ ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಕರ್ನಾಟಕದಿಂದ ದೂರ ಬಂದಿರುವ ನಮ್ಮ ನೋವನ್ನು ಮರೆಯೋಣ. ತಮ್ಮ ಮಕ್ಕಳನ್ನು ದೆಹಲಿ ಕರ್ನಾಟಕ ಸಂಘ ನಡೆಸುತ್ತಿರುವ ಕನ್ನಡ, ಸಂಗೀತ ಮತ್ತು ನೃತ್ಯ ಕಲಿಕೆ ತರಗತಿಗಳಲ್ಲಿ ಭಾಗಿಗೊಳಿಸಿ. ನನ್ನ ಮನಸ್ಸಿಗೆ ತುಂಬಾ ಇಷ್ಟವಾದ ಡಿವಿಜಿಯವರ ಈ ಮುಕ್ತಕದೊಂದಿಗೆ ಈ ತಿಂಗಳ ನನ್ನ ಮಾತನ್ನು ಮುಗಿಸುವೆ.

ಪಿಡಿ ಗಳಿಸು ಭುಜಿಸೊಡೆಯನಾಗೆನ್ನುವುದು ಮೋಹ–
ಕೊಡು ಸಲಿಸು ಸೇವೆಗೈಯೆನ್ನುವುದು ಕರುಣೆ–
ಬಿಡು ನೀನು ನಾನುಗಳ, ವಿಶ್ವಾತ್ಮಪದವನೀ–
ನಡರೆನ್ನುವುದು ಶಾಂತಿ– ಮಂಕುತಿಮ್ಮ

ಧನ್ಯವಾದಗಳು.

***ಸಿ.ಎಂ. ನಾಗರಾಜ***
ಅಧ್ಯಕ್ಷರು

## ಮುನ್ನೋಟ

ಪ್ರೀತಿಯ ಕನ್ನಡಿಗರೇ,

ದೆಹಲಿ ಕರ್ನಾಟಕ ಸಂಘದ ಸಭಾಂಗಣದ ವೇದಿಕೆ ಅದೆಷ್ಟೋ ಲಕ್ಷ ಕಲಾವಿದರ ಹೆಜ್ಜೆ ಗುರುತು, ಛಾಯೆ ಮತ್ತು ಅಂತರಾಳದ ಕಲೆಗಳನ್ನು ಅಚ್ಚಳಿಯದಂತೆ ಒತ್ತಿಕ್ಕಿದೆ. ಕಳೆದ 25 ವರ್ಷಗಳಲ್ಲಿ ಸ್ಥಳೀಯ ಕಲಾವಿದರ ಸ್ವಂತ ವೇದಿಕೆಯಾದರೆ ಕರ್ನಾಟಕದಿಂದ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಅಭಿಲಾಷೆ ಹೊತ್ತು ಬರುವಂತಹ ಕಲಾವಿದರಿಗೆ ನಮ್ಮ ದೆಹಲಿ ಕರ್ನಾಟಕ ಸಂಘದ ಕಟ್ಟಡದಲ್ಲಿ ನಿರ್ಮಾಣವಾದ ಈ ವೇದಿಕೆಯನ್ನು ಅಸಂಖ್ಯಾತ ಕಲಾವಿದರು ಅನುಭವಿಸಿ ತಮ್ಮನ್ನು ತಾವೂ ಮರೆತಿದ್ದಾರೆ. ಅಂತಹ ಸಭಾಂಗಣವನ್ನು ಅತ್ಯಾಧುನಿಕ ಧ್ವನಿವರ್ಧಕ, ಆರಾಮದಾಯಕ ಕುರ್ಚಿ ಮತ್ತು ನೆಲಹಾಸುವಿನಿಂದ ಈ ಬಾರಿ ಹೊಸ ರೂಪಕ್ಕೆ ನಮ್ಮ ಕಾರ್ಯಕಾರಿ ಸಮಿತಿ ಒತ್ತಾಸೆಯಿಂದ ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗಿದೆ.

ಇದೇ ಸಂದರ್ಭದಲ್ಲಿ ಕನ್ನಡ ಚಟುವಟಿಕೆಗೆ ಯಾವುದೇ ಕುಂದು ಕೊರತೆ ಆಗಬಾರದೆಂದು ನಮ್ಮ ಶ್ರೀಮಂತ ಸಾಹಿತಿಗಳ ಬಗ್ಗೆ ವಿಚಾರ ಸಂಕಿರಣವನ್ನು 2ನೇ ಮಹಡಿಯಲ್ಲಿರುವ ವಿಚಾರ ಸಂಕಿರಣ ಭವನದಲ್ಲಿ ಪ್ರತೀ ವಾರ ಹಮ್ಮಿಕೊಳ್ಳಲಾಗಿದ್ದು ಸಾಹಿತ್ಯ ಉತ್ಸವದ ಶೀರ್ಷಿಕೆಯಡಿಯಲ್ಲಿ 20ನೇ ಶತಮಾನದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು ಮೊದಲು ನೆನೆದು ಹಾಗು ತದನಂತರ ಇತರ ಸಾಹಿತಿಗಳು ಮತ್ತು ಕವಿಗಳ ಬಗ್ಗೆ ಕನ್ನಡ ಸಾಹಿತ್ಯದ ವಿಮರ್ಶಾತ್ಮಕ ಮತ್ತು ನಮಗರಿಯದ ಎಷ್ಟೋ ವಿಚಾರಗಳ ರೋಚಕ ಮಾಹಿತಿಗಳ ವಿನಿಮಯವಾಯಿತು. ದೆಹಲಿ ಕರ್ನಾಟಕ ಸಂಘದ ಈ ಪ್ರಯತ್ನದಿಂದ ನಮ್ಮಲ್ಲಿರುವ ಸಾಹಿತ್ಯಾಸಕ್ತರಿಗೆ ಉತ್ತೇಜನವಾಗಬಹುದು, ಹೊಸ ಸಾಹಿತಿಗಳ ಉಗಮವಾಗಬಹುದು, ರಾಷ್ಟ್ರ ರಾಜಧಾನಿಯಲ್ಲಿ ಇನ್ನಷ್ಟು ಉತ್ತಮ ಬರಹಗಳ ಮುದ್ರಣವಾಗಬಹುದು.

ಇಂತಹ ಕಾರ್ಯಕ್ರಮಗಳನ್ನು ನಾವೂ ಹಮ್ಮಿಕೊಂಡ ಸಂದರ್ಭದಲ್ಲಿ ಸ್ಥಳೀಯ ಕನ್ನಡಿಗರಲ್ಲಿ ಅಡಗಿರುವ ಎಷ್ಟೋ ಪ್ರತಿಭೆಗಳು ಹೊರ ಬಂದವು. 20ನೇ ಶತಮಾನದಲ್ಲಾದ ಸಾಹಿತ್ಯ ಬೆಳವಣಿಗೆ ಮತ್ತು ಬದಲಾವಣೆಗಳು ನಮ್ಮ ಒಳಗಣ್ಣಿನಲ್ಲಿ ದೃಶ್ಯವಾಗಿ ತುಂಬಿಕೊಂಡಿವೆ. ಇಂತಹ ಸಾಹಿತಿಗಳನ್ನು ನಾವೂ ಕಂಡು ಭೇಟಿ ಮಾಡಿದ್ದೇವಲ್ಲಾ ಎಂಬ ಸಾರ್ಥಕತೆ ಮತ್ತೆ ಮತ್ತೆ ನನ್ನ ಮನಸ್ಸಿನಲ್ಲಿ ಮೂಡುತ್ತಿದೆ.

ಡಾ. ರಾಜಕುಮಾರ್ ಅವರಂತಹ ಮೇರು ವ್ಯಕ್ತಿತ್ವದ ಕಲಾವಿದ ನಮ್ಮ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ದೇಣಿಗೆ ಕ್ರೋಡೀಕರಿಸಲು ಕುಟುಂಬ ಸಮೇತರಾಗಿ ದೆಹಲಿಯಲ್ಲಿ 1998ರಲ್ಲಿ ಸುವರ್ಣ ಮಹೋತ್ಸವ ಸಂದರ್ಭ ಸಂಗೀತ ಸಂಜೆ ನಡೆಸಿಕೊಟ್ಟಿರುವುದು ಅಳಿಯದ ಇತಿಹಾಸ. ನನ್ನ ಈ ಸುದೀರ್ಘ ದೆಹಲಿಯ ಜೀವನದುದ್ದಕ್ಕೂ ದೆಹಲಿ ಕರ್ನಾಟಕ ಸಂಘದ ಎಲ್ಲ ಕಾಲಘಟ್ಟಕ್ಕೂ ಸಾಕ್ಷಿಯಾಗುತ್ತಾ ಬಂದಿದ್ದೇನೆ. ಅಲ್ಲಿಂದ ಇಲ್ಲಿಯವರೆಗೆ ಕನ್ನಡದ ಅದೆಷ್ಟೋ ಮಹನೀಯರ ದರ್ಶನ ಪಡೆದಿರುವ ನಾನು ದೆಹಲಿ ಕರ್ನಾಟಕ ಸಂಘಕ್ಕೆ ಚಿರಋಣಿ.

***ಜೈ ಭುವನೇಶ್ವರಿ***

***ರಾಧಾಕೃಷ್ಣ***
ಪ್ರಧಾನ ಕಾರ್ಯದರ್ಶಿ

# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗು ಕನ್ನಡ ಸಾರಸ್ವತ ಲೋಕದ ಅಗ್ರಗಣ್ಯ ಸಾಹಿತಿಗಳು ಮತ್ತು ಕವಿಗಳ ಕುರಿತ 'ಸಾಹಿತ್ಯೋತ್ಸವ'





"ದೆಹಲಿ ಕರ್ನಾಟಕ ಸಂಘದಿಂದ ಸಾಹಿತ್ಯೋತ್ಸವ ಕಾರ್ಯಕ್ರಮವನ್ನು ಈ ಬಾರಿ ಅಧ್ಯಕ್ಷರ ಪರಿಕಲ್ಪನೆಯೊಂದಿಗೆ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗು ಅಗ್ರಗಣ್ಯ ಸಾಹಿತಿಗಳು ಮತ್ತು ಕವಿಗಳ ಸಾಹಿತ್ಯ ಮತ್ತು ಜೀವನ ಕುರಿತಾಗಿ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಈ ಸಾಹಿತ್ಯೋತ್ಸವವನ್ನು 10.08.2025 ರಂದು ಪ್ರಾರಂಭಿಸಿ ಪ್ರತೀ ಭಾನುವಾರ ಒಟ್ಟು 7 ಮಾಲಿಕೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಕನ್ನಡದ ಪ್ರಾಧ್ಯಾಪಕರು, ಸಾಹಿತಿಗಳು, ಕವಿಗಳು, ಚಿಂತಕರು ಮತ್ತು ವಿದ್ವಾಂಸರುಗಳನ್ನು ಆಹ್ವಾನಿಸಲಾಗಿತ್ತು. ನಮ್ಮ ಸಂಘದ ಕೆಲವು ಸದಸ್ಯರೂ ಈ ಕಾರ್ಯಕ್ರಮದಲ್ಲಿ ತಮ್ಮ ವಿಚಾರವನ್ನು ಮಂಡಿಸಿದ್ದರು. ಪ್ರತಿಷ್ಠಿತ ಮಹನೀಯರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಜೊತೆಗೆ ನಮ್ಮ ಸಂಘದ ಸದಸ್ಯರು, ಸ್ಥಳೀಯ ಕಲಾವಿದರು ಮತ್ತು ಸಂಘದ ಕಲಿಕಾ ಕೇಂದ್ರದಲ್ಲಿ ಕನ್ನಡ ಕಲಿಯುತ್ತಿರುವ ಮಕ್ಕಳು ಪ್ರತೀ ಕಾರ್ಯಕ್ರಮದಲ್ಲಿ ಸಾಹಿತಿಗಳ ಹಾಗು ಕವಿಗಳ ಕವಿತೆಗಳನ್ನು ಪ್ರಸ್ತುತಪಡಿಸಿ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ತಂದಿದ್ದರು. ಈ ಒಟ್ಟಾರೆ ಸಾಹಿತ್ಯೋತ್ಸವ ಕಾರ್ಯಕ್ರಮದ ವಿಸ್ತೃತ ವರದಿಯನ್ನು 7 ಮಾಲಿಕೆಗಳಲ್ಲಿ ಅಭಿಮತದ ಸದಭಿರುಚಿಯ ಓದುಗರಿಗಾಗಿ ಈ 'ಸಾಹಿತ್ಯೋತ್ಸವ ವಿಶೇಷಾಂಕ'ದಲ್ಲಿ ಪ್ರಕಟಿಸಲಾಗಿದೆ."

## "ಸಾಹಿತ್ಯೋತ್ಸವದ ಉದ್ಘಾಟನಾ ಸಮಾರಂಭ" ಮತ್ತು ರಾಷ್ಟ್ರಕವಿ ಕುವೆಂಪು ಮತ್ತು ಬರಹಗಾರ ಡಾ. ಯು.ಆರ್. ಅನಂತಮೂರ್ತಿ ಅವರ ಕುರಿತ ವಿಚಾರ ಸಂಕಿರಣ

ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿವರ್ಷ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆ ಜೊತೆಗೆ ಹಲವು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ. ಈ ಬಾರಿ ಸಾಹಿತ್ಯದ ಕುರಿತಾದ ಕಾರ್ಯಕ್ರಮವನ್ನು ವಿಶೇಷವಾಗಿ ಆಚರಿಸಬೇಕೆಂಬ ಉದ್ದೇಶದಿಂದ, ವಿನೂತನವಾದ 'ಸಾಹಿತ್ಯೋತ್ಸವ' ಎಂಬ ಹೆಸರಿನಲ್ಲಿ ಹಮ್ಮಿಕೊಳ್ಳಬೇಕೆಂದು ಯೋಚಿಸಿ ಅದರಂತೆ ಸಾಹಿತ್ಯದ ಕಾರ್ಯಕ್ರಮಗಳನ್ನು ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಲು ನಿರ್ಧರಿಸಲಾಗಿತ್ತು. ಮೊದಲಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕನ್ನಡದ ಎಂಟು ಮಂದಿ ಮೇರು ಗಣ್ಯಮಾನ್ಯ ಸಾಧಕ



ಸಾಹಿತಿಗಳು ಹಾಗೂ ನಂತರದಲ್ಲಿ ಕನ್ನಡ ಸಾರಸ್ವತ ಲೋಕದ ಇನ್ನಿತರ ಪ್ರಸಿದ್ಧ ಸಾಹಿತಿಗಳು ಮತ್ತು ಕವಿಗಳ ಜೀವನ-ಸಾಧನೆ ಮತ್ತು ಕನ್ನಡದ ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸುವ ಸಂವಾದ-ಅನುಸಂಧಾನ-ವಿಚಾರ ಸಂಕಿರಣಗಳನ್ನೊಳಗೊಂಡ ಸಾಹಿತ್ಯೋತ್ಸವವನ್ನು ಬಹಳ ವಿಶಿಷ್ಟವಾಗಿ ಪ್ರಪ್ರಥಮ ಬಾರಿ ಏರ್ಪಡಿಸಲಾಗಿತ್ತು.

ಈ ನಿಟ್ಟಿನಲ್ಲಿ ಮೊದಲ ಭಾಗವಾಗಿ, ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹೆಮ್ಮೆಯ ರಾಷ್ಟ್ರಕವಿ ಕುವೆಂಪು ಹಾಗೂ ಮೇರು ಬರಹಗಾರ ಮತ್ತು ಸಾಹಿತಿ ಡಾ. ಯು. ಆರ್. ಅನಂತಮೂರ್ತಿ ಅವರ ಕುರಿತ ವಿಚಾರ ಸಂಕಿರಣವನ್ನು ದಿನಾಂಕ 10.08.2025 ರಂದು ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟಕರಾಗಿ ಡಾ. ಎಸ್. ತೇಜಸ್ವಿ ನಾಯ್ಕ್ ಐಎಎಸ್, ಕೇಂದ್ರ ಭಾರೀ ಕೈಗಾರಿಕಾ ಹಾಗು ಉಕ್ಕು ಖಾತೆ ಸಚಿವರ ಆಪ್ತ ಕಾರ್ಯದರ್ಶಿ ಅವರು ಆಗಮಿಸಿದ್ದರು. ಹಾಗೆಯೇ ಡಾ. ಈಶ್ವರ ವೀ. ಬಸವರಡ್ಡಿ, ನಿರ್ದೇಶಕರು ಮತ್ತು ಪ್ರಾಧ್ಯಾಪಕರು, ಸೆಂಟರ್ ಫಾರ್ ಯೋಗ, ವೆಲ್‌ನೆಸ್ ಮತ್ತು ಇಂಟೆಗ್ರೇಟಿವ್ ಮೆಡಿಸಿನ್, ಎಂ.ಜಿ.ಎಂ.ಟಿ. ವಿ.ವಿ. ಜೈಪುರ ಮತ್ತು ನಿಕಟಪೂರ್ವ ನಿರ್ದೇಶಕರು, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ,

ನವದೆಹಲಿ ಇವರು ಮುಖ್ಯ ಅತಿಥಿಗಳಾಗಿ ಮತ್ತು ಕುವೆಂಪು ಕುರಿತು ಸಂವಾದಕರಾಗಿ ಆಗಮಿಸಿದ್ದರು.

ಕುವೆಂಪು ಅವರ ಕುರಿತು ವಿಚಾರ ಮಂಡನೆ ಮಾಡಲು ಡಾ. ವಿ. ಕಣ್ಣಪ್ಪ ಶೆಟ್ಟಿ ಪಿಎಚ್‌ಡಿ, ಅಸಿಸ್ಟೆಂಟ್ ಪ್ರೊಫೆಸರ್, ಇಂದಿರಾ ಗಾಂಧಿ ನ್ಯಾಷನಲ್ ಓಪನ್ ಯುನಿವರ್ಸಿಟಿ, ನವದೆಹಲಿ, ಡಾ. ಎಸ್.ಎಲ್. ಭಂಡಾರ್‌ಕರ, ಪರೀಕ್ಷಾ ನಿಯಂತ್ರಕರು, ಗುರುಗೋವಿಂದ್ ಸಿಂಗ್ ವಿ.ವಿ., ನವದೆಹಲಿ, ಡಾ. ಬಸವರಾಜ, ವಿಭಾಗ ಮುಖ್ಯಸ್ಥರು, ಆಟೋಮೊಬೈಲ್ ಇಂಜಿನಿಯರಿಂಗ್, ಪೂಸಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನವದೆಹಲಿ ಮತ್ತು ಶ್ರೀಮತಿ ಸರೋಜಾ ಮಾಧವ, ನಿಕಟಪೂರ್ವ ಅಧ್ಯಕ್ಷರು, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಮತ್ತು ಕೊಡವ ಅರೆಭಾಷೆ, ನವದೆಹಲಿ, ಕುವೆಂಪು ಮತ್ತು ಡಾ. ಯು.ಆರ್. ಅನಂತಮೂರ್ತಿ ಕುರಿತು ವಿಚಾರ ಮಂಡಿಸಲು ಪ್ರಗತಿಪರ ಕೃಷಿ ಸಾಧಕರು ಮತ್ತು ಅಧ್ಯಕ್ಷರು, ನಾಗಚಂದ್ರ ಪ್ರತಿಷ್ಠಾನ, ಕಣಿವೆ, ಜೆಡಿಎಸ್ ರಾಜ್ಯ ವಕ್ತಾರರು ಹಾಗೂ ತಿಮ್ಮನ ಮೊಟ್ಟೆಗಳು ಕನ್ನಡ ಚಲನಚಿತ್ರದ ಕಾರ್ಯಕಾರಿ ನಿರ್ಮಾಪಕರು ಮತ್ತು ನಟರಾದ ಶ್ರೀ ವಿನಯ್ ಕಣಿವೆ ಹಾಗೂ ಡಾ. ವೈ. ಅವನೀಂದ್ರನಾಥ್ ರಾವ್, ಹಿರಿಯ ಅಧಿಕಾರಿ, ಕೇಂದ್ರ ಸಂಸ್ಕೃತಿ ಮಂತ್ರಾಲಯ, ನವದೆಹಲಿ, ಉಪಾಧ್ಯಕ್ಷರು, ದೆ.ಕ.ಶಿ. ಸಂಸ್ಥೆ ಮತ್ತು ಮಾಜಿ ಉಪಾಧ್ಯಕ್ಷರು, ದೆ.ಕ.ಸಂಘ, ನವದೆಹಲಿ ಹಾಗು ಶ್ರೀ ಪ್ರಸಾದ್ ನಾಯ್ಕ್, ಅಡಿಷನಲ್ ಚೀಫ್ ಇಂಜಿನಿಯರ್, ವಾಪ್‌ಕೋಸ್, ಗುರುಗಾಂವ್, ಲೇಖಕರು, ಅಂಕಣಕಾರರು ಮತ್ತು ಅನುವಾದಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಮುಖವಾಣಿ ಪತ್ರಿಕೆ ಅಭಿಮತದ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿ ನಡೆಸಿಕೊಟ್ಟರು. ಕುವೆಂಪು ಅವರ 'ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಸಾಲನ್ನು ಹೇಳುತ್ತಾ ಎಲ್ಲರನ್ನು ಅವರು ಬರಮಾಡಿಕೊಂಡು ಕಾರ್ಯಕ್ರಮವನ್ನು ಆರಂಭಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿ ಗಣ್ಯರನ್ನು, ವಿಶೇಷ ಆಹ್ವಾನಿತರನ್ನು, ಸಂಘದ ಪದಾಧಿಕಾರಿಗಳನ್ನು ಮತ್ತು ಉತ್ತಮ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಆತ್ಮೀಯವಾಗಿ ಸ್ವಾಗತಿಸಿದರು.

ಕಾರ್ಯಕ್ರಮದ ಮೊದಲಿಗೆ ಎಲ್ಲರೂ ಎದ್ದು ನಿಂತು ನಾಡಗೀತೆ ಹಾಡುತ್ತಾ ಕನ್ನಡ ತಾಯಿ ಭುವನೇಶ್ವರಿಗೆ ಗೌರವ ನಮನ ಸಲ್ಲಿಸಿದರು. ಸ್ವಾಗತದ ನಂತರ ದೀಪ ಪ್ರಜ್ವಲನೆ ಮಾಡುತ್ತಾ, ನಾಡದೇವಿಗೆ ನಮನ ಸಲ್ಲಿಸಿ, ಕುವೆಂಪು ಹಾಗು ಡಾ. ಯು.ಆರ್. ಅನಂತಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಡಾ. ಎಸ್. ತೇಜಸ್ವಿ ನಾಯ್ಕ್ ಐಎಎಸ್ ಅವರು ಕಾರ್ಯಕ್ರಮದ ವಿದ್ಯುಕ್ತ ಉದ್ಘಾಟನೆ ನೆರವೇರಿಸಿದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಾಹಿತ್ಯೋತ್ಸವ ಆಯೋಜನೆಯ ತಮ್ಮ ಯೋಚನೆ, ಪರಿಕಲ್ಪನೆ ಹಾಗು ಉದ್ದೇಶಗಳ ಹಾಗೂ ಸಂಘದಲ್ಲಿ ಪ್ರಪ್ರಥಮ ಬಾರಿಗೆ ಈ ರೀತಿಯ ಸಾಹಿತ್ಯ ಪ್ರಧಾನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸುತ್ತಾ ಆಗಮಿಸಿರುವ ಎಲ್ಲ ಅತಿಥಿಗಳಿಗೆ ವಿಚಾರ ಮಂಡನೆ ಮಾಡಲಿರುವವರಿಗೆ ಹಾಗು ದೆಹಲಿ ಕನ್ನಡಿಗರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಕಾರ್ಯಕ್ರಮ ಯಶಸ್ವಿಯಾಗಲು ಸಹಯೋಗ ನೀಡಿದ್ದಕ್ಕೆ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ನಂತರ ಸಂಘದ ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಸಂಗೀತ ಶಿಕ್ಷಕರಾದ ಶ್ರೀ ಭೀಮಸೇನ ಭಜಂತ್ರಿ ಅವರ ಸಾರಥ್ಯದಲ್ಲಿ ಹಾರ್ಮೋನಿಯಮ್ ಸಂಗೀತದ ಹಿನ್ನೆಲೆಯಲ್ಲಿ ರಾಷ್ಟ್ರಕವಿ ಕುವೆಂಪು ವಿರಚಿತ 'ಓ ನನ್ನ ಚೇತನ ಆಗು ನೀ ಅನಿಕೇತನ' ಹಾಗು 'ಸೊಬಗಿನ ಸೆರೆ ಮನೆ ಹಾದಿಯಲ್ಲಿ' ಕವನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆಯನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಶುಭಾ ದೇವಿಪ್ರಸಾದ್ ನಡೆಸಿಕೊಟ್ಟರು.

ಉದ್ಘಾಟಕರಾದ ಡಾ. ಎಸ್. ತೇಜಸ್ವಿ ನಾಯ್ಕ್ ಐಎಎಸ್ ಅವರ ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಅರುಣ್ ಸಿ.ಎಸ್. ಸಭೆಗೆ ಮಾಡಿಕೊಟ್ಟ ತರುವಾಯ ತಮ್ಮ ಉದ್ಘಾಟನಾ ಭಾಷಣದಲ್ಲಿ ಡಾ. ತೇಜಸ್ವಿ ನಾಯ್ಕ್ ಅವರು ಸಂಘದ ಈ ರೀತಿಯ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ತಮಗೆ ಅತೀವ ಸಂತಸ ತಂದಿದೆ ಎಂದರು. ತಮ್ಮ ವಿದ್ಯಾರ್ಥಿ ಜೀವನವನ್ನು ನೆನಪಿಸಿಕೊಳ್ಳುತ್ತಾ ಎಂಟು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗರ ಅದರಲ್ಲೂ ಕುವೆಂಪು ಹಾಗು ಡಾ. ಯು. ಆರ್. ಅನಂತಮೂರ್ತಿ ಅವರ ಬದುಕು-ಸಾಹಿತ್ಯ ಸಾಧನೆಯಿಂದ ತಮಗಾದ ಪ್ರೇರಣೆ ಹಾಗು ಸಾಹಿತ್ಯದ ಕಡೆ ತಮಗೆ ಒಲವು ಮೂಡಿದ್ದನ್ನು ತಿಳಿಸಿದರು. ಈ ರೀತಿಯ ಸಾಹಿತ್ಯೋತ್ಸವ ಕಾರ್ಯಕ್ರಮಗಳು ಸಂಘದಲ್ಲಿ ನಿರಂತರವಾಗಿ ನಡೆಯಲಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ಮತ್ತು ಕೃತಿಗಳನ್ನು ಎಲ್ಲರೂ ಓದಿ ತಿಳಿದುಕೊಳ್ಳಬೇಕೆಂದು ಕರೆ ನೀಡುತ್ತಾ ತಮ್ಮನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಕ್ಕಾಗಿ ಸಂಘದ ಅಧ್ಯಕ್ಷರಿಗೂ ಹಾಗು ನೆರೆದಿದ್ದ ಎಲ್ಲರಿಗೂ ಧನ್ಯವಾದ ತಿಳಿಸಿ ತಮ್ಮ ಮಾತನ್ನು ಮುಗಿಸಿದರು.

ಅನಂತರ ದೆಹಲಿ ಕನ್ನಡತಿ ಶ್ರೀಮತಿ ಚೈತ್ರಾ ತೋಳ್ಪಾಡಿಯವರು ಹೊಸ ಬೆಳಕು ಚಿತ್ರದಲ್ಲಿ ಡಾ. ರಾಜ್‌ಕುಮಾರ್ ಅವರು ಹಾಡಿರುವ ಕುವೆಂಪು ರಚಿತ 'ತೆರೆದಿದೆ ಮನೆ ಬಾ ಓ ಅತಿಥಿ' ಗೀತೆಯನ್ನು ತಮ್ಮ ಸುಮಧುರ ಕಂಠ ಸಿರಿಯಲ್ಲಿ ಹಾಡಿದರು. ದೆಹಲಿ ಕಲಾವಿದ ಶ್ರೀ ಶ್ರೀನಿವಾಸಯ್ಯ 'ಎಲ್ಲಾದರು ಇರು ಎಂತಾದರು ಇರು' ಗಾಯನ ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ಭಾಗಿಯಾದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಪರಿಸರವಾದಿ, ಕಳೆದ 40






ವರ್ಷಗಳಿಂದ ಬಯಲು ಸೀಮೆಯ ಜಲ ಸಂರಕ್ಷಣೆ ಕುರಿತು ಅಧ್ಯಯನ, ನದಿ ಜೋಡಣೆ ಬಗ್ಗೆ ಅಭಿಯಾನ ಮಾಡಿರುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2014) ಪುರಸ್ಕೃತ ಕೃಷಿ / ಪರಿಸರ ಹೋರಾಟಗಾರ ಶ್ರೀ ಸಿ.ಎ. ಚೌಡಪ್ಪನವರನ್ನು ಎಲ್ಲರ ಪರವಾಗಿ ಅಭಿನಂದಿಸಲಾಯಿತು. ಶ್ರೀ ಚೌಡಪ್ಪನವರು ಮಾತನಾಡಿ ಸಂಘಕ್ಕೆ ಕೃತಜ್ಞತೆ ತಿಳಿಸಿದರು.

ನಂತರ ನಡೆದ ವಿಚಾರ ಸಂಕಿರಣದಲ್ಲಿ ಶ್ರೀ ಬಿ. ಕಣ್ಣಪ್ಪ ಶೆಟ್ಟಿ, ಡಾ. ಎಸ್.ಎಲ್. ಭಂಡಾರ್‌ಕರ, ಡಾ. ಬಸವರಾಜ, ಶ್ರೀಮತಿ ಸರೋಜ ಮಾಧವ ಅವರು ಕುವೆಂಪು ಕುರಿತು ತಮ್ಮ ವಿಚಾರ ಮಂಡಿಸಿದರು. ಅವರುಗಳ ಪರಿಚಯವನ್ನು ಕ್ರಮವಾಗಿ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಶ್ರೀನಾಥ್ ಎನ್.ಆರ್., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಸಭೆಗೆ ಮಾಡಿಕೊಟ್ಟರು. ಶ್ರೀ ವಿನಯ್ ಕಣಿವೆಯವರನ್ನು ಶ್ರೀ ಕೆ.ಎಸ್. ಮೂರ್ತಿ ಎಲ್ಲರಿಗೂ ಪರಿಚಯಿಸಿದರು. ಡಾ. ವೈ. ಅವನೀಂದ್ರನಾಥ್‌ರವರ ಪರಿಚಯವನ್ನು ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಹಾಗು ಶ್ರೀ ಪ್ರಸಾದ್ ನಾಯಕ್ ಅವರ ಪರಿಚಯವನ್ನು ಸಮಿತಿ ಸದಸ್ಯರಾದ ಶ್ರೀ ಅರುಣ್ ಸಿ.ಎಸ್. ಮಾಡಿಕೊಟ್ಟರು.

ಮೊದಲಿಗೆ ಡಾ. ಬಿ. ಕಣ್ಣಪ್ಪ ಶೆಟ್ಟಿ ಅವರು ಕುವೆಂಪು ಅವರ ಕುರಿತು ಮಾತನಾಡುತ್ತಾ ಕುವೆಂಪು ಅವರ ಸಾಹಿತ್ಯದಲ್ಲಿ ಪರಿಸರ ಮತ್ತು ಮನೋವಿಜ್ಞಾನದ ಅಂಶಗಳನ್ನು ಕಾಣಬಹುದು, ಅವರ ಕವನಗಳಲ್ಲಿ ವೈಯಕ್ತಿಕ ಮಾನಸಿಕ ಆರೋಗ್ಯದ ಕುರಿತು ಉಲ್ಲೇಖ ಇರುವ ಬಗ್ಗೆ ತಿಳಿಸುತ್ತಾ ಅವರ ಸಾಹಿತ್ಯದಲ್ಲಿರುವ ಸಾಮಾಜಿಕ ಕಳಕಳಿ ಬಗ್ಗೆ ವಿಶ್ಲೇಷಣೆ ಮಾಡಿದರು. ಅವರ ಸಾಹಿತ್ಯದಲ್ಲಿ ತಿಳಿಸಿರುವಂತೆ ಕೋಟಿ ಧನವಿದ್ದರೂ ನಗರಗಳಿಗಿಂತ ಹಳ್ಳಿಗಳೇ ವಾಸಿ, ಹಳ್ಳಿಯ ಜೀವನ ಸುಖಮಯ ಎಂಬ ಸಂದೇಶವಿದೆ ಎಂದರು. ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿ 'ಇಲ್ಲಿ ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ' ಎಂಬ ಸಂದೇಶ ಪ್ರತಿ ವ್ಯಕ್ತಿಗಳನ್ನು ಕೀಳರಿಮೆಯಿಂದ ಹೊರವಿರಲು, ಅದೇ ರೀತಿ ಅವರ ಕವನದ 'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ'... ಸಾಲುಗಳು ಜೀವನದಲ್ಲಿ ಕುಗ್ಗದೆ ಹಿಗ್ಗಿ ಮುಂದುವರಿಯಲು ಪ್ರೇರೇಪಿಸುತ್ತದೆ ಎಂದು ಹೇಳುತ್ತಾ ತಮಗೆ ವಿಚಾರ ಮಂಡಿಸಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿ ಅವರು ತಮ್ಮ ಮಾತನ್ನು ಮುಗಿಸಿದರು.

ನಂತರ ಮಾತನಾಡಿದ ಡಾ. ಎಸ್.ಎಲ್. ಭಂಡಾರ್‌ಕರ ಅವರು ಕುವೆಂಪು ಅವರ ಸಾಹಿತ್ಯದ ಸಾಧನೆಗಳ ಹಾಗೂ ಅವರು ರಚಿಸಿದ ವಿವಿಧ ಕೃತಿಗಳ, ಸಾಹಿತ್ಯ ಪ್ರಕಾರಗಳ ಸಮಗ್ರ ಪಕ್ಷಿನೋಟ ನೀಡಿದರು. ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಅವರು ಬರೆದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಮಕ್ಕಳಿಗಾಗಿ ಬರೆದ ಕವನ ಸಂಕಲನಗಳು, ನೆನಪಿನ ದೋಣಿ ಕೃತಿ, ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿ, ವಾಲ್ಮೀಕಿ ರಾಮಾಯಣ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಮುಂತಾದ ವೈವಿಧ್ಯಮಯ ಸಾಹಿತ್ಯಿಕ ಸೃಷ್ಟಿಗಳು ಪ್ರಮುಖವಾಗಿದ್ದವು. ಅವರಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಅಪಾರ ಪ್ರೀತಿ ಮತ್ತೆ ಆತ್ಮೀಯ ಸಂಬಂಧವಿತ್ತು ಎಂದರು ಅವರು ತಮ್ಮ ಕವನದಲ್ಲಿ ಜೀವನದಲ್ಲಿ ಏನಾದರು ಆಗು ಮೊದಲು ನೀನು ಮಾನವನಾಗು ಎಂಬ ವಿಶ್ವ ಮಾನವ ಸಂದೇಶ ನೀಡಿರುವುದರ ಬಗ್ಗೆ ತಿಳಿಸುತ್ತಾ ಕುವೆಂಪು ಕುರಿತು ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಕೃತಜ್ಞತೆ ವ್ಯಕ್ತಪಡಿಸಿ ತಮ್ಮ ಮಾತುಗಳನ್ನು ಮುಗಿಸಿದರು.

ನಂತರ ಡಾ. ಬಸವರಾಜು ಅವರು ಕುವೆಂಪು ಕುರಿತು ಮಾತನಾಡುತ್ತಾ ಅವರ ಜೀವನದಲ್ಲಿ ನಡೆದ ಕೆಲವು ಘಟನೆ ಮತ್ತು ಸನ್ನಿವೇಶಗಳ ವಿವರ ನೀಡಿದರು. ಕುವೆಂಪು ಅವರು ಒಬ್ಬ ಮಹಾಕವಿ, ಕನ್ನಡದ ಬಗ್ಗೆ ಅಪಾರ ಭಾಷಾಭಿಮಾನವಿದ್ದಂತಹ ವಿಚಾರವಂತ ಲೇಖಕ. ಅವರು ತಮ್ಮ ಜೀವನದ ಕೆಲವು ಸ್ವಾರಸ್ಯಕರ ವಿಷಯಗಳನ್ನು ತಮ್ಮ ನೆನಪಿನ ದೋಣಿ ಕೃತಿಯಲ್ಲಿ ಹಂಚಿಕೊಂಡಿದ್ದಾರೆ. ಅವರು ಕನ್ನಡದಲ್ಲಿ ರಚಿಸಿದ ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯಕ್ಕೆ 1967 ರಲ್ಲಿ ಜ್ಞಾನಪೀಠ ಪ್ರಶಸ್ತಿ ಸಿಕ್ಕಿದ್ದು, ಕನ್ನಡದ ಸಾಹಿತಿಗಳಲ್ಲಿ ಆ ಪ್ರಶಸ್ತಿ ಪಡೆದವರಲ್ಲಿ ಪ್ರಪ್ರಥಮರೆಂಬ ಹೆಗ್ಗಳಿಕೆ ಇದೆ ಮತ್ತು ಇದು ಎಲ್ಲಾ ಕನ್ನಡಿಗರಿಗೆ ಹೆಮ್ಮೆಯ ವಿಷಯ. ಅವರ ಮೇರು ವ್ಯಕ್ತಿತ್ವ ಎಲ್ಲರಿಗೂ ಮಾದರಿಯಾಗಿತ್ತು. ಶ್ರೀ ಕುವೆಂಪು ಅವರ ಕುರಿತು ಇಂದು ಕೆಲವು ವಿಷಯಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು ಎಂದು ಹೇಳಿ ತಮ್ಮ ಮಾತುಗಳನ್ನು ಮುಕ್ತಾಯ ಮಾಡಿದರು.

ಬಳಿಕ ಶ್ರೀಮತಿ ಸರೋಜ ಮಾಧವ ಅವರು ಕುವೆಂಪು ಕುರಿತು ಮಾತನಾಡಿದರು. ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಯ ಕುರಿತು ವಿಶ್ಲೇಷಣೆ ಮಾಡುತ್ತಾ ಕುವೆಂಪು ಅವರ ಕೃತಿಗಳನ್ನು ಓದುವುದೇ ಒಂದು ಸಂಭ್ರಮ, ಅವರಿಗೆ ಮಕ್ಕಳ ಬಗ್ಗೆ ಬಹಳ ಕಾಳಜಿ ಇತ್ತು, ಪ್ರಕೃತಿ ಬಗ್ಗೆ ಒಲವಿತ್ತು ಇವುಗಳನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು, ಅವರ ಕವನಗಳನ್ನು ಹಾಡುವುದು ಒಂದು ರೀತಿಯ ಮುದ ನೀಡುತ್ತದೆ, ಕಾದಂಬರಿಗಳು ಕುತೂಹಲದಿಂದ ಓದಿಸಿಕೊಂಡು ಹೋಗುತ್ತವೆ. ಕುವೆಂಪು ಅವರ ಜಯ ಭಾರತ ಜನನಿಯ ತನುಜಾತೆ ನಮ್ಮ ನಾಡಗೀತೆಯಾಗಿದೆ. ಎಲ್ಲರಿಗೂ ವಿಶ್ವ ಮಾನವ ಸಂದೇಶ ಸಾರಿದ ಜಗದಕವಿ, ಯುಗದ ಕವಿ ಮತ್ತು ನಮ್ಮ ರಾಷ್ಟ್ರಕವಿ ಕುವೆಂಪು ಅವರೊಬ್ಬ ಅದ್ಭುತ ವ್ಯಕ್ತಿ, ವಿಶ್ವ ಮಾನವ ಮತ್ತು ಶ್ರೇಷ್ಠ ಆತ್ಮದವರಾಗಿದ್ದರು. ಅವರ ಕುರಿತು ವಿಚಾರ ಮಂಡನೆ ಮಾಡಲು ಬಹಳ ಸಂತೋಷ ಮತ್ತು ಹೆಮ್ಮೆಯಾಗುತ್ತಿದೆ. ಇದಕ್ಕಾಗಿ ಸಂಘದ ಅಧ್ಯಕ್ಷರಿಗೆ, ಪದಾಧಿಕಾರಿಗಳಿಗೆ ಮತ್ತು ನೆರೆದಿರುವ ನಮ್ಮ ದೆಹಲಿ ಕನ್ನಡಿಗರಿಗೆ ಧನ್ಯವಾದಗಳು ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.

ತರುವಾಯ ಶ್ರೀ ವಿನಯ್ ಕಣಿವೆ ಅವರು ಕುವೆಂಪು ಮತ್ತು ಡಾ. ಯು.ಆರ್. ಅನಂತಮೂರ್ತಿ ಈ ಇಬ್ಬರ ಕುರಿತು ಮಾತನಾಡಿದರು. ಮಲೆನಾಡಿನ ಪ್ರದೇಶದಿಂದ ಬಂದವರಾದ ಶ್ರೀ ವಿನಯ್ ತಮ್ಮ ಊರು ಕಣಿವೆಯು ಕುವೆಂಪುರವರ ಊರಾದ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿ ಮತ್ತು ಡಾ. ಯು.ಆರ್. ಅನಂತ ಮೂರ್ತಿ ಅವರ ಮೇಳಿಗೆಯ ಸಮೀಪವೇ ಇದೆ, ತಾವು ಬಾಲ್ಯದಿಂದಲೂ ಅವರಿಬ್ಬರನ್ನು ಚೆನ್ನಾಗಿ ಬಲ್ಲವರಾಗಿದ್ದು, ಅವರಿಂದ ಬಹಳಷ್ಟು ಪ್ರೇರಿತರೂ ಮತ್ತು ಪ್ರಭಾವಿತರಾಗಿದ್ದನ್ನು ತಿಳಿಸಿದರು. ಇಬ್ಬರದ್ದೂ ವಿಭಿನ್ನ ಶೈಲಿಯ ಸಾಹಿತ್ಯಧಾರೆ, ಕುವೆಂಪು ಅವರು ನಿಸರ್ಗದ ಕಡೆ ಅಪಾರ ಒಲವು ಹೊಂದಿದ್ದರು, ಅವರ ಸಾಹಿತ್ಯದಲ್ಲಿ ಪರಿಸರವಾದ, ಪ್ರಕೃತಿ ಬಗ್ಗೆ ವಿಶೇಷ ಪ್ರೀತಿ ಎದ್ದು ಕಾಣುತ್ತಿತ್ತಾದರೆ, ಅನಂತಮೂರ್ತಿ ಅವರ ಸಾಹಿತ್ಯ ಮತ್ತು ಕೃತಿಗಳಲ್ಲಿ ಸಾಂಪ್ರದಾಯ ವಾದ, ವೈಚಾರಿಕತೆ ವಿಶೇಷವಾಗಿತ್ತು. ಈ ಇಬ್ಬರು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಮಳೆಯ ನಾಡು ಮಲೆನಾಡಿನಿಂದ ಬಂದವರಾದ್ದರಿಂದ ಅವರ ಸಾಧನೆ ಅಲ್ಲಿನವರಿಗೆ ಹೆಮ್ಮೆ ತಂದಿದೆ ಮತ್ತು ನಾಡಿನ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಇಬ್ಬರ ಬದುಕು ವಿಭಿನ್ನವಾಗಿತ್ತು. ಕುವೆಂಪು ವಿಶ್ವ ಮಾನವ ಸಂದೇಶ ಸಾರಿದ್ದರು, ಅನಂತ ಮೂರ್ತಿಅವರು ಮೌಢ್ಯತೆ ವಿರುದ್ಧ ಪ್ರತಿಪಾದಿಸಿದ್ದರು. ಅವರಿಬ್ಬರ ಸಾಹಿತ್ಯ ಸಾಧನೆ ಇಡೀ ರಾಜ್ಯಕ್ಕೆ ಗೌರವ ತಂದಿದೆಯಾದರೂ, ಅವರ ನೀತಿ, ತತ್ವ ಮತ್ತು ಧೋರಣೆಯನ್ನು ಮೆಚ್ಚದ ಕೆಲವರು, ಟೀಕಿಸುವವರು ಈಗಲೂ




ಇದ್ದಾರೆ. ಅವರಿಬ್ಬರ ಮೇರು ವ್ಯಕ್ತಿತ್ವ ಮತ್ತು ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆ ಶ್ಲಾಘನೀಯ ಮತ್ತು ಅನುಕರಣೀಯ, ಈ ಇಬ್ಬರೂ ದಿಗ್ಗಜರ ಕುರಿತು ದೆಹಲಿಯಲ್ಲಿ ಈ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ತಮ್ಮ ಕೆಲವು ವಿಚಾರ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಮಿತ್ರರೂ ಮತ್ತು ಬಂಧುಗಳಾದ ಶ್ರೀ ಕೆ. ಶ್ರೀನಿವಾಸ ಮೂರ್ತಿ ಅವರಿಗೆ ಹಾಗೂ ತಮ್ಮ ಮಾತುಗಳನ್ನು ಆಸಕ್ತಿಯಿಂದ ಕೇಳಿದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿ ಶ್ರೀ ವಿನಯ್ ಕಣಿವೆ ತಮ್ಮ ಮಾತುಗಳನ್ನು ಮುಗಿಸಿದರು.

ನಂತರ ಶ್ರೀಮತಿ ಉಮಾ ಶ್ರೀನಿವಾಸ್ ಅವರು 'ಯಾವ ಜನ್ಮದ ಮೈತ್ರಿ' ಗೀತೆಯನ್ನು ಇಂಪಾಗಿ ಹಾಡಿ ಎಲ್ಲರ ಗಮನ ಸೆಳೆದರು. ಅನಂತರ, ಡಾ. ವೈ ಅವನೀಂದ್ರನಾಥ್ ರಾವ್ ಅವರು ಡಾ. ಯು.ಆರ್. ಅನಂತ ಮೂರ್ತಿ ಕುರಿತು ಮಾತನಾಡುತ್ತಾ ದಿನಾಂಕ 21.12.1932 ರಲ್ಲಿ ಮಲೆನಾಡಿನಲ್ಲಿ ಜನಿಸಿದ ಅವರು ಕನ್ನಡದ ಶ್ರೇಷ್ಠ ಬರಹಗಾರರಾಗಿ ಹೊರ ಹೊಮ್ಮಿದರು. ಅವರಿಗೆ 1994 ರಲ್ಲಿ 'ಸಮಗ್ರ ಸಾಹಿತ್ಯ'ಕ್ಕಾಗಿ ಜ್ಞಾನಪೀಠ ಪ್ರಶಸ್ತಿ ಮತ್ತು 1998 ರಲ್ಲಿ ಪದ್ಮ ಭೂಷಣ ಪ್ರಶಸ್ತಿ ಸಿಕ್ಕಿದ್ದು ನಮ್ಮೆಲ್ಲರ ಭಾಗ್ಯ. ಅವರೊಬ್ಬ ವೈಚಾರಿಕತಾ ಕೃತಿಕಾರ ಮತ್ತು ಸೃಜನಶೀಲ ಬರಹಗಾರ, ಅವರ ಪ್ರಬಂಧಗಳ ಸಂಕಲನ 'ಮಾತು ಸೋತ ಭಾರತ' ಅವರ ವೈಚಾರಿಕತೆ, ವಿಮರ್ಶಾತ್ಮಕ ಮತ್ತು ಸಾಂಸ್ಕೃತಿಕ ಚಿಂತನೆಗಳನ್ನು ಒಳಗೊಂಡ ಕೃತಿಯಾಗಿದೆ. 'ನವ್ಯ' ಸಾಹಿತ್ಯ ಚಳವಳಿಯ ಹರಿಕಾರರಾಗಿ, ಅವರು ತಮ್ಮ ಕೃತಿಗಳಲ್ಲಿ ಬ್ರಾಹ್ಮಣ ಕುಟುಂಬಗಳ ಸವಾಲುಗಳು, ಸಾಮಾಜಿಕ ಅಸಮಾನತೆ ಮತ್ತು ರಾಜಕೀಯ ಪ್ರಭಾವದಂತಹ ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ಅವರ ಸಂಸ್ಕಾರ ಕೃತಿಯೂ ಬಹಳ ಪ್ರಸಿದ್ಧಿಯಾಗಿದ್ದು, ಸಿನೆಮಾ ಆಗಿಯೂ ಹೊರಬಂದಿದೆ ಎಂದರು.

ಡಾ. ಯು.ಆರ್. ಅನಂತಮೂರ್ತಿ ಅವರೊಂದಿಗೆ ಹಿಂದೆ ಸಂಘದಲ್ಲಿ ಮತ್ತು ಇತರ ಕಡೆ ಭೇಟಿ ಮಾಡಿದ ಸಂದರ್ಭಗಳನ್ನು ನೆನಪಿಸಿಕೊಂಡ ಡಾ. ಅವನೀಂದ್ರನಾಥ್ ರಾವ್ ಅವರು ಇಂತಹ ಕನ್ನಡದ ಪ್ರಖ್ಯಾತ ಸಾಹಿತಿಗಳ ನೆನಪಿನಲ್ಲಿ ಅವರ ಸಾಧನೆಗಳನ್ನು ಅವಲೋಕಿಸುವ ಈ ಸಾಹಿತ್ಯೋತ್ಸವ ಕಾರ್ಯಕ್ರಮ ಆಯೋಜಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಡಾ. ಅನಂತಮೂರ್ತಿ ಕುರಿತು ಕೆಲವು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು ಎಂದರು.

ಶ್ರೀ ಪ್ರಸಾದ್ ನಾಯ್ಕ್ ಅವರು ಡಾ. ಯು. ಆರ್. ಅನಂತಮೂರ್ತಿ ಕುರಿತು ಮಾತನಾಡುತ್ತಾ, ಇಂದಿನ ಸಾಹಿತ್ಯೋತ್ಸವದಲ್ಲಿ ವಿಚಾರ ಮಂಡನೆ ಮಾಡುತ್ತಿರುವರಲ್ಲಿ ತಾವು ಕೊನೆಯವರು ಮತ್ತು ವಯಸ್ಸಿನಲ್ಲಿ ಕಿರಿಯರು. ಕೊನೆಯಲ್ಲಿ ವಿಚಾರ ಹಂಚಿಕೊಳ್ಳಲು ಅವಕಾಶ ಸಿಕ್ಕಿದ್ದು ಒಂದು ರೀತಿ ತಮ್ಮ ಕೆಲಸ ಸರಳವಾಗಿಸಿದೆ, ಏಕೆಂದರೆ ನನ್ನ ಮುಂಚೆ ವಿಚಾರ ಮಂಡಿಸಿದ ಹಿರಿಯರು ಈಗಾಗಲೇ ಹೆಚ್ಚು ಕಡಿಮೆ ಎಲ್ಲಾ ವಿಷಯಗಳನ್ನು ತಿಳಿಸಿದ್ದಾರೆ, ಇನ್ನೊಂದು ಕಡೆ ಕೊನೆಯಲ್ಲಿ ಮಾತನಾಡುವುದು ಸ್ವಲ್ಪ ಕಷ್ಟವೂ ಸಹಾ ಏಕೆಂದರೆ ಹೇಳಲು ಹೆಚ್ಚು ವಿಷಯ ಉಳಿದಿರಲ್ಲ, ಏನು ಮಾತನಾಡಬೇಕೆಂಬ ಜಿಜ್ಞಾಸೆಯಿದೆ ಮತ್ತು ಕೇಳುಗರ ಆಸಕ್ತಿ ಮತ್ತು ಉತ್ಸಾಹ ಸ್ವಲ್ಪ ಕಡಿಮೆಯಾಗಿರುತ್ತದೆ ಎಂದರು. ಮುಂದುವರಿಯುತ್ತಾ, ಅನಂತಮೂರ್ತಿ ಅವರ ಬರಹಗಳನ್ನು ಮತ್ತು ಕೃತಿಗಳನ್ನು ತಮ್ಮ ವಿದ್ಯಾರ್ಥಿ ಜೀವನದಿಂದ ಅನುಸರಿಸಿದ್ದೇನೆ, ಅವರು ಭಾಷೆಯನ್ನು scientific tool ಆಗಿ ಬಳಸಿದ್ದರು ಅವರ 'ಸಂಸ್ಕಾರ' ಕೃತಿ ತಮ್ಮ ಮೇಲೆ ಬಹಳ ಪ್ರಭಾವ ಬೀರಿದೆ, ಅದರಲ್ಲಿ ಬರುವ ಪಾತ್ರಗಳು ಸನ್ನಿವೇಶ, ಸಮಾಜದ ಸಂಪ್ರದಾಯಗಳ ಮತ್ತು ಕಟ್ಟುಪಾಡುಗಳನ್ನು ಬಿಂಬಿಸಿದ ರೀತಿ ವಿಭಿನ್ನವಾಗಿತ್ತು. ಹಾಗೆಯೇ ಅವರ ಇತರ ಕೃತಿಗಳೂ ಸಹಾ ಬಹಳ ಪ್ರಖ್ಯಾತವಾಗಿದ್ದವು ಎಂದರು. ಅವರ ಧರ್ಮಪತ್ನಿ ಶ್ರೀಮತಿ ಎಸ್ತರ್ ಅನಂತಮೂರ್ತಿ, ತಮ್ಮ ಪತಿಯ ಸ್ಮರಣೆಯಲ್ಲಿ ಹೊರತಂದ 'ಅನಂತ ನೆನಪು' ಕೃತಿ ಬಗ್ಗೆ ವಿವರ ನೀಡಿದ ಶ್ರೀ ಪ್ರಸಾದ್ ನಾಯ್ಕ್, ಡಾ. ಅನಂತ ಮೂರ್ತಿ ಅವರ ಬದುಕು ಮತ್ತು ಸಾಧನೆ ಕುರಿತು ತಮಗೆ ವಿಚಾರ ಮಂಡನೆ ಮಾಡಲು ಅವಕಾಶ ನೀಡಿದ ದೆಹಲಿ ಕರ್ನಾಟಕ ಸಂಘಕ್ಕೆ ವಂದನೆ ಸಲ್ಲಿಸಿ ತಮ್ಮ ಮಾತುಗಳನ್ನು ಮುಗಿಸಿದರು.


ದೆಹಲಿ ಪೊಲೀಸ್ ಅಧಿಕಾರಿಯಾದ ಕನ್ನಡಿಗ ಶ್ರೀ ಎಚ್.ಜಿ. ಶಿವರಾವ್ ಅವರು 'ತನುವು ನಿನ್ನದು ಮನವು ನಿನ್ನದು' ಹಾಡನ್ನು ಸೊಗಸಾಗಿ ಹಾಡಿದರು ಮತ್ತು ತಾವು ಸಂಗ್ರಹಿಸಿದ ಕುವೆಂಪುರವರ ನುಡಿಮುತ್ತುಗಳನ್ನು ಓದಿ ತಿಳಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಡಾ. ಈಶ್ವರ ವೀ. ಬಸವರಡ್ಡಿ ಅವರ ಭಾಷಣದ ಮೊದಲು ಅವರ ಪರಿಚಯವನ್ನು ಅಭಿಮತ ಪತ್ರಿಕೆ ಸಂಪಾದಕ ಮಂಡಳಿಯ ಸದಸ್ಯ ಶ್ರೀ ಯಲ್ಲಾಲಿಂಗ ಕೊಪ್ಪದ ಸಭೆಗೆ ಮಾಡಿಕೊಟ್ಟರು. ಶ್ಲೋಕವೊಂದನ್ನು ಪಠಿಸುತ್ತಾ ತಮ್ಮ ಮಾತುಗಳನ್ನು ಆರಂಭಿಸಿದ ಡಾ. ಈಶ್ವರ ವೀ. ಬಸವರಡ್ಡಿ ಅವರು, ಇಂದಿನ ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ತಮಗೆ ಬಹಳ ಸಂತೋಷವಾಗಿದೆ. ಈ ಬಗ್ಗೆ ಮೂರು ಮಾತುಗಳನ್ನು ಹೇಳಬಯಸುತ್ತೇನೆ, ಸಂಘಟನೆ, ಸಂದರ್ಭ ಮತ್ತು ಸಾಹಿತ್ಯ. ಇವುಗಳ ಜೊತೆ ಸಂಗೀತ, ನಾಟಕ, ಕಲೆ ಮತ್ತು ವಿಜ್ಞಾನ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ, ಕುವೆಂಪು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಇವುಗಳನ್ನು ಅಳವಡಿಸಿಕೊಂಡಿದ್ದರು, ಅವರು ಮನದ ಕವಿ, ಅವರ ಹೃದಯ ಮನಸ್ಸು ಮೃದುವಾಗಿತ್ತು ಪಂಚ ಮಂತ್ರ, ಸಪ್ತ ಸೂತ್ರ ಮತ್ತು ವಿಶ್ವ ಮಾನವ ಸಂದೇಶ ನೀಡಿದ್ದಾರೆ. ಅಲ್ಪ ಮಾನವ ದಾನವ, ವಿಶ್ವಮಾನವ ದೇವರ ಸಮಾನ ಎಂದರು. ವಿವೇಕಾನಂದರ No man is born to any religion or region ಸಾಲುಗಳನ್ನು ಉಲ್ಲೇಖಿಸಿದ ಅವರು ಮನುಜ ಮತ ವಿಶ್ವ ಪಥ ಸಂದೇಶ ಸಾರಿ ಸಮನ್ವಯ ಸಾಧಿಸಿದ ಅತ್ಯಂತ ಹೃದಯವಂತಿಕೆಯ ಕವಿ ಕುವೆಂಪು ಆಗಿದ್ದರು, ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡಿಗರಲ್ಲಿ ಮೊದಲಿಗರು, ಅವರ ತತ್ವಗಳನ್ನು ಪಾಲಿಸಿಕೊಂಡು ವಿದ್ಯಾರ್ಥಿಗಳು ಭತ್ತದ ಕಣಜವಾಗಬೇಕು, ಗೋಣಿ ಚೀಲಗಳಾಗಬಾರದು, ಎಂದು ಕರೆ ನೀಡಿದರು. ಇನ್ನು ಡಾ.ಯು.ಆರ್. ಅನಂತಮೂರ್ತಿ ಅವರ ಬಗ್ಗೆ ಹೇಳುತ್ತಾ ಅವರೂ ಕನ್ನಡದ ಒಬ್ಬ ಮೇರು ಬರಹಗಾರರಾಗಿದ್ದರು ಮತ್ತು ಜ್ಞಾನಪೀಠ ಪ್ರಶಸ್ತಿ ಪಡೆದ ಹೆಮ್ಮೆಯ ಎಂಟು ಕನ್ನಡಿಗರಲ್ಲೊಬ್ಬರು. ಅವರ ಕೃತಿಗಳಲ್ಲಿಯೂ ಸಮಾಜದ ಬಗ್ಗೆ ಕಾಳಜಿ ಮತ್ತು ಕಳಕಳಿ ಕಾಣಬಹುದು. ಈ ಇಬ್ಬರು ದಿಗ್ಗಜ ಸಾಹಿತಿಗಳ ಕುರಿತು ಸಂವಾದ–ವಿಚಾರ ಸಂಕಿರಣ ನಡೆಸಿರುವ ದೆಹಲಿ ಕರ್ನಾಟಕ ಸಂಘಕ್ಕೆ ಮತ್ತು ಭಾಗವಹಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿ ಡಾ.ಈಶ್ವರ ಬಸವರಡ್ಡಿ ಅವರು ತಮ್ಮ ಮಾತಿಗೆ ವಿರಾಮ ಹೇಳಿದರು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಸಿ.ಎಂ. ನಾಗರಾಜ ಅವರು ಸಂಘದಲ್ಲಿ ಸಾಹಿತ್ಯ ಕುರಿತಾದ ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಬೇಕೆಂಬ ಹಂಬಲ ತಮಗೆ ಬಹಳ ದಿನದಿಂದ ಇತ್ತು, ಮೊದಲಿಗೆ ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದಂತ ನಮ್ಮ ಕನ್ನಡಿಗ ಸಾಹಿತಿಗಳು ಮತ್ತು ಕವಿಗಳ ಕುರಿತು ಸಾಹಿತ್ಯೋತ್ಸವ ಕಾರ್ಯಕ್ರಮದ ಮಾಲಿಕೆಗಳಲ್ಲಿ ಮೊದಲ ಕಾರ್ಯಕ್ರಮ ರಾಷ್ಟ್ರಕವಿ ಕುವೆಂಪು ಮತ್ತು ಡಾ. ಯು.ಆರ್. ಅನಂತಮೂರ್ತಿ ಅವರನ್ನು ನೆನೆಯುವ ಮತ್ತು ಅವರ ಜೀವನ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಕುರಿತಾದ ಸಂವಾದ ಮತ್ತು ವಿಚಾರ ಸಂಕಿರಣ ಇಂದು ನಡೆದು ಸಾಹಿತ್ಯೋತ್ಸವದ ಶುಭಾರಂಭವಾಗಿದೆ. ಇದರ ಉದ್ಘಾಟನೆ ಮಾಡಿಕೊಟ್ಟಂತಹ ಐಎಎಸ್ ಅಧಿಕಾರಿ ಡಾ. ತೇಜಸ್ವಿ ನಾಯಕ್ ಅವರಿಗೆ, ಮುಖ್ಯ ಅತಿಥಿಗಳಾದ ಡಾ. ಈಶ್ವರ ವೀ ಬಸವರಡ್ಡಿ ಅವರಿಗೆ, ಈ ಕಾರ್ಯಕ್ರಮದಲ್ಲಿ ತಮ್ಮ ವಿಚಾರ ಮಂಡನೆ ಮಾಡಿದ ಎಲ್ಲ ವಿಶೇಷ ಆಹ್ವಾನಿತರಿಗೂ, ಕಾರ್ಯಕ್ರಮದಲ್ಲಿ ಕುವೆಂಪು ಅವರ ಗೀತೆಗಳನ್ನು, ಕವನಗಳನ್ನು ಸೊಗಸಾಗಿ ಹಾಡಿದ ಸ್ಥಳೀಯ ಕಲಾವಿದರಿಗೂ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದನ್ನು ಯಶಸ್ವಿ ಮಾಡಿಕೊಟ್ಟಂತಹ ದೆಹಲಿ ಕನ್ನಡಿಗರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಸಹಕರಿಸಿದ ನಮ್ಮ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕಾರ್ಯಕ್ರಮದ ಉದ್ಘಾಟಕರಿಗೆ, ಮುಖ್ಯ ಅತಿಥಿಗಳಿಗೆ ವಿಚಾರ ಮಂಡನೆ ಮಾಡಿದ ಗಣ್ಯರಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ನೀಡಲಾಯಿತು ಕುವೆಂಪು ವಿರಚಿತ ಗೀತೆಗಳನ್ನು ಸುಂದರವಾದ ಗಾಯನದೊಂದಿಗೆ ಪ್ರಸ್ತುತಪಡಿಸಿದ ಸ್ಥಳೀಯ ಕಲಾವಿದರಿಗೆ ಗೌರವಿಸಿ ಅಭಿನಂದನೆ ಸಲ್ಲಿಸಲಾಯಿತು. ಕೊನೆಯಲ್ಲಿ, ನಿರೂಪಕರಾದ ಶ್ರೀ ಕೆ.ಎಸ್. ಮೂರ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಾಹಿತ್ಯೋತ್ಸವದ ಮೊದಲ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ಸಂಪನ್ನಗೊಂಡಿತು. ❑

***ಅಭಿಮತ ವರದಿ***

# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ವಿನಾಯಕ ಕೃಷ್ಣ ಗೋಕಾಕ್ ಅವರ ಸಾಧನೆ ಮತ್ತು ಕೊಡುಗೆ: ವಿಚಾರ ಸಂಕಿರಣ



ದೆಹಲಿ ಕರ್ನಾಟಕ ಸಂಘವು ಸದಾ ಚಟುವಟಿಕೆಯಲ್ಲಿದ್ದು ಒಂದಿಲ್ಲೊಂದು ಕನ್ನಡ ಕಾರ್ಯಕ್ರಮವನ್ನು ನಡೆಸಿಕೊಡುತ್ತಾ ನಾಡು ನುಡಿಯ ಬಗ್ಗೆ ದೇಶ ವಿದೇಶಗಳಿಗೂ ಕನ್ನಡದ ಅಸ್ಮಿತೆಯನ್ನು ಸಾರುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದೆ. ಇದಕ್ಕೆ ಮುಖ್ಯ ಕಾರಣಕರ್ತರು ದಣಿವರಿಯದ ಕನ್ನಡ ಪರಿಚಾರಕ ಸಂಘಟಕ ಹಾಗು ಸಂಘದ ಜನಪ್ರಿಯ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು.

ದಿನಾಂಕ 10.08.2025 ರಂದು ನಡೆದ ಸಾಹಿತ್ಯೋತ್ಸವದ ಮೊದಲ ಕಾರ್ಯಕ್ರಮದ ಉದ್ಘಾಟನೆ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಮತ್ತು ಡಾ. ಯು.ಆರ್. ಅನಂತಮೂರ್ತಿ ಅವರ ಕುರಿತಾದ ಸಾಹಿತ್ಯ ಸಂವಾದ ನಡೆದಿತ್ತು. ಇಡೀ ತಿಂಗಳು ಪ್ರತಿ ವಾರ ಸಾಹಿತ್ಯಪ್ರಿಯರಿಗೆ ಸರಣಿಯೋಪಾದಿಯಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದು. ಕರ್ನಾಟಕ ಸಂಘದ ಕಾರ್ಯ ವೈಖರಿಗೆ ಸಾಕ್ಷಿಯಾಗಿತ್ತು. ಅಧ್ಯಕ್ಷರ ಈ ಒತ್ತಾಸೆಗೆ ಪೂರಕವಾಗಿ ಸಂಘದ ಪದಾಧಿಕಾರಿಗಳು ಬೆನ್ನೆಲುಬಾಗಿ ನಿಂತಿರುವುದು ಕನ್ನಡ ಕೈಂಕರ್ಯಕ್ಕೆ ಆನೆ ಬಲ ಸಿಕ್ಕಂತಾಗಿದೆ ಎನ್ನುತ್ತಾರೆ ಶ್ರೀ ಸಿ.ಎಂ. ನಾಗರಾಜರವರು. ಇದರ ಮುಂದುವರಿದ ಭಾಗವಾಗಿ ಸಾಹಿತ್ಯೋತ್ಸವ ಮಾಲಿಕೆ–2ರ ಕಾರ್ಯಕ್ರಮ ದಿನಾಂಕ 17.08.2025ರ ಭಾನುವಾರ ದಂದು ಕಲಾವಿದರ ಮತ್ತು ಸಾಹಿತ್ಯಾಸಕ್ತರ ಸಮ್ಮುಖದಲ್ಲಿ ವಿದ್ವತ್ಪೂರ್ಣವಾಗಿ ಜರುಗಿತು. ಕನ್ನಡದ ಮೇರು ಸಾಹಿತಿಗಳಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ಡಾ. ವಿನಾಯಕ ಕೃಷ್ಣ ಗೋಕಾಕ್ ಅವರ ಜೀವನ ಮತ್ತು ಸಾಹಿತ್ಯ ಸಾಧನೆಗಳ ಕುರಿತ ವಿಚಾರ ಸಂಕಿರಣ–ಸಾಹಿತ್ಯ ಸಂವಾದ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಅತ್ಯಂತ ವಿದ್ಯುಕ್ತವಾಗಿ ನಡೆಯಿತು.

ಪ್ರಾತಃಸ್ಮರಣೀಯರಾದ ಮಾಸ್ತಿ ಮತ್ತು ಗೋಕಾಕರ ಕುರಿತಾದ ಸಾಹಿತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ, ವಿಕಾಸ ಸಲಹೆಗಾರರು ಸಂಯುಕ್ತ ಸಚಿವ ಸಮಾನಾಂತರ ಹುದ್ದೆಯ ಬಂದರು, ಹಡಗು ಮತ್ತು ಬಂದರು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯ ಭಾರತ ಸರ್ಕಾರದ ಅಧಿಕಾರಿ ಶ್ರೀ ಹೆಚ್.ಎನ್. ಅಶ್ವಥ್‌ರವರು ಆಗಮಿಸಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಖ್ಯಾತ ಸಾಹಿತಿ, ಲೇಖಕರು, ಚಿಂತಕರು ಮತ್ತು ನಾಟಕಕಾರದ ಶ್ರೀ ಕೆ.ವೈ. ನಾರಾಯಣಸ್ವಾಮಿ ಅವರು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಬಗ್ಗೆ ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸದಸ್ಯೆ ಶ್ರೀಮತಿ ಜಯಶ್ರೀ ಬಸವರಾಜ್ ಮಾಡಿಕೊಟ್ಟರು. ಶ್ರೀ ಕೆ.ವೈ. ನಾರಾಯಣಸ್ವಾಮಿ ಅವರು ದೂರದ ಬೆಂಗಳೂರಿನಿಂದ ನಿಸ್ತಂತು ಮಾಧ್ಯಮದ ಮೂಲಕ ಮಾತನಾಡುತ್ತಾ ಮಾಸ್ತಿ ಅವರದ್ದು ಅಪಾರ ದೈವಭಕ್ತಿ. ಅವರ ಮಾತೃಭಾಷೆ ತಮಿಳು ಆದರೂ ಅವರ ಸಾಹಿತ್ಯ ಸಾಧನೆ ಕನ್ನಡದಲ್ಲಿ ಸಂಪನ್ನವಾಗಿತ್ತು. ಮಾಸ್ತಿ ಹೆಸರಿನ ಕಾಲೇಜಿನಲ್ಲಿ ನಾನು ಮತ್ತು ಶ್ರೀ ಸಿ.ಎಂ. ನಾಗರಾಜ ಓದಿದೆವು ಎಂಬುದೇ ಹೆಮ್ಮೆ ಎಂಬುದಾಗಿ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪಂಜೆ ಮಂಗೇಶರಾಯರನ್ನು ಹೊರತುಪಡಿಸಿದರೆ ಮಾಸ್ತಿ ಅವರು ಸಣ್ಣ ಕಥಾ ಜಗತ್ತಿಗೆ ಬಹು ಮುಖ್ಯ ಕೊಡುಗೆ ನೀಡಿದ್ದಾರೆ. ಶ್ರೀಮಂತ ಬ್ರಾಹ್ಮಣ ಕುಟುಂಬದಲ್ಲಿ ಮಾಸ್ತಿಯವರು ಹುಟ್ಟುವ ಸಮಯದಲ್ಲಿ ಕಡು ಬಡತನವಿತ್ತು. ಮಳವಳ್ಳಿ, ಮೈಸೂರು, ಬೆಂಗಳೂರಲ್ಲಿ ವಾಸವನ್ನು ಮಾಡಿಕೊಂಡು ಓದುತ್ತಿದ್ದರು. ಮದ್ರಾಸ್ ವಿವಿಯಲ್ಲಿ 1914ರ ಸುಮಾರಿಗೆ ಎಂ.ಎ. ಪದವಿ ಪಡೆದು ಮೈಸೂರು ಮಹಾರಾಜರ ಆಡಳಿತದಲ್ಲಿ ಕಮಿಷನರ್ ಆಗಿ ಕಡೂರು, ಹಾಸನ, ಸಖರಾಯಪಟ್ಟಣ, ಚಿಕ್ಕಮಗಳೂರು ಮುಂತಾದ ಕಡೆ ನೇಮಕಗೊಳ್ಳುತ್ತಾರೆ. ಆದಾಗ್ಯೂ ಬರವಣಿಗೆ ಅವರ ನೆಚ್ಚಿನ ಕೆಲಸವೂ ಆಗಿರುತ್ತದೆ. ಸರ್ಕಾರಿ ಕೆಲಸ ಮತ್ತು ಸಾಹಿತ್ಯವನ್ನು ಸರಿದೂಗಿಸಿಕೊಂಡ ಜಾಣ್ಮೆ ಮಾಸ್ತಿಯವರದ್ದಾಗಿತ್ತು. ಆಗಿನ್ನೂ ಸಣ್ಣ ಕಥಾ ಪ್ರಕಾರ ಅಂಬೆಗಾಲಿಟ್ಟ ದಿನಗಳು. ಇಂಥ ಕಾಲಘಟ್ಟದಲ್ಲಿ ಮಾಸ್ತಿಯವರು ಸಣ್ಣ ಕಥೆಗಳನ್ನು ಬರೆಯಲು ತೊಡಗುತ್ತಾರೆ. ಮೊದಲ ಕಥೆ 'ರಂಗನ ಮದುವೆ' ಮನುಷ್ಯನ ಸಾರ್ಥಕತೆಯ ಕುರಿತು ಸಾಹಿತ್ಯದಲ್ಲಿ ಧಾರಾಳವಾಗಿ ಕಟ್ಟಿಕೊಟ್ಟಿದ್ದಾರೆ. ಜೀವನ ದೃಷ್ಟಿ ಮಾನವೀಯ ನೆಲಗಟ್ಟಿನಲ್ಲಿ ನಿಂತು ನೋಡಬೇಕಾದ ಸಾಹಿತ್ಯ ಅವರದ್ದು ಎಂಬುದಾಗಿ ಶ್ರೀ ನಾರಾಯಣಸ್ವಾಮಿ ಅವರು ಮಾಸ್ತಿ ಅವರ ಬಗ್ಗೆ ವಿಚಾರ ಮಂಡನೆ ಮಾಡಿದರು.

ನಂತರ, ಮಾಸ್ತಿ ಅವರ ಕಥಾ ಸಾಹಿತ್ಯದ ಬಗ್ಗೆ ಶಿವಮೊಗ್ಗದ ಹಿರಿಯ ಲೇಖಕಿ ಶ್ರೀಮತಿ ಸಬಿತಾ ಬನ್ನಾಡಿ ಅವರು ತಮ್ಮ ವಿಚಾರ ಮಂಡಿಸುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮಾಡಿಕೊಟ್ಟರು. ಶ್ರೀಮತಿ ಸಬಿತಾ ಬನ್ನಾಡಿ ಅವರು ಮಾತನಾಡುತ್ತಾ ಮಾಸ್ತಿ ಅವರ ಕಥೆಗಳ ಆಂತರಿಕ ತಾತ್ವಿಕತೆಯನ್ನು 'ಮೊಸರಿನ ಮಂಗಮ್ಮ' ಕಥೆಯಲ್ಲಿ ಕಾಣಬಹುದು, ಇಲ್ಲಿ ಬರುವ ಅತ್ತೆ ಸೊಸೆ ಪಾತ್ರಗಳು ಸಾಂಕೇತಿಕವಾದರೂ ಸದಾ ಕಾಲಕ್ಕೂ ಜೀವಂತವೇ ಆಗಿರುತ್ತವೆ. ಅತ್ತೆ ಮತ್ತು ಸೊಸೆ ಇವರಿಬ್ಬರ ನಡುವಿನ ವ್ಯಕ್ತಿತ್ವವನ್ನು ಮಾಸ್ತಿಯವರು ತುಂಬಾ ಸೂಕ್ಷ್ಮವಾಗಿ ಚಿತ್ರಿಸಿಕೊಟ್ಟಿದ್ದಾರೆ. ಅಧಿಕಾರ, ಯಜಮಾನಿಕೆ, ಲೇವಾದೇವಿ, ಮನೆ ಒಡತಿಯ ಸುಖ–ದುಃಖದ ಪಾತ್ರಗಳನ್ನು ಕಣ್ಣ ಮುಂದೆ ತಂದು ನಿಲ್ಲಿಸಿದ್ದಾರೆ, ಆ ಪ್ರಕ್ರಿಯೆ ಎಲ್ಲೋ ಉಂಟಾಗುವ ಸಮಸ್ಯೆಯನ್ನು ಸಂಘರ್ಷವನ್ನು ಜಾಗರೂಕತೆಯಿಂದ ತಿಳಿಸುವ ಪ್ರಯತ್ನವನ್ನು ಸರ್ವಕಾಲಿಕ ಪರಿಹಾರವೆನ್ನುವಂತೆ ಕಾಣಿಸುವುದು ಮಾಸ್ತಿಯವರ ವೈಚಾರಿಕ ದೃಷ್ಟಿಕೋನ. ಸಾಹಿತ್ಯ, ಜೀವನ ಸಾಧನೆ ಮತ್ತು ಅವರು ಕನ್ನಡಕ್ಕೆ ನೀಡಿದ ಸಾಹಿತ್ಯದ ಹತ್ತು ಹಲವು ಮಗ್ಗುಲುಗಳನ್ನು ಇಂದಿಗೆ ಅಳವಡಿಸಿಕೊಳ್ಳಬಹುದಾದ ಸೂಕ್ಷ್ಮಗಳನ್ನು ಸಾಧ್ಯತೆಗಳನ್ನೂ ತಿಳಿಸಿ ಶ್ರೀಮತಿ ಸಬಿತಾ ಬನ್ನಾಡಿ ಅವರು ಮಾಸ್ತಿ ಅವರ ಕುರಿತ ತಮ್ಮ ವಿಚಾರವನ್ನು

ಪ್ರಸ್ತುತಪಡಿಸಿದರು ಮಂಡನೆ ಮುಗಿಸಿದರು.

ಇನ್ಫೋರ್ವ ವಿಶೇಷ ಆಹ್ವಾನಿತರಾದ ಲೇಖಕರು ಮತ್ತು ಬರಹಗಾರರೂ ಹಾಗು ಮೂಲತಃ ಚಿತ್ರದುರ್ಗ ಜಿಲ್ಲೆಯವರಾದ ಶ್ರೀ ವೆಂಕಟೇಶ ಹೆಚ್. ಅವರು ಸಾಹಿತ್ಯದ ಬಗ್ಗೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ತುಂಬಾ ಆಸಕ್ತಿ ಬೆಳೆಸಿಕೊಂಡಿರುವವರು. ಕಾರ್ಯನಿಮಿತ್ತ ಈಗ ದೆಹಲಿಯಲ್ಲಿ ನೆಲೆಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಎಲ್ಲಾ ಕಾರ್ಯಕ್ರಮಗಳಿಗೂ ಧ್ವನಿಯಾಗಿ ನಿಲ್ಲುತ್ತಾರೆ. ಇವರು ಮಾಸ್ತಿ ಅವರ ಕುರಿತು ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರುಪರಿಚಯವನ್ನು ಸಂಘದ ಕಾರ್ಯಕಾರಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮಾಡಿಕೊಟ್ಟರು. ಶ್ರೀ ವೆಂಕಟೇಶ ಹೆಚ್. ಅವರು ಮಾತನಾಡುತ್ತಾ ಮಾಸ್ತಿ ಕನ್ನಡದ ಆಸ್ತಿ, ಸಣ್ಣ ಕಥೆಗಳ ಜನಕ, ಅವರು ತಮಿಳು ಭಾಷೆಯವರಾದರೂ ಕನ್ನಡ ಅವರ ಹೃದಯದ ಭಾಷೆಯಾಗಿತ್ತು. ಕನ್ನಡ ಭಾಷೆ ನಾಡಿನ ಮನೆ ಮನೆಯಲ್ಲೂ ಮಾತಾಗಬೇಕು ಎನ್ನುವ ಕುರಿತು ಆ ಕಾಲಕ್ಕೇ ಸುಗ್ರೀವಾಜ್ಞೆಯನ್ನೇ ಹೊರಡಿಸಿದ್ದರು ಮಾಸ್ತಿಯವರು. ಅವರಿಗೆ ಆರು ಎನ್ನುವ ಸಂಖ್ಯೆ ಹೆಚ್ಚು ಅಂಟಿಕೊಂಡಂತೆ ಕಾಣುತ್ತದೆ ಎಂಬುದನ್ನು ಉದಾಹರಣೆಗಳ ಸಮೇತ ವ್ಯಾಖ್ಯಾನಿಸುತ್ತಾ, ಮಾಸ್ತಿ ಅವರಿಗೆ ಅಣ್ಣ ತಮ್ಮಂದಿರು ಆರು ಜನ, ಮಕ್ಕಳು ಸಹ ಆರು ಹಾಗೂ ಅವರ ಜನನ ಮತ್ತು ಮರಣದ ದಿನಾಂಕವೂ ಆರು. ಹಾಗಾಗಿ ಆರರ ನಂಟು ಮಾಸ್ತಿ ಅವರಿಗಿತ್ತು ಎಂದು ತಿಳಿಸಿದರು. ಮಾಸ್ತಿಯವರು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಸಾಹಿತ್ಯದಲ್ಲಿ ಕಟ್ಟಿಕೊಟ್ಟ ದಿಗ್ಗಜರು. ದೇಶಿ ಕಥೆಗಳು ಮತ್ತು ಜನಪದಕ್ಕೆ ಹೆಚ್ಚು ಒಲವು ತೋರಿದ ಮಾಸ್ತಿಯವರು ತಮಗೆ ತಡವಾಗಿ ಬಂದ ಜ್ಞಾನಪೀಠ ಪುರಸ್ಕಾರದ ಬಗ್ಗೆ ಆತ್ಮೀಯರೊಬ್ಬರು ಮಾಸ್ತಿ ಅವರೇ ನಿಮಗಿಂತ ಕಿರಿಯವರು ಈಗಾಗಲೇ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ, ನಿಮಗೆ ಇಷ್ಟು ತಡವಾಗಿ ಸಿಕ್ಕಿರುವುದಕ್ಕೆ ನಿಮಗೆ ಬೇಸರವಾಗುವುದಿಲ್ಲವೇ ಎಂದಾಗ ಮಾಸ್ತಿಯವರು ಅಲ್ರಯ್ಯ ಮನೆಯಲ್ಲಿ ಸಿಹಿ ಮಾಡಿದರೆ ಮೊದಲು ಯಾರಿಗೆ ಕೊಡುತ್ತಾರೆ ಹೇಳಿ, ಮನೆಯ ಕಿರಿಯರಿಗೆ ತಾನೇ, ಅದೇ ರೀತಿ ಮೊದಲು ಕಿರಿಯರಿಗೆ ಸಿಗಲಿ ಬಿಡಿ ಆಮೇಲೆ ನನಗೆ ಸಿಕ್ಕರೆ ಏನೂ ತೊಂದರೆ ಇಲ್ಲ. ನನಗೆ ಇಲ್ಲದ ಬೇಸರ ನಿಮಗೇಕೆ ಎನ್ನುವ ಉತ್ತರದ ಮೂಲಕ ತಮ್ಮನ್ನು ಸಮರ್ಥಿಸಿಕೊಂಡ ಘಟನೆಯನ್ನು ವೆಂಕಟೇಶ ಅವರು ಪ್ರಸ್ತಾಪಿಸಿದ್ದು ವಿಶೇಷವಾಗಿತ್ತು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಓದಿದಾಗ ಮಲೆನಾಡಿನ ಚಿತ್ರಣವು ಹೇಗೆ ಕಣ್ಣ ಮುಂದೆ ಬರುವುದೋ ಮತ್ತು ತರಾಸು ಅವರ ದುರ್ಗಾಸ್ತಮಾನ ಕಾದಂಬರಿ ಓದಿದಾಗ ದುರ್ಗದ ಚಿತ್ರಣ ಹೇಗೆ ಕಣ್ಣ ಮುಂದೆ ಬರುವುದೋ ಹಾಗೆ ಮಾಸ್ತಿಯವರ ಸಣ್ಣ ಕಥೆಗಳು ಮತ್ತು ಕಾದಂಬರಿಗಳನ್ನು ಓದಿದರೆ ಇಡೀ ನಮ್ಮ ಭಾರತೀಯ ಭವ್ಯ ಪರಂಪರೆಯು ನಮ್ಮ ಕಣ್ಣ ಮುಂದೆ ಬರುತ್ತದೆ ಆದ್ದರಿಂದಲೇ ಭಾರತೀಯ ಪರಂಪರೆಯನ್ನು ವಿಶ್ವದ ಉದ್ದಗಲಕ್ಕೂ ಪಸರಿಸಿದ ಹಿರಿಮೆ ಮಾಸ್ತಿಯವರಿಗೆ ಸೇರುತ್ತದೆ ಎಂದು ಹೇಳುತ್ತಾ "ಮಾಸ್ತಿ ಅವರ ಅಪ್ಪಟವಾದ ದೇಶಿ ಕಥೆಗಳನ್ನು ಅಜ್ಜ ಮತ್ತು ಮೊಮ್ಮಗ ಇಬ್ಬರು ಒಟ್ಟಿಗೆ ಕುಳಿತು ಓದಿ ಆನಂದಿಸಬಹುದು" ಎಂದು ಯು.ಆರ್ ಅನಂತಮೂರ್ತಿ ಅವರು ಹೇಳಿರುವುದನ್ನು ಸಹ ವೆಂಕಟೇಶ್ ಅವರು ತಮ್ಮ ವಿಚಾರ ಮಂಡನೆಯಲ್ಲಿ ಜ್ಞಾಪಿಸಿಕೊಂಡರು.

ಮುಂದುವರಿಯುತ್ತಾ, ಅವರ ಮೇರು ಕೃತಿಗಳಾದ ಚನ್ನಬಸವ ನಾಯಕ ಮತ್ತು ಚಿಕ್ಕವೀರರಾಜೇಂದ್ರ ಕೃತಿಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಕೊಟ್ಟರು. ವಿದ್ಯಾಭ್ಯಾಸದಲ್ಲೂ ಮಾಸ್ತಿಯವರು ಮುಂಚೂಣಿಯಲ್ಲಿದ್ದರು, ಮೊದಲ ಸ್ಥಾನವನ್ನು ಯಾರಿಗೂ ಬಿಟ್ಟುಕೊಟ್ಟವರಲ್ಲ. ಮಾಸ್ತಿಯವರಿಗೆ ತಾವು ಇಂಗ್ಲೀಷ್‌ನಲ್ಲಿ ಬರೆದು ದೊಡ್ಡ ಹೆಸರು ಮಾಡಬೇಕೆಂಬ ಹಂಬಲ ಇತ್ತು. ಆದರೆ ಅವರು ಕನ್ನಡದಲ್ಲಿಯೇ ಬರೆಯಲು ಅವರಿಗೆ ಪ್ರೇರಣೆ ನೀಡಿದ ಘಟನೆ ಬಗ್ಗೆ ತಿಳಿಸುತ್ತಾ ಇವರು ಸರ್ಕಾರದ ಅಧಿಕಾರಿಯಾಗಿದ್ದಾಗ ಒಮ್ಮೆ ಕೋಲಾರದ ಮಲ್ಲಸಂದ್ರ ಎಂಬ ಊರಿಗೆ ಜಮಾಬಂದಿಗೆ ಎಂದು ಹೋದಾಗ ಕಂದಾಯ ಕಟ್ಟದ ಒಬ್ಬ ರೈತನನ್ನು ನಿಲ್ಲಿಸಿ, ಅಲ್ಲಯ್ಯ ನಿನಗೆ ಸರ್ಕಾರದ ರೂಲ್ಸ್ ಗೊತ್ತಿದೆಯೋ ಗೊತ್ತಿಲ್ಲವೋ ಕಂದಾಯ ಕಟ್ಟದೆ ಓಡಾಡುತ್ತಿದ್ದೀಯಲ್ಲ ರೂಲ್ಸ್ ತಿಳಿದುಕೊಂಡು ಕೆಲಸ ಮಾಡು ಎಂದು ಹೇಳುತ್ತಾರೆ ಆದರೆ ಆ ರೈತ ತುಂಬಾ ಸಂಯಮದಿಂದ ಮುಗ್ಧವಾಗಿ ಅಲ್ಲ ಸ್ವಾಮಿ, ರೂಲ್ಸ್‌ಗಳೆಲ್ಲ ನಿಮ್ಮಂತವರಿಗೆ ಅರ್ಥವಾಗಲಿ ಎಂದು ಇಂಗ್ಲೀಷಿನಲ್ಲಿ ಇರುತ್ತವೆ, ಕನ್ನಡದಲ್ಲಿ ಇದ್ದಿದ್ದರೆ ನಮ್ಮಂತವರಿಗೂ ತಿಳಿದುಕೊಳ್ಳಲು ಸುಲಭವಾಗುತ್ತಿತ್ತು ಎಂದು ಹೇಳುತ್ತಾನೆ. ಆ ಘಟನೆಯು ಮಾಸ್ತಿಯವರ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಅಂದಿನಿಂದಲೇ ನಾನು ಕನ್ನಡದಲ್ಲಿಯೇ ಬರೆಯಬೇಕೆಂದು ಅವರು ನಿರ್ಧರಿಸುತ್ತಾರೆ. ಅದೇ ರೀತಿ ಕನ್ನಡದಲ್ಲಿಯೇ ಬರೆದು ಕನ್ನಡದ ಆಸ್ತಿಯಾಗುತ್ತಾರೆ ಎಂಬ ಘಟನೆಯನ್ನು ನೆನಪಿಸಿದರು ಹಾಗೆಯೇ ಮಾಸ್ತಿ ಅವರು ತುಮಕೂರು ಜಿಲ್ಲೆಯಲ್ಲಿ ಕಮೀಷನರ್ ಆಗಿದ್ದ ಕಾಲದಲ್ಲಿ ಮದ್ದಗಿರಿಯನ್ನು ಮಧುಗಿರಿಯನ್ನಾಗಿ ಹೆಸರು ಬದಲಾಯಿಸಿದ ಹಿರಿಮೆ ಮಾಸ್ತಿ ಅವರದ್ದು ಎಂದು ಶ್ರೀ ವೆಂಕಟೇಶ್ ಹೆಚ್. ತಮ್ಮ ಮಾತುಗಳಲ್ಲಿ ಸ್ಮರಿಸಿದರು.

**ಡಾ. ವಿನಾಯಕ ಕೃಷ್ಣ ಗೋಕಾಕ್ ಕುರಿತು ವಿಚಾರ ಮಂಡನೆ :** ಕನ್ನಡಕ್ಕೆ 5ನೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ವಿ.ಕೃ ಗೋಕಾಕರ ಕುರಿತಾಗಿ ಪ್ರಾಂಶುಪಾಲರು ಮತ್ತು ಕನ್ನಡ ಪ್ರಾಧ್ಯಾಪಕರಾದ ಡಾ. ಎಂ.ಡಿ. ಒಕ್ಕುಂದ ಅವರು ಸಂವಾದ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಮಾಡಿಕೊಟ್ಟರು. ಡಾ. ಎಂ.ಡಿ. ಒಕ್ಕುಂದ ಅವರು ಮಾತನಾಡುತ್ತಾ, ಗೋಕಾಕರು ಕವಿಗಳು, ಪಂಡಿತರು, ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಅಪಾರ ವಿದ್ವತ್ತನ್ನು ಹೊಂದಿದವರು ಎನ್ನುತ್ತಾ. ಧಾರವಾಡಕ್ಕೂ ಗೋಕಾಕರಿಗೂ ಇದ್ದ ಅವಿನಾಭಾವ ಸಂಬಂಧದ ಬಗ್ಗೆ ಮೆಲುಕು ಹಾಕಿದರು. ಬೇಂದ್ರೆ ಅವರ ಶಿಷ್ಯರಾಗಿ ಗೋಕಾಕರು ದೇಶ ರಾಜ್ಯವನ್ನು ಸುತ್ತಿ ಕಾವ್ಯ ಬರೆದವರು.ವೃತ್ತಗಳ ಆವರ್ತದಿಂದ ಸ್ವಚ್ಛಂದದ ಹೊಸ ಮಾರ್ಗವನ್ನು ನಿರ್ಮಿಸಿದ ಹೊಸ ಬಗೆಯ ಕವಿ ಗೋಕಾಕರು. ಇವರ 'ಸಮುದ್ರ ಗೀತೆಗಳು' ಕಾವ್ಯದ ಸೃಷ್ಟಿ ನವ್ಯದ ಮುಕ್ತ ಚಂದದ ದಾರಿಯನ್ನು ಮುಕ್ತಗೊಳಿಸುತ್ತದೆ ಎಂದು ಬಣ್ಣಿಸಿದರು. ಅಡಿಗರು, ಚಂಪಾ, ಕೆ.ವಿ. ತಿರುಮಲೇಶ್, ಎಸ್. ಸಿದ್ದಲಿಂಗಯ್ಯ, ಎಚ್.ಎಸ್. ಶಿವಪ್ರಕಾಶ್, ಪ್ರತಿಭಾ ಮತ್ತು ಸವಿತಾ ನಾಗಭೂಷಣ್ ಮುಂತಾದವರ ನವೋದಯ ಕಾವ್ಯ ಪ್ರಕಾರಗಳ ಹೊರತಾಗಿಯೂ ಗೋಕಾಕರ ಆಲೋಚನಾಕ್ರಮ ಮತ್ತು ನಿಲುವು ಕಾವ್ಯ ಪ್ರಕಾರಗಳಲ್ಲಿ ಒಂದು ದೊಡ್ಡ ಬದಲಾವಣೆ ಗೋಕಾಕರಿಂದ ಮಾತ್ರವೇ ಸಾಧ್ಯವಾದದ್ದು ಎಂಬುದಾಗಿ ವಿಶ್ಲೇಷಿಸಿದರು.

ಭಾವಗೀತೆಗಳನ್ನು ಹೊರತುಪಡಿಸಿ ಭಾವಗೀತೆಗಳ ಬದಲಿಗೆ ಮುಕ್ತ ಛಂದಸ್ಸನ್ನು ಸಾಹಿತ್ಯಕ್ಕೆ ತಂದವರೆಂದರೆ ಅದು ಗೋಕಾಕರು. ವಿನಾಯಕರ ಕಾವ್ಯಗಳ ಸ್ಥಾಯಿ ಭಾವವನ್ನು ಅರ್ಥಮಾಡಿಕೊಳ್ಳದೆ ಸೋತೆವು ಎಂಬುದಾಗಿ ಖ್ಯಾತ ವಿಮರ್ಶಕ ಡಾ. ಜಿ.ಎಸ್. ಅಮೂರರು ಗೋಕಾಕರ ಕಾವ್ಯ ಕೃಷಿಯ ಬಗ್ಗೆ





ಹೇಳಿದ್ದನ್ನು ಸ್ಮರಿಸುತ್ತಾ, ಸಂಕಲನದಿಂದ ಸಂಕಲನಕ್ಕೆ ಸ್ಥಿತ್ಯಂತರ ಮಾಡಿಕೊಂಡ ಕವಿ ಗೋಕಾಕರನ್ನು ಬಿಟ್ಟರೆ ಮತ್ಯಾರೂ ಇಲ್ಲ ಎಂಬುದಾಗಿ ಹೇಳಿದರು. ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಗೋಕಾಕರ ಕುರಿತು ಹೀಗೆ ಹೇಳಿದ್ದನ್ನು ಉಲ್ಲೇಖಿಸುತ್ತಾರೆ– ನೀರ ಮೇಲೆ, ನೆಲದ ಮೇಲೆ, ನಭದ ಮೇಲೆ ಪ್ರವಾಸವನ್ನೇ ಕಾವ್ಯವಾಗಿಸಿದವರು ವಿನಾಯಕರು. ಪ್ರವಾಸವೇ ಕಾವ್ಯವಾಯಿತು ಎಂಬುದಾಗಿ ಹೇಳುತ್ತಾರೆ. ಪ್ರವಾಸ ಕಾವ್ಯಗಳ ಮೂಲಕ ಆಧುನಿಕ ಕನ್ನಡ ಕಾವ್ಯವನ್ನು ಬಂಧನಗಳ ಬಂದದಿಂದ, ಭಾವಗೀತೆಗಳ ಬಂಧನದಿಂದ ಬಿಡುಗಡೆಗೊಳಿಸಿದ ಧೀಮಂತ ಕವಿ ಗೋಕಾಕರು ಎಂದು ಹೇಳಿ ಡಾ. ಎಂ.ಡಿ. ಒಕ್ಕುಂದ ಅವರು ತಮ್ಮ ವಿಚಾರ ಮಂಡನೆ ಮುಗಿಸಿದರು.

ಕಾರ್ಯಕ್ರಮ ಮುಂದುವರಿದು, ವಿ.ಕೃ. ಗೋಕಾಕರ ಕೃತಿಗಳು ಮತ್ತು ಅವರ ಸಾಹಿತ್ಯದ ದೃಷ್ಟಿಕೋನಗಳ ಬಗ್ಗೆ ಕರ್ನಾಟಕ ಕೇಂದ್ರೀಯ ವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರು, ಕವಿಗಳು ಮತ್ತು ಲೇಖಕರು ಆದ ಪ್ರೊ. ವಿಕ್ರಂ ವಿಸಾಜಿಯವರು ತಮ್ಮ ವಿಚಾರ ಮಂಡಿಸಿದರು. ಅವರ ಮಾತುಗಳ ಮೊದಲು ಅವರ ಕಿರು ಪರಿಚಯುವನ್ನು ಸಂಘದ ಕಾರ್ಯಕಾರಿ ಸದಸ್ಯರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಮಾಡಿಕೊಟ್ಟರು. ಪ್ರೊ. ವಿಕ್ರಂ ವಿಸಾಜಿಯುವರು ಮಾತನಾಡುತ್ತಾ ಗೋಕಾಕರು ಸಾಹಿತ್ಯ ರಚನೆ ಅಲ್ಲದೆ ಭಾರತದ ಅನೇಕ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸಿದ ಹೆಗ್ಗಳಿಕೆ ಅವರಿಗಿದೆ ಎಂಬುದಾಗಿ ವಿವರಿಸಿದರು. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಸತ್ಯಸಾಯಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಂತರ ಉಪಕುಲಪತಿಗಳಾಗಿಯೂ ಕೊಲ್ಲಾಪುರದ ರಾಜರಾಮ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಉಸ್ಮಾನಿಯಾ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಸತ್ಯ ಸಾಯಿ ಉನ್ನತ ಅಧ್ಯಯನ ಸಂಸ್ಥೆಯ ಉಪ–ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದರು, ಜಪಾನ್, ಅಮೆರಿಕ, ಇಂಗ್ಲೆಂಡ್ ಬೆಲ್ಜಿಯಂ ಗ್ರೀಸ್ ಪೂರ್ವ ಆಫ್ರಿಕಾ ಮೊದಲಾದ ದೇಶಗಳಿಗೆ ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ ಹೋಗಿ ಬಂದ ಹೆಗ್ಗಳಿಕೆ ಗೋಕಾಕರದು ಎಂದು ತಿಳಿಸಿದರು. ಇಂಗ್ಲಿಷ್ ಶಿಕ್ಷಣದ ನಿಲುವುಗಳನ್ನೇ ಬದಲಿಸಿದ ಗೋಕಾಕರು ಬಹು ಎತ್ತರದ ಭಾಷಾಜ್ಞಾನ ಉಳ್ಳವರು ಎಂಬುದಾಗಿ ಪ್ರೊ. ವಿಕ್ರಂ ವಿಸಾಜಿಯವರು ವಿವರಿಸಿದರು.

ಹಾಗೆಯೇ, ಗೋಕಾಕರು ಕಮಲ ಮಂಡಲ ಅನ್ನುವ ಸಂಘ ಕಟ್ಟಿ ಆ ಮೂಲಕ ಶಿಕ್ಷಣದ ಚಿಂತನೆಗಳನ್ನು ವಿಸ್ತರಿಸುತ್ತಾರೆ. ತದನಂತರದಲ್ಲಿ ಚಂಪಾ, ಪಟ್ಟಣಶೆಟ್ಟಿ ಮುಂತಾದವರು ಸಂಘದಲ್ಲಿದ್ದು ಗೋಕಾಕರ ಚಿಂತನೆಗಳಿಗೆ ಇಂಬು ಕೊಡುತ್ತಾರೆ. ವಿಶಾಲ ದೃಷ್ಟಿಕೋನ ಮತ್ತು ಆಧ್ಯಾತ್ಮಿಕ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದ ಇವರು ನವೋದಯದಿಂದ ನವ್ಯದ ಕಡೆ ಹೊರಟರು. ಈ ಕಾರಣದಿಂದಾಗಿ ಸಮನ್ವಯದ ಹರಿಕಾರರಾಗಿಯೂ ಗೋಕಾಕರು ಕಾಣುತ್ತಾರೆ. ಮಹಾಕಾವ್ಯ ಕಾದಂಬರಿ. ಕಾವ್ಯ. ಚಿಂತನ ಲೇಖನಗಳ ಜೊತೆಗೆ ಜನನಾಯಕ. ವಿಮರ್ಶಕ ವೈದ್ಯ ಮುಂತಾದ ನಾಟಕಗಳನ್ನು ರಚಿಸಿದರು. ಆದರೆ ನಾಟಕ ಪ್ರಕಾರಗಳಿಂದ ಗೋಕಾಕರು ಹೆಚ್ಚು ಯಶಸ್ವಿಯಾಗಲಿಲ್ಲ ಎಂಬುದಾಗಿ ಹೇಳಿ ಆ ಕಾಲಘಟ್ಟದ ಇತರ ನಾಟಕ ರಚನೆಕಾರರ ಬಗ್ಗೆಯೂ ಮಾತನಾಡಿದರು. ಅವರ ಬೃಹತ್ ಕಾದಂಬರಿ 'ಸಮರಸವೇ ಜೀವನ' 1300 ಪುಟಗಳದ್ದು ಎರಡು ಕುಟುಂಬಗಳ ನಡುವೆ ಬರುವ 'ಆಧ್ಯಾತ್ಮದ' ಸಂಬಂಧಗಳ ಕುರಿತು 22 ವರ್ಷಗಳಲ್ಲಿ ಬರೆದ ಕಾದಂಬರಿ ಇದು ಆ ಕಾದಂಬರಿಯ ಕೇಂದ್ರಬಿಂದು ನರಹರಿ. ನರಹರಿಯ ಆಧ್ಯಾತ್ಮಿಕ ಸಂಘರ್ಷ ಕಾದಂಬರಿಯ ಮುಖ್ಯ ಅಂಶ ಎಂದು ತುಂಬಾ ಸವಿವರವಾಗಿ ಪ್ರೊ. ವಿಸಾಜಿ ತಿಳಿಸಿದರು.

ಅವರ ಪ್ರವಾಸ ಕಥನಗಳು ಹೆಚ್ಚು ಜನಪ್ರಿಯ, ಸಮುದ್ರದಾಚೆಯಿಂದ ಹಾಗೂ ಸಮುದ್ರ ದೀಚೆಯಿಂದ ಎನ್ನುವ ಎರಡು ಪ್ರವಾಸ ಕಥನಗಳು ಇಂದಿಗೂ ವಿಶಿಷ್ಟವಾಗಿದ್ದವು. ಕಲಾಪ್ರಜ್ಞೆ, ಆಧ್ಯಾತ್ಮಿಕ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆ ಇಲ್ಲದಿದ್ದರೆ ಸಾಹಿತ್ಯ ಸೃಷ್ಟಿಯಾಗುವುದಿಲ್ಲ ಎನ್ನುವ ನಂಬಿಕೆ ಗೋಕಾಕರದ್ದಾಗಿತ್ತು. ಅವರ ಸಾಹಿತ್ಯ ಜೀವನ ದರ್ಶನವನ್ನು ಕಟ್ಟಿಕೊಟ್ಟಂತವು. ಗೋಕಾಕರು ವಿಮರ್ಶೆಯ ಬಗ್ಗೆಯೂ ಮಾತನಾಡುತ್ತಾರೆ, ವಿಮರ್ಶೆ ನಿರ್ವಿಕಾರ ಭಾಷೆಯನ್ನು ಬಳಸಬೇಕು ಸಹೃದಯತೆ ಮತ್ತು ಪಾಂಡಿತ್ಯ ಎರಡನ್ನು ಸಮನ್ವಯಗೊಳಿಸಬೇಕು ಎನ್ನುವುದು ಅವರ ಆಶಯುವಾಗಿತ್ತು. ಇಡೀ ಭಾರತವನ್ನು ಸಮನ್ವಯಿಸುವಂಥ ಸಾಹಿತ್ಯ ಕಡಿಮೆಯಾಗುತ್ತಿರುವುದರ ಬಗ್ಗೆ ಗೋಕಾಕರಿಗೆ ವಿಶಾದವಿತ್ತು ಎಂಬುದನ್ನು ಅವರು ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳ ಭಾಷಣದಲ್ಲಿ ಶ್ರೀ ಎಚ್.ಎನ್. ಅಶ್ವಥ್‌ರವರು ಮಾತನಾಡಿ ಮಾಸ್ತಿಯವರ ಸಮಾಜ ಸೇವೆ ಸರ್ಕಾರಿ ಸೇವೆ ಬಗೆಗಿನ ಉದಾಹರಣೆಗಳನ್ನು ಕೊಟ್ಟರು, ತನ್ನ ಸಾಹಿತ್ಯವಲ್ಲದೆ ಇತರರ ಸಾಹಿತ್ಯಕ್ಕೆ ಹಣ ಒದಗಿಸಿದ ಹೆಗ್ಗಳಿಕೆ ಮಾಸ್ತಿ ಅವರದ್ದು ಎಂದು ನೆನೆಯುತ್ತಾ ಅವರಿಗೆ ಇಂಗ್ಲೆಂಡಿನ ಚಾರ್ಲಸ್ ಡಿಕನ್ ಮಾಸ್ತಿಯವರಿಗೆ ಪ್ರೇರಣೆಯಾಗಿದ್ದರು, ಈ ಕಾರಣದಿಂದಾಗಿ ಸಣ್ಣ ಕಥೆಗಳಿಗೆ ಪ್ರೇರಣೆ ದೊರಕಿತ್ತು. ಮಾಸ್ತಿಯವರ 'ಮೊಸರಿನ ಮಂಗಮ್ಮ' ಮತ್ತು 'ರಂಗನ ಮದುವೆ' ಕೃತಿಗಳ ಬಗ್ಗೆ ಮಾತನಾಡುತ್ತಾ, ಗೋಕಾಕರ ಸಮನ್ವಯ ಸಾಹಿತ್ಯದ ಬಗ್ಗೆ ಭಾರತೀಯ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಚರ್ಚಿಸಿದರು. ಕನ್ನಡವನ್ನು ಉಳಿಸಿ, ಬೆಳೆಸಿ ಇಂದಿನ ಜನಾಂಗಕ್ಕೆ ತಲುಪಿಸುವ ಕೆಲಸ ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಭಾಗವಹಿಸಿದ್ದ ಕಲಾವಿದರಿಗೆ, ಮುಖ್ಯ ಅತಿಥಿಗಳಿಗೆ ಪ್ರೇಕ್ಷಕರಿಗೆ ಹಾಗೂ ಸುಶ್ರಾವ್ಯವಾಗಿ ಹಾಡಿದ ಗಾಯಕರಿಗೂ ಕಾರ್ಯಕ್ರಮ ನಡೆಸಿಕೊಟ್ಟ ಸಂಘಟಕರಿಗೂ ವಂದಿಸಿ ತಮ್ಮ ಮಾತುಗಳನ್ನು ಮುಗಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿ.ಎಂ. ನಾಗರಾಜರವರು ಮಾತಾಡಿ, ಈ ಕಾರ್ಯಕ್ರಮ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳಲ್ಲದೆ ಮುಂದಿನ ದಿನಗಳಲ್ಲಿ ಕನ್ನಡದ ಕವಿಗಳನ್ನು, ಚಿಂತಕರನ್ನು ಮತ್ತು ಲೇಖಕರನ್ನು ದೆಹಲಿ ಕನ್ನಡಿಗರಿಗೆ ಮತ್ತು ನಾಡಿನ ಜನತೆಗೆ ಪರಿಚಯಿಸುವ ಉದ್ದೇಶ ನಮ್ಮದು. ಈ ಪ್ರಯತ್ನವಾಗಿ ಮುಂದಿನ ದಿನಗಳಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳುತ್ತಾ ಸಂಘದ ಪದಾಧಿಕಾರಿಗಳಿಗೂ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರಿಗೂ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವು ನೀಡಿದ





ಆತ್ಮೀಯರೆಲ್ಲರಿಗೂ ಧನ್ಯವಾದ ತಿಳಿಸಿದರು. ಜೊತೆಗೆ ಮುಂಬರುವ ದಿನಗಳಲ್ಲಿ ಮಕ್ಕಳ ಸಾಹಿತ್ಯದ ಕುರಿತಾಗಿಯೂ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿಯೂ ಹೇಳಿದರು. ನಿಸ್ತಂತು ಮಾಧ್ಯಮದ ಮೂಲಕ ಭಾಗಿಯಾಗಿ ಶ್ರೀ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ಡಾ. ವಿನಾಯಕ ಕೃಷ್ಣ ಗೋಕಾಕ್ ಅವರ ಬಗ್ಗೆ ವಿಚಾರ ಮಂಡನೆ ಮಾಡಿದಂತಹ ನಾಡಿನ ಸಾಹಿತಿಗಳಿಗೆ ಮತ್ತು ಲೇಖಕರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೇಳಿಕೊಂಡರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಕಾರ್ಯಕಾರಿ ಸದಸ್ಯರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ತಮ್ಮ ನುರಿತ ವಾಗ್ಝರಿಯಿಂದ ತುಂಬಾ ಅರ್ಥಗರ್ಭಿತವಾಗಿ ಮಾಡಿ ಸಾಹಿತ್ಯೋತ್ಸವ ಸಮಾರಂಭವನ್ನು ತುಂಬಾ ಯಶಸ್ವಿಯಾಗಿ ನೆಡೆಸಿಕೊಟ್ಟರು. ಅವರು ತಮ್ಮ ನಿರೂಪಣೆಯಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಬಗ್ಗೆ ವಿಚಾರ ಮಂಡನೆ ಮಾಡಿದ ಶ್ರೀ ವೆಂಕಟೇಶ ಹೆಚ್. ಚಿತ್ರದುರ್ಗ ಅವರನ್ನು ಕುರಿತು ತುಂಬಾ ಆಳವಾಗಿ ಅಧ್ಯಯನ ಮಾಡಿ ತಮ್ಮ ವಿಚಾರ ಮಂಡನೆಯನ್ನು ಮಾಡಿದ್ದೀರಿ ಅದಕ್ಕೆ ಮಾಸ್ತಿಯವರು ಕನ್ನಡದ ಆಸ್ತಿಯಾದರೆ ನೀವು ನಮ್ಮ ಸಂಘದ ಆಸ್ತಿಯೆಂದು ಪ್ರಶಂಸಿಸಿದರು.

ಸ್ಥಳೀಯ ಕಲಾವಿದರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮತ್ತು ತಂಡ, ಶ್ರೀ ಅಶೋಕ್ ಹಣಮಸಾಗರ್, ಶ್ರೀಮತಿ ವೈಜಯಂತಿ ಗಿರೀಶ್, ಶ್ರೀಮತಿ ಶುಭ ದೇವಿಪ್ರಸಾದ್, ಕುಮಾರ ಹಿಮಾಂಶು ಮತ್ತು ಕುಮಾರಿ ಹಂಸಶ್ರೀ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಸುಶ್ರಾವ್ಯ ಕಂಠಸಿರಿಯಲ್ಲಿ ಕನ್ನಡ ಗೀತೆಗಳನ್ನ ಹಾಡಿ ಸಭಿಕರನ್ನು ಮನರಂಜಿಸಿದರು. ಕೊನೆಯಲ್ಲಿ ಭಾಗವಹಿಸಿದ್ದ ದೆಹಲಿ ಕನ್ನಡಿಗರು ಅಹ್ವಾನಿತರು ಮತ್ತು ಅತಿಥಿಗಳಿಂದ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು. ಸಂಘದ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ಎಲ್ಲರಿಗೂ ವಂದನಾರ್ಪಣೆ ಮಾಡಿದರು. ಸಂಘದ ಪರವಾಗಿ ಮುಖ್ಯ ಅತಿಥಿಗಳಿಗೆ ಮತ್ತು ವಿಚಾರ ಮಂಡನೆ ಮಾಡಿದವರಿಗೆ ಮತ್ತು ಗೀತೆ ಗಾಯನ ಮಾಡಿದವರಿಗೆ ಗೌರವ ಸಮರ್ಪಣೆ ಮಾಡುವುದರೊಂದಿಗೆ ಸಾಹಿತ್ಯೋತ್ಸವ ಕಾರ್ಯಕ್ರಮ ಸಂಪನ್ನವಾಯಿತು. ❑

***ವೆಂಕಟೇಶ್ ಹೆಚ್.***
ಚಿತ್ರದುರ್ಗ, ನವದೆಹಲಿ

# ಸಂಘದಲ್ಲಿ ನಡೆದ ಸರಣಿ ಸಾಹಿತ್ಯೋತ್ಸವ ಕನ್ನಡ ಸಾಹಿತ್ಯಾಭಿಮಾನಿಗಳ ರಸದೌತಣ



ಉತ್ಸವ, ಮಹೋತ್ಸವ, ಆಚರಣೆ, ಇವು ಸಂಭ್ರಮದ ಮಾದರಿಗಳು, ಸಂಗೀತ, ಗಾಯನ, ಗಮಕ, ನೃತ್ಯ, ಇವೆಲ್ಲದರಲ್ಲೂ ಸಾಹಿತ್ಯವು ಎಲ್ಲಾ ಕಾರ್ಯಕ್ರಮಗಳ ಅವಿಭಾಜ್ಯ ಅಂಗವಾಗಿರುತ್ತದೆ. ಪ್ರತಿಯೊಬ್ಬರಿಗೂ ವೈಯಕ್ತಿಕ ಅಭಿರುಚಿಗಳು ಪ್ರಧಾನವಾಗಿದ್ದು ಅವು ಕೆಲವರಲ್ಲಿ ಅಭಿವ್ಯಕ್ತವಾದರೆ ಇನ್ನುಳಿದವರಲ್ಲಿ ಸುಪ್ತವಾಗಿ ಉಪ್ತವಾಗುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಇಂತಹ ಸುಪ್ತ ಪ್ರತಿಭೆಗಳು ಲುಪ್ತವಾಗದಿರುವಂತೆ ನಮ್ಮ ದೆಹಲಿ ಕರ್ನಾಟಕ ಸಂಘವು ಪ್ರತಿಯೊಂದು ಕಲೆಗೂ ಪ್ರೋತ್ಸಾಹ ನೀಡುತ್ತ ಪ್ರತಿಭಾವಂತರಿಗೆ ಪ್ರಾಧಾನ್ಯತೆ ನೀಡುತ್ತ ಕನ್ನಡ ಅಭಿಮಾನಿಗಳಿಗೆ ರಸದೌತಣ ನೀಡುವ ಕೆಲಸ ಮಾಡುತ್ತಿದೆ. ಕಳೆದ ಹಲವಾರು ವರ್ಷಗಳಿಂದಲೂ ಕರ್ನಾಟಕ ಸಂಘವು ಕಲೆ, ಸಂಸ್ಕೃತಿ ಕನ್ನಡ ಅಭಿಮಾನ, ಸಾಹಿತ್ಯ, ವೈಚಾರಿಕತೆ ಇನ್ನೂ ಹಲವು ಕ್ಷೇತ್ರದಲ್ಲಿಯೂ ತನ್ನ ಛಾಪುಗಾಲನ್ನು ಇಡುತ್ತಾ ಕನ್ನಡಿಗರನ್ನು ವರ್ಷದ 365 ದಿನಗಳೂ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡುತ್ತಿರುವಂತೆ ಕ್ರಿಯಾಶೀಲರನ್ನಾಗಿಸಿದೆ. ನಮಗೆಲ್ಲಾ ತಿಳಿದಿರುವಂತೆ ನಮ್ಮ ದ್ರಾವಿಡ ಭಾಷೆಗಳ ಸಾಹಿತ್ಯ ಲೋಕದಲ್ಲಿ ಕನ್ನಡವನ್ನು ಬಿಟ್ಟು ಇಷ್ಟು ಪ್ರಮಾಣದಲ್ಲಿ ಬೇರೆ ಯಾವುದೇ ಭಾಷೆಯ ಸಾಹಿತ್ಯಾತ್ಮಕ ಕಾರ್ಯಕ್ರಮಗಳು ದೆಹಲಿಯಲ್ಲಿ ನಡೆಯುತ್ತಿಲ್ಲ. ಎಂದು ಘಂಟಾಘೋಷವಾಗಿ ಹೇಳಬಹುದು. (ನನ್ನ ವೃತ್ತಿ ಪ್ರವೃತ್ತಿ ಎರಡು ಶಿಕ್ಷಕರಾಗಿರುವುದರಿಂದ ದೆಹಲಿಯ ತೆಲುಗು, ತಮಿಳು, ಕೇರಳ ಶಾಲೆಗಳ ಶಿಕ್ಷಕರ ಒಡನಾಟವಿದೆ, ಅದ ಕಾರಣ ಹೀಗೆ ಬರೆದಿರುವುದು) ದೆಹಲಿಯ ಕನ್ನಡತಿಯರು, ಮಕ್ಕಳು ಅತೀ ಹೆಚ್ಚಿನಮಟ್ಟದಲ್ಲಿ ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಟೊಂಕ ಕಟ್ಟಿ ನಿಂತಿರುತ್ತಾರೆ, ಉತ್ಸಾಹದಿಂದ ಸಂಭ್ರಮಿಸುತ್ತಾರೆ.

ಈ ನಿಟ್ಟಿನಲ್ಲಿ ಕನ್ನಡ ಭಾಷೆಯ ಸಾರಸ್ವತ ಲೋಕದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಹಿಂದೆಂದೂ ಆಚರಿಸಲಾಗಿಲ್ಲದ ಕನ್ನಡದ ಸಾಹಿತ್ಯೋತ್ಸವವನ್ನು ಕಳೆದ ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ಆಚರಿಸಲಾಯಿತು.

ಕನ್ನಡ ಭಾಷೆಯಲ್ಲಿ ಸಾಧನೆಗಾಗಿ ಎಂಟು ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ. ಕುವೆಂಪು, ಡಾ. ಯು. ಆರ್. ಅನಂತಮೂರ್ತಿ, ಡಾ. ದ.ರಾ. ಬೇಂದ್ರೆ, ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಡಾ. ವಿ.ಕೃ ಗೋಕಾಕ್, ಡಾ. ಶಿವರಾಮ ಕಾರಂತ, ಡಾ. ಗಿರೀಶ್ ಕಾರ್ನಾಡ್, ಮತ್ತು, ಡಾ. ಚಂದ್ರಶೇಖರ ಕಂಬಾರ, ಇವರುಗಳ ಕುರಿತಾದಂತಹ ಸಾಹಿತ್ಯ ಮಂಥನದ ಸಾಹಿತ್ಯೋತ್ಸವದ ಜೊತೆ ಜೊತೆಗೆ ಕನ್ನಡದ ಇತರ ಪ್ರಸಿದ್ಧ ಸಾಹಿತಿಗಳು ಕವಿಗಳು ಮತ್ತು ಲೇಖಕರಾದ ಶ್ರೀ ಡಿ.ಎಸ್. ಕರ್ಕಿ, ಶ್ರೀ ಜಿ.ಪಿ. ರಾಜರತ್ನಂ, ಶ್ರೀ ಜಿ.ಎಸ್. ಶಿವರುದ್ರಪ್ಪ, ಶ್ರೀ ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ, ಶ್ರೀ ಕೆ.ಎಸ್. ನರಸಿಂಹಸ್ವಾಮಿ, ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಡಾ. ಡಿ.ವಿ. ಗುಂಡಪ್ಪ, ಡಾ. ಎಂ. ಗೋಪಾಲಕೃಷ್ಣ ಅಡಿಗ, ಶ್ರೀ ಬಿ.ಎಂ. ಶ್ರೀಕಂಠಯ್ಯ, ಡಾ. ಎಸ್.ಎಲ್. ಭೈರಪ್ಪ, ಶ್ರೀ ಗೋವಿಂದ ಪೈ, ಡಾ. ಸಿದ್ದಲಿಂಗಯ್ಯ, ಪು.ತಿ. ನರಸಿಂಹಾಚಾರ್, ಶ್ರೀ ಪಂಜೆ ಮಂಗೇಶರಾಯ, ಡಾ. ಚನ್ನವೀರ ಕಣವಿ, ಶ್ರೀ ಅನಕೃ ಈ ಎಲ್ಲಾ ಕವಿ ಪುಂಜಗಳ ಜ್ಞಾನಸುಧೆಯನ್ನು ವಿಶೇಷ ಪರಿಣತರ ಕವಿ ವಾಣಿಯಲ್ಲಿ ದೆಹಲಿಯಾದ್ಯಂತ ಪಸರಿಸಲಾಯಿತು. ಈ ಮಹಾನ್ ವ್ಯಕ್ತಿಗಳ ಸಾಹಿತ್ಯ ಭಂಡಾರ ಸಾಮಾನ್ಯ ಜನರಿಗೆ ಮನಮುಟ್ಟುವಂತೆ ವ್ಯಕ್ತವಾಯಿತು. ಅಂತರ್ಜಾಲದ ಮೂಲಕ ವಿಶೇಷ ಅತಿಥಿಗಳು ಪರಿಮಿತರ ವಿಚಾರ ಸಂಕಿರಣ ಬಹಳ ಶ್ಲಾಘನೀಯವೆನಿಸಿತು. ದೆಹಲಿಯಲ್ಲಿ ಹುಟ್ಟಿ ಬೆಳೆದ ಕನ್ನಡ ಮಗುವಿಗೆ ತನ್ನ ಮಾತೃ ಭಾಷೆಯ ಕವಿಗಳ ವಿಚಾರ ತಿಳಿಸುವುದು ವಿಶೇಷವೆಂದರೆ ಆ ಕವಿಗಳು ರಚಿಸಿದ ಹಾಡುಗಳನ್ನು ಹಾಡಿ ಮಕ್ಕಳ ಜೊತೆಯಲ್ಲಿ ನಾವು ಕೂಡ ಪುನೀತರಾದೆವು.

ಸಾಹಿತ್ಯೋತ್ಸವದ ಮತ್ತೊಂದು ಆಕರ್ಷಣೆ ಸ್ಥಳೀಯ ಕಲಾವಿದರು ಸಂಬಂಧಪಟ್ಟ ಕವಿಗಳ ರಚಿತ ಗೀತೆಗಳನ್ನು ಹಾಡಿದ್ದು ಬಹಳ ಸಮಂಜಸ ಸಾರ್ಥಕತೆಯಾಗಿದ್ದು ಮನಸ್ಸಿಗೆ ಮುದ ನೀಡುತ್ತಿತ್ತು ಸ್ಥಳೀಯ ಕಲಾವಿದರಲ್ಲಿ ಹೊಸ ಹೊಸ ಪ್ರತಿಭೆಗಳ ಪರಿಚಯವಾಯಿತು. ಮತ್ತೊಂದು ಶ್ಲಾಘನೀಯ ಸಂಗತಿ ಎಂದರೆ ಸ್ಥಳೀಯ ಶಾಲಾ ಮಕ್ಕಳು ಪ್ರತಿ ಸಭೆಯ ಸಮಾರಂಭದ ಕವಿ ರಚಿತ ಕವನಗಳನ್ನು ಸಮೂಹಗಾನ ಹಾಡುವ ಮುಖಾಂತರ ಶೋಭೆಯನ್ನು ಉಂಟು ಮಾಡುತ್ತಿದ್ದರು. ಮಕ್ಕಳಿಗೆ ಸಮೂಹಗಾನ ತರಬೇತಿ ನೀಡುತ್ತಿದ್ದ ಪೋಷಕರಿಗೆ ಗುರುಗಳಿಗೆ ಹೃದಯಪೂರ್ವಕ ಅಭಿನಂದನೆಗಳು. ಜರತಾರಿ ಲಂಗ ತೊಟ್ಟು ಕನ್ನಡದ ಕಿನ್ನರಿಯರು ತಮ್ಮ ತಾಯ್ನಾಡಿನ ಸೊಬಗನ್ನು ಪಸರಿಸುತ್ತಿದ್ದರು ಪ್ರತಿಬಾರಿಯೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು ಮಕ್ಕಳಿಗೆ ಸಿಹಿಕೊಟ್ಟು ಅಭಿನಂದಿಸುತ್ತಿದ್ದರು.

"ಸವಿ ನುಡಿಯ ಚೆಂದುಟಿಗೆ ಸಿಹಿಯೇ ಪುರಸ್ಕಾರ".

ಒಟ್ಟಾರೆ ಸಾಹಿತ್ಯೋತ್ಸವ ಒಂದು ಯಶಸ್ವಿ ಕಾರ್ಯಕ್ರಮ ಮುಂಬರುವ ದಿನಗಳಲ್ಲಿ ಇಂತಹ ಮೌಲ್ವಿಕ ಭೌದ್ಧಿಕ ಚಿಂತನೆಯ ಪ್ರತೀಕದ ಕಾರ್ಯಕ್ರಮಗಳು ಹೊರಬರಲಿ ಎಂದು ಆಶಿಸುವೆ. ❑

***ಎಂ.ಎಸ್. ಲಾವಣ್ಯ***

# ಜ್ಞಾನಪೀಠ ಪ್ರಶಸ್ತಿಯನ್ನು ನಮ್ಮ ಕನ್ನಡಕ್ಕೆ ಮುಡಿಯಾಗಿಟ್ಟ ಬೇಂದ್ರೆ ಮತ್ತು ಕಾರ್ನಾಡರನ್ನು ನೆನೆಯುವ ಕಾರ್ಯ ಮೂಡಿದ ಸಾಹಿತ್ಯೋತ್ಸವ



ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರ ಪರಿಕಲ್ಪನೆಯಲ್ಲಿ ದಿನಾಂಕ 24 ಆಗಸ್ಟ್ 2025ನೇ ಭಾನುವಾರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿಗಳಾದ ಶ್ರೀ ದ.ರಾ. ಬೇಂದ್ರೆ ಮತ್ತು ಶ್ರೀ ಗಿರೀಶ್ ಕಾರ್ನಾಡ್ ಅವರ ಸಾಧನೆಯ ಸಂವಾದ, ಕಾವ್ಯ ಮತ್ತು ಗೀತೆ ವಾಚನಗಳನ್ನೊಳಗೊಂಡ ಸಾಹಿತ್ಯೋತ್ಸವ ಮಾಲಿಕೆ–3 ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸೆಮಿನಾರ್‌ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮೊದಲಿಗೆ ದೇವಿ ಶಾರದೆಯ ಪ್ರಾರ್ಥನೆ ಗೀತೆಯ ಮೂಲಕ ಶ್ರೀಮತಿ ವೈಜಯಂತಿ ಗಿರೀಶ್ ಅವರು ಶುಭಾರಂಭ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಚಾಲಕರಾದ ಶ್ರೀ ಅರುಣ್ ಸಿ.ಎಸ್. ಅವರ ಸಾಹಿತ್ಯಿಕ ನಿರೂಪಣೆ ವಿಶೇಷವಾಗಿತ್ತು.

ಸಾಹಿತಿ, ವರಕವಿ ಡಾ. ದ.ರಾ. ಬೇಂದ್ರೆ ಕನ್ನಡ ಸಾಹಿತ್ಯಕ್ಕಾಗಿ ಎರಡನೇ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾದರೆ, ನಾಟಕಕಾರ, ರಂಗಕರ್ಮಿ ಶ್ರೀ ಗಿರೀಶ್ ಕಾರ್ನಾಡ್ ಅವರು ಏಳನೇ ಜ್ಞಾನಪೀಠ ಪ್ರಶಸ್ತಿಯನ್ನು ಕರುನಾಡಿಗೆ ಅರ್ಪಿಸಿದವರು. ಇಂತಹ ಮಹನೀಯರ ಬದುಕಿನ ನೋಟದ ಕಾರ್ಯಕ್ರಮದಲ್ಲಿ ಆಗಮಿಸಿದವರಿಗೆ ಸ್ವಾಗತ ಕೋರಿದವರು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಪೂಜಾ ಪಿ. ರಾವ್. ಕವಿ ಬೇಂದ್ರೆ ಅವರೇ ಸ್ವತಃ ವಾಚನ ಮಾಡಿದ ಒಂದು ವಿಶೇಷ ಕಾವ್ಯದೃಶ್ಯವನ್ನು ಪರದೆಯಲ್ಲಿ ನೋಡಿದ ದೆಹಲಿ ಪ್ರೇಕ್ಷಕರು ಪ್ರಸನ್ನರಾದರು. ದೆಹಲಿ ಕನ್ನಡ ಶಾಲೆಯ ಅಧ್ಯಾಪಕರಾದ ಶ್ರೀ ಹೆಚ್.ಎಸ್. ತೇಲಿ ಅವರು ಬೇಂದ್ರೆ ಅವರ "ನೀ ಹಿಂಗೆ ನೋಡಬ್ಯಾಡ ನನ್ನ" ಎಂಬ ಪ್ರಸಿದ್ಧ ಗೀತೆಯನ್ನು ಹಾಡಿ ನೆರೆದವರನ್ನು ಭಾವನ ಲೋಕಕ್ಕೆ ಕರೆದೊಯ್ದರು.

ದ.ರಾ. ಬೇಂದ್ರೆ ಅವರ ಕುರಿತು ವಿಚಾರ ಮಂಡಿಸಲು ಆನ್‌ಲೈನ್ ಮುಖಾಂತರ ಭಾಗವಹಿಸಿದ, ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಬಿ.ಸಿ. ನಾಗೇಂದ್ರ ಕುಮಾರ್ ಅವರ ಪರಿಚಯವನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಮಾಡಿದರು.

ಡಾ. ಬೇಂದ್ರೆ ಕುರಿತು ಮಾತನಾಡುತ್ತಾ ಅವರು 'ಅಂಬಿಕಾತನಯದತ್ತಾ' ಎಂಬ ಶೀರ್ಷಿಕೆಯನ್ನು ಬೇಂದ್ರೆ ಹೊಂದಿದ್ದರು, ಸಾಹಿತ್ಯದ ವಿರಾಟ ಸ್ವರೂಪ ಎನ್ನುವ ಕೃತಿಯಲ್ಲಿ ಬೇಂದ್ರೆ ಅವರು ಸಾಹಿತ್ಯವನ್ನು "ಅಮೃತಕ್ಕೆ ಹಾರುವ ಗರುಢ" ಎಂದು ವಿವರಿಸಿದ್ದಾರೆ. ಅದೇ ಕೃತಿಯಲ್ಲಿ ಅವರು ಮುಂದುವರೆದು ಕಾವ್ಯವೆಂಬುದು ಅಮೃತಕ್ಕೆ ಹಾರುವ ಗರುಢ, ಅವನ ಗಾರುಢಿಯಲ್ಲಿ ನವನವವೂ ಗಾರುಢ ಮಂತ್ರ ಒಡಮೂಡಬೇಕು. ಇದರ ಹಿನ್ನಲೆ ಪುರಾಣ ಕಥೆಯ ವಿವರಣೆ ಮಾಡುತ್ತ ಗರುಢನು ತನ್ನ ತಾಯಿಯ ದಾಸ್ಯ ವಿಮೋಚನೆಗೆ ಇಂದ್ರಲೋಕಕ್ಕೆ ಹೋಗಿ ಅಪ್ರತಿಮ ಸಾಹಸದಿಂದ ಅಮೃತದ ಕಳಶವನ್ನು ತರುವಂತ ಕಥೆಯನ್ನು ಬೇಂದ್ರೆ ಅವರು ಹೇಗೆ ಅನ್ವಯಿಸುತ್ತಾರೆ ಅಂದ್ರೆ ಮಾನವತೆ ತನ್ನ ಸಂಕುಚಿತ ಸ್ವಾರ್ಥದಿಂದ ಹೊರಬರುವಂತೆ ಹೊಸ ಕಾವ್ಯ ಮಂತ್ರಶಕ್ತಿಯನ್ನು ಪಡೆಯಬೇಕು ಎಂದು ವಿವರಿಸುತ್ತಾರೆ. ಇದೇ ಸಿದ್ಧಾಂತದ ಆಧಾರವಾಗಿ ಕನ್ನಡದ ಚಿಂತಕರು ಮತ್ತು ವಿಮರ್ಶಕರು ಮತ್ತು ತಮಗೆ ಗುರುಗಳಾದಂತಹ ಡಾ. ಡಿ.ಆರ್. ನಾಗರಾಜ್ ಅವರು "ಅಮೃತ ಮತ್ತು ಗರುಢ" ಎಂಬ ಕನ್ನಡದ ಶ್ರೇಷ್ಠ ವಿಮರ್ಶಕ ಕೃತಿ ಬರೆದರು. ಬೇಂದ್ರೆ ಅವರ ಕಾವ್ಯದ ಗುರಿಯನ್ನು ಹೀಗೆ ವಿವರಿಸುತ್ತಾ ಬೇಂದ್ರೆ ಅವರು ಬರಹಕ್ಕೆ ಪ್ರವೇಶಿಸಿದರು ಎಂದು ಡಾ. ನಾಗೇಂದ್ರ ಕುಮಾರ್ ಹೇಳಿದರು.

ಮೂರು ಮಾನದಂಡಗಳಡಿಯಲ್ಲಿ ಶ್ರೇಷ್ಠ ಕವಿಗಳು, ಕಾಲಾತೀತವಾಗಿ ಉಳಿಯುವ ಕವಿಗಳಾಗುತ್ತಾರೆ.

1. ಕಲಾತ್ಮಕ ಔನತ್ಯವಿರಬೇಕು. 2. ಸಾಮಾಜಿಕ ಬದ್ಧತೆ ಇರಬೇಕು ಮತ್ತು 3. ಪ್ರಸ್ತುತತೆ ಹೊಂದಿರಬೇಕು

ಈ ಮೂರರಲ್ಲೂ ಬೇಂದ್ರೆ ಅವರ ಕಾವ್ಯ ಔನತ್ಯವನ್ನು ಸಾಧಿಸಿದೆ ಎಂದು ಹೇಳಬಹುದು. ಡಾ. ಸಿ.ಎನ್. ರಾಮಚಂದ್ರನ್ ಅವರ ಲೇಖನ "ಬೇಂದ್ರೆ ಎಂದರೆ", ಇದರಲ್ಲಿ ಬೇಂದ್ರೆ ಅವರನ್ನು ಸಾಗರಕ್ಕೆ ಹೋಲಿಸುತ್ತಾ, ಸಾಗರದ ಒಂದು ಅಲೆಯನ್ನಷ್ಟೆ ವಿವರಿಸುತ್ತಿದ್ದೇನೆ ಎಂದು ಲೇಖಕರು ಬರೆದರೆ, ಡಾ. ನಾಗೇಂದ್ರ ಕುಮಾರ್ ಬೇಂದ್ರೆ ಅವರನ್ನು ಗಗನಕ್ಕೆ ಹೋಲಿಸುತ್ತಾ ಒಂದು ನಕ್ಷತ್ರವನ್ನಷ್ಟೆ ವಿವರಿಸುವೆ ಎನ್ನುತ್ತಾ ತಂತ್ರಜ್ಞಾನದ ಭರಾಟೆಯಲ್ಲಿ ಮುಖಾಮುಖಿ ಸೇರದೆ ಯಂತ್ರಗಳ ಮುಖಾಂತರ ಮಾತನಾಡುವಾಗ ಒಂದು ರೀತಿಯ ಅಪರಿಚಿತತೆ ಕಾಡುತ್ತದೆ ಎಂಬ ಚಿಂತನೆಯನ್ನು ವ್ಯಕ್ತಪಡಿಸಿದರು.

ಬೇಂದ್ರೆ ಅವರು ಜನಿಸಿದ್ದು ದಿನಾಂಕ ಜನವರಿ 31, 1896ರಲ್ಲಿ ಅವರು ನಮ್ಮನ್ನೆಲ್ಲ ಅಗಲಿದ್ದು 26 ಅಕ್ಟೋಬರ್ 1981ರಂದು. ಅವರ ಜನ್ಮ ದಿನವಾದ ಜನವರಿ 31 ಅನ್ನು ಕವಿ ದಿನ ಎಂದು ಆಚರಿಸಲಾಗುತ್ತದೆ. ಅವರಿಗೆ 1974ರಲ್ಲಿ 'ನಾಕುತಂತಿ' ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂತು. ಅವರ ಮೊದಲ ಕವನ ಸಂಕಲನ ಕೃಷ್ಣಕುಮಾರಿ. 1918ರಲ್ಲಿ ಪ್ರಭಾತ ಪತ್ರಿಕೆಯಲ್ಲಿ ಪ್ರಕಟವಾದ ತುತ್ತೂರಿ ಬೇಂದ್ರೆ ಅವರ ಮೊದಲ ಕವನ. ಬೇಂದ್ರೆ ಅವರ ಕುರಿತು ಗಿರೀಶ್ ಕಾರ್ನಾಡ್ ಅವರು ಮಾಡಿರುವ ಸಾಕ್ಷಚಿತ್ರ ಯೂಟ್ಯೂಬ್ ವಾಹಿನಿಯಲ್ಲಿದ್ದು, ಆಸಕ್ತರು ಅದನ್ನು ವೀಕ್ಷಿಸಬಹುದು. ಬೇಂದ್ರೆ ಅವರ ಕುರಿತ ಕಾಲ್ಪನಿಕ ಕಾದಂಬರಿ ದತ್ತುಮಾತ್ತರ ಇದರ ಲೇಖಕರು ಎನ್.ಕೆ. ಇದು ಪ್ರಜಾವಾಣಿಯಲ್ಲಿ ಧಾರವಾಹಿಯಾಗಿ ಬಂದಿದೆ ಎಂದರು.

ಮುಂದುವರಿಯುತ್ತಾ, ಆತ್ಮಚರಿತ್ರೆ ಪ್ರಕಾರ ಕಾವ್ಯಗಳಲ್ಲಿ ವಿಶಿಷ್ಟ ಪ್ರಕಾರ ಸಖಿಗೀತ. ಇದು ಒಂದು ರೀತಿಯ ವಿಶಿಷ್ಟ ಆತ್ಮಚರಿತ್ರಾತ್ಮಕ ಕಾವ್ಯ

(Autobiographical poetry) ಪ್ರಕಾರ. ಬೇಂದ್ರೆ ಎಂಬ ಅರ್ಥ ಹುಡುಕಿದಾಗ ಬೇಂದ್ರೆ ಅಂದ್ರೆ ದೇವಾಲಯಗಳಲ್ಲಿ ಋಕ್ ಮಂತ್ರ ಪಠಿಸುವವರು ಎಂದು ಅರ್ಥ. ಬೇಂದ್ರೆ ಅವರಿಗೆ ಕಾವ್ಯವೆಂದರೆ ಮಂತ್ರ, ಕುಗ್ಗದ ಪದಗಳ ಪವಣಿಸುವ ತಂತ್ರ" ಎಂದು ವಿವರಿಸುತ್ತಾರೆ. ಕಾವ್ಯದಲ್ಲಿ ನಾದ ಮತ್ತು ಸೌಂದರ್ಯ ಮುಖ್ಯ. ಸತ್ಯ, ಸೌಂದರ್ಯ ಮತ್ತು ಶಾಶ್ವತತೆ ಕಲೆಯ ಅನ್ವೇಷಣೆಗಳು. ಕಾವ್ಯಕ್ಕೆ ಲೋಕಗ್ರಹಿಕೆ ಮತ್ತು ಲೋಕಜ್ಞಾನ ಬಹಳ ಮುಖ್ಯ. ಗರಿ ಎಂಬ ಕವನಸಂಕಲನದಲ್ಲಿ "ಕನ್ನಡದ ಅಶರೀರವಾಣಿಯು ಸಾವಿರ ಬಾಯ್ಗಳಿಂದ ತನ್ನ ಕನಸನ್ನು ಕನ್ನಡಿಸುತ್ತಿದೆ" ಎಂದು ಹೇಳುತ್ತಾರೆ. ಶ್ರೇಷ್ಠ ಕವಿಗಳಾದ ಕಾರಂತ, ಕುವೆಂಪು ಮತ್ತು ಬೇಂದ್ರೆ ಅವರನ್ನು ಕನ್ನಡದ ಸಾಂಸ್ಕೃತಿಕ ನಿರ್ವಾಪಕರಾಗಿ, ವಕ್ತಾರರಾಗಿ ಕಾಣುತ್ತಾರೆ. ಸುಮಾರು 27ಕ್ಕೂ ಹೆಚ್ಚು ಕವನ ಸಂಕಲನಗಳನ್ನು ಬರೆದಿರುವ ಬೇಂದ್ರೆ ಅವರ 'ಗರಿ, ನಾದಲೀಲೆ, ಕಾಮ ಕಸ್ತೂರಿ, ಅರಳು ಮರಳು, ಸೂರ್ಯಪಾನ' ಮತ್ತಿತರಗಳಿವೆ. ಕನ್ನಡ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಲ್ಲಿ ಬೇಂದ್ರೆ ಅವರು ಪರಿಣಿತಿ ಹೊಂದಿದ್ದರು ಎಂದು ಡಾ. ನಾಗೇಂದ್ರ ಕುಮಾರ್ ತಿಳಿಸಿದರು.

ನವೋದಯ ಇಂಗ್ಲೀಷ್ ಪ್ರಣಯ ಕಾದಂಬರಿಗಳ ಪ್ರೇರಣೆಯಿಂದ ಪರ್ಯಾಯವಾಗಿ ಹುಟ್ಟಿದ್ದು ಆದರೂ ಬೇಂದ್ರೆ ಅವರು ವಿಶಿಷ್ಟರಾಗುವ ಕಾರಣವೇನೆಂದರೆ ಪಾಶ್ಚಾತ್ಯ ಪ್ರೇರಣೆಗೆ ಮಾರು ಹೋಗದೆ ಜನಪರ ಪ್ರೇರಣೆಗೆ ಒಗ್ಗಿದರು. ಧಾರವಾಡದ ಔಧೂತ ಪರಂಪರೆ, ಲಾವಣಿ ಇವುಗಳ ನೆಲೆಗೆ ಬೇಂದ್ರೆ ಹೋಗ್ತಾರೆ. ಧಾರವಾಡದಲ್ಲಿ ಗೆಳೆಯರೊಡನೆ ಕೂಡಿ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗುತ್ತಾರೆ. ಕರುಳಿನ ವಚನಗಳು ಸ್ಥಳೀಯ ಪ್ರಭಾವ, ಅನುಭಾವ ಪರಂಪರೆ ಮುಂದುವರಿಸುತ್ತಾರೆ. ಇಹಲೋಕದ ಬಾಳಿಗೆ ಸಂಭ್ರಮ ಪಟ್ಟ ಕವಿ ಬೇಂದ್ರೆ ಸಚ್ಚಿದಾನಂದದ ವೈಭವೀಕರಣ. ಪಂಚಮಾತೇಯರ ಪರಿಕಲ್ಪನೆಯನ್ನು ಮಾಡುತ್ತಾರೆ.

1. ಭೂಮಾತೆ 2. ವಿಶ್ವಮಾತೆ 3. ಭಾರತ ಮಾತೆ 4. ಕನ್ನಡ ಮಾತೆ 5. ಅಂಬಿಕ (ಹೆತ್ತ ಮಾತೆ) ಅಂಬ

ಹೀಗೆ ಬೇಂದ್ರೆ ಅವರ ಕವಿತೆ ಬಹುತ್ವದಿಂದ ಕೂಡಿದೆ. ಸಂಸ್ಕೃತ, ಧಾರವಾಡ ಕನ್ನಡ ಮತ್ತು ಆಡುಭಾಷೆ ಹೀಗೆ ಹಲವು ಬಗೆಯನ್ನು ಅವರ ಬರವಣಿಗೆಯಲ್ಲಿ ಕಾಣಬಹುದು ಎಂದರು.

ಬೇಂದ್ರೆ ಅವರ ಜ್ಞಾನಪೀಠ ಪುರಸ್ಕೃತ ಕೃತಿ 'ನಾಕುತಂತಿ'. ಅದ್ವೈತ ಸಿದ್ಧಾಂತದ ಪ್ರಕಾರ ಸಾಕ್ಷಾತ್ಕಾರದ ಹಾದಿಯಲ್ಲಿನ ನಾಲ್ಕು ಹಂತಗಳೇ ನಾಲ್ಕುತಂತಿ ಅಥವಾ ನಾಕು ತಂತಿ.

1. ನಾನು: ಪುರುಷ ಅಥವಾ ಗಂಡ 2. ನೀನು: ಪ್ರಕೃತಿ ಅಥವಾ ಹೆಂಡತಿ 3. ಆನು: ಕೂಸು ಅಥವಾ ಸೃಷ್ಟಿ (ದೈವ ಚೈತನ್ಯ) 4. ತಾನು: ಜೀವ ಚೈತನ್ಯ

ಈ ಜಗ ಅಪ್ಪ ಅಮ್ಮನ ಮಗ, ಅಮ್ಮನೊಳಗೆ ಅಪ್ಪನ ಮೊಗ, ಅಪ್ಪನ ಕತ್ತಿಗೆ ಅಮ್ಮನ ನೊಗ. ನಾ ಅವರ ಕಂದ ಗುರುದತ್ತಾ ಅಂದ. ಸಂಖ್ಯಾಶಾಸ್ತ್ರದ ಬಗ್ಗೆ ಒಲವಿದ್ದ ಬೇಂದ್ರೆ ಎರಡು ಪುಸ್ತಕ ಬರೆದಿದ್ದಾರೆ.

1. ವಿಶ್ವಧಾರಣ ಸೂತ್ರ–22/7 2. A theory of immortality (in English) ಸ್ವತಂತ್ರ ಪೂರ್ವದಲ್ಲಿ ನಿರ್ಮಾಣವಾದ ಭಕ್ತ ರಾಮದಾಸ ಚಿತ್ರಕ್ಕೆ ಬೇಂದ್ರೆ ಅವರು ಎರಡು ಹಾಡು ರಚಿಸಿರುವುದು ವಿಶೇಷ ಎಂದರು.

ಸಂಖ್ಯಾಶಾಸ್ತ್ರವನ್ನು ವಿವರಿಸುವಾಗ ಬೇಂದ್ರೆ ಅವರು ಗಣಿತದ ಪೈ =22/7 ಅನ್ನು ಶೃತಿಗಳು ಮತ್ತು 7 ಸ್ವರ ಗಳಿಗೆ ಜೋಡಿಸಿ ವಿವರಿಸುತ್ತಾರೆ. ಶೃಗ್ಯ, ಮಧ್ಯಮ, ಪಂಚಮ ಈ ಮೂರು, ನಾಲ್ಕು ಶೃತಿಗಳು ಮತ್ತು ನಿಶಾದಕ್ಕೆ 2 ಶೃತಿಗಳು. ಇವುಗಳನ್ನು 7 ಸ್ವರಗಳಿಗೆ ಹೊಂದಿಸಿದಾಗ ದೊರಕುವುದೇ ವೃತ್ತ. ವೃತ್ತದ ಪರಿಧಿ ಮತ್ತು ವ್ಯಾಸಕ್ಕಿರುವ ಹೊಂದಾಣಿಕೆಯೇ ನಾದದ ಸೂತ್ರ ಅಂತ ವಿವರಿಸುತ್ತಾರೆ ಎಂದರು.

**ವಿಶಿಷ್ಟತೆ ಮತ್ತು ಪ್ರಸ್ತುತತೆ :** ನವೋದಯದಲ್ಲಿ ಪ್ರಕೃತಿಯನ್ನು ಆರಾಧಿಸಲಾಗುತ್ತದೆ. ಪ್ರಕೃತಿಯಲ್ಲಿ ಸಾಮಾಜಿಕ ವಿಷಮತೆ ಇಲ್ಲ ಅಂದರೆ ಜಾತಿ, ಧರ್ಮ, ಭಾಷೆ ಮತ್ತು ಲಿಂಗದ ಭೇಧವಿಲ್ಲ. ಬೇಂದ್ರೆ ಅವರು ಪ್ರಕೃತಿಯನ್ನ ಆರಾಧಿಸಿದಂತಹ ಕವಿ. ಶ್ರಾವಣ, ಬೆಳಗು 'ಮೂಡಲ ಮನೆಯ ಮುತ್ತಿನ ನೀರಿನ ಯರಕಾವ ಹೊಯ್ದು' ಹಾಡನ್ನು ಮತ್ತು 'ಉತ್ತರ ಧ್ರುವದಿಂ, ದಕ್ಷಿಣ ಧ್ರುವಕು' ಗೀತೆಯನ್ನೂ ಸಹಾ ಸಿನಿಮಾಗೆ ಅಳವಡಿಸಿಕೊಳ್ಳಲಾಗಿದೆ. ಇದು ಅವರ ಅನಂತ ಪ್ರಣಯ ಎಂಬ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಭೂಮಿಯನ್ನ ಭೋಗದ ವಸ್ತುವಾಗಿ ನೋಡುವ ನಾವು ಅದರ ವಿರುದ್ಧವಾಗಿ ಅವರ 'ಮೊದಲಗಿತ್ತಿ' ಕವನದಲ್ಲಿ "16 ರಾಜರು ತಲೆಗೆಳಗಾದರೂ ತಲೆ ಎತ್ತಿ ನಿಂತಿರುವೆ ನಿನ್ನ ತೇಜದ ಮುಂದೆ ರಾಜತೇಜವು ಕೂಸು, ಮೊದಲಗಿತ್ತಿಯೆ ನೀನು ಮರೆಯುತ್ತಿರುವೆ" ಎಂದು ಬರೆಯುತ್ತಾರೆ. ನೆತ್ತರ ಮೀಸುವ ಕೆಂಚರ ಕೈಯಲಿಸಿ ಮೊದಲಗಿತ್ತಿಯೆ ನೀನು ಮೆರೆಯುತಿಹೆ ಎಂದು ಒಂದೇ ಸಾಲಿನಲ್ಲಿ ಬ್ರೀಟಿಷರ ಪತನದ ಬಗ್ಗೆ ವಿವರಿಸುತ್ತಾರೆ. 'ನರಬಲಿ' ಎಂಬ ಕವಿತೆ ಅಮಾಯಕ ಸೈನಿಕರ ಕಗ್ಗೊಲೆಗೆ ಕಾರಣರಾದ ಬ್ರಿಟಿಷ್ ಸಾಮ್ರಾಜ್ಯ ಖಂಡಿಸಿ ಜೈಲುವಾಸ ಕೂಡ ಅನುಭವಿಸಿದಂತ ಸಮಾಜಮುಖಿ ಕವಿ ಬೇಂದ್ರೆ. ಬಡತನ, ಅಲ್ಪಾಯುಷ್ಯ ಮತ್ತು ಅಜ್ಞಾನ ಇವು ಬೇಂದ್ರೆ ಅವರ ಪ್ರಕಾರ ಮೂರು ಸಾಮಾಜಿಕ ಪಾಪಗಳು. ಇದರ ನಿರ್ಮೂಲನೆಗಾಗಿ ಸಾಹಿತ್ಯ ಶ್ರಮಿಸಬೇಕು ಎಂಬುದು ಅವರ ಕಾಳಜಿಯಾಗಿತ್ತು. ಸ್ತ್ರೀ ಸಂವೇದನೆ ಕುರಿತು 'ಸಖಿಗೀತ' ಕವನದಲ್ಲಿ "ಏಕೆಂದು ಸಾಕೆಂದು, ಬೇಕೆಂದು, ನೂಕೆಂದು ರಮೀತಾಡಿದಿರಲ್ಲಾ ನಿಮ್ಮಿಷ್ಟಕ್ಕೆ ಗಂಗೆಯ ಕಷ್ಟವು ಗೌರಿಗೆ ತಿಳಿಯದು, ಹೆಂಗಸಿನ ಕಷ್ಟವು ಗಂಡಸಿಗೆ ಗೊತ್ತಾಗದು "ಸ್ತ್ರೀವಾದಿ ತಾತ್ವಿಕತೆ ಕಟ್ಟಿಕೊಡುವ ಚಿಂತನೆ ಮತ್ತು ಸ್ತ್ರೀಯಾಗಿ ಅವರ ಪರಕಾಯ ಪ್ರವೇಶವನ್ನು ನೋಡಬಹುದು ಎಂದು ಡಾ. ನಾಗೇಂದ್ರ ಅವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಮುಂದುವರಿಯುತ್ತಾ, ವೈಚಾರಿಕತೆ ಮತ್ತು ಸಾಮಾಜಿಕ ಬದ್ಧತೆ, ವೈಚಾರಿಕತೆ ಉಳ್ಳಂತಹ ನಾಟಕ ಜಾತಿ ವ್ಯವಸ್ಥೆಯನ್ನು ಖಂಡಿಸುತ್ತದೆ. ವಿಮರ್ಷ ಸಾಹಿತ್ಯಗಳನ್ನು ನಾವು ಬೇಂದ್ರೆ ಅವರ ಎಲ್ಲಾ ಬರಹಗಳಲ್ಲೂ ಕಾಣಬಹುದು ಮತ್ತು ಅವರ ವೈಯಕ್ತಿಕ ಬದುಕಿನಲ್ಲೂ ನಾವು ಕೇಳಿರುತ್ತೇವೆ. ಅವರು ಚಪ್ಪಲಿ ಹೊಲಿಸುವಾಗ ಚಪ್ಪಲಿ ಹೊಲಿಯುವವರಿಗೆ ಬಿಸಿಲಿಗೆ ಛತ್ರಿ ಹಿಡಿಯುತ್ತಾರೆ. ನೀನು ನನ್ನ ಚಪ್ಪಲಿ ಹೊಲಿಯುವಾಗ ನಾನು ನಿನಗೆ ಛತ್ರಿ ಹಿಡಿದಿದ್ದೇನೆ ಅಷ್ಟೆ ಎನ್ನುತ್ತಾರೆ. ಕಾವ್ಯ ಅನ್ನುವುದು ಸಹಾ ವೈಚಾರಿಕತೆ ಮತ್ತು ಸಾಮಾಜಿಕ ಬದ್ಧತೆ ಉಳ್ಳಂತದ್ದು. ಬೇಂದ್ರೆ ಅವರು ಒಂದು ಕಡೆ ದಿನವು ಬೇಸತ್ತಾಗ ದುಡಿ, ದುಡಿದು ಸುಸ್ತಾದಾಗ, ಹಿಗ್ಗಿನ ಹಾಡ ಹರಿಸಾವ. ಆಯಾಸ ಹೊಂದಿದಾಗ ಕಾವ್ಯವು ಒಂದು ಅದ್ಭುತ ವಿರಾಮ ಎನ್ನುತ್ತಾರೆ. ಹಾಗೆಯೇ, ಬೇಂದ್ರೆ ಅವರ ಇನ್ನೊಂದು ಅಪರೂಪದ ಕಾವ್ಯ: 'ನಾ ಈ ಕವಿತಾ ಬರಿಬಾರದಿತ್ತು' ಸಹಾ ಬಹಳ ವಿಶಿಷ್ಟವಾಗಿತ್ತು ಎಂದು ಹೇಳುತ್ತಾ ತಮಗೆ ಬೇಂದ್ರೆ ಕುರಿತು ವಿಚಾರ ಮಂಡಿಸಲು ಅವಕಾಶ ನೀಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿ ಡಾ. ನಾಗೇಂದ್ರ ಕುಮಾರ್ ತಮ್ಮ ಮಾತುಗಳನ್ನು ಮುಗಿಸಿದರು.

ಬೇಂದ್ರೆ ಅವರ 'ನಾಕುತಂತಿ' ಕೃತಿ ಕನ್ನಡಕ್ಕೆ ಜ್ಞಾನ ಪೀಠ ಪ್ರಶಸ್ತಿ ತಂದುಕೊಟ್ಟಂತ ಕವನ ಸಂಕಲನ. ಈ ಕವನ ಸಂಕಲನದ ನಾನು, ನೀನು, ಆನು, ತಾನು ಎಂಬ ಅದ್ಭುತ ಗೀತೆಯನ್ನು ಶ್ರೀಮತಿ ಮಮತ ಶಿವರಾಂ ಅವರು ಪ್ರಸ್ತುತಪಡಿಸಿದರು. ಬೇಂದ್ರೆ ರಚಿತ



ಬಾರೊ ಸಾಧನ ಕೇರಿಗೆ ಎಂಬ ಗೀತೆಯನ್ನು ಕುಮಾರಿ ಜೆನಿತಾ ಅವರು ಮಧುರ ಕಂಠದಿಂದ ಹಾಡಿ ಪ್ರೇಕ್ಷಕರ ಮನದಾಳಕ್ಕೆ ಇಳಿದರು.

ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟ ಇನ್ನೋವರ್ವ ಸಾಧಕರಾದ ಡಾ. ಗಿರೀಶ್ ಕಾರ್ನಾಡ್ ಅವರ ಕುರಿತು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಪೂಜಾ ಪಿ. ರಾವ್ ಅವರು ಈ ಕೆಳಕಂಡಂತೆ ವಿವರಣೆ ನೀಡಿದರು.

ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಕನಸಿಲ್ಲದ ದಾರಿಯಲಿ ನಾ ಹೇಗೆ ನಡೆಯಲಿ 'ಯಯಾತಿ' ನಾಟಕದ ಸಾಲುಗಳು ಬದುಕಿನ ಆಶಾವಾದವನ್ನು ತಿಳಿಸುತ್ತದೆ. ಅಂತಹ ನಾಟಕದ ಕರ್ತೃ ಡಾ. ಗಿರೀಶ್ ಕಾರ್ನಾಡ್ ಅವರೊಬ್ಬ ಹೆಸರಾಂತ ನಾಟಕಕಾರರು, ನಟರು, ನಿರ್ದೇಶಕರು, ರಂಗಕರ್ಮಿ ಮತ್ತು ನಾಟಕದ ಮೂಲಕ ಸಮಾಜ ಸುಧಾರಕರು. ಕನ್ನಡಕ್ಕೆ ಏಳನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟಂತಹ ಇವರು ಪ್ರತಿಭೆಯ ಗಣಿಯಾಗಿದ್ದರು. ಡಾ. ಕಾರ್ನಾಡರು ಯಯಾತಿ ನಾಟಕ ರಚಿಸಿದಾಗ ಅವರ ವಯಸ್ಸು ಕೇವಲ 20. ತಮ್ಮ 40 ವಯಸ್ಸು ಪೂರೈಸುವಷ್ಟರಲ್ಲಿ ಸಿನಿಮಾ ನಟನೆ, ನಿರ್ದೇಶನ ಮತ್ತು ರಾಷ್ಟ್ರಪತಿಗಳ ಚಿನ್ನದ ಪದಕ ಗಳಿಸಿ ಪದ್ಮಶ್ರೀ ಗೌರವಕ್ಕೂ ಪಾತ್ರರಾದರು. ಪುಣೆಯ ಪ್ರತಿಷ್ಠಿತ ಫಿಲ್ಮ್ ಮೈಂಡ್ ಸಂಸ್ಥೆ ಅಧ್ಯಕ್ಷರಾಗಿದ್ದರು. 1964 ರಲ್ಲಿ ರಚಿಸಿದ ಇವರ ತುಘಲಕ್ ನಾಟಕ ಅಂತರರಾಷ್ಟ್ರೀಯ ಮನ್ನಣೆ ಪಡೆಯಿತು. ಬಹಳ ಗುಣಮಟ್ಟದ 'ಹಿಟ್ಟಿನ ಹುಂಜ', 'ಹಯವದನ', 'ತಲೆದಂಡ' ಮುಂತಾದ ಶ್ರೇಷ್ಠ ನಾಟಕಗಳನ್ನು ರಚಿಸಿದ ಹೆಗ್ಗಳಿಕೆ ಇವರದು. ಹಲವಾರು ಭಾಷೆಯ ಚಿತ್ರಗಳಲ್ಲಿ ನಟಿಸಿರುವ ಇವರ ಕೊನೆಯ ಚಿತ್ರ ಹಿಂದಿಯ ಟೈಗರ್ ಜಿಂದಾ ಹೈ ಎಂದು ತಿಳಿಸಿದರು.

ಅನಂತರ ಡಾ. ಗಿರೀಶ್ ಕಾರ್ನಾಡ್ ಕುರಿತು ವಿಡಿಯೋ ಚಿತ್ರ ಪ್ರದರ್ಶಿಸಲಾಯಿತು. ಅವರ ಕುರಿತು ಫೋನ್ ಮುಖೇನ ವಿಚಾರ ಮಂಡಿಸಿದ ಭದ್ರಾವತಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ. ಸಾಸ್ವೆಹಳ್ಳಿ ಸತೀಶ್ ಅವರ ಪರಿಚಯವನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ್ ಮಡ್ಡಿತೋಟ ಅವರು ಮಾಡಿಕೊಟ್ಟರು. ಡಾ. ಗಿರೀಶ್ ಕಾರ್ನಾಡ್ ಅವರ ನಾಟಕಗಳ ಕುರಿತು ಮಾಡಿದ ಸಂಶೋಧನೆಗೆ ಡಾ. ಸತೀಶ್ ಸಾಸ್ವೆಹಳ್ಳಿ ಕುವೆಂಪು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪಡೆದಿರುತ್ತಾರೆ.

**ಇವರು ಡಾ. ಗಿರೀಶ್ ಕಾರ್ನಾಡ್ ಅವರ ಕುರಿತು ಮಂಡಿಸಿದ ವಿಚಾರಧಾರೆ :** ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರು ಕಾರ್ನಾಡ್‌ರವರು. ಅವರನ್ನು ಪ್ರಸಿದ್ಧರನ್ನಾಗಿ ಮಾಡಿಸಿದ್ದು ತುಘಲಕ್ ನಾಟಕ. ನೆಲದಲ್ಲಿ ಬೇರಿಳಿಯುವ ಮೊದಲು ನಕ್ಷತ್ರದಲ್ಲಿ ಟೊಂಗೆ ಬಿಚ್ಚುವುದು ಹೇಗೆ ಅಂತ ತುಘಲಕ್ ನಾಟಕದಲ್ಲಿ ಕಾರ್ನಾಡ್ ಬರೆಯುತ್ತಾರೆ. ಬೇರು ಮತ್ತು ಚಿಗುರುಗಳ ಮಧ್ಯ ಭಾಂದವ್ಯವನ್ನು ನೆಲ ಮತ್ತು ಬಾನಂಗಳದಲ್ಲಿ ಸವಿಸ್ತರ ಅವಕಾಶವನ್ನು ಸ್ಥಾಪಿಸುವ ಹಂಬಲದ ಮಾತು ಅಂತ ಕರಿತಾರೆ. ನಾಟಕದಲ್ಲಿ ತುಘಲಕ್ ಹೇಳುವ ಈ ಮಾತು ತುಘಲಕ್ ಅವರಿಗಿಂತ ಕಾರ್ನಾಡ್ ಅವರಿಗೆ ಹೆಚ್ಚು ಅನ್ವಯಿಸುತ್ತದೆ. ಮಹಾರಾಷ್ಟ್ರದ ಮತೇರನ್‌ನಲ್ಲಿ ಮೇ 19, 1938ರಂದು ಕಾರ್ನಾಡ್ ಜನಿಸಿದರು. ತಂದೆ ರಘುನಾಥ್ ಕಾರ್ನಾಡ್ ಮತ್ತು ತಾಯಿ ಕೃಷ್ಣಭಾಯಿ. ತಾವು ಮದುವೆಯಾದ ಕೆಲವೇ ದಿನಗಳಲ್ಲಿ ವಿಧವೆಯಾದ ಇವರ ತಾಯಿ ಕೃಷ್ಣಭಾಯಿ ರಘುನಾಥ್ ಅವರ ಜೊತೆ ಎರಡನೇ ಮದುವೆ ಮಾಡ್ಕೊತಾರೆ. ಅದು 1938ರ ಪೂರ್ವದ ವರ್ಷಗಳು ಅಂದರೆ ಹೆಣ್ಣು ಮಕ್ಕಳಿಗೆ ಬಹಳಷ್ಟು ಕಟ್ಟುಪಾಡುಗಳಿದ್ದವು. ದಯಾನಂದ ಸರಸ್ವತಿ ಅವರ ಪ್ರೇರಣೆಯಿಂದ ಕೆಲವೇ ಕೆಲವು ಘಟನೆ ನೋಡಬಹುದು. ಆಗಿನ ಇಂತಹ ಕಟ್ಟುಪಾಡನ್ನು ದಿಕ್ಕರಿಸಿ ಹೋರಾಟ ಮಾಡಿ ರಘುನಾಥ್ ಅವರೊಂದಿಗೆ ಮರುಮದುವೆಯಾದ ತಾಯಿಯ ಹಿರಿಯ ಮಗನಾಗಿ ಗಿರೀಶ್ ಕಾರ್ನಾಡ್ ಹುಟ್ಟುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ಸಿರ್ಸಿಯಲ್ಲಿ ಕಾರ್ನಾಡ್ ಮಾಡುತ್ತಾರೆ. ಜಾತ್ರೆ ಮತ್ತು ಮಹೋತ್ಸವಗಳಲ್ಲಿ ಕಂಪನಿ ನಾಟಕಗಳು, ಯಕ್ಷಗಾನ ಮತ್ತು ರಂಗಚಟುವಟಿಕೆಗಳು ನಡೆಯುತ್ತಿರುವಾಗ ಕಾರ್ನಾಡ್ ಅವರು ಆಕರ್ಷಿತರಾಗುತ್ತಾರೆ. ಪ್ರೌಢ ಶಿಕ್ಷಣ ಮತ್ತು ಪದವಿಯನ್ನು ಧಾರವಾಡದಲ್ಲಿ ಪಡೆದ ಇವರಿಗೆ ಪ್ರಾಥಮಿಕ ರಂಗಶಿಕ್ಷಣ ಧಾರವಾಡದಲ್ಲಾಯಿತು ಎಂದು ಕಾರ್ನಾಡ್ ಅವರೇ ಹೇಳಿಕೊಂಡಿದ್ದಾರೆ. ಅವರಿಗೆ ಪ್ರಸಿದ್ಧ ಸಾಹಿತಿಗಳು, ಜಾನಪದ ಕ್ಷೇತ್ರದ ಒಡನಾಟಕ್ಕೆ ಬಂದು ಅಪಾರ ಪ್ರಭಾವ ಅವರ ಮೇಲೆ ಬೀರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗಣಿತ ಮತ್ತು ಸಂಖ್ಯಾಶಾಸ್ತದ ವಿದ್ಯಾರ್ಥಿಯಾದರೂ ಕೂಡ ಸಾಹಿತ್ಯ ಶಾಸ್ತ್ರದ ಕಡೆ ಗಮನ ಹರಿಸಿ ತಮ್ಮನ್ನು ತಾವು ತೊಡಗಿಸಿಕೊಂಡದ್ದು ವಿಶೇಷ ಎಂದರು.

ನಂತರ ಎಂ.ಎ. ವ್ಯಾಸಂಗಕ್ಕೆ ಮುಂಬೈಗೆ ಬಂದ ಗಿರೀಶ್ ಕಾರ್ನಾಡ್ ಅಲ್ಲಿ ದಕ್ಷಿಣ ಫೆಲೋಶಿಪ್ ಪಡೆಯುತ್ತಾರೆ. ಹಾಗೆಯೇ ಅವರಿಗೆ ಮರಾಠಿ ರಂಗಭೂಮಿ ಬಹಳ ಹತ್ತಿರವಾಗಿ ನಾಟಕಗಳ ಒಲವು ಹೆಚ್ಚುತ್ತದೆ. ಆಗಸ್ಟ್ ಸ್ಟ್ರಿಂಡ್‌ಬರ್ಗ್ ಅವರ ಅಲ್ಕಾಜಿ ನಿರ್ದೇಶನದ ಮಿಸ್ ಜೂಲಿ ನಾಟಕ ವೀಕ್ಷಿಸಿದ ಕಾರ್ನಾಡ್ ಡಿಮ್ಮರ್ ಲೈಟ್ ದೃಶ್ಯಗಳ ಎಫೆಕ್ಟ್ ಮೊದಲ ಬಾರಿಗೆ ಕಂಡು ಬಹಳ ಪ್ರಭಾವಿತರಾಗುತ್ತಾರೆ. ಪಂಜಿನ ದೀಪಗಳ ಪೌರಾಣಿಕ ನಾಟಕಗಳ ಜಗತ್ತಿನಿಂದ ಆಗಸ್ಟ್ ಸ್ಟ್ರಿಂಡ್‌ಬರ್ಗ್ ಹಾಗು ಡಿಮ್ಮರ್‌ಗಳ ಲೋಕಕ್ಕೆ ನಾವು ನೆಗೆದವು ಎನ್ನುವುದನ್ನು ಸಂಶೋಧಕರು ಉಲ್ಲೇಖಿಸಿದ್ದಾರೆ. ಈ ಡಿಮ್ಮರ್ ಲೈಟ್ ಅವರ ನಾಗಮಂಡಲ, ಹಯವಧನ ನಾಟಕ ನೋಡಿದವರಿಗೆ ಗೊತ್ತಾಗುತ್ತೆ. ಮಿಸ್ ಜೂಲಿ ನೋಡಿದ ಗಿರೀಶ್ ಅವರು ಮನುಷ್ಯನ ಸಾರ್ವಜನಿಕ ಜೀವನದ ಮೂಲೆಯನ್ನು ಜಾಲಾಡುವುದರ ಬಗ್ಗೆ ಆಕ್ಷೇಪವೆತ್ತಿ ಮುಂದೆ ಅವರ ನಾಟಕಗಳಲ್ಲಿ ಅದೇ ಮನುಷ್ಯನ ಸಂಧಿಗೊಂಧಿಗಳನ್ನು ಜಾಲಾಡಿರುವುದನ್ನು ನಾವು ಕಾಣಬಹುದು. ಇದನ್ನು ಈ ವ್ಯತ್ಯಾಸ ಅವರು ಹೆಚ್ಚಿನ ವ್ಯಾಸಂಗ ಮಾಡಲು ಅವರು ಇಂಗ್ಲೆಂಡಿಗೆ ತೆರಳಿದಾಗ ಪಾಶ್ಚಾತ್ಯ ನಾಟಕದ ಪ್ರಭಾವದ ನಂತರ ಹುಟ್ಟಿದ್ದು ಎಂದು ಗ್ರಹಿಸಬಹುದು. 1963ರಲ್ಲಿ ಫೆಲೋಶಿಪ್ ಪಡೆದು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ಶಾಸ್ತ್ರ, ತತ್ವಶಾಸ್ತ್ರ ಮತ್ತು ಅರ್ಥಶಾಸ್ತ್ರದ ಎಂ.ಎ. ಮಾಡುವಾಗ ಪಾಶ್ಚತ್ಯ ರಂಗಭೂಮಿಯ ಪ್ರಭಾವ ಅವರ ಮೇಲೆ ಬೀರುತ್ತದೆ. ನಂತರದಲ್ಲಿನ ಅವರ ಅಂಜುಮಲ್ಲಿಗೆ, ಹಿಟ್ಟಿನ ಹುಂಜ, ಹಯವಧನ, ನಾಗಮಂಡಲದಂತ ನವ್ಯ ನಾಟಕಗಳಲ್ಲಿ ಅವರೇ ಆಕ್ಷೇಪಿಸಿದ ಮಿಸ್ ಜೂಲಿ ನಾಟಕದಲ್ಲಿನ ಮನುಷ್ಯನ ಕತ್ತಲ ಜಗತ್ತನ್ನು ನಾವು ಬಿಂಬವಾಗಿ ಕಾಣಬಹುದು ಎಂದರು.

ನಾನು ಇಂಗ್ಲೆಂಡಿನ ಅದ್ಭುತ ರಂಗಭೂಮಿಯ ತೆಕ್ಕೆಗೆ ಜಾರಿದೆ ಎಂದು ಕಾರ್ನಾಡರು ಬರೆದುಕೊಂಡಿದ್ದಾರೆ. ಹೆಚ್ಚಿನ ಅಂಕಗಳಿಸಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಶಿಕ್ಷಣ ಮುಗಿಸಿದ ನಂತರ ಮಾಕ್ಸಲೀನ್ ಜೂನಿಯರ್ ಕಾಮರ್ಸ್ ಅಧ್ಯಕ್ಷರಾಗಿ ಮತ್ತು ಆಕ್ಸ್‌ಫರ್ಡ್ ರೂಂ ಅಧ್ಯಕ್ಷರಾಗಿ ಬಹಳ ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಹುದ್ದೆಯ ಜವಾಬ್ದಾರಿ ಕಾರ್ಯ ನಿರ್ವಹಿಸುತ್ತಾರೆ. ಇದೇ ಸಂದರ್ಭದಲ್ಲಿ ಕಾರ್ನಾಡರು ಮೊದಲ ನಾಟಕ ಯಯಾತಿಯನ್ನು ಬರೆಯುತ್ತಾರೆ. ಅವರನ್ನು ಈ ನಾಟಕ ಅತ್ಯಂತ ಪ್ರಸಿದ್ಧವಾದ ನಾಟಕಕಾರನನ್ನಾಗಿ ಗುರುತಿಸುತ್ತೆ. ಕಾರ್ನಾಡ ಅನ್ನುವಂಥ ಚಿಕ್ಕ ಗ್ರಾಮದಿಂದ ಇಂಗ್ಲೆಂಡ್‌ನವರೆಗೆ ತಮ್ಮ ಅನುಭವವನ್ನ ವಿಸ್ತರಿಸಿಕೊಳ್ಳುತ್ತ ನಡೆದು ಅಪ್ಪಟ ಆಧುನಿಕ ದೇಸಿ ಅನುಭವಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಿದರು ಎಂಬುದು ಅನೇಕ ವಿಮರ್ಶಕರ ಮಾತು. ಈ ಅನುಭವದಿಂದ ಬಾದಲ್ ಸರ್ಕಾರ್, ಲೂಯಿಸಿ ಫಿರಾಂಗುಲೊ, ಆಂಥರ್ ಮಿಲರ್, ಅಂಥೋನಿಯೋ ಚಕಾಫ್ ಸೇರಿದಂತೆ ಇನ್ನೂ ಅನೇಕ ನಾಟಕಗಳನ್ನು ಗಿರೀಶ್ ಕಾರ್ನಾಡ್ ಅವರು ಇಂಗ್ಲೆಂಡ್‌ನಲ್ಲಿದ್ದ ಮದ್ರಾಸ್ ಪ್ಲೇಯರ್ಸ್ ಎಂಬ ದಕ್ಷಿಣ ಭಾರತದ ತಂಡದೊಂದಿಗೆ ಸೇರಿ ನಿರ್ದೇಶಿಸುತ್ತಾರೆ ಎಂದು ತಿಳಿಸಿದರು.

1964ರಲ್ಲಿ ಅವರು ರಚಿಸಿದ ತುಘಲಕ್ ನಾಟಕವನ್ನು ದೆಹಲಿಯ ಕೆಂಪುಕೋಟೆಯನ್ನೇ ವೇದಿಕೆ ಮಾಡಿಕೊಂಡು ಇಬ್ರಾಹಿಂ ಅಲ್ಕಾಜಿ ಅವರು ನಿರ್ದೇಶನ ಮಾಡಿ ಪ್ರದರ್ಶಿಸುತ್ತಾರೆ. ಇದೇ ನಾಟಕ 1979ರಲ್ಲಿ ಬಿಬಿಸಿಯಲ್ಲಿ ಕೂಡ ಪ್ರಸಾರವಾಗುತ್ತೆ. ತುಘಲಕ್ ಇವರ ಪ್ರಖ್ಯಾತಿಯನ್ನು ಉತ್ತುಂಗಕ್ಕೆ ಏರಿಸುತ್ತೆ. ಭಾರತ ದೇಶದ ಬೇರೆ ಭಾಷೆಗಳಲ್ಲದೆ ವಿದೇಶಿ ಭಾಷೆಗಳಿಗೂ ಭಾಷಾಂತರವಾದ ಅಪರೂಪದ ನಾಟಕ ಗಿರೀಶ್ ಅವರನ್ನು ಎತ್ತರದಲ್ಲಿ ನಿಲ್ಲಿಸುತ್ತದೆ. ನಂತರ ತಲೆದಂಡ, ಟಿಪ್ಪು ಕಂಡ ಕನಸುಗಳಂತ ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ. ಬೆಂಗಳೂರು ಆನ್ ಟೋಸ್ಟ್, ಅಂಜು ಮಲ್ಲಿಗೆ, ಒಡಕಲು ಬಿಂಬದಂತಹ ಕೆಲವು ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ. ಪೌರಾಣಿಕ, ಜನಪದ ಮತ್ತು ಐತಿಹಾಸಿಕ ನಾಟಕಗಳು ಇವರನ್ನು ಪ್ರಸಿದ್ಧಿ ಮಾಡಿದಷ್ಟು ಸಾಮಾಜಿಕ ನಾಟಕಗಳು ಯಶಸ್ವಿಯಾಗಲಿಲ್ಲ ಎಂದರು.



ಕಾರ್ನಾಡರು ಬರೀ ನಾಟಕಕಾರರಾಗಿ

ಗುರುತಿಸಿಕೊಳ್ಳದೆ ದೊಡ್ಡ ವಿಮರ್ಶಕರು ಎಂದು ಮಾಸ್ತಿ ಅವರ ಖಾಕನ ಕೋಟೆ ಮತ್ತು ಹರಿ ಜನಿವಾರ ಎಂಬ ಪುಸ್ತಕದ ಮೇಲೆ ವಿಮರ್ಶೆ ಬರೆದಿದ್ದಾರೆ. ಪಟ್ಟಾಭಿರಾಮ ರೆಡ್ಡಿ ನಿರ್ದೇಶನದ ಸಿನಿಮಾ 'ಸಂಸ್ಕಾರ'ದಲ್ಲಿ ಕಾರ್ನಾಡರ ಪ್ರಭಾವ ಇರುವುದನ್ನು ಬಹಳಷ್ಟು ಚರ್ಚಿಸಿದ್ದಾರೆ. ಇವರ ನಿರ್ದೇಶನದ ಕಾಡು ನಾಟಕ, ಭೈರಪ್ಪನವರ ಕಾದಂಬರಿ ಆಧಾರಿತ ವಂಶವೃಕ್ಷ ಮತ್ತು ತಬ್ಬಲಿಯು ನೀನಾದೆ ಮಗನೆ ಸಿನಿಮಾ ಆಗಿದೆ. 'ಒಂದಾನೊಂದು ಕಾಲದಲ್ಲಿ' ಸಿನಿಮಾದ ಮೂಲಕ ಶಂಕರ್‌ನಾಗ್ ಅವರಿಗೆ ಅವಕಾಶ ಮತ್ತು ಹಿಂದಿಯಲ್ಲಿ ರಾಜ್‌ಕಪೂರ್ ಅವರಂತ ದಿಗ್ಗಜರು ಇವರನ್ನು ಗುರುತಿಸಿ ಉತ್ಸವ್ ಸಿನಿಮಾದ ನಿರ್ದೇಶನದ ಅವಕಾಶ ನೀಡುತ್ತಾರೆ. ಕುವೆಂಪು ಅವರ ಕಾನೂರು ಹೆಗ್ಗಡತಿ ಮತ್ತು ಅವರ ಕುರಿತ ಭೂಮಿಕಾ ಸಾಕ್ಷ್ಯಚಿತ್ರ ಮತ್ತು ಕಾರ್ನಾಡ್ ನಿರ್ದೇಶನದ ಕನಕ ಪುರಂದರಾ ಎಂಬ ಸಾಕ್ಷಚಿತ್ರಕ್ಕೆ ಪ್ರಶಸ್ತಿ ದೊರೆತಿದೆ. ದೂರದರ್ಶನದ ಒಂದು ವೈಜ್ಞಾನಿಕ ಕಾರ್ಯಕ್ರಮವಾದ 'ಟರ್ನಿಂಗ್ ಪಾಯಿಂಟ್' ಅನ್ನು ಅದ್ಭುತವಾಗಿ ನಿರೂಪಣೆ ಮಾಡಿರುವ ಗಿರೀಶ್ ಕಾರ್ನಾಡ್ ಅವರೊಬ್ಬ ನಾಟಕಕಾರರು, ನಿರ್ದೇಶಕರು, ಚಿಂತಕರು, ವಿಮರ್ಶಕರು, ಕಥೆಗಾರ, ಸಾಹಿತಿಗಳು. ನುಡಿದಂತೆ ನಡೆದ ಇವರು ತಮ್ಮ ಕಡೆಯ ದಿನಗಳನ್ನು ಆಮ್ಲಜನಕ ಪೆಟ್ಟಿಗೆಯೊಂದಿಗೆ ಇಷ್ಟ ಬಂದ ಕಡೆ ಹೋಗುತ್ತಿದ್ದರು. ಗಿರೀಶ್ ಕಾರ್ನಾಡ್‌ರಂತಹ ಅದ್ಭುತ ಪ್ರತಿಭೆ ಬಗ್ಗೆ ಅನೇಕ ಸಂಶೋಧನೆಗಳನ್ನು ಮಾಡಿರುವುದು ನಮ್ಮೆಲ್ಲರ ಹೆಮ್ಮೆ ಎಂದು ಡಾ. ಸತೀಶ್ ಸಾಸ್ವೆಹಳ್ಳಿ ವಿವರಿಸಿದರು.

ಅನಂತರ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯಾದ ಶ್ರೀಮತಿ ಜಯಶ್ರೀ ಬಸವರಾಜ್ ಅವರು ಬೇಂದ್ರೆ ಅವರ 'ಮುಗಿಲ ಮಾರಿಗೆ' ಭಾವಗೀತೆಯನ್ನು ಸುಮಧುರವಾಗಿ ಹಾಡಿದರು. ತದ ನಂತರ ಜನಕಪುರಿ ಮಹಿಳಾ ಮಂಡಳಿ ಸದಸ್ಯೆಯರಾದ ವೈಜಯಂತಿ ಗಿರೀಶ್, ಸವಿತಾ ಭಟ್, ನಯನಾ ಮಾನಕಾಪುರೆ, ಜಯಶ್ರೀ ಬಸವರಾಜ್, ರೇಣುಕಾ ಸಾವಕಾರ್, ಮಾಲಿನಿ ಪ್ರಹ್ಲಾದ್ ಮತ್ತು ಅಶ್ವಿನಿ ಹಣಮಸಾಗರ್ ಇವರ ಕಂಠದಿಂದ ಮೂಡಿ ಬಂದ 'ಬಂಗಾರ ನೀರಾ' ಸಮೂಹ ಗಾಯನ ಉಪಸ್ಥಿತರ ಮನಸೆಳೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯವರಾದ ಶ್ರೀ ಎನ್. ರಾಜಶೇಖರ್ ಐ.ಪಿ.ಎಸ್ ಅವರನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಪರಿಚಯಿಸಿದರು. ಕನ್ನಡದಲ್ಲಿ ಐಪಿಎಸ್ ಮಾಡಿರುವ ರಾಜಶೇಖರ್ ಅವರು ಸಿಬಿಐನಲ್ಲಿ ಕಾರ್ಯ ನಿರ್ವಹಿಸಿ ಬಿಪಿಆರ್‌ಡಿ ನಲ್ಲಿ ಡಿಐಜಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ಮಾತನಾಡುತ್ತಾ, ಜೀವನದಲ್ಲಿ ಬೆಂದರೆ ಬೇಂದ್ರೆ ಆಗ್ತಾರೆ. ಸಣ್ಣ ವಯಸ್ಸಿನಲ್ಲೇ ತಂದೆ ತಾಯಿಯನ್ನ ಕಳೆದುಕೊಂಡು ಸಾಹಿತ್ಯ ಕ್ಷೇತ್ರಕ್ಕೆ ದುಮುಕಿ ನರಬಲಿ ಅನ್ನುವ ಕವಿತೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬರೆದ ಕಾರಣಕ್ಕೆ ಬೆಳಗಾವಿಯ ಹಿಂದಲಗ ಜೈಲಿಗೆ ಹಾಕಿ ಅನಂತರ ಕರ್ನಾಟಕದಲ್ಲಿ ಯಾವ ಕೆಲಸ ಸಿಗದೆ ಹಾಗೆ ಮಾಡಲಾಗಿ ಚಿಕ್ಕಪ್ಪನ ಸಹಾಯದಿಂದ ಪುಣೆಗೆ ಹೋಗಿ ವ್ಯಾಸಂಗ ಮಾಡುತ್ತಾರೆ ಎಂದರು.

ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜರು ಒಬ್ಬೊಬ್ಬರು ಒಂದೊಂದು ವಿಶೇಷತೆಗೆ ಪ್ರಸಿದ್ಧಿ. ಕುವೆಂಪು ಅವರ ಮಹಾಕಾವ್ಯ ರಾಮಾಯಣ ದರ್ಶನಂ ಅದ್ಭುತ, ಅವರ ಕವನ ಸಂಕಲನಗಳನ್ನು ನೋಡಿದರೆ ದ.ರಾ. ಬೇಂದ್ರೆ ಅವರನ್ನು ಬಿಟ್ಟರೆ ಮತ್ತೊಬ್ಬರಿರಲಾರರು, ಜನಪದ ಸಾಹಿತ್ಯದಲ್ಲಿ ಧಾರವಾಡದ ಸೊಗಡನ್ನು





ತರುತ್ತಾರೆ, ನಾಟಕಗಳಲ್ಲಿ ಗಿರೀಶ್ ಕಾರ್ನಾಡ್ ಅವರು ಅಪ್ರತಿಮರು, ಕಾದಂಬರಿಕಾರರಾಗಿ ಶಿವರಾಮ ಕಾರಂತರು ಸಿಗುತ್ತಾರೆ. ಜ್ಞಾನಪೀಠ ಪ್ರಶಸ್ತಿಕಾರರದು ಒಬ್ಬೊಬ್ಬರದು ಒಂದು ವಿಶೇಷತೆ. ಹೀಗೆ ಕನ್ನಡ ಸಾಹಿತ್ಯ ಶ್ರೀಮಂತವಾಗಿ ಬೆಳೆದಿದೆ. ಬೇಂದ್ರೆ ಬದುಕು ಕಷ್ಟ–ಕಾರ್ಪಣ್ಯ, ದುಃಖಗಳಿಂದ ಕೂಡಿತ್ತು. ಅವರು ಮೊದಲು ಧುಮುಕಿದ್ದು 'ವಿಚಿತ್ರ ಪ್ರಪಂಚ' ಎಂಬ ಸಿನಿಮಾ ಮೂಲಕ ಚಲನಚಿತ್ರ ಕ್ಷೇತ್ರಕ್ಕೆ. ಆದರೆ ಸಿನಿಮಾದಲ್ಲಿ ನೈಜತೆಯನ್ನು ತಿರುಚಿರುವುದರಿಂದ ಅವರು ಅಲ್ಲಿಂದ ಹೊರ ಬರುತ್ತಾರೆ. ಕುಲವಧು ಚಿತ್ರದ ಯುಗ ಯುಗಾದಿ ಹಾಡಿನ ಒಂದೆರಡು ಸಾಲನ್ನು ಬಿಟ್ಟಿದ್ದಕ್ಕಾಗಿ ಆ ಪದ್ಯ ಹಾಕದಿರಲು ಹೇಳಿದಾಗ ಆ ಚಿತ್ರದ ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಹಾರ್ಮೋನಿಯಂ ಜೊತೆಗೆ ಅವರ ಧಾರವಾಡದ ಮನೆಗೆ ಬಂದು ಸಾಂದರ್ಭಿಕ ಕಾರಣದಿಂದ ಹಾಡನ್ನು ಪ್ರಸಂಗಕ್ಕೆ ಎಷ್ಟು ಬೇಕೊ ಅಷ್ಟು ಬಳಸಲಾಗಿದೆ ಎಂದು ತಿಳಿಸಿದಾಗ ಬೇಂದ್ರೆ ತಮ್ಮ ಮನೆಯ ಒಳಗಿನಿಂದ ಕಲ್ಲುಸಕ್ಕರೆ ತಂದು ತಿನ್ನಿಸುತ್ತಾರೆ. ಒಂಭತ್ತು ಜನ ಮಕ್ಕಳಲ್ಲಿ ಉಳಿದದ್ದು 3 ಮಕ್ಕಳು. ಮಗಳು ಸತ್ತಾಗ ಹೆಂಡತಿ ನೋಟವನ್ನಾ ಹೆದರಿಸುತ್ತಾ ಮೂಡಿ ಬಂದ ಹಾಡು "ನೀ ಹಿಂಗೆ ನೋಡಬೇಡ ನನ್ನ". ಹೆಂಡತಿ ಗುಣವನ್ನ ಗಂಡನ ಬಡತನದಲ್ಲಿ ನೋಡಬೇಕು ಅನ್ನುವ ಮಾತಿಗೆ ಅವರ ಹಾಡು "ನಾನು ಬಡವ, ಆಕೆ ಬಡವಿ, ಒಲವೆ ನಮ್ಮ ಬದುಕು" ಹಾಡು ಪೂರಕ. ಮರಾಠಿ ಭಾಷಿಕರಾಗಿ ಕನ್ನಡಕ್ಕೆ ಒಲವು ತೋರಿ ಅಪ್ರತಿಮ ಸಾಹಿತ್ಯ ಸಾಧನೆ ಮಾಡಿದ ಬೇಂದ್ರೆ ಅವರ ಈ ನಿಲುವು ಕನ್ನಡ ಸಾಹಿತ್ಯದ ಶ್ರೀಮಂತಿಕೆ ತೋರುತ್ತದೆ ಎಂದರು.

ಪುಣೆಗೆ ಹೋಗಿ ಮತ್ತೆ ಧಾರವಾಡಕ್ಕೆ ಬಂದು ತಾವು ಓದಿದ ವಿಕ್ಟೋರಿಯಾ ಶಾಲೆಯಲ್ಲೆ ಪ್ರಾಧ್ಯಾಪಕರಾಗಿ ಬೇಂದ್ರೆ ಕಾರ್ಯ ನಿರ್ವಹಿಸುತ್ತಾರೆ. ಅದರಿಂದಲೇ ಅವರನ್ನು ಬೇಂದ್ರೆ ಮಾಸ್ತರ್ ಅಂತಾನೂ ಕರೆಯಲಾಗುತ್ತಿತ್ತು. ಸಾಧನಕೇರಿ ಧಾರವಾಡದಲ್ಲಿ ಅವರ ಮನೆ ಮ್ಯೂಸಿಯಂ ಆಗಿದೆ. ಕುವೆಂಪು ಅವರು ರಾಮಾಯಣ ದರ್ಶನಂ ಎಂಬ ಮಹಾಕಾವ್ಯ ಬರೆದರು ನೀವು ಯಾವುದು ಬರೀಲಿಲ್ವ ಗುರುಗಳೇ? ಎಂದು ಯಾರೋ ಕೇಳಿದ ಪ್ರಶ್ನೆಗೆ ತಮ್ಮ ನಾನು ಬರೆದಿದ್ದೆಲ್ಲಾ ಮಹಾಕಾವ್ಯ ಅಲ್ವೇನೊ ಎಂಬ ಉತ್ತರ ಕೊಡ್ತಾರೆ. 1968ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 1973ರಲ್ಲಿ ನಾಕುತಂತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿವೆ. ಹಾಗು ಶಿವಮೊಗ್ಗದಲ್ಲಿ ನಡೆದ 22ನೇ ಸಾಹಿತ್ಯ ಸಮ್ಮೇಳನದ ಅವರು ಅಧ್ಯಕ್ಷರಾಗಿದ್ದರು. ತಾಯಿ ಬಗೆಗಿನ ಅವರಿಗಿದ್ದ ಅಪಾರ ಪ್ರೀತಿ ಮತ್ತು ಗೌರವದಿಂದ ತಮ್ಮ ಮನೆಗೆ 'ಮಾತಾ ನಿಲಯ' ಅಂತ ಹೆಸರಿಡ್ತಾರೆ. ಸರಳ ಸಜ್ಜನರಾದ ಬೇಂದ್ರೆ ಅವರ ಬಗ್ಗೆ ಎಷ್ಟು ಹೇಳಿದ್ರು ಕಮ್ಮಿ ಎಂದು ಶ್ರೀ ರಾಜಶೇಖರ್ ತಿಳಿಸಿದರು.

ಗಿರೀಶ್ ಕಾರ್ನಾಡ್ ಅವರ 'ತುಘಲಕ್' ಮತ್ತು 'ಯಯಾತಿ' ಈ 2 ನಾಟಕಗಳು ಐಎಎಸ್ ಪರೀಕ್ಷೆಯ ಪಠ್ಯದಲ್ಲಿತ್ತು. ಪಾತ್ರ ಡುಯಲ್ ಪರ್ಸನಾಲಿಟಿ ಅನ್ನಬಹುದು, ಕಾರಣ ಮನುಷ್ಯ ಒಂದು ಕಡೆ ಆದರ್ಶ ಮತ್ತೊಂದು ಕಡೆ ಲೆಫ್ಟಿಸಂ ಇನ್ನೊಂದು ಕಡೆ ರೈಟಿಸಂ. ಗಿರೀಶ್ ಕಾರ್ನಾಡ್ ಓದಿದ್ದು ಮ್ಯಾಥಮೆಟಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್ ಆದರೆ ಸಾಹಿತ್ಯದ ಕಡೆ ಒಲವು ಅವರಲ್ಲಿ ಮೂಡಿತ್ತು. ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಹೋಗಿ ಓದಿ ಬಂದು ಇಲ್ಲಿ ಜಾನಪದ ಮತ್ತು ನಾಟಕಗಳನ್ನ ಮಾಡ್ತಾರೆ. ವಿಜ್ಞಾನ ವಿಷಯ ಓದಿ ದೂರದರ್ಶನದಲ್ಲಿ ಟರ್ನಿಂಗ್ ಪಾಯಿಂಟ್ ಅನ್ನೊ ಕಾರ್ಯಕ್ರಮದಲ್ಲಿ ನಿರೂಪಣೆ ಯಶಸ್ವಿಯಾಗಿ ಮಾಡ್ತಾರೆ. ನಂತರ ನಕ್ಸಲ್ ಕಡೆ ವಾಲ್ತಾರೆ ಅನ್ನೊ ವಿವಾದಕ್ಕೆ ಸಿಕ್ಕಿ ಬಿಳ್ತಾರೆ. ವಿಷ್ಣುವರ್ಧನ್ ಅವರಿಗೆ ನಟನೆಗೆ ಅವಕಾಶ ಮಾಡಿಕೊಟ್ಟ ಚಿತ್ರ ವಂಶವೃಕ್ಷ, ಸಂಸ್ಕಾರ, ಮರಾಠಿ ಮತ್ತು ಇತ್ತೀಚಿನ ಸಲ್ಮಾನ್ ಖಾನ್ ಅವರ ಟೈಗರ್ ಜಿಂದಾ ಹೈ ಚಿತ್ರದಲ್ಲಿ ನಟಿಸಿದ್ರು. ಯೂಟ್ಯೂಬ್ ನಲ್ಲಿ ಅವರ ವೈ ಐ ವ್ರೋಟ್ ರಾಕ್ಷಸ ತಂಗಡಿ ಅನ್ನೋ ಕಾರ್ಯಕ್ರಮ ನಾವು ನೋಡಬಹುದು. ದ.ರಾ. ಬೇಂದ್ರ ಅವರ ಬಗ್ಗೆ ಸಾಕ್ಷ್ಯಚಿತ್ರ ಮಾಡಿದ ಖ್ಯಾತಿ ಕೂಡ ಅವರದು. ಇದ್ದಿದ್ದನ್ನು ಇದ್ದ ಹಾಗೆ ಹೇಳಿ ಪ್ರಖ್ಯಾತಿ ಮತ್ತು ಅಪಕೀರ್ತಿ ಎರಡಕ್ಕೂ ಸಿಕ್ಕಿಬಿಳ್ತಾರೆ. ಇಂತ ಮಹನೀಯರನ್ನು ಕಂಡ ಕನ್ನಡ ಸಾಹಿತ್ಯ ಮತ್ತು ಕನ್ನಡಿಗರಾದ ನಾವೇ ಧನ್ಯರು. ಇದೇ ರೀತಿ ಹಳೆಗನ್ನಡ ಕಾರ್ಯಕ್ರಮ ನಾವು ಮಾಡಿದರೆ ನಮ್ಮ ದೆಹಲಿ ಕನ್ನಡಿಗರು ಆಳವಾದ ಮತ್ತು ಶ್ರೀಮಂತ ಕನ್ನಡ ಸಾಹಿತ್ಯದ ಸವಿಯೂಟ ಮಾಡಬಹುದು ಎಂದು ಹೇಳಿ ಶ್ರೀ ರಾಜಶೇಖರ್ ತಮ್ಮ ಮಾತುಗಳನ್ನು ಮುಗಿಸಿದರು.

ಅನಂತರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜನಕಪುರಿಯ ಹಿರಿಯರಾದ ಶ್ರೀ ಅಶೋಕ ಹಣಮಸಾಗರ್ ಅವರು ತಮ್ಮ ಸಿರಿಕಂಠದಿಂದ ದ.ರಾ. ಬೇಂದ್ರೆ ಅವರು ರಚಿಸಿರುವ ಇಳಿದು ಬಾ ತಾಯಿ ಇಳಿದು ಬಾ ಹಾಡನ್ನು ಹಾಡಿ ನೆರೆದವರ ಮೂಡ್ ಚೆಂಜರ್ ಆದರು (ಮನಸ್ಥಿತಿ ಬದಲಿಸಿದರು).

ದೆಹಲಿ ಕರ್ನಾಟಕ ಸಂಘದ ನಿಕಟಪೂರ್ವ ಉಪಾಧ್ಯಕ್ಷರು ಮತ್ತು ದೆಹಲಿ ಶಿಕ್ಷಣ ಸಂಸ್ಥೆಯ ನಿಕಟಪೂರ್ವ ಕಾರ್ಯದರ್ಶಿಗಳಾದ, ವಿಜ್ಞಾನಿ ಡಾ. ಎಂ.ಎಸ್. ಶಶಿಕುಮಾರ್ ಅವರು ಗಿರೀಶ್ ಕಾರ್ನಾಡ್

ಅವರ ಬಗ್ಗೆ ಸ್ಲೈಡ್ ಮೂಲಕ ವಿಚಾರ ಮಂಡನೆ ಮಾಡಿದರು.

ಅವರು ಮಾತನಾಡುತ್ತಾ ಸಾಹಿತ್ಯದ ಬಗ್ಗೆ ಆಸಕ್ತಿ ಇರುವ ಎಷ್ಟೇ ಜನ ಬಂದರು ಇಂತಹ ಕಾರ್ಯಕ್ರಮ ಹೆಚ್ಚಾಗಿ ಆಗಬೇಕು, ಅದಕ್ಕಾಗೆ ನಮ್ಮ ದೆಹಲಿ ಕರ್ನಾಟಕ ಸಂಘದ ಉದ್ದೇಶ ಇಂತಹ ಚಟುವಟಿಕೆಗಳು. ನಾಟಕೋತ್ಸವ ಕೂಡ ಇದೇ ರೀತಿ ಹೆಚ್ಚಾಗಿ ನಡೆಯಬೇಕು. ಗಿರೀಶ್ ಕಾರ್ನಾಡ್ ಅವರನ್ನ ನಾವು ಸಿನಿಮಾದಲ್ಲಿ ನೋಡಿದ್ದೇವೆ. ಕಾರ್ನಾಡ್ ಅವರು ಶತಮಾನ ಕಂಡ ಅದ್ವಿತೀಯ ನಾಟಕಕಾರ ಮತ್ತು ನಾಟಕ ಕ್ಷೇತ್ರ ಇವರಿಗೆ ಒಲಿದಷ್ಟು ಇನ್ನೊಬ್ಬ ನಾಟಕಕಾರನಿಗೆ ಒಲಿಯಲಿಲ್ಲ. ಕನ್ನಡ ನಾಟಕ ಮಾಧ್ಯಮ ಕ್ಷೇತ್ರ ಅವರ ವಿವಿಧ ಆಯಾಮಗಳಿಗೆ ವೇದಿಕೆ ಒದಗಿಸಿಕೊಟ್ಟಿದೆ. ಅವರ ನಾಟಕಗಳನ್ನು ಗಮನಿಸಿ ಹೇಳುವುದಾದರೆ ಕಾರ್ನಾಡ್ ಕನ್ನಡದ ಷೇಕ್ಸ್‌ಪೀಯರ್ ಅಂತಲೇ ಹೇಳಬಹುದು ಏಕೆಂದರೆ ಕಾರ್ನಾಡ್ ರಚಿಸಿದ ಪ್ರತಿಯೊಂದು ನಾಟಕವು ಷೇಕ್ಸ್‌ಪೀಯರ್ ರಚಿಸಿದ ಇಂಗ್ಲೀಷ್ ನಾಟಕಕ್ಕೆ ತೂಗುತ್ತವೆ. ತುಘಲಕ್, ತಲೆದಂಡ, ಹಿಟ್ಟಿನ ಹುಂಜ, ಯಯಾತಿ, ಅಂಜುಮಲ್ಲಿಗೆ ಕಾರ್ನಾಡ್ ಅವರ ಪ್ರಸಿದ್ಧ ನಾಟಕಗಳು. ನಾಗಮಂಡಲ ನಾಟಕವನ್ನು ಟಿ.ಎಸ್. ನಾಗಾಭರಣ ಸಿನಿಮಾ ಮಾಡಿ ಗೆದ್ದಿದ್ದಾರೆ. ತಲೆದಂಡ ಮತ್ತು ಹಯವದನ ನಾಟಕಗಳು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಶ್ರೀ ನಾಗಾಭರಣ ಅವರ ತಂಡ ಪ್ರದರ್ಶಿಸಿ ದೆಹಲಿ ಕನ್ನಡಿಗರಿಗೆ ರಸದೌತಣ ನೀಡಿದ್ದಾರೆ. ಗಿರೀಶ್ ಕಾರ್ನಾಡ್ ರಚಿಸಿದ ಎಲ್ಲಾ ನಾಟಕಗಳು ಭಾರತೀಯ ಇತರ ಭಾಷೆಗಳಿಗಲ್ಲದೆ ಇಂಗ್ಲೇಂಡಿನ ವಿದೇಶಿ ಭಾಷೆಗಳಿಗೂ ಅನುವಾದವಾಗಿ ಜನಪ್ರಿಯ ಪ್ರಯೋಗವನ್ನು ಕಂಡಿವೆ. ಕಾರ್ನಾಡ್ ಅವರು ಶ್ರೇಷ್ಠ ನಾಟಕಕಾರರಷ್ಟೆ ಅಲ್ಲದೆ ಪ್ರತಿಭಾವಂತ ನಟರು ಮತ್ತು ಉತ್ತಮ ನಾಟಕ ಮತ್ತು ಸಿನಿಮಾ ನಿರ್ದೇಶಕರು, ಭಾರತೀಯ ಸಂಸ್ಕೃತಿಯ ಆರಾಧಕರು. ತಲೆದಂಡ ನಾಟಕದ ನಿರ್ದೇಶನ ಅವರ ಅದ್ವಿತೀಯ ಪ್ರತಿಭೆಗೊಂದು ನಿದರ್ಶನ. ಗಿರೀಶ್ ಕಾರ್ನಾಡ್ ನಿರ್ದೇಶಿಸಿದ ನಾಟಕಗಳು ಮತ್ತು ಸಿನಿಮಾಗಳು ಇಂದಿಗೂ ಸುಪ್ರಸಿದ್ಧ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಅನ್ವೇಷಣೆ ಕಾರ್ನಾಡರು ನಿರ್ದೇಶಿಸಿದ ಚಿತ್ರಗಳು ಕನ್ನಡ ಚಲನಚಿತ್ರರಂಗದಲ್ಲಿ ನೂತನ ಅಯಾಮ ಸೃಷ್ಟಿಸಿದ್ದವು. ಕಾರ್ನಾಡರು ಅನೇಕ ಚಿತ್ರಗಳಲ್ಲಿ ಅಭಿನಯಿಸಿ ತಮ್ಮ ನಟನೆಯಲ್ಲಿ ಒಬ್ಬ ಶ್ರೇಷ್ಠ ನಟನಿಗಿರಬೇಕಾದ ಎಲ್ಲಾ ಗುಣಲಕ್ಷಣಗಳನ್ನು ಎತ್ತಿ ಹಿಡಿದರು ಎಂದು ಹೇಳಿದರು.

**ಅವರ ಬಾಲ್ಯ ಮತ್ತು ವಿದ್ಯಾಭ್ಯಾಸ** : ಇವರು ಮೂಲತಃ ಮಹಾರಾಷ್ಟ್ರದವರು, ಮತೇರನ್ ಹಳ್ಳಿಯಲ್ಲಿ ಮೇ 19 1938ರಲ್ಲಿ ಜನಿಸಿದ ಇವರಿಗೆ ಬಾಲ್ಯದಿಂದ ತಂದೆ ರಘುನಾಥ್ ಕಾರ್ನಾಡ್ ಯಕ್ಷಗಾನ, ಬಯಲಾಟ, ಕಂಪನಿ ನಾಟಕ ಮತ್ತು ಜನಪದಗಳ ರೂಢಿ ಮಾಡಿಸಿದ ಕಾರಣ ಕಲೆ ಮತ್ತು ನಾಟಕದ ಗೀಳು ಸ್ವಾಭಾವಿಕವಾಗಿ ಹುಟ್ಟಿತು. ಉತ್ತರ ಕರ್ನಾಟಕದ ಸಿರಸಿಯಲ್ಲಿ ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದ ಬಾಲ್ಯದಲ್ಲೆ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಕಾರ್ನಾಡ್ ಅವರು ತಮ್ಮ ಶಿಕ್ಷಕರ ಪ್ರಶಂಸೆಗೆ ಪಾತ್ರರಾಗಿದ್ದರು. ಉನ್ನತ ವ್ಯಾಸಂಗವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲೇ ಮುಂದುವರಿಸಿದರು. ನಾಟಕ ರಚನೆ, ನಟನೆ, ಸಾಹಿತ್ಯ ಚರ್ಚೆ ಇಂತ ಚಟುವಟಿಕೆಗಳು ಕಾರ್ನಾಡರ ಆಕರ್ಷಣೆಯ ವಿಷಯಗಳಾಗಿದ್ದವು. ಕಾರ್ನಾಡ್ ಅವರ ಮನೆ ಮಾತು ಕೊಂಕಣಿ, ಆಡು ಭಾಷೆ ಕನ್ನಡ ಮತ್ತು ಅವರಿಗೆ ಇಂಗ್ಲೀಷ್ ಭಾಷೆಯ ಆಳವಾದ ಜ್ಞಾನವಿತ್ತು. ಆದ್ದರಿಂದ ಅವರು ಭಾಷಾ ತ್ರಿವಿಕ್ರಮರಾಗಿದ್ದರು. ಕಾಲೇಜಿನಲ್ಲಿದ್ದಾಗಲೇ ತಾವೊಬ್ಬ ಕವಿಯಾಗಬೇಕು, ನಾಟಕಕಾರನಾಗಬೇಕು ಎಂಬ ಕನಸು ಚಿಗುರೊಡಯತೊಡಗಿತು. ಭಾರತೀಯ ನಾಟಕರಂಗದ ಬೃಹತ್ ದರ್ಶನ ದೊರೆತಿದ್ದು ಅವರು ಬಾಂಬೆಯಲ್ಲಿ ಓದುತ್ತಿರುವಾಗ ತಮಿಳು ಭಾಷೆ ಕಲಿಯಲಿಲ್ಲ ಎಂಬ ಅಳುಕು ಅವರಲ್ಲಿತ್ತು. ಮದ್ರಾಸ್‌ನಲ್ಲಿದ್ದಾಗ ತಮಿಳು ಕಲಿಯಲು ಒಬ್ಬ ಶಿಕ್ಷಕನನ್ನು ನೇಮಿಸಿ ಓದು ಬರಹ ಕಲಿತರಾದರೂ ಒಂದು ತಿಂಗಳ ನಂತರ ಅರಿವಾಗಿದ್ದು ತಾನು ಕಲಿತಿದ್ದಕ್ಕು ಮತ್ತು ಸುತ್ತಮುತ್ತಲಿನ ಪರಿಸರಕ್ಕು ಸಂಬಂಧವಿಲ್ಲ ಎಂದು ತಿಳಿದ ಮೇಲೆ ಕಲಿಕೆ ಅಲ್ಲಿಗೆ ನಿಲ್ಲಿಸಿದ್ದರು ಎಂದರು.



ಕಾರ್ನಾಡ್ ಅವರು ತಮ್ಮ ಪ್ರತಿಭಾನ್ವಿತ ವೈಚಾರಿಕ ಪ್ರಜ್ಞೆಯಿಂದ ಒಂದೊಂದು ನಾಟಕಕ್ಕೂ ಒಂದೊಂದು ವಿಭಿನ್ನವಾದ ಔನತ್ಯದ ಮೆಟ್ಟಿಲನ್ನೇರುತ್ತ ವಿಶ್ವವ್ಯಾಪಿ ಪ್ರಸಿದ್ಧಿ ಪಡೆದ ಕನ್ನಡದ ಅತ್ಯಂತ ಪ್ರಮುಖ ಹಾಗೂ ಸುಪ್ರಸಿದ್ಧ ನಾಟಕಕಾರರಾಗಿದ್ದರು. ಬಿ.ವಿ. ಕಾರಂತ ಅವರ ಪ್ರಶಂಸೆ ಪಡೆದ ಕಾರ್ನಾಡ್ ಅವರು ನಾಟಕ ಸಾಹಿತ್ಯದಲ್ಲಿ ಇನ್ನಾರು ಏರದ ಕೀರ್ತಿ ಶಿಖರವನ್ನೇರಿ ನಿಂತಿದ್ದಾರೆ. 1988ರಲ್ಲಿ ನಾಗಮಂಡಲ, 1961ರಲ್ಲಿ ಯಯಾತಿ ಮತ್ತು 1964ರಲ್ಲಿ ತುಘಲಕ್ ನಾಟಕಗಳು ಕಾರ್ನಾಡ್ ಅವರ ಜನಪ್ರಿಯತೆಗೆ ಸಾಕ್ಷಿ. ವಿಭಿನ್ನ ವಸ್ತುಗಳನ್ನು ಪೌರಾಣಿಕವಾಗಲಿ, ಐತಿಹಾಸಿಕವಾಗಲಿ, ತಮ್ಮ ನಾಟಕಗಳಲ್ಲಿ ಆಯ್ದುಕೊಂಡು ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವಂತೆ ನಿರೂಪಿಸುವ ವಿಶಿಷ್ಟ ಪ್ರತಿಭೆ ಅವರಲ್ಲಿತ್ತು. ಅವರ ನಾಟಕಗಳ ಕೇಂದ್ರ ವಸ್ತು ಹೆಚ್ಚಾಗಿ ಹಳೆಗನ್ನಡ ಕಾವ್ಯ, ಜಾನಪದ ಕಥನ, ಪುರಾಣ ಕಾವ್ಯ, ಐತಿಹಾಸಿಕ ಘಟನೆ ಇವೆಲ್ಲ ಪ್ರಮುಖ ಅಂಶಗಳಿಂದ ಪ್ರೇರಿತರಾಗಿ ರೋಚಕವಾಗಿ, ರಂಜನೀಯವಾಗಿ, ಕುತೂಹಲಭರಿತವಾಗಿ, ನೂತನ ತಂತ್ರಜ್ಞಾನದ ಮೂಲಕವಾಗಿ ಸಮಕಾಲಿನಗೊಳಿಸುವ ವಿಶಿಷ್ಟ ಪ್ರತಿಭೆ ಕಾರ್ನಾಡರಲ್ಲಿತ್ತು. ಅನುವಾದಕರಾಗಿ ಅವರು ನಾಗಮಂಡಲ ನಾಟಕವನ್ನು ಸ್ವತಃ ಇಂಗ್ಲೀಷ್‌ಗೆ ಅನುವಾದಿಸಿದ್ದರು. ಈ ನಾಟಕವನ್ನು ಅಮೇರಿಕಾದ ಶ್ರೇಷ್ಠ ನಾಟಕ ಸಂಸ್ಥೆ ಪ್ರದರ್ಶಿಸಿತ್ತು ಎಂದರು.



1976–78 ರಲ್ಲಿ ಕರ್ನಾಟಕ ನಾಟಕ ಸಮಿತಿ ಅಧ್ಯಕ್ಷರಾಗಿ ಕಾರ್ನಾಡರು ಕರ್ನಾಟಕ ರಂಗಭೂಮಿಯ ಬೆಳವಣಿಗೆಗೆ ಹಗಲಿರುಳು ಶ್ರಮಿಸಿದರು. 1988ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿರುವಾಗ ರಂಗಭೂಮಿಗಾಗಿ ಶ್ರಮಿಸಿದರು. ಡಾ. ಯು.ಆರ್. ಅನಂತಮೂರ್ತಿ ಅವರ ಸಂಸ್ಕಾರ ಕಾದಂಬರಿಯನ್ನು ಸಮರ್ಥವಾಗಿ ನಿರ್ದೇಶನ ಮಾಡುವ ಮೂಲಕ ಚಲನಚಿತ್ರ ಪ್ರವೇಶಿಸಿದ ಅವರ ಮೊದಲ ನಿರ್ದೇಶನಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. 1971ರಲ್ಲಿ ವಂಶವೃಕ್ಷ, 1977ರಲ್ಲಿ 'ತಬ್ಬಲಿಯು ನೀನಾದೆ ಮಗನೆ', 1978ರಲ್ಲಿ ಶಂಕರ್‌ನಾಗ್ ಮತ್ತು ಸುಂದರ್ ಕೃಷ್ಣ ಅರಸ್ ಅಭಿನಯದ ಚೊಚ್ಚಲ ಚಿತ್ರ 'ಒಂದಾನೊಂದು ಕಾಲದಲ್ಲಿ' ಮತ್ತು 1973ರಲ್ಲಿ 'ಕಾಡು' ಸಿನಿಮಾ ರಾಷ್ಟ್ರ ಪ್ರಶಸ್ತಿ ಮತ್ತು ಫಿಲ್ಮ್‌ಫೇರ್ ಪ್ರಶಸ್ತಿ ಪಡೆದ ಅವರ ನಿರ್ದೇಶನದ ಕನ್ನಡ ಚಿತ್ರಗಳು. ಪೂರ್ಣಚಂದ್ರ ತೇಜಸ್ವಿ ಅವರ ಚಿದಂಬರ ರಹಸ್ಯ ಧಾರಾವಾಹಿಯನ್ನು ದೂರದರ್ಶನದ ಮೂಲಕ ಮನೆ ಮನೆಗೆ ತಲುಪಿಸಿದರು. ಬಾಲಿವುಡ್ ಸಿನಿಮಾಗಳಾದ ಉತ್ಸವ್, ಗೋಧೂಳಿ, ಚೆಲುವಿ ಚಿತ್ರಗಳನ್ನು ನಿರ್ದೇಶಿಸಿದ್ದರು. ಗಿರೀಶ್ ಕಾರ್ನಾಡ್ ಅವರು ತಮ್ಮ ಸಮಗ್ರ ಸಾಹಿತ್ಯಕ್ಕಾಗಿ ಪಡೆದ ಜ್ಞಾನಪೀಠ ಪ್ರಶಸ್ತಿಯನ್ನು 1999ರಲ್ಲಿ ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಸ್ವೀಕರಿಸಿದ್ದರು ಎಂದರು.

1977ರ 'ಸ್ವಾಮಿ' ಪ್ರಸಿದ್ಧ ಹಿಂದಿ ಚಲನಚಿತ್ರದಲ್ಲಿ ಗಿರೀಶ್ ಕಾರ್ನಾಡ್ ಶಬಾನಾ ಆಜ್ಮಿ ಅವರೊಂದಿಗೆ ಪ್ರಮುಖ ಪಾತ್ರದಲ್ಲಿ ಅಭಿನಯ, ಶ್ಯಾಮ್ ಬೆನಗಲ್ ಅವರ 'ಮಂಥನ್' ಚಿತ್ರದಲ್ಲಿ ಅಭಿನಯ ಮತ್ತು ನಾಗೇಶ್ ಕುಕನೂರ್ ಅವರ 'ಇಕ್ಬಾಲ್' ಮತ್ತು 'ಡೋರ್' ಪ್ರಮುಖ ಚಿತ್ರಗಳಲ್ಲೂ ನಟಿಸಿದ್ದಾರೆ. ನಾಲ್ಕು ಫಿಲ್ಮ್‌ಫೇರ್ ಪ್ರಶಸ್ತಿ ಪಡೆದಿದ್ದಾರೆ. ಕನ್ನಡಿಗರಾಗಿದ್ದ ಅವರು ಹಿಂದಿ ರಂಗಭೂಮಿಯಲ್ಲಿ ತಮ್ಮ ನಾಟಕದ ಮೂಲಕ ಬಹಳ ಪ್ರಖ್ಯಾತರಾಗಿದ್ದರು. ತಮ್ಮ 26ರ ಪ್ರಾಯದಲ್ಲಿ ರಚಿಸಿದ ಅವರ ತುಘಲಕ್ ನಾಟಕ ಹಿಂದಿಯಲ್ಲಿ ಪ್ರಖ್ಯಾತವಾಗಿದೆ. ತುಘಲಕ್ ಹಿಂದಿಯಿಂದ ಕನ್ನಡಕ್ಕೆ ಅನುವಾದವಾಗಿರಬಹುದೇನೊ ಅನ್ನುವಷ್ಟು ಖ್ಯಾತಿ ಹಿಂದಿ ರಂಗಭೂಮಿಯಲ್ಲಿ ಈ ನಾಟಕ ಖ್ಯಾತಿ ಪಡೆದಿದೆ. ಪ್ರೊ. ಬರಗೂರು ರಾಮಚಂದ್ರ ಅವರು ಹೇಳಿದಂತೆ ಚರಿತ್ರೆ ಮತ್ತು ಪುರಾಣಗಳ ನಡುವೆ ಅನುಸಂದಾನ ಮಾಡುವ ಶಕ್ತಿ ಗಿರೀಶ್ ಕಾರ್ನಾಡ್ ಅವರಲ್ಲಿತ್ತು. ಎರಡಕ್ಕು ಅರ್ಥ ಹಾಗು ವ್ಯಾಖ್ಯಾನ ನೀಡುವ ನಿಪುಣರಾಗಿದ್ದರು. ಅವರು ತಾತ್ವಿಕ ಪ್ರತಿರೋಧ ಮಾಡುವಾಗ ಅವರ ನಡೆನುಡಿಯಲ್ಲಿ ನಟನೆ ಮತ್ತು ದ್ವಂದ್ವ ಇರಲಿಲ್ಲ. ಅಂತರಂಗಕ್ಕೆ ಸರಿ ಅನಿಸಿದ್ದನ್ನು ಪರಿಣಾಮ ಲೆಕ್ಕಿಸದೆ ಹೇಳುವ ತೀರಾ ಗಂಭೀರ ಕನ್ನಡ ಲೇಖಕರು ವಿರಳ. ಬೇಂದ್ರೆ ಮತ್ತು ಕುರ್ತುಕೋಟಿ ಅವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಗರಡಿಯಲ್ಲಿ ಬೆಳೆದ ಗಿರೀಶ್ ಕಾರ್ನಾಡ್ ಅವರ ನಾಟಕಗಳ ಮೂಲಕ ಸದಾ ಜೀವಂತವಾಗಿದ್ದಾರೆ ಎಂದು ಹೇಳಿ ಡಾ. ಶಶಿಕುಮಾರ್ ತಮ್ಮ ವಿಚಾರ ಮಂಡನೆ ಮುಗಿಸಿದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು ಮತ್ತು ಹಾಲಿ ಉಪಾಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ ಗಿರೀಶ್ ಕಾರ್ನಾಡ್ ಅವರು 70ರ ದಶಕದಲ್ಲಿ ದೆಹಲಿ ಕನ್ನಡಿಗರಾಗಿದ್ದರು, ದೆಹಲಿ ಕರ್ನಾಟಕ ಸಂಘದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಅವರ ತುಘಲಕ್ ನಾಟಕವನ್ನು ಕನ್ನಡ ಭಾರತೀ ರಂಗ ಸಂಸ್ಥೆ ಈ ಹಿಂದೆ ಪ್ರದರ್ಶನ ಮಾಡಿರುವ ಬಗ್ಗೆ ತಿಳಿಸಿದರು. ಅನಂತರ, ಕು. ರಚನಾ ಗೋವಿಂದರಾಜು ತಮ್ಮ ಶುಶ್ರಾವ್ಯ ಕಂಠದಿಂದ 'ಮೂಡಲ ಮನೆಯ ಮುತ್ತಿನ ನೀರ ಯರಕಾವ ಹೊಯ್ದು' ಹಾಡನ್ನು ಹಾಡಿ ರಂಜಿಸಿದರು.

ಮತ್ತೊರ್ವ ವಿಶೇಷ ಆಹ್ವಾನಿತರಾದ ಶ್ರೀಮತಿ ಮೀತಾ ಮಿಶ್ರ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆಯಾಗಿದ್ದು ಮತ್ತು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ನಾಟಕ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಪರಿಚಯವನ್ನು ಶ್ರೀಮತಿ ಮಾಲಿನಿ ಪ್ರಹ್ಲಾದ್ ಮಾಡಿಕೊಟ್ಟರು. ಶ್ರೀಮತಿ ಮೀತಾ ಮಿಶ್ರ ಚಿಕ್ಕಂದಿನಿಂದಲೂ ನಾಟಕದ ಬಗ್ಗೆ ಆಸಕ್ತಿ ಹೊಂದಿದ್ದರು. ಇವರ ತಂದೆ ತಾಯಿ ಇಬ್ಬರೂ ಸೈಕಾಲಜಿ ವೈದ್ಯರು. ದೇಶ ಮತ್ತು ವಿದೇಶಗಳಲ್ಲಿ ಸಾಕಷ್ಟು ನಾಟಕ ಪ್ರದರ್ಶನ ನೀಡಿರುವ ಇವರಿಗೆ 'ಬಿಸ್ಮಿಲ್ಲಾ ಖಾನ್' ನಾಟಕ ಸಂಗೀತ ಪ್ರಶಸ್ತಿ ದೊರೆತಿದೆ.

ಅವರು ಗಿರೀಶ್ ಕಾರ್ನಾಡ್ ಕುರಿತು ವಿಚಾರ ಮಂಡನೆ ಮಾಡುತ್ತಾ ತುಘಲಕ್ ಬಗ್ಗೆ ಮಾತನಾಡಲು ಸುಲಭವಿತ್ತು. ಆದರೆ ಅರುಣ್ ಅವರು ಯಯಾತಿ ನಾಟಕದ ಬಗ್ಗೆ ಮಾತನಾಡಲು ಹೇಳಿದಾಗ ಮುಜುಗರಕ್ಕೊಳಗಾದೆ. ಬೇಂದ್ರೆ ಮತ್ತು ಗಿರೀಶ್ ಕಾರ್ನಾಡರು ಬೇರೆ ಬೇರೆ ಆಯಾಮದವರು. ಕುಮಾರಿ ಜನಿತಾ ಅವರ ಬೇಂದ್ರೆ ಹಾಡು ಕೇಳಿದಾಗ ಗಾಬರಿಗೊಂಡ ನಾನು ಶ್ರೀಮತಿ ಪೂಜಾ ಅವರ ಪ್ರಸ್ತಾವನೆಯಿಂದ ಧೈರ್ಯ ತಂದುಕೊಂಡೆ. ಸಾಸ್ವೆಹಳ್ಳಿ ಸತೀಶ್ ಮಾತಾಡುತ್ತ ಕೀರ್ತಿನಾಥ್ ಕುರ್ತುಕೋಟಿ ಅವರು ಯಯಾತಿ ಬಗ್ಗೆ ಕಿರಿಕಿರಿಯಾಗಿದ್ದ ಹಾಗೆ ನನಗೂ ಇದರ ಬಗ್ಗೆ ಮಾತನಾಡಲು ಹೇಳಿದಾಗ ಅದೇ ಕಿರಿಕಿರಿಗೆ ಒಳಪಟ್ಟೆ. ಕಷ್ಟವಾದ ನಾಟಕ ಮತ್ತು ವಿಷಯ ಗೊತ್ತಿದ್ದರೂ ಹೇಗೆ ಹೇಳುವುದು ಅನ್ನೋದೆ ಕಷ್ಟ. ಕಾವ್ಯ ಬರೆಯುವುದು ಸುಲಭ ಮತ್ತು ಅದಕ್ಕೆ ರಾಗ ಹಾಕಿ ಯಾರಾದರು ಹಾಡಿ ಬಿಡುತ್ತಾರೆ ಆದರೆ ನಾಟಕ ಬರೆಯುವುದು ಕಷ್ಟ. ಮಿಸ್ ಜೂಲಿಯಂತ ನಾಟಕವನ್ನು ಬಾಂಬೆಯಲ್ಲಿ ನೋಡಿದವರು ಎಂಥ ನಾಟಕ ಇದು ಯಾರಾದ್ರು ಮಾಡ್ತಾರಾ ಅಂತ ಹೇಳಿದ್ರು. ಅನಂತರ ಮನಃ ಸ್ಥಿತಿ ಬದಲಾಯಿತು, ಕವಿತೆ ಪ್ರೀತಿಯಿಂದ ಎಲ್ಲರನ್ನು ಒಲಿಸಿಕೊಳ್ಳುತ್ತದೆ ಆದರೆ ನಾಟಕ ಶಬ್ದದ್ದು ಒಬ್ಬೊಬ್ಬ ಓದುಗನ ಮನಸ್ಸಿನಲ್ಲಿ ಹುಟ್ಟುವ ಭಾವ ಅವನದ್ದು. ಗಿರೀಶ್ ಕಾರ್ನಾಡ್ ಅವರು ನಾಟಕದ ಮೂಲಕ ಮನುಷ್ಯನ ಸಂಬಂಧದ ಒಂದೊಂದು ಎಳೆಯನ್ನು ಬಿಡಿಸುವ ಧೈರ್ಯ ಮಾಡಿದರು ಎಂದರು.

ಯಯಾತಿ ನಾಟಕ ಕುರಿತು ಬರೆಯುವಾಗ ಅವರೇನು ಪ್ರಶಸ್ತಿ ಬರುತ್ತೆ ಅಂತ ಬರೆದವರಲ್ಲ. ಯಯಾತಿ ಒಂದು ಸಂಸ್ಕೃತದ ಹೆಸರು. ಯಯಾತಿ ಅಂದ್ರೆ ಕಷ್ಟಪಟ್ಟು ಮುಂದೆ ಹೋಗುವುದು ಎಂದು ಅಂತ ಅರ್ಥ. ಇಲ್ಲಿನ ಸಂಘದಲ್ಲಿ ನಾಟಕ ಅಂದ್ರೆ ಎಲ್ಲರಿಗೂ ಇಷ್ಟ ಮತ್ತು ನಾಟಕ ಮಾಡಲು ಎಲ್ಲಾ ಬಲ್ಲವರು. ಯಯಾತಿ ಶರ್ಮಿಷ್ಠೆ ಮತ್ತು ದೇವಯಾನಿ ಇಬ್ಬರನ್ನೂ ಮದುವೆಯಾಗುತ್ತಾನೆ. ಅವರಿಬ್ಬರ ನಡುವೆ ಯಾವಾಗಲು ಕಚ್ಚಾಟ ನಡೆಯುತ್ತಿರುತ್ತದೆ. ಇದೇ ಕಥೆ ಮೇಲೆ ಯಕ್ಷಗಾನ ಪ್ರಸಂಗ ಬೇಕಾದಷ್ಟು ಆಗಿದೆ. ಕರ್ನಾಟಕ ಸಂಘದಲ್ಲೂ ವೀಕ್ಷಿಸಿದ್ದೇವೆ.



ಶರ್ಮಿಷ್ಠೆ ಮತ್ತು ದೇವಯಾನಿ ಬಾಲ್ಯದ ಗೆಳತಿಯರು. ರಾಕ್ಷಸರ ಗುರು ಶುಕ್ರಚಾರ್ಯ ಅವರ ಮಗಳು ಶರ್ಮಿಷ್ಠೆಯಾದರೆ ರಾಕ್ಷಸ ರಾಜನ ಮಗಳು ದೇವಯಾನಿ. ಶರ್ಮಿಷ್ಠೆ ದೇವಯಾನಿಯನ್ನು ಬಾವಿಗೆ ತಳ್ಳಿಡ್ತಾಳೆ. ಬಾವಿಗೆ ಬಿದ್ದ ತನ್ನನ್ನು ಬಲಗೈ ಹಿಡಿದು ಎತ್ತಿದ್ದ ಯಯಾತಿಯನ್ನು ಮದುವೆಯಾಗಲು ದೇವಯಾನಿ ಒತ್ತಾಯಿಸುವಳು ಹಾಗು ತನ್ನ ತಂದೆಯ ಬಳಿ ಮದುವೆ ಬಗ್ಗೆ ಪ್ರಸ್ತಾಪಿಸಿ ತಂದೆ ರಾಜನ ಬಳಿ ಯಶಸ್ವಿಯಾಗುತ್ತಾಳೆ ಎಂದು ತಿಳಿಸಿದರು.

ಶರ್ಮಿಷ್ಠೆ ಯಯಾತಿಯ ಪತ್ನಿಯಾಗಿದ್ದರಿಂದ ದೇವಯಾನಿ ಮತ್ತು ಶರ್ಮಿಷ್ಠೆ ನಡುವೆ ಜಗಳ ಶುರುವಾಗುತ್ತದೆ. ನನ್ನ ತಂದೆ ಗುರುವಾಗಿರುವುದರಿಂದ ನಿನ್ನ ತಂದೆ ರಾಜನಾಗಿರುವುದು, ಆದ್ದರಿಂದ ನೀನು ನನ್ನ ದಾಸಿ ಅಂತ ರಾಜಕುಮಾರಿಯಾಗಿದ್ದ ದೇವಯಾನಿಯನ್ನು ಶರ್ಮಿಷ್ಠೆ ಬಗ್ಗಿಸಿ ಒಪ್ಪಿಸುತ್ತಾಳೆ. ಆದರೆ ಕಥೆಯ ತಿರುವು ಇಲ್ಲಿಂದ ಶುರುವಾಗುತ್ತದೆ. ಯಯಾತಿಗೆ ಜೀವನದ ಬಗ್ಗೆ ಮಹದಾಸೆ ಅದರಲ್ಲೂ ಮಹಿಳೆಯ ಬಗ್ಗೆ ಮೋಹ. ಹೀಗಿರುವಾಗ ಶರ್ಮಿಷ್ಠೆ ಬಗ್ಗೆ ಹೆಚ್ಚು ಪ್ರೀತಿ ತೋರುತ್ತಿದ್ದ ಯಯಾತಿ ಬಗ್ಗೆ ದೇವಯಾನಿಯ ಅಪ್ಪನಾದ ಶುಕ್ರಚಾರ್ಯರಲ್ಲಿ ಹೇಳಿದಾಗ ಅವರು ಕೋಪಗೊಂಡು ಅವನಿಗೆ ಮುಪ್ಪು ಅಂದರೆ ವೃದ್ಧಾಪ್ಯ ಬರುವಂತೆ ಶಾಪ ಹಾಕುತ್ತಾರೆ. ಮುದುಕನಾದ ಯಯಾತಿ ಯೋಚನೆಗೆ ಒಳಗಾದಾಗ ಇದರ ಉಪಾಯವನ್ನು ತಿಳಿದಾಗ ಯಾರಾದರೂ ಯುವಕ ತನ್ನ ಯೌವ್ವನ ನೀಡಿದರೆ ಮತ್ತೆ ಯಯಾತಿಗೆ ಯೌವ್ವನ ಹಿಂದಿರುಗುತ್ತದೆ ಮತ್ತು ಆ ಯುವಕ ಮುದುಕನಾಗುತ್ತಾನೆ. ಯಯಾತಿಯ ಮಗ ಪುರು ತಂದೆಯ ಕಷ್ಟಕ್ಕೆ ಮರುಗಿ ತನ್ನ ಯೌವನ ಕೊಡುತ್ತಾನೆ ಆದರೆ ಪ್ರಾಯಶ್ಚಿತ್ತಪಟ್ಟ ಯಯಾತಿ ಪುರುವಿಗೆ ಯೌವ್ವನ ವಾಪಸ್ಸು ಮಾಡುವುದು ಕಥೆಯ ಸಾರಾಂಶ. ಯಕ್ಷಗಾನದಲ್ಲಿ ನಾವು ನೋಡುವಾಗ ಒಂದು ಕಥೆಯ ಅನುಭವ. ಇದು ನಿಜ ಜೀವನದಲ್ಲಿ ಸಾಧ್ಯನಾ ಅಂತ ಯೋಚಿಸುತ್ತೇವೆ. ನಾಟಕದಲ್ಲಿ ಬರೆದಾಗ ಪುರು ಮತ್ತು ಯಯಾತಿ ತಬ್ಬೊಂಡಾಗ ಯೌವನ ಅದಲಿ ಬದಲಿ ಆಗುತ್ತೆ. ಈ ನಾಟಕ ಎನ್‌ಎಸ್‌ಡಿ ಯಲ್ಲಿ ಅದ್ಭುತ ಪ್ರದರ್ಶನವಾಗಿದೆ ಎಂದರು.

ಕಾರ್ನಾಡರು ಒಂದು ಎಳೆ ತೆಗೆದುಕೊಂಡು ಯಯಾತಿ ಯೋಚನೆಯನ್ನು ಅಳವಡಿಸಿದ್ದಾರೆ. ಪುರು ಅನ್ನುವ ಮಗ ಮುಂಚೆನೇ ಹುಟ್ಟಿರುತ್ತಾನೆ. ಕಾರ್ನಾಡರ ನಾಟಕ ಒಂದು ರಾತ್ರಿಯ ಕಥೆ. ಪುರುವಿಗೆ ಅವನ ಹಿರಿಯರ ಬಗ್ಗೆ ಅಪಾರ ಕಾಳಜಿ ಮತ್ತು ಗೌರವ. ಅದೇ ದಿನ ಪುರು ಚಿತ್ರಲೇಖನವನ್ನು ಮದುವೆಯಾಗಿ ಬಂದಿರುತ್ತಾನೆ. ಯೌವನ ಯಯಾತಿಗೆ ನೀಡಿದ ಸಮಯದಲ್ಲಿ ಆತಂಕಗೊಂಡ ಚಿತ್ರಲೇಖ ವಿಷಸೇವಿಸಿ ಸಾಯುತ್ತಾಳೆ. ಪುರಾಣ ಕಥೆಯ ಸಾಹಿತ್ಯದಲ್ಲಿ ಆಧುನಿಕ ಚಿಂತನೆಯನ್ನು ಈ ನಾಟಕದಲ್ಲಿ ಚಿತ್ರಲೇಖನವನ್ನು ಪರಿಚಯಿಸಿದ ಕಾರ್ನಾಡರು ಮಾವನನ್ನು ಚಿತ್ರಲೇಖ ತನ್ನ ಆಸೆ ಮತ್ತು ಜೀವನದ ಬಗ್ಗೆ ಪ್ರಶ್ನಿಸುವಳು. ಆ ನಂತರ ವಿಷ ಸೇವಿಸಿ ಸಾಯುವಳು. ಇದರಿಂದ





ಪ್ರಾಯಶ್ಚಿತಗೊಂಡ ಯಯಾತಿ ಯೌವನ ವಾಪಸ್ಸು ಮಾಡುವನು. ಇದು ಗಿರೀಶ್ ಕಾರ್ನಾಡರ ಆ ಕಾಲದ ಧೈರ್ಯ. 1964 ರಲ್ಲಿ ತುಘಲಕ್ ಬರಿತಾರೆ. ಕಾರ್ನಾಡರು ಬಹಳ ಲಾಜಿಕಲ್. ಬರಿತಾರೆ, ತಿದ್ದುತಾರೆ, ಯೋಚಿಸ್ತಾರೆ, ಮಾರ್ಕೆಟ್ ಮಾಡಿ ಮತ್ತೆ ಅನುವಾದ ಮಾಡ್ತಾರೆ. ಒಂದು ನಾಟಕಕ್ಕೆ ಸುಮಾರು ವರ್ಷ ಸಮಯ ನೀಡುತ್ತಿದ್ದರು. ಬೆಂದಕಾಳೂರು ಆನ್ ಟೋಸ್ಟ್ ಬರೆದ ಅವರನ್ನು ಚಿಕ್ಕಂದಿನಿಂದಲೂ ನೋಡಿದ ನನಗೆ ಅವರು ಎಷ್ಟು ದೊಡ್ಡವರು ಎಂದು ಎನ್‌ಎಸ್‌ಡಿ ನಲ್ಲಿ ನೋಡಿದಾಗಲೇ ತಿಳಿದಿದ್ದು ಎಂದು ಹೇಳಿ ಶ್ರೀಮತಿ ಮಿತಾ ಮಿಶ್ರ ಸಂಘಕ್ಕೆ ಧನ್ಯವಾದ ತಿಳಿಸುತ್ತಾ ತಮ್ಮ ಮಾತನ್ನು ಮುಗಿಸಿದರು.

ತದನಂತರ ಬೇಂದ್ರೆ ಅವರ "ನಾನು ಬಡವಿ ಆತ ಬಡವ ಒಲವೆ ನನ್ನ ಬದುಕು" ಎಂಬ ಪ್ರೇಮ ಗೀತೆಯನ್ನು ಈ ಹಾಡನ್ನು ಶ್ರೀಮತಿ ಲಾವಣ್ಯ ಬಸವರಾಜ್ ಅವರು ಸುಶ್ರಾವ್ಯವಾಗಿ ಹಾಡಿದರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡುತ್ತಾ ಪ್ರಧಾನಿ ಮೋದಿಯವರು ದೆಹಲಿ ಕರ್ನಾಟಕ ಸಂಘದ ಅಮೃತಮಹೋತ್ಸವ ಕಾರ್ಯಕ್ರಮ ಸಂದರ್ಭದಲ್ಲಿ ಸಂಘದಲ್ಲಿ ಅತಿ ಹೆಚ್ಚು ಸಾಹಿತ್ಯದ ಕಾರ್ಯಕ್ರಮ ನಡೆಯಬೇಕು ಎಂದಿದ್ದರು. 4 ಗಂಟೆಗೆ ಶುರುವಾದ ಈ ಕಾರ್ಯಕ್ರಮ 9 ಗಂಟೆಯಾದರೂ ಮುಗಿಯುತ್ತಿಲ್ಲ. ಅಪಾರ ಜ್ಞಾನ ಹೊಂದಿರುವ ನಮ್ಮ ಅತಿಥಿಗಳ ಭಾಷಣ ಕೇಳಿದಾಗ ಮತ್ತು ಸ್ಥಳೀಯ ಕಲಾವಿದರು ಹಾಡಿದ ಗೀತೆಗಳು ನಿಜಕ್ಕೂ ಕಾರ್ಯಕ್ರಮದ ಶೋಭೆ ಹೆಚ್ಚಿಸಿದೆ. ಜ್ಞಾನಪೀಠ ವಿಜೇತ ಸಾಹಿತಿಗಳಲ್ಲದೆ ಇನ್ನೂ ಅನೇಕ ಶ್ರೇಷ್ಠ ಕವಿಗಳ ಕಾರ್ಯಕ್ರಮ ಮುಂದೆ ಹಮ್ಮಿಕೊಳ್ಳೋಣ ಅದಕ್ಕಾಗಿ ಎರಡು ದಿನ ಹೆಚ್ಚಿಸೋಣ ಎಂದು ಹೇಳುತ್ತಾ ಭಾಗಿಯಾದ ಪ್ರತಿಯೊಬ್ಬರಿಗೂ ಧನ್ಯವಾದ ತಿಳಿಸಿದರು. ❑

**ಹರಿಪ್ರಿಯ**

# ಡಾ. ಕೋಟ ಶಿವರಾಮ ಕಾರಂತ ಹಾಗೂ ಡಾ. ಚಂದ್ರಶೇಖರ ಕಂಬಾರ ಅವರ ಜೀವನ-ಸಾಹಿತ್ಯ ಸಾಧನೆಗಳ ಕುರಿತು ಸಂವಾದ-ಅನುಸಂಧಾನ-ವಿಚಾರ ಸಂಕಿರಣ



ಸಾಹಿತ್ಯೋತ್ಸವ ಕಾರ್ಯಕ್ರಮದ ನಾಲ್ಕನೆಯ ಮಾಲಿಕೆಯನ್ನು ದಿನಾಂಕ 31.08.2025ರಂದು ಜ್ಞಾನಪೀಠ ಪುರಸ್ಕೃತ ಮತ್ತಿಬ್ಬರು ಕನ್ನಡದ ಕಣ್ಮಣಿಗಳಾದ ಡಾ. ಕೋಟ ಶಿವರಾಮ ಕಾರಂತ ಹಾಗೂ ಡಾ. ಚಂದ್ರಶೇಖರ ಕಂಬಾರ ಅವರ ಜೀವನ–ಸಾಹಿತ್ಯ ಕುರಿತು ಸಂಘದ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಡಾ. ಶ್ರೀನಿವಾಸ ವರಖೇಡಿ, ಉಪಕುಲಪತಿಗಳು, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ನವದೆಹಲಿ, ಡಾ. ಕೆ. ಶಿವರಾಮ ಕಾರಂತ ಕುರಿತು ವಿಚಾರ ಮಂಡನೆ ಮಾಡಲು ನಿಸ್ತಂತು ಮಾಧ್ಯಮದ ಮುಖಾಂತರ ಭಾಗಿಯಾದ ಡಾ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಡಾ. ಮೇಟಿ ಮಲ್ಲಿಕಾರ್ಜುನ, ಪ್ರಾಧ್ಯಾಪಕರು, ಸಹ್ಯಾದ್ರಿ ಆರ್ಟ್ಸ್ ಕಾಲೇಜು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಡಾ. ಚಂದ್ರಶೇಖರ್ ಕಂಬಾರ ಕುರಿತು ವಿಚಾರ ಮಂಡನೆ ಮಾಡಲು ಭಾಗಿಯಾದ ಪ್ರೊ. ತ್ಯಾಗರಾಜು, ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಭಾಗವಹಿಸಿದ ಸ್ಥಳೀಯ ಕಲಾವಿದರುಗಳಿಗೆ ಸ್ವಾಗತವನ್ನು ಕೋರಿದರು.

ಮುಂದುವರಿದು ಮಾತನಾಡುತ್ತಾ ಇಂದು ಈ ಸಾಹಿತ್ಯೋತ್ಸವ ಕಾರ್ಯಕ್ರಮದ ಸಮಾರೋಪವನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಲಾಗಿತ್ತು. ಆದರೆ ಕನ್ನಡದ ಇನ್ನೂ ಅನೇಕ ಗಣ್ಯ ಸಾಹಿತಿಗಳು ಮತ್ತು ಕವಿಗಳು ಇರುವುದರಿಂದ ಈ ಸಾಹಿತ್ಯ ಕಾರ್ಯಕ್ರಮವನ್ನು ಇನ್ನೂ ಎರಡು ವಾರ ಮುಂದುವರಿಸಲು ನಿರ್ಣಯಿಸಲಾಗಿದೆ ಎಂದು ತಿಳಿಸಿದರು. ಡಾ. ಚಂದ್ರಶೇಖರ ಕಂಬಾರ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಅವರನ್ನು ಸಂಘದ ಕಾರ್ಯಕ್ರಮಗಳಿಗೆ ಬರಮಾಡಿಕೊಳ್ಳುವ ಅವಕಾಶ ಸಂಘಕ್ಕೆ ಇತ್ತು. ಇಂತಹ ಮಹಾನ್ ಕವಿಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ನಮಗೆ ಸಂತಸವನ್ನು ತಂದಿದೆ ಎಂದು ಹೇಳುತ್ತಾ ಈ ಕಾರ್ಯಕ್ರಮವನ್ನು ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಮಾಲಿನಿ ಪ್ರಹ್ಲಾದ್ ಹಾಗೂ ಶ್ರೀ ಕೆ.ಎಸ್. ಮೂರ್ತಿ, ಶ್ರೀ ಅರುಣ್ ಸಿ.ಎಸ್. ಹಾಗೂ ಸಂಗೀತ ಕಾರ್ಯಕ್ರಮವನ್ನು ಶ್ರೀಮತಿ ಶುಭಾ ದೇವಿಪ್ರಸಾದ್ ಅವರುಗಳು ನಡೆಸಿಕೊಡಬೇಕೆಂದು ಹೇಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಕಿರಣ್ ಅವರ ಗಣಪತಿ ಸ್ತುತಿಯೊಂದಿಗೆ ಸಾಹಿತ್ಯೋತ್ಸವ–4 ಕಾರ್ಯಕ್ರಮವು ಪ್ರಾರಂಭವಾಯಿತು. ಶ್ರೀಮತಿ ಪೂಜಾ ಪಿ. ರಾವ್ ಅವರು ಕಾರ್ಯಕ್ರಮದ ಎಲ್ಲ ಅತಿಥಿಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲಿರುವ ಸ್ಥಳೀಯ ಕನ್ನಡಿಗರಿಗೆ ದೆಹಲಿ ಕನ್ನಡಿಗರ ಪರವಾಗಿ ಆತ್ಮೀಯ ಸ್ವಾಗತ ಕೋರಿದರು. ಕಾರ್ಯಕ್ರಮದ ಸಂಚಾಲಕರಾದ ಶ್ರೀ ಅರುಣ್ ಸಿ.ಎಸ್. ಅವರು ನಾಲ್ಕನೇ ವಾರ ನಡೆಯುತ್ತಿರುವ ಈ ಸಾಹಿತ್ಯ ಕಾರ್ಯಕ್ರಮದ ಪರಿಕಲ್ಪನೆಯನ್ನು ಮಾಡಿ ಕೊಟ್ಟ ಸಂಘದ ಅಧ್ಯಕ್ಷರ ಕಾರ್ಯವನ್ನು ಶ್ಲಾಘಿಸುತ್ತಾ, ಮಳೆಗಾಲದಲ್ಲಿ ಸಾಹಿತ್ಯದ ಕಂಪನ್ನು ಹರಡುತ್ತಿರುವ ಒಂದು ಕಾರ್ಯಕ್ರಮ ಇದಾಗಿದೆ ಎಂದರು.

ನಂತರ ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಮತ್ತು ಖ್ಯಾತ ಜಾನಪದ ವಿದ್ವಾಂಸರು, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಸಭೆಯಲ್ಲಿ ಉಪಸ್ಥಿತರಿರುವ ಎಲ್ಲರಿಗೂ ತಮ್ಮ ಅಭಿನಂದನೆಯನ್ನು ಸಲ್ಲಿಸಿ ಡಾ. ಶಿವರಾಮ ಕಾರಂತ ಅವರ ಕುರಿತು ಮಾತನಾಡಲು ತುಂಬಾ ಸಂತೋಷದ, ಅಭಿಮಾನ ಹಾಗೂ ಹೆಮ್ಮೆಯ ಸಂಗತಿಯಾಗಿದೆ ಎಂದರು. 1900 ರಿಂದ 1999ರವರೆಗಿನ 100 ವರ್ಷ ಇದನ್ನು ನಾವು 20ನೇ ಶತಮಾನ ಎಂದು ಕರೆದರೆ, ಆ 20ನೇ ಶತಮಾನದ ಮೊದಲ ದಶಕದಲ್ಲಿ ಹುಟ್ಟಿ, ಕೊನೆ ದಶಕದವರೆಗೆ ಬಾಳಿ ಬದುಕಿದ ಇಬ್ಬರು ಕನ್ನಡದ ಮಹನೀಯರು ಇದ್ದಾರೆ, ಒಬ್ಬರು ಡಾ. ಶಿವರಾಮ ಕಾರಂತರು ಹಾಗೂ ಇನ್ನೊಬ್ಬರು ಮಹಾಕವಿ ಕುವೆಂಪು ಅವರು. ಇಡೀ ಒಂದು ಶತಮಾನವನ್ನು ಬದುಕಿ ಆ ಒಂದು ಶತಮಾನದ, ಆಗು–ಹೋಗುಗಳಿಗೆ ಮುಖ್ಯವಾಗಿ, ಆ ಶತಮಾನದ ಮೊದಲ ಭಾಗದಲ್ಲಿ ಭಾರತ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿತ್ತು, ಹಾಗಾಗಿ ಸ್ವಾತಂತ್ರ್ಯ ಹೋರಾಟದ ಅನುಭವಗಳು, ಸೃಷ್ಟಿಸಿದ ಬಿಕ್ಕಟ್ಟುಗಳು ಮತ್ತು ಭಾರತೀಯರ ಮುಂದೆ ಹುಟ್ಟಿಕೊಂಡ ಸವಾಲುಗಳನ್ನು ಗ್ರಹಿಸುತ್ತಾ 1947ರ ನಂತರ ನಮಗೆ ಏನು ಸ್ವಾತಂತ್ರ್ಯ ಬಂತು, ಅದರ ನಂತರ ಭಾರತ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾದಂತಹ ಜವಾಹರಲಾಲ್ ನೆಹರೂ ಅವರ ನೇತೃತ್ವದಲ್ಲಿ ಒಂದು ಹೊಸ ಭಾರತವನ್ನು ಕಟ್ಟುವಾಗ ಆ ಭಾರತ ಎದುರಿಸಿದ ಸಮಸ್ಯೆಗಳು ಮತ್ತು ಸುಮಾರಿಗೆ 70–80ರ ದಶಕದಲ್ಲಿ ಕಾಣಿಸಿಕೊಂಡ ಭೂ ಮಸೂದೆ ಮೊದಲಾದ ಒಂದು ಜನಪರವಾದಂತಹ ಚಳವಳಿಗಳು, 90ರ ನಂತರ ಕಾಣಿಸಿಕೊಂಡ ಜಾಗತೀಕರಣ. ಹೀಗಾಗಿ ಸ್ವಾತಂತ್ರ್ಯ ಚಳವಳಿ ಸ್ವಾತಂತ್ರ್ಯ ಸಿಕ್ಕ ನಂತರದ ಕಾಲಘಟ್ಟದ ಭಾರತೀಯ ಬೆಳವಣಿಗೆ ಮತ್ತು 20ನೇ ಶತಮಾನದ ಕೊನೆಯ ಭಾಗದಲ್ಲಿ ಕಾಣಿಸಿಕೊಂಡ ಭೂಮಸೂದೆ, ಜಾಗತೀಕರಣ ಮೊದಲಾದ ಚಳವಳಿ ಈ ಎಲ್ಲದಕ್ಕೂ ಕೂಡಾ ಧ್ವನಿಯಾದ ಭಾಷೆಯಲ್ಲಿ ಅದಕ್ಕೆ ಅನುಭವಗಳನ್ನು ಸೇರಿಸಿ ಕಲಾಕೃತಿಗಳನ್ನು ರಚಿಸಿದವರು ಕುವೆಂಪು ಹಾಗೂ ಶಿವರಾಮ ಕಾರಂತರು ಎಂದು ಹೇಳಿದರು.

ಇದರಲ್ಲಿ ಶಿವರಾಮ ಕಾರಂತರು ಇವತ್ತು 20ನೇಯ ಶತಮಾನದ ಅನುಭವಗಳಿಗೆ ಧ್ವನಿಕೊಟ್ಟು 21ನೇ ಶತಮಾನದ ಅನೇಕ ಬೆಳವಣಿಗೆಗಳಿಗೆ ಮಾರ್ಗದರ್ಶನ ಮಾಡಿದ್ದಾರೆ ಮತ್ತು ಹಲವು ಬಗೆಯಲ್ಲಿ ನಮಗೆ ಇವತ್ತೂ ಕೂಡಾ ಹೊಸ ಬಗೆಯ ಚರ್ಚೆಗಳನ್ನು ಹುಟ್ಟುಹಾಕಿಕೊಳ್ಳುವುದಕ್ಕೆ ಸಹಾಯ ಮಾಡಿರುತ್ತಾರೆ, ಕುವೆಂಪು ಅವರಂತೂ ಇದ್ದೇ ಇದೆ, ಏಕೆಂದರೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಿಸರಕ್ಕೆ ಸಂಬಂಧಪಟ್ಟ ಹಾಗೆ ಇವತ್ತೂ ಕೂಡಾ ಕುವೆಂಪು ಮುಂದಿದ್ದಾರೆ, ಆದರೆ ಶಿವರಾಮ ಕಾರಂತರು ಭಾಷೆ, ಸಾಹಿತ್ಯ, ನಾಟಕ, ಪ್ರಬಂಧ, ವಿಜ್ಞಾನ ಬರವಣಿಗೆ, ಪರಿಸರ, ಜಾನಪದ ಇತ್ಯಾದಿ ವಿಷಯಗಳಲ್ಲಿ ಮಾರ್ಗದರ್ಶನ ಮಾಡುವ ಶಕ್ತಿಯನ್ನು ಹೊಂದಿದ್ದರು. ಹೀಗಾಗಿ ಒಂದು ಭಾಷೆ, ಕನ್ನಡ ಇಂಗ್ಲೀಷ್ ಅಥವಾ ಹಿಂದಿ ಭಾಷೆ ಯಾವುದೇ ಇರಲಿ ಅದಕ್ಕೆ ಅನೇಕ ಅಭಿವ್ಯಕ್ತಿ ರೂಪಗಳಿರುತ್ತವೆ, ನಾವು ಮಾತನಾಡುವುದು ಒಂದು ಸಾಮಾನ್ಯ ಭಾಷೆ, ಆದರೆ ಅದಕ್ಕೆ ಸಾಹಿತ್ಯದ ರೂಪ



ಇರುತ್ತದೆ, ನಾಟಕದ ರೂಪ ಇರುತ್ತದೆ, ಪ್ರಬಂಧದ ರೂಪ ಇರುತ್ತದೆ, ಸಿನಿಮಾದ ರೂಪ ಇರುತ್ತದೆ, ಒಂದು ಚಿತ್ರಕಲೆಯ ರೂಪ ಇರುತ್ತದೆ, ಭಾಷೆಗೆ ಅನೇಕ ರೂಪಗಳಿರುತ್ತವೆ, ಆ ಎಲ್ಲ ರೂಪಗಳಲ್ಲಿಯೂ ಕೂಡಾ ಕೆಲಸ ಮಾಡಿದ 20ನೇ ಶತಮಾನದ ಏಕೈಕ ಲೇಖಕ ಎಂದರೆ ಅದು ಡಾ. ಶಿವರಾಮ ಕಾರಂತರು. ಹೀಗಾಗಿ ಶಿವರಾಮ ಕಾರಂತರ ಕೊಡುಗೆ ಭಾಷೆಯ ಎಲ್ಲ ವಿಭಾಗಕ್ಕೂ ಇರುವುದರಿಂದ ಅವರನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ ಹಾಗೂ ಅರ್ಥ ಮಾಡಿಕೊಳ್ಳುವುದಕ್ಕೆ ತುಂಬಾ ತಯಾರಿ ಬೇಕಾಗುತ್ತದೆ. ಸುಮಾರು 464 ಪುಸ್ತಕಗಳನ್ನು ಅವರು ತಮ್ಮ ಜೀವತಾವಧಿಯಲ್ಲಿ ಬರೆದಿದ್ದಾರೆ. ಇದೇನು ಸಣ್ಣ ಸಂಖ್ಯೆ ಅಲ್ಲ, ನಾವು ಕೇವಲ 10–20 ಪುಸ್ತಕಗಳನ್ನು ಬರೆದಿದ್ದೇವೆ, ಅವರು ಪರಿಸರಕ್ಕಾಗಿ ಹೋರಾಟ ಮಾಡಿದ್ದಾರೆ, ಚುನಾವಣೆಗೆ ನಿಂತಿದ್ದಾರೆ, ಪುತ್ತೂರು ಪರಿಸರದಲ್ಲಿ ವೇಶ್ಯಾವಾಟಿಕೆ ನಿರ್ಮೂಲನೆಗೆ ಗಾಂಧಿಯ ಆದರ್ಶದಿಂದ ಕೆಲಸ ಮಾಡಿದ್ದಾರೆ. ಆಮೇಲೆ ಆರ್ನಾಡ್ ಬಾಟೆ ಮುಂತಾದ ವಿದೇಶಿ ವಿದ್ವಾಂಸರ ಜೊತೆಗೆ ಯಕ್ಷಗಾನಕ್ಕೆ ಕೆಲಸ ಮಾಡಿದ್ದಾರೆ. ಪುತ್ತೂರಿನ ದಸರಾ ಉತ್ಸವ ಸಂದರ್ಭದಲ್ಲಿ ನೃತ್ಯ ನಾಟಕಗಳನ್ನು ಮಾಡಿ ಆಡಿಸಿದ್ದಾರೆ, ಸ್ವತಃ ನಟನೆ ಮಾಡಿದ್ದಾರೆ. ಅಂತರ್‌ಜಾತೀಯ ವಿವಾಹವಾಗಿದ್ದಾರೆ, ಆದರೆ ನಮ್ಮಂತಹ ಸಾಮಾನ್ಯ ಮನುಷ್ಯರು ಕೇಳಿಕೊಳ್ಳುವ ಒಂದು ಸಣ್ಣ ಪ್ರಶ್ನೆ ಎಂದರೆ ಒಬ್ಬ ಮನುಷ್ಯನಿಗೆ ತನ್ನ ಜೀವಿತಾವಧಿಯಲ್ಲಿ ಇಷ್ಟೆಲ್ಲ ಕೆಲಸ ಮಾಡುವುದಕ್ಕೆ ಸಾಧ್ಯವೋ ಅಂತ. ಕಾರಂತರು ಒಂದು ವಿಸ್ಮಯದಂತೆ ಸಣ್ಣ ಸಣ್ಣ ಗುಡ್ಡಗಳಿಂದ ಸುತ್ತುವರಿದ ಹಿಮಾಲಯ ಪರ್ವತದ ಹಾಗೆ ಕಾಣಿಸುತ್ತಾರೆ ಎಂದರು.

ಇವತ್ತು ನಾನು ಅವರ ಬಗ್ಗೆ ಸುದೀರ್ಘವಾಗಿ ಮಾತನಾಡುವ ಬದಲು ಒಂದು ನಾಲ್ಕು ವಿಷಯಗಳನ್ನು, ನಾಲ್ಕು ಕಾದಂಬರಿಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಏಕೆಂದರೆ ಹೊಸಗನ್ನಡ ಸಾಹಿತ್ಯಕ್ಕೆ ಇವತ್ತು ಯಾರಾದರೂ ನೀವು ಈ ಕಾರ್ಯಕ್ರಮದ ನಂತರ ಶಿವರಾಮ ಕಾರಂತರ ಕಾದಂಬರಿಯನ್ನು ಓದಬೇಕು ಎಂದು ಅನಿಸಿದರೆ ತಾವು ದಯವಿಟ್ಟು ಚೋಮನದುಡಿ, ಮೈಮನಗಳ ಸುಳಿಯಲ್ಲಿ, ಬೆಟ್ಟದ ಜೀವ ಮತ್ತು ಅಳಿದ ಮೇಲೆ ಈ 4 ಪ್ರಮುಖ ಕಾದಂಬರಿಗಳನ್ನು ಓದಬೇಕು ಈ ನಾಲ್ಕು ಕಾದಂಬರಿಗಳು ಬಹಳ ಮುಖ್ಯ ಏಕೆಂದರೆ, ಶಿವರಾಮ ಕಾರಂತರು ಈ ಕಾದಂಬರಿಗಳನ್ನು ಬರೆದ ಮೇಲೆ ಕನ್ನಡ ಸಾಹಿತ್ಯದ ಚಲನೆಯೇ ಬದಲಾಗಿ ಹೋಯಿತು. ಆಮೇಲೆ ಅದು ಎಲ್ಲರಿಗೂ ಒಂದು ಮಾದರಿಯಾಯಿತು. ಚೋಮನ ದುಡಿಯನ್ನು 1932ರಲ್ಲಿ ಪುತ್ತೂರಿನಲ್ಲಿ ಬರೆದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದ ಕಾಲಘಟ್ಟ ಯಾವುದು ಎಂದು ಕೇಳಿದರೆ ಅದು 1930ರ ದಶಕ. ಕ್ವಿಟ್ ಇಂಡಿಯಾ ಚಳವಳಿ ಆಗ ಆರಂಭವಾಗಿತ್ತು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜಾತಿ ವಿನಾಶಕ ಚಳವಳಿಯ ಪುಸ್ತಕ ಬರೆದಿದ್ದರು. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುತ್ತಾರೆ ಎನ್ನುವ ಭಾವ ಮೂಡಿತ್ತು, ಒಂದು ಪರ್ಯಾಯ ಸರ್ಕಾರವನ್ನು ನಾವು ಹೇಗೆ ನಡೆಸಬಹುದು ಎನ್ನುವುದನ್ನು ಮಹಾತ್ಮ ಗಾಂಧಿ ಮೊದಲಾದವರು ಎಲ್ಲ ಚರ್ಚೆಯನ್ನು ಆರಂಭ ಮಾಡಿದ್ದರು. ಆಮೇಲೆ 30ರ ದಶಕದ ಕೊನೆ ಆಗುವಾಗ ಎರಡನೇ ಮಹಾಯುದ್ಧ ಆರಂಭವಾಯಿತು ಎಂದರು.

1930 ರಿಂದ 1940ರ ವರೆಗಿನ ನಡುವಿನ 10 ವರ್ಷ ಏನಿದೆ, ಇದು ಇಡೀ ಜಗತ್ತಿನ ಚರಿತ್ರೆ, ಭಾರತದ ಚರಿತ್ರೆ ಮತ್ತು ಕರ್ನಾಟಕದ ಚರಿತ್ರೆಯಲ್ಲಿ ಬಹಳ ಮುಖ್ಯವಾದ ಕಾಲ ಘಟ್ಟ. ಎಲ್ಲಾ ಭಾರತೀಯರು ಸ್ವಾತಂತ್ರ್ಯ ಬಂದರೆ ಭಾರತದ ಸಮಸ್ಯೆ ಪರಿಹಾರ ಆಗುತ್ತೆ ಎಂದು ತಿಳಿದು ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಒಂದು ದೊಡ್ಡ ಚಳವಳಿಯಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದಾಗ ಕಾರಂತರು ಆ ದೊಡ್ಡ ಚಳವಳಿಯ ಮೂವ್‌ಮೆಂಟ್ ಏನಿದೆ ಅದರಿಂದ ಒಂದು ಕ್ಷಣ ಬೇರ್ಪಟ್ಟು ಮೆಲ್ಲಗೆ ಅಲ್ಲಿಂದ ಹೊರಗಡೆ ಬಂದು ಪುತ್ತೂರಿನ ಒಂದು ಸಣ್ಣ ಹಳ್ಳಿಯಲ್ಲಿ ಅಲ್ಲಿಯ ಬಾಲವನದಲ್ಲಿ ಕುಳಿತು ಚೋಮನ ದುಡಿ ಬರೆದರು. ಆ 'ಚೋಮನ ದುಡಿ'ಯಲ್ಲಿ ಒಂದು ಪ್ರಶ್ನೆಯನ್ನು ಇಡೀ ಜಗತ್ತಿಗೆ ಕೇಳುತ್ತಾರೆ–ಬ್ರಿಟಿಷರು ಹೋದರೆ ಈ ದೇಶ ಬದಲಾಗುತ್ತೆ ಅಂತ ನೀವೆಲ್ಲ ನಂಬಿದ್ದೀರಿ, ಆದರೆ ಈ ದೇಶ ಬದಲಾವಣೆ ಆಗಬೇಕು ಎಂದಾದರೆ ಚೋಮನಿಗೆ ಒಂದು ಚೂರು ನೆಲ ಸಿಗಬೇಕು ಎನ್ನುವ ಒಂದು ಧ್ವನಿಯನ್ನು ಅವರು ಕೊಟ್ಟರು. ಈ ಕಾರಣಕ್ಕೆ ಅದೊಂದು ಮಾಸ್ ಮೂವ್‌ಮೆಂಟ್ ಎಂದು ಹೇಳುತ್ತೇವೆ, ಜನರೆಲ್ಲರೂ ಹುಚ್ಚಾಗಿ ಹೋಗುತ್ತಿದ್ದಾಗ ಅದರಿಂದ ಸಿಡಿದು ನಿಂತು ಈ ನೆಲದ ನಿಜವಾದ ಸಮಸ್ಯೆ ಇರುವುದು ಭೂಮಿಯ ಹಂಚುವಿಕೆಯಲ್ಲಿ ಎಂಬ ಸತ್ಯವನ್ನು ಅವರು ಹೇಳಿದರು. ಆಮೇಲೆ ದಲಿತ ಸತ್ಯವನ್ನು ಬರೆಯುವಾಗ ಕಾರಂತರು ತನ್ನದೇ ಆದಂತಹ ಒಂದು ದಾರಿಯನ್ನು ಹಿಡಿದರು ಎಂದು ತಿಳಿಸಿದರು.

ಪ್ರೇಮ್‌ಚಂದ್ ಅವರು ಹಿಂದಿಯಲ್ಲಿ ದಲಿತರ ಸಮಸ್ಯೆಗಳನ್ನು ಬರೆಯುವಾಗ ಅವರ ಧೋರಣೆ ಏನಿದೆ ಅಂದರೆ ದಲಿತರ ಬಡತನ ಅವರಲ್ಲಿ ಒಂದು ವಿಶೇಷವಾದ ಕ್ರೌರ್ಯವನ್ನು ಹುಟ್ಟು ಹಾಕಿದೆ ಅಂತ. ಆದ್ದರಿಂದ ಕಫನ್ ಎನ್ನುವ ಒಂದು ಕಥೆಯಲ್ಲಿ ಅ ಹೆಣ್ಣುಮಗಳು ಒಳಗೆ ಹೆರಲಿಕ್ಕೆ ಆಗದೇ ಒದ್ದಾಡುತ್ತ ಅಳುತ್ತಿದ್ದಾಗ ಆ ಹೆಂಗಸಿನ ಗಂಡ ಮತ್ತು ಮಾವ ಇಬ್ಬರೂ ಹೊರಗಡೆ ಸೇಂದಿ ಕುಡಿಯುತ್ತಿರುತ್ತಾರೆ. ಅವಳು ಸತ್ತು ಹೋಗುತ್ತಾಳೆ, ಅವಳ ಮೈಮೇಲೆ ಹಾಕಲು ಬಿಳಿ ಬಟ್ಟೆ ಬೇಕು ಎಂದು ಧಣಿಯನ್ನು ಕೇಳಿದಾಗ ಧಣಿಗಳು ಕೊಡುತ್ತಾರೆ, ಆದರೆ ಅದನ್ನು ತೆಗೆದುಕೊಂಡು ಬರುವ ಅವಳ ಗಂಡ ಅವಳು ಹೇಗೂ ಸತ್ತು ಹೋಗಿದ್ದಾಳೆ, ಅವಳ ಮೈಮೇಲೆ ಬಟ್ಟೆ ಹಾಕಿದರೆ ಆ ಬಟ್ಟೆಯೂ ಕೂಡಾ ಹೊತ್ತಿ ಉರಿದು ಹೋಗುತ್ತದೆ, ಅದರ ಬದಲು ಇದ್ದಷ್ಟು ಜೀವನದಲ್ಲಿ ಸುಖವನ್ನು ಪಡೆಯೋಣ ಎಂದು ಹೇಳಿ ಆ ಬಟ್ಟೆಯನ್ನು ಬೇರೆಯವರಿಗೆ ಮಾರಿ ಹೆಂಡವನ್ನು ಅವರು ಕುಡಿಯುತ್ತಾರೆ. ಇದು ಏನು ಹೇಳುತ್ತದೆ ಎಂದರೆ ದಲಿತರ ಬಡತನ ಅವರಲ್ಲಿ ಒಂದು ಭಯಾನಕವಾದ ಕ್ರೌರ್ಯವನ್ನು ಹುಟ್ಟು ಹಾಕಿದೆ ಎಂದು ತೋರಿಸುತ್ತದೆ ಎಂದರು.

ಕನ್ನಡದಲ್ಲಿ ಶ್ರೀ ಅರವಿಂದ ಮಾಲಗತ್ತಿ ಅವರು **"ಕ್ರೌರ್ಯ"** ಎನ್ನುವ ಒಂದು ಕಾದಂಬರಿಯನ್ನು ಬರೆಯುತ್ತಾರೆ, ಕಾದಂಬರಿ ಆರಂಭವಾಗುವುದು ಹುಳು ತಿಂದ ಮೆದುಳುಗಳು ಎಂದು, ಆ ಸಮುದಾಯದ ಮೆದುಳೇ ಅದನ್ನು ಹುಳು ತಿಂದು ಹಾಕಿದೆ ಎಂದು ಅರ್ಥ. ಅಂದರೆ ಒಂದು ನೆಗೆಟೀವ್ ಆದಂತಹ ಒಂದು ಧೋರಣೆ. ಇದು ಒಂದು ಮಾದರಿ. ಇನ್ನೊಂದು ಮಾದರಿ ದೇವನೂರು ಮಹದೇವ ಅವರು ಬರೆದಂತಹ ಮಾದರಿ ಅಥವಾ ಸಿದ್ದಲಿಂಗಯ್ಯನವರ ಮಾದರಿ, ಅದನ್ನು ಕಾಮಿಕ್ಸ್ ಸ್ಟೈಲ್ ಅಂತ ಹೇಳುತ್ತೇವೆ. ಅದರೊಳಗಿರುವ ಜನರನ್ನ ಹಾಸ್ಯ ಹಾಸ್ಯ ಮಾಡುತ್ತ ಪ್ರೀತಿಸುವುದು. ಉದಾಹರಣೆಗೆ ಒಬ್ಬ ದಲಿತ ಹುಡುಗ ಅಂಗೈಗಿಂತಲೂ ದೊಡ್ಡದಾಗಿ ಕಾಣುವಂತಹ ಒಂದು ವಾಚನ್ನು ಕಟ್ಟುತ್ತಾನೆ, ಆತ ಬಡವ, ಆದರೆ ಅವನ ಕೈಯಲ್ಲಿ ಒಂದು ದೊಡ್ಡ ವಾಚು ಬಂದಾಗ ಅವನು ಅದನ್ನು ಎದೆಯ ಮೇಲೆ ಇಟ್ಟುಕೊಂಡು ಊರಿಗೆಲ್ಲಾ ಕಾಣುವ ಹಾಗೆ ಸುತ್ತುತ್ತಿರುತ್ತಾನೆ, ಅಂದರೆ ಇದು ಒಂದು ಕಾಮಿಕ್ಸ್ ಸ್ಟೈಲ್, ಬಹಳಷ್ಟು ಜನ ಚಾರ್ಲಿ ಚಾಪ್ಲಿನ್ ಸಿನೆಮಾ ನೋಡಿರುತ್ತೀರಿ, ಅವನ ಸಿನೆಮಾದಲ್ಲಿ ನಾವೆಲ್ಲ ನಗುತ್ತೇವೆ, ಆದರೆ ಆ ನಗುವಿನ ಹಿಂದೆ ಒಂದು ಹಿಂಸೆ ಇದೆ, ನೋವಿದೆ, ಒಂದು ಕ್ರೌರ್ಯ ಇದೆ, ಆಧುನಿಕ ಕಾಲ ಘಟ್ಟ ಮನುಷ್ಯತ್ವವನ್ನು ಹೇಗೆ ಸಿಕ್ಕಿಸಿ ಹಾಕಿದೆ ಎಂಬುದನ್ನು ವ್ಯಂಗ್ಯವಾಗಿ ನಿರೂಪಿಸುವ ಚಾರ್ಲಿ ಚಾಪ್ಲಿನ್ ತಂತ್ರ, ಇದೂ ಕೂಡಾ ಕನ್ನಡದಲ್ಲಿ, ಹಿಂದಿಯಲ್ಲಿ ಇದೆ. ಶಿವರಾಮ ಕಾರಂತರದು ಈ ಕಾಮಿಕ್ಸ್ ಸ್ಟೈಲೂ ಅಲ್ಲ, ದಲಿತರೊಳಗೆ ಕ್ರೌರ್ಯ ಇದೆ ಎಂದು ಹೇಳುವ ಸ್ಟೈಲೂ ಅಲ್ಲ ಅವರು ದಲಿತ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಬರೆಯುವ ಒಂದು ಮಾದರಿಯನ್ನು ಕನ್ನಡಕ್ಕೆ ಕೊಟ್ಟರು. ನೀವು ಇಡೀ ಚೋಮನ ದುಡಿಯನ್ನು ಓದಿದರೆ ನಿಮ್ಮ ಕೈಕಾಲುಗಳು ತಣ್ಣಗಾಗುತ್ತವೆ. ಹೃದಯ ಢವ ಢವ ಎನ್ನತೊಡಗುತ್ತದೆ. ಇಂತಹ ಕಾಲಘಟ್ಟದಲ್ಲಿ ಈ ರೀತಿಯ ಒಂದು ಪರಿಸ್ಥಿತಿಯಲ್ಲಿ ನಾವು ಸಮುದಾಯವನ್ನು ಇಟ್ಟಿದ್ದೇವೆಯೋ ಎಂದು. ಹೀಗಾಗಿ 'ಚೋಮನ ದುಡಿ' ಬಹಳ ಮಹತ್ವದ ಕಾದಂಬರಿ ಮಾತ್ರ ಅಲ್ಲ, ದಲಿತ ಸಾಹಿತ್ಯಕ್ಕೆ ಒಂದು ಹೊಸ ಮಾದರಿಯನ್ನು ಕೊಟ್ಟ ಕಾದಂಬರಿ ಎಂದು ಡಾ. ಬಿಳಿಮಲೆ ತಿಳಿಸಿದರು.

ಎರಡನೇಯ ಕಾದಂಬರಿ 'ಬೆಟ್ಟದ ಜೀವ' ಈ ಕಾದಂಬರಿಯನ್ನು ತಾವು ಎಲ್ಲರೂ ಓದಬೇಕು. ಇದು ಕುಕ್ಕೇ ಸುಬ್ರಹ್ಮಣ್ಯದ ಪರಿಸರದಲ್ಲಿ ಸೃಷ್ಟಿಯಾದಂತಹ ಒಂದು ಕಾದಂಬರಿ. ಇದರಲ್ಲಿ ಬೆಟ್ಟದ ಜೀವಗಳು ಬರುತ್ತವೆ, ಗೋಪಾಲಯ್ಯ ಹಾಗೂ ಅವನ ಹೆಂಡತಿ ಶಂಕರಿ ಎನ್ನುವವಳು ಇದರಲ್ಲಿ



ಬರುತ್ತಾರೆ. ಗೋಪಾಲಯ್ಯನ ತೋಟದಲ್ಲಿ ಕೆಲಸ ಮಾಡುವ ಇಬ್ಬರು ಕಾಟುಮೂಲೆ ಊರಿನ ನಾರಾಯಣ ಮತ್ತು ಅವನ ಹೆಂಡತಿ ಲಕ್ಷ್ಮಿ ಬರುತ್ತಾರೆ. ಮೂರನೇಯ ವಿಭಾಗದಲ್ಲಿ ದೇರಣ್ಣ ಎನ್ನುವ ಗೌಡ ಮತ್ತು ಭಟ್ಯ ಎನ್ನುವ ದಲಿತ ಬರುತ್ತಾನೆ. ದಲಿತ ಮತ್ತು ಬ್ರಾಹ್ಮಣರ ನಡುವಿನ ಒಂದು ಒಕ್ಕೂಟದಲ್ಲಿ ಕಾಡಿನ ಒಳಗಡೆ ಅರಳುವ ಉದಾತ್ತವಾದಂತಹ ಜೀವನ ಕ್ರಮವನ್ನು ಬೆಟ್ಟದ ಜೀವ ಹೇಳುತ್ತದೆ. ಕುವೆಂಪುರವರು ಒಂದು ಮಾತು ಬರೆಯುತ್ತಾರೆ, ಅಂದರೆ ಹಸುರನ್ನು ನೋಡುತ್ತಿದ್ದರೆ ಬರೀ ನೋಡುವುದು ಮಾತ್ರವಲ್ಲ, ಹಸಿರನ್ನು ಕಾಣುವುದು, ಅಂದರೆ ಅದನ್ನು ಇಂಟರ್‌ಲೈಸ್ ಮಾಡುವುದು. ನಾವು ಯಾವಾಗಲೂ ದೇವರನ್ನು ನೋಡುವುದು ಬೇರೆ, ಆದರೆ ಕಾಣುವಾಗ ಕಣ್ಣುಗಳನ್ನು ಮುಚ್ಚಿ ಆ ದೇವರನ್ನು ನಮ್ಮ ಹೃದಯದೊಳಕ್ಕೆ ಎಳೆದುಕೊಳ್ಳುತ್ತೇವೆ ಎಂದು ತಮ್ಮ ಅಭಿಪ್ರಾಯ ತಿಳಿಸಿದರು.

ಪಂಪಭಾರತದಲ್ಲಿ ಪಾಂಡವರು ಕೃಷ್ಣನನ್ನು ಕಾಣುತ್ತಾರೆ, ಕೌರವರು ಕೃಷ್ಣನನ್ನು ನೋಡುತ್ತಾರೆ, ನೋಡುವುದಕ್ಕೂ ಹಾಗೂ ಕಾಣುವುದಕ್ಕೂ ವ್ಯತ್ಯಾಸವಿದೆ. ಕುವೆಂಪು ಅವರ ಕಾದಂಬರಿಗಳಲ್ಲಿ ಅಲ್ಲಿನ ಜನ ಪ್ರಕೃತಿಯನ್ನು ಕಾಣುತ್ತಾರೆ. ಆದ್ದರಿಂದಲೇ ಕುವೆಂಪು ಬರೆಯುತ್ತಾರೆ. ಹಸುರೆತ್ತಲ್... ಹಸಿರು ಆ ಕಡೆ ಹಸಿರು ಈ ಕಡೆ ಹಸಿರು ಗಟ್ಟಿತು, ಕವಿಯ ಆತ್ಮವೇ ಹಸಿರುಗಟ್ಟಿತು ಎನ್ನುವ ಮಾತನ್ನು ಹೇಳುವಾಗ ಪ್ರಕೃತಿ ಬಾಹ್ಯದ ಪ್ರಕೃತಿಯಾಗಿ ಉಳಿಯಲಿಲ್ಲ, ಅದು ಅಂತರಂಗದ ಪ್ರಕೃತಿಯಾಗಿ ಮಾರ್ಪಡುತ್ತದೆ. ನಮ್ಮ ಆತ್ಮ ಆತ್ಮೋನ್ನತಿ ಕಡೆ ಹೋಗಬೇಕು ಎಂದು ಕುವೆಂಪು ಹೇಳುತ್ತಾರೆ. ಶಿವರಾಮ ಕಾರಂತರು ಬೆಟ್ಟದ ಜೀವದಲ್ಲಿ ಬರೀ ಗೋಪಾಲಯ್ಯ, ಶಂಕರಿ, ಕಾಟಮೂಲೆ ನಾರಾಯಣ, ಲಕ್ಷ್ಮಿ, ಭಟ್ಯ, ದೇರಣ್ಣ ಕೇವಲ ಪಾತ್ರಗಳು ಮಾತ್ರ ಅಲ್ಲ, ಅವರು ಇಡೀ ಕಾಡಿನ ಭಾಗಗಳು ಕೂಡ ಹೌದು, ಅವರು ಕಾಡಿನ ನೀರೂ ಹೌದು, ಮರಗಳೂ ಹೌದು, ಕಾಡಿನ ಪ್ರಾಣಿಗಳೂ ಕೂಡಾ ಹೌದು, ಕಾಡಿನ ಜೀವಗಳೂ ಕೂಡಾ ಹೌದು, ಆದ್ದರಿಂದಲೇ ಆ ಕಾದಂಬರಿ ಬೆಟ್ಟದ ಜೀವ, ಉನ್ನತಿಯ ಕಡೆ ಹೋಗಬೇಕು, ಅಧಃಪತನದ ಕಡೆಯಲ್ಲ, ಈ ಕಾದಂಬರಿಯನ್ನು ಓದಿದರೆ, ನಿಮ್ಮ ಆತ್ಮ ಎಂಬುದು ಉನ್ನತಿಯ ಕಡೆ ಚಲಿಸುತ್ತದೆ ಎಂಬ ಕಾರಣದಿಂದ ಪರಿಸರ ನಮಗೆ ಏಕೆ ಬೇಕು ಎಂಬ ಒಂದು ಬಹಳ ಮುಖ್ಯವಾದ ಸಂದೇಶವನ್ನು ಈ ಕಾದಂಬರಿ ಕೊಡುತ್ತದೆ. ನಮ್ಮಲ್ಲಿ ಪ್ರಕೃತಿ ಎಂದರೆ ಕಾಡು, ಅದು ಉಳಿಯಬೇಕು, ಕಾನೂನು ಅದನ್ನು ಬಿಡದೇ ಇರುವುದರಿಂದ ನಾವು ಮರಗಳನ್ನು ಕಡಿಯದೇ ಉಳಿಸಿದ್ದೇವೆ. ಅಷ್ಟೇ ಅಲ್ಲ ಆ ಕಾಡಿನೊಳಗೆ ಹೋಗಬೇಕು, ಗೋಪಾಲಯ್ಯ, ಶಂಕರಿ ಹಾಗೆ ಆ ಕಾಡಿನಷ್ಟೇ ಉದಾತ್ತವಾಗಿ ನಮ್ಮ ವ್ಯಕ್ತಿತ್ವ ಬೆಳೆಯಬೇಕು. ಹಾಗಾಗಿ ನಮ್ಮ ಸಣ್ಣತನಗಳನ್ನು ಕಡಿಮೆ ಮಾಡಿ ನಮ್ಮಲ್ಲಿರುವ ದೈವೀಕತನ, ಅಥವಾ ನಮ್ಮಲ್ಲಿ ಏನಾದರೂ ಒಂದು ಆತ್ಮಕ್ಕೆ ಒಂದು ಪ್ರಾಧಾತ್ಮ ಇದ್ದರೆ ಅದು ಉದಾತ್ತಗೊಳಿಸುವುದಕ್ಕೆ ಹಾಗಾಗಿ ಈ ಬೆಟ್ಟದ ಜೀವ ಒಂದು ಮುಖ್ಯವಾದ ಕಾದಂಬರಿಯಾಗಿದೆ ಎಂದರು.

ಮೂರನೇಯದು 'ಮೈ ಮನಗಳ ಸುಳಿಯಲ್ಲಿ' ಕಾದಂಬರಿ. ಇದು ವೇಶ್ಯೆಯೊಬ್ಬಳ ಕಾಮದ ಅನುಭವವನ್ನು ಹೇಳುವ ಅತ್ಯದ್ಭುತವಾದ ಒಂದು ಕಾದಂಬರಿ. ಅಲ್ಲಿ ಬರುವ ಮಂಜುಳೆ ಒಬ್ಬ ವೇಶ್ಯೆ ತನ್ನ ದೇಹವನ್ನು ಮಾರಿಕೊಳ್ಳುತ್ತಾಳೆ, ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಅವಳು ತನ್ನ ಆತ್ಮವನ್ನು ಮಾರಿಕೊಳ್ಳುತ್ತಾಳಾ ಎನ್ನುವುದು. ಆತ್ಮಕ್ಕೂ ಮತ್ತು ದೇಹಕ್ಕೂ ಒಪ್ಪಿದ ಒಬ್ಬ ಗಂಡಸು ಯಾರು ಅಂತ, ಅಲ್ಲಿ ಕೊನೆಗೆ ಅಂತಹ ಹೆಣ್ಣು ಮಗಳಿಗೆ ಇಷ್ಟವಾದಂತಹ ಆತ್ಮವನ್ನು ಮತ್ತು ದೇಹವನ್ನು ಕೊಡಬಲ್ಲಂತಹ ಒಬ್ಬರು ಬರುತ್ತಾರೆ, ಆದರೆ ಅವರು ಮುದುಕರಾಗಿರುತ್ತಾರೆ, ಅವರಿಂದ ಮಂಜುಳಾಗೆ ದೈಹಿಕವಾದ ಯಾವುದೇ ಸುಖ ಸಿಗುವುದಿಲ್ಲ, ಹಾಗಾಗಿ ದೈಹಿಕ ಆಕರ್ಷಣೆಗಳನ್ನ ಮೀರಿ ಆತ್ಮಗಳು ಒಂದಾಗುವ ಒಂದು ಪ್ರೇಮ ಗಂಡು–ಹೆಣ್ಣಿನ ನಡುವೆ ಸಾಧ್ಯವಾಗುವುದು ಹೇಗೆ ಎಂಬ ಒಂದು ಅತ್ಯುತ್ತಮವಾದ ಮಾತುಗಳನ್ನ ಈ ಕಾದಂಬರಿಯಲ್ಲಿ ಹೇಳಿದ್ದಾರೆ. ಇದು ಸಿನೆಮಾ ಕೂಡಾ ಆಗಿದೆ ಎಂದು ತಿಳಿಸಿದರು.

ದೆಹಲಿಯ ಜವಹಾರ್ ಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಪೀಠದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ "ಅಳಿದ ಮೇಲೆ" ಈ ಕಾದಂಬರಿಯ ಅನುವಾದಿತ "Beyond the Life" ಇಂಗ್ಲೀಷ್ ಕೃತಿಯನ್ನು ಪ್ರಕಟಣೆ ಮಾಡಿಸಿದೆ. ಇದನ್ನು ಮುತಾಲಿಕ್ ಅವರು ಅನುವಾದ ಮಾಡಿಕೊಟ್ಟಿದ್ದರು. ಅದಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೂಡ ಬಂದಿದೆ, ನಮ್ಮಲ್ಲಿರುವ ಸಂಪ್ರದಾಯದ ಪ್ರಕಾರ ಕಾದಂಬರಿ ಪ್ರಾರಂಭವಾಗಬೇಕಾದರೆ ಅಲ್ಲಿ ನಾಯಕ ಇರಲೇ ಬೇಕು, ಆದರೆ ಈ 'ಅಳಿದ ಮೇಲೆ' ಕಾದಂಬರಿ ಆರಂಭವಾಗುವಾಗ ಅದರ ನಾಯಕನೇ ಸತ್ತು ಹೋಗಿರುತ್ತಾನೆ. ಹಾಗಾದರೆ ಸತ್ತು ಹೋದ ನಾಯಕನ ವ್ಯಕ್ತಿತ್ವ ಹೇಗಿತ್ತು ಎಂದು ಈ ಕಾದಂಬರಿಯ ನಿರೂಪಕ ಶಿವರಾಮ ಹೇಳುತ್ತಾನೆ, ಅವನು ಹುಡುಕುವುದು ಹೇಗೆ ಎಂದರೆ ಸತ್ತು ಹೋದವ ಯಾವ ಬಗೆಯ ನೆನಪುಗಳನ್ನು ಜನರಲ್ಲಿ ಉಳಿಸಿ ಹೋಗಿದ್ದಾನೆ ಎಂಬ ಪ್ರಶ್ನೆ ಹಾಕಿಕೊಂಡು ಈ ಉಳಿಸಿ ಹೋದ ನೆನಪುಗಳ ಮೂಲಕ ಕಟ್ಟುವುದು ಮನುಷ್ಯನನ್ನು. ನಾವು ಎಷ್ಟೋ ಬಾರಿ ಸತ್ತು ಹೋದರೆ ಪುಣ್ಯಾತ್ಮ ಸತ್ತು ಹೋದದ್ದು ಒಳ್ಳೆಯದಾಯಿತು ಎಂದು ಸಂತೋಷಪಡುತ್ತೇವೆ, ಆದರೆ ಅನೇಕರು ಸತ್ತು ಹೋದಾಗ ನಮಗೆ ದು:ಖವಾಗುತ್ತದೆ, ಏಕೆಂದರೆ ಆತನು ಕೆಲವು ನೆನಪುಗಳನ್ನು ಮಾತ್ರ ಬಿಟ್ಟು ಹೋಗಿರುತ್ತಾನೆ. ಆ ನೆನಪುಗಳು ಬಹಳ ಆಹ್ಲಾದಕರವಾದುದು, ಸಮಾಜಕ್ಕೆ ಉಪಯುಕ್ತವಾದುದು, ಸಾಂಸ್ಕೃತಿಕವಾಗಿ ಮಹತ್ವವಾದುದು, ಆ ಕಾರಣಕ್ಕೆ ಮನುಷ್ಯ ಅಳಿದ ಮೇಲೆ ಉಳಿಸುವುದೇನು ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಈ ಕಾದಂಬರಿಯನ್ನು ಕಾರಂತರು ಬರೆದಿದ್ದಾರೆ, ಬಹುಶಃ 21ನೇ ಶತಮಾನದ ಎರಡನೇ–ಮೂರನೇ ದಶಕದಲ್ಲಿ ಬದುಕಿರುವ ನಾವು ಎಲ್ಲರೂ ಕೂಡಾ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕಾದ್ದು ನಾವೆಲ್ಲರೂ ಈ ಲೋಕವನ್ನು ತ್ಯಜಿಸಿದ ಮೇಲೆ ಬಿಟ್ಟು ಹೋಗುವ ಅಂಶಗಳು ಯಾವುದು ಮತ್ತು ಅವುಗಳ ಮೂಲಕ ಉಳಿದ ಜನರು ನಮ್ಮ ಕನಸುಗಳನ್ನು, ದೇಹವನ್ನು, ಕೆಲಸಗಳನ್ನ ನೆನಪಿಸಿಕೊಳ್ಳುವುದಾದರೆ ಅದರ ಸ್ವರೂಪ ಹೇಗಿರುತ್ತದೆ ಎನ್ನುವ ಬಹಳ ಒಂದು ಒಳ್ಳೆಯ ಸಂದೇಶವನ್ನು ಈ ಕಾದಂಬರಿಯ ಮೂಲಕ ಕೊಟ್ಟಿದ್ದಾರೆ. ಇವಿಷ್ಟಲ್ಲದೇ ಕಾರಂತರ ಮಹತ್ವದ ಕೊಡುಗೆ ಯಕ್ಷಗಾನ, ಈ ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಕೃಷ್ಣ ಪಾರಿಜಾತ, ಬಯಲಾಟ, ರಾಧಾನಾಟ ಮೊದಲಾದಂತಹ ಆರೇಳು ಪರಂಪರೆಗಳು ಕರ್ನಾಟಕದಲ್ಲಿ ಇವೆ. ಈ ಇಷ್ಟು ಕಲೆಗಳು ಇವತ್ತು ಬಹಳಷ್ಟು ಹಿಂದಿವೆ ಮತ್ತು ಅಳಿವಿನಂಚಿನಲ್ಲಿವೆ. ಬಹಳ ಕಲೆಗಳು ಉಳಿಯುವ ಯಾವ ಲಕ್ಷಣಗಳೂ ಕೂಡ



ಕಾಣುತ್ತಿಲ್ಲ ಎಂಬ ಕಳಕಳಿ ವ್ಯಕ್ತಪಡಿಸಿದರು.

ಇತ್ತೀಚೆಗೆ ಧಾರವಾಡಕ್ಕೆ ಬಯಲಾಟ ಉತ್ಸವಕ್ಕೆ ಹೋಗಿದ್ದೆ, ಬಯಲಾಟಗಳಲ್ಲಿ ವಿದ್ಯಾವಂತರ ಪ್ರವೇಶವೇ ಆಗಿಲ್ಲ, ಅದಿನ್ನೂ ಹಳ್ಳಿಯವರ ಕೈಯಲ್ಲಿದೆ, ಆ ಹಳ್ಳಿಯವರಿಗೆ ಸ್ಟೇಜ್ ಮೇಲೆ ಹೇಗೆ ನಿಲ್ಲಬೇಕು, ಹೇಗೆ ಹಾಡಬೇಕು, ಮೈಕ್ ಹೇಗೆ ಉಪಯೋಗಿಸಬೇಕು, ಕೋರಿಯೋಗ್ರಫಿ ಎಂದರೆ ಏನು, ಮಾತಿನಲ್ಲಿ ಎಷ್ಟು ವೈವಿಧ್ಯಗಳು ಇರಬೇಕು, ಕೈ-ಕಾಲುಗಳ ಓಡಾಟ ಹೇಗಿರಬೇಕು, ಉಡುಪು ಹೇಗಿರಬೇಕು ಇತ್ಯಾದಿಗಳ ಬಗ್ಗೆ ಒಂದು ಸೂಕ್ತವಾದ ಪರಿಕಲ್ಪನೆ ಇಲ್ಲ, ಸುಮಾರು 100 ವರ್ಷ ಹಿಂದಿದ್ದಾರೆ. ಇಂತಹ ಸಂದರ್ಭದಲ್ಲಿ ಯಕ್ಷಗಾನಕ್ಕೆ ಅಂತರರಾಷ್ಟ್ರೀಯ ಮಹತ್ವವನ್ನು ತಂದುಕೊಡುವುದಕ್ಕೆ ಶಿವರಾಮ ಕಾರಂತರಿಗೆ ಸಾಧ್ಯವಾಯಿತಲ್ಲ. ಇಂದು ಕರ್ನಾಟಕದಲ್ಲಿ ಅತ್ಯಂತ ವೈಬ್ರೆಂಟ್ ಆಗಿ ಉಳಿದಿರುವ ಕಲೆಗಳಲ್ಲಿ ಯಕ್ಷಗಾನ ಕೂಡ ಒಂದು. ಆ ಕಲಾವಿದರು ಯಾವುದೇ ಬೌದ್ಧಿಕತೆಗೆ ಸವಾಲಾಗಿ ಬೆಳೆದಿದ್ದಾರೆ, ವೇಷ-ಭೂಷಣಗಳು ಬಹಳ ಅದ್ಭುತವಾಗಿವೆ, ಶಿವರಾಮ ಕಾರಂತರು ಇವುಗಳನ್ನು ಪರಿಷ್ಕರಿಸಿ, ವೇಷಭೂಷಣಗಳನ್ನು ಸರಿಮಾಡಿ ರಷ್ಯಾ, ಜರ್ಮನಿ, ಅಮೇರಿಕಾ, ಇಂಡೋನೇಷಿಯಾ, ಜಪಾನ್ ಮೊದಲಾದಂತಹ ದೇಶಗಳಿಗೆ ಕೊಂಡುಹೋಗಿ ಕರಾವಳಿ ಕರ್ನಾಟಕದ ಒಂದು ಸಣ್ಣ ಕಲೆಯನ್ನು ಜಗತ್ತಿನ ಮೂಲೆ-ಮೂಲೆಗಳಿಗೆ ಮುಟ್ಟಿಸಿದಂತಹ ಬಹಳ ದೊಡ್ಡ ಕೆಲಸಗಳನ್ನು ಮಾಡಿದ್ದರು ಎಂದು ಹೇಳಿದರು.

ಅವರು ನನಗೆ ವೈಯುಕ್ತಿವಾಗಿ ತುಂಬಾ ಪರಿಚಯವಿದ್ದರು. ಸುಮಾರು 15 ವರ್ಷಗಳ ಕಾಲ ಶಿವರಾಮ ಕಾರಂತರು-ನಾವು ಆಗಾಗ ಭೇಟಿ ಮಾಡುತ್ತಿದ್ದೆವು, ಚರ್ಚೆ ಮಾಡುತ್ತಿದ್ದೆವು, ಅವರು ನನಗೆ ಮಾರ್ಗದರ್ಶನ ಮಾಡುತ್ತಿದ್ದರು. ನನಗೆ ಅವರ ವೈಚಾರಿಕತೆ ಬಹಳ ಇಷ್ಟ. ಏಕೆಂದರೆ ಅವರು ಮುಖ್ಯತಃ ದೇವರನ್ನು ನಂಬುತ್ತಿರಲಿಲ್ಲ, ದೇವರು ಎಂದರೆ ಯಾರು, ರವಿವರ್ಮ ಮಾಡಿದ ಕ್ಯಾಲೆಂಡರ್‌ನ ದೇವರಾ? ಅದನ್ನು ಬಿಟ್ಟರೆ ನೀನು ಬೇರೆ ಯಾವ ದೇವರನ್ನು ನೋಡಿದ್ದೀಯಾ ಎಂದು ನಮಗೆಲ್ಲಾ ತಮಾಷೆ ಮಾಡುತ್ತಿದ್ದರು. ಕಾರ್ಯ-ಕಾರಣ ಸಂಬಂಧ ಎಂದು ನಾವು ಏನು ಹೇಳುತ್ತೇವೆ ಅದರ ಮೇಲೆ ನಂಬಿಕೆ ಇತ್ತು ಅವರಿಗೆ, ಹೀಗಾಗಿ ಒಂದು ಸಣ್ಣ ಸಮಾಜಕ್ಕೆ ತೊಂದರೆ ಕೊಡದ ನಾಸ್ತಿಕತೆ, ವೈಚಾರಿಕತೆ, ಭಾಷೆ undefined ಆಗಿ ಸೃಷ್ಟಿಸಿದ ನಾನು ಹೇಳಿದ ನಾಲ್ಕು ಕಾದಂಬರಿಗಳಲ್ಲದೇ ಉಳಿದ 40 ಕಾದಂಬರಿಗಳು, ಸಂಗೀತ ನಾಟಕಗಳು, ಪ್ರಬಂಧಗಳು ಇವೆಲ್ಲವುಗಳಿಂದಾಗಿ ಶಿವರಾಮ ಕಾರಂತರು 20ನೇ ಶತಮಾನದ ಬಹಳ ದೊಡ್ಡ ಶಕ್ತಿಯಾಗಿ ನನಗೆ ಕಾಣುತ್ತಾರೆ, ನಮಗೆ ತಾಳ್ಮೆ ಇದ್ದರೆ, ಓದುವಷ್ಟು ಸಮಯವಿದ್ದರೆ 21ನೇ ಶತಮಾನದ ಎರಡನೇ ದಶಕದ ಮಧ್ಯಭಾಗದಲ್ಲಿರುವ ನಾವು ಕಾರಂತರನ್ನು ಮತ್ತೆ ಓದಬೇಕು, ನೆನಪಿಸಿಕೊಳ್ಳಬೇಕು, ಭವಿಷ್ಯಕ್ಕೆ ಬೇಕಾದಂತಹ ಪ್ರೇರಣೆಯನ್ನು ನಾವು ಪಡೆದುಕೊಳ್ಳಬೇಕು ಎಂದು ಹೇಳುತ್ತಾ ಇಂದು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿ ಡಾ. ಬಿಳಿಮಲೆ ತಮ್ಮ ವಿಷಯ ಮಂಡನೆಯನ್ನು ಮುಗಿಸಿದರು.

ಶ್ರೀಮತಿ ಪೂಜಾ ಪಿ. ರಾವ್ ಅವರಿಗೆ ಕೃತಜ್ಞತೆ ಅರ್ಪಿಸುತ್ತಾ-ಶಿಕ್ಷಣ ಒಬ್ಬ ವ್ಯಕ್ತಿಯನ್ನು ಸಮಗ್ರವಾಗಿ ಬೆಳೆಸುತ್ತದೆ ಎಂಬ ಮಾತುಗಳನ್ನ ನಾವೆಲ್ಲರೂ ಕೇಳಿದ್ದೇವೆ, ಈ ವಾಕ್ಯವನ್ನು ಇಲ್ಲಿ ಹೇಳುವ ಉದ್ದೇಶ ಡಾ. ಬಿಳಿಮಲೆಯವರು ತಾವೇ ಒಂದು ಸಂದರ್ಭದಲ್ಲಿ ಹೇಳಿದ ಹಾಗೆ ಅವರ ಜಾತಕದಲ್ಲಿ ವಿದ್ಯೆಯ



ಫಲವಿರಲಿಲ್ಲವಂತೆ, ಹಾಗಂತ ಅವರು ಜಾತಕವನ್ನು ನಂಬಿ ವಿದ್ಯಾಭ್ಯಾಸವನ್ನು ಮಾಡದೇ ಹೋಗಿದ್ದರೆ ಸಾಹಿತ್ಯ ಲೋಕಕ್ಕೆ ಒಂದು ದೊಡ್ಡ ನಷ್ಟವೇ ಆಗುತ್ತಿತ್ತು ಎಂದು ಹೇಳಬಹುದು. ಅವರು ತಮ್ಮ ಹಣೇ ಬರಹವನ್ನು ತಾವೇ ಬರೆದರು, ಇಂದು ಕನ್ನಡ ನಾಡೇ ಮೆಚ್ಚುವಂತಹ ಜಾನಪದ ವಿದ್ವಾಂಸರಾಗಿ, ಸಾಹಿತಿಗಳಾಗಿ, ಪ್ರಸ್ತುತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಎಲ್ಲ ಕನ್ನಡಿಗರಿಗೆ ಹೆಮ್ಮೆಯನ್ನು ಮೂಡಿಸಿರುವ ಒಬ್ಬ ಉನ್ನತ ವ್ಯಕ್ತಿ ಇಂದಿನ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಶಿವರಾಮ ಕಾರಂತರ ಕುರಿತು ವಿಚಾರಗಳನ್ನು ಹಂಚಿಕೊಂಡಿದ್ದಾರೆ, ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಅನಂತರ, ಡಾ. ಚಂದ್ರಶೇಖರ ಕಂಬಾರ ಅವರು ರಚಿಸಿದಂತಹ "ಕಾಡು ಕುದುರೆ ಓಡಿ ಬಂದಿತ್ತಾ" ಹಾಡನ್ನು ಶ್ರೀಮತಿ ವೈಜಯಂತಿ ಗಿರೀಶ್ ಮತ್ತು ತಂಡದವರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು. ಈ ಹಾಡನ್ನು ಶಿವಮೊಗ್ಗ ಸುಬ್ಬಣ್ಣನವರು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಕಾರ್ಯಕ್ರಮದಲ್ಲಿ ಹಾಡಿ ನಮ್ಮನ್ನು ಮಂತ್ರಮುಗ್ಧರನ್ನಾಗಿಸಿದ್ದನ್ನು ಹಾಗೂ ಅವರಿಗೆ ಇದೇ ಹಾಡಿಗೆ 1978ರಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಬಂದಿರುವುದನ್ನು ಶ್ರೀಮತಿ ಪೂಜಾ ರಾವ್ ಅವರು ಸಭೆಗೆ ತಿಳಿಸಿದರು.

ಕಾರ್ಯಕ್ರಮದ ಸಂಯೋಜಕರಾದ ಶ್ರೀ ಅರುಣ್ ಅವರು ಡಾ. ಶಿವರಾಮ ಕಾರಂತ ಅವರ ಕುರಿತು ಮಾತನಾಡಲು ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಡಾ. ಮೇಟಿ ಮಲ್ಲಿಕಾರ್ಜುನ, ಪ್ರಾಧ್ಯಾಪಕರು, ಸಹ್ಯಾದ್ರಿ ಆರ್ಟ್ಸ್ ಕಾಲೇಜು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಅವರನ್ನು ತಮ್ಮ ವಿಚಾರ ಮಂಡನೆಯನ್ನು ಮಾಡಬೇಕೆಂದು ಕೋರಿದರು. ಅವರ ಮಾತಿನ ಮುಂಚೆ ಅವರ ಪರಿಚಯವನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೋಟ್ ಅವರು ಮಾಡಿಕೊಟ್ಟರು.

ನಂತರ ಡಾ. ಮೇಟಿ ಮಲ್ಲಿಕಾರ್ಜುನ ಅವರು ಈ ಒಂದು ಸಾಹಿತ್ಯ ಕಾರ್ಯಕ್ರಮದಲ್ಲಿ ಡಾ. ಶಿವರಾಮ ಕಾರಂತರ ಕುರಿತಾಗಿ ಮಾತನಾಡಲಿಕ್ಕೆ ಆಹ್ವಾನಿಸಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತ ಸುಮಾರು ಒಂದು ಶತಮಾನ (95 ವರ್ಷ) ಕಾಲ ಬದುಕಿದ ಶಿವರಾಮ ಕಾರಂತನ್ನು ಕುರಿತು ಮಾತನಾಡುವುದು ಒಂದು ಸವಾಲಿನ ಕೆಲಸ. ಇಡೀ 20ನೇ ಶತಮಾನವನ್ನು ನೇರವಾಗಿ ಅನುಭವಿಸಿದವರು ಅಥವಾ ಆ ಪರಿಸರದಲ್ಲಿ ಬಾಳಿ ಬದುಕಿದ ಅವರ ಕುರಿತಾಗಿ ಮಾತನಾಡುವುದೆಂದರೆ ಇಡೀ 20ನೇ ಶತಮಾನವನ್ನು ಕುರಿತು ಅರ್ಥೈಸುವುದು ಎಂದು ಕೂಡಾ ಆಗುತ್ತದೆ. ಅಂದರೆ ಇಲ್ಲಿ ಶಿವರಾಮ ಕಾರಂತರು 20ನೇ ಶತಮಾನದ ದಾರ್ಶನಿಕ ರೂಪವಾಗಿ ಸಿಗುತ್ತಾರೆ. ಆದರೆ ಇಡೀ ಶತಮಾನದಲ್ಲಿ ಏನು ನಡೆಯಿತು, ಅದು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ನಡೆದಿರುವಂತಹ ಎಲ್ಲ ಸಂಗತಿಗಳನ್ನು ಬಹುತೇಕವಾಗಿ ಅವರು ತಮ್ಮ ವಿಚಾರಗಳಲ್ಲಿ ಮತ್ತು ಚಿಂತನೆಗಳಲ್ಲಿ ನಮಗೆ ಕಟ್ಟಿಕೊಟ್ಟಿದ್ದಾರೆ. ಅವರು ಒಬ್ಬ ಸಾಹಿತಿ ಮಾತ್ರವಲ್ಲ, ಎಡಪಂಥೀಯರು, ಚಿಂತಕರು, ಶಿಕ್ಷಣ ತಜ್ಞ, ಹಾಗೂ ಶ್ರೇಷ್ಠ ಕಲಾವಿದರೂ ಕೂಡಾ ಆಗಿದ್ದರು. ಅವರ ಬಹುಮುಖ ವ್ಯಕ್ತಿತ್ವವನ್ನು ಕುರಿತು ಮಾತನಾಡಬೇಕು. ಆ ಬಹುಮುಖ ವ್ಯಕ್ತಿತ್ವದಲ್ಲಿ ಶಿಕ್ಷಣ, ರಂಗಭೂಮಿ, ಪರಿಸರ, ಸಾಂಸ್ಕೃತಿಕ ಜಾಗೃತಿಗಳನ್ನು ಕುರಿತಂತೆ ಚಿಂತನೆಗಳು ಮುಂತಾದವು ಬರುತ್ತವೆ, ಈ ಎಲ್ಲಾ ಸಂಗತಿಗಳಿಗೆ ಅವರು ಅಪಾರವಾದಂತಹ ಒಂದು ಕೊಡುಗೆಯನ್ನು ಕೊಟ್ಟಿದ್ದಾರೆ.

ಈ ಕಾರ್ಯಕ್ರಮದಲ್ಲಿನ ಅಲ್ಪ ಸಮಯದಲ್ಲಿ ಅವರ ಮುಖ್ಯವಾದಂತಹ ಆಲೋಚನೆಗಳು ಏನು ಮತ್ತು ಅವರು ಕರ್ನಾಟಕಕ್ಕೆ ಅಥವಾ ಭಾರತದ ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆ ಕ್ಷೇತ್ರಕ್ಕೆ ಏನು ಕೊಡುಗೆ ನೀಡಿದರು, ಆ ಕೊಡುಗೆಗಳು ಇವತ್ತು ಭಾರತದ ಸಂದರ್ಭದಲ್ಲಿ ಎಷ್ಟು ಮುಖ್ಯವಾಗಿದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಕಾರಂತರು ತಮ್ಮ ಸಾಹಿತ್ಯಿಕ ಕೃತಿಗಳಲ್ಲಿ ಹಲವಾರು ಜೀವನದ ಸಂಗತಿಗಳನ್ನು ಬಿತ್ತಿದ್ದಾರೆ ಮತ್ತು ಅವುಗಳ ಬಗೆಗೆ ಬಹಳ ಅರ್ಥಪೂರ್ಣವಾದಂತಹ ನಿರೂಪಣೆಯನ್ನು ತಂದಿದ್ದಾರೆ. ಅವರ 'ಮರಳಿ ಮಣ್ಣಿಗೆ', 'ಚೋಮನ ದುಡಿ', 'ಮೂಕಜ್ಜಿಯ ಕನಸುಗಳು' ಇರಬಹುದು, ಇವು ಬಹಳ ಮುಖ್ಯವಾದ ಕಾದಂಬರಿಗಳು, ಒಟ್ಟು 47 ಕಾದಂಬರಿಗಳು, 19 ನಾಟಕಗಳು ಮತ್ತು ವಿಜ್ಞಾನ ಪ್ರಪಂಚದ ಬಗ್ಗೆ ಬರೆದಿದ್ದಾರೆ. ಯಕ್ಷಗಾನದ ಕುರಿತು ಚರ್ಚೆ ಮಾಡಿದ್ದಾರೆ, ಪರಿಸರದ ಸಂರಕ್ಷಣೆಯ ಕುರಿತೂ ಮಾತನಾಡಿದ್ದಾರೆ, ಶಿಕ್ಷಣದ ಕುರಿತಾಗಿ ಸ್ವತಃ ಬಾಲವನ ಎಂಬ ಸಂಸ್ಥೆಯನ್ನು ಕಟ್ಟಿ ಆ ಮೂಲಕ ಗ್ರಾಮೀಣ ಮಕ್ಕಳಲ್ಲಿ ಸೃಜನ ಶೀಲತೆಯನ್ನು ಮತ್ತು ಒಂದು ಸಬಲೀಕರಣದ ಆಯಾಮವನ್ನು ತಂದಿದ್ದಾರೆ ಎಂದು ತಿಳಿಸಿದರು.

ಒಟ್ಟಾರೆಯಾಗಿ ಕಾರಂತರು ಎಂದು ಹೇಳಿದರೆ ಒಂದು ಶತಮಾನದ ಆಲೋಚನೆಯನ್ನು, ಒಂದು ಶತಮಾನದ ಜನಜೀವನದ ಬದುಕು ಮತ್ತು ಒಂದು ಶತಮಾನದಲ್ಲಿ ನಡೆದಿರುವಂತಹ ಕಲೆ,

ಸಾಹಿತ್ಯ ಸಂಸ್ಕೃತಿ, ಪರಿಸರ, ಶಿಕ್ಷಣಕ್ಕೆ ಸಂಬಂಧಪಟ್ಟಂತಹ ಒಂದು ದರ್ಶನವಾಗಿ ಅವರು ಕಾಣಿಸುತ್ತಿದ್ದಾರೆ.

ಅವರ ಕೆಲವು ಸಂಗತಿಗಳನ್ನು ನಾವು ಸಾಹಿತ್ಯಿಕವಾಗಿ ಮತ್ತು ಅವರ ವೈಜ್ಞಾನಿಕ ಚಿಂತನೆಗಳನ್ನು ಕುರಿತು ಒಟ್ಟಾರೆಯಾಗಿ ಅವರ ನೋಟ ಕ್ರಮವನ್ನು ಚಿಂತನೆ ಮತ್ತು ವಿಮರ್ಶೆ ಮಾಡಬಹುದು. ಕಾರಂತರ ಸಾಮಾಜಿಕ ಹೊಣೆಗಾರಿಕೆ ಅವರನ್ನು ಕೇವಲ ಒಬ್ಬ ಸಾಹಿತಿಯಾಗಿ ಮಾತ್ರವಲ್ಲದೇ ಸಾಮಾಜಿಕ ಸುಧಾರಕನಾಗಿ ಮತ್ತು ಕಾರ್ಯಕರ್ತನಾಗಿ ಗುರುತಿಸಿದೆ. ಹಾಗಾಗಿ ಅವರ ಸಾಮಾಜಿಕ ಕಾರ್ಯಗಳು, ಶಿಕ್ಷಣ, ಪರಿಸರ ಮತ್ತು ಸಂರಕ್ಷಣೆ ಮತ್ತು ಸಾಂಸ್ಕೃತಿಕ ಪ್ರಜ್ಞೆ ಬಗ್ಗೆ ನಮ್ಮನ್ನು ಹೆಚ್ಚು ಉತ್ತೇಜಿಸುತ್ತದೆ. ಕಾರಂತರ ಈ ಸಾಮಾಜಿಕ ಹೊಣೆಗಾರಿಕೆ ಅವರ ಬರವಣಿಗೆಯಲ್ಲಿ ಅದು ಹೆಚ್ಚು ಪ್ರಕಟವಾಗಿದೆ, ಅವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು ಇರಬಹುದು, ಸಮಾಜದ ಅಂಚಿನಲ್ಲಿರುವ ಸಮುದಾಯಗಳಿರಬಹುದು, ಪರಿಸರಕ್ಕೆ ಸಂಬಂಧಪಟ್ಟಂತಹ ತಿಳುವಳಿಕೆ ಇರಬಹುದು, ಅದನ್ನು ಬಹಳ ಪ್ರಕರವಾಗಿ ತಮ್ಮ ಚಿಂತನೆಗಳಲ್ಲಿ, ನಿರೂಪಣೆಗಳಲ್ಲಿ ಅವರು ಪ್ರಕಟಪಡಿಸಿದ್ದಾರೆ. ಅವರು ಗಾಂಧೀಜಿ ಹಾಗೂ ಲೋಹಿಯಾ ಅವರಿಂದ ಪ್ರೇರಣೆಯನ್ನು ಪಡೆದರು, ಗಾಂಧೀಜಿಯ ಚಿಂತನೆಗಳನ್ನು, ತತ್ವಗಳನ್ನು ತಮ್ಮ ಬದುಕಿನಲ್ಲಿ ಮತ್ತು ತಮ್ಮ ಸಾಹಿತ್ಯದ ನಿರೂಪಣೆಗಳಲ್ಲಿ ಅಳವಡಿಸಿಕೊಂಡು ಅನುಸರಿಸಿಕೊಂಡು ಬಂದಿದ್ದರು. ಅಂದರೆ ಅವರು ಒಬ್ಬ ಗಾಂಧೀವಾದಿ ಆಗುವುದರ ಕಾರಂತರು ತಾವು ಬದುಕಿದ ಒಂದು ಕಾಲಘಟ್ಟಕ್ಕೆ ಮಾತ್ರ ಸೀಮಿತವಾಗದೆ ಅದನ್ನು ಮೀರಿ ಆ ಕಾಲಘಟ್ಟದ ಹೊರಗಿನ ಲೋಕದ ತಿಳುವಳಿಕೆಯನ್ನು ಕಂಡುಕೊಳ್ಳುವಲ್ಲಿ ಅವರ ಒಂದು ಮಹತ್ವಾಕಾಂಕ್ಷೆ ಬಹಳ ಮುಖ್ಯವಾಗಿದೆ. ಹಾಗಾಗಿ ಅವರು ಕರಾವಳಿಯ ಕರ್ನಾಟಕದಲ್ಲಿ ಬದುಕಿದ್ದರೂ ಸಹಾ ಇಡೀ ಭಾರತದ ಬೇರೆ ಬೇರೆ ಪ್ರದೇಶಕ್ಕೆ ಮತ್ತು ಬೇರೆ ಬೇರೆ ವಲಯಕ್ಕೆ ಅವರ ಚಿಂತನೆಗಳು, ಕಾದಂಬರಿಗಳು ಮತ್ತು ಒಟ್ಟಾರೆಯಾದ ಆಲೋಚನಾ ಕ್ರಮ ಬಹಳ ಮುಖ್ಯವಾಗಿ ನಮಗೆ ಕಂಡು ಬರುತ್ತವೆ. ಪರಿಸರದ ಸಂರಕ್ಷಣೆ ಬಗ್ಗೆ ಅವರ ಬರಹದ ನಿದರ್ಶನವಾಗಿ 'ಬೆಟ್ಟದ ಜೀವ' ಕಾದಂಬರಿಯಲ್ಲಿ ನಾವು ನೋಡಬಹುದು ಎಂದರು.

ದಲಿತರ ಬಗೆಗೆ ಅವರ ಚಿಂತನೆಗಳು, ದಲಿತರ ಸಬಲೀಕರಣದ ಬಗ್ಗೆ ಯೋಚನೆಗಳು ಮತ್ತು ದಲಿತರನ್ನು ಕುರಿತು ಅವರ ಚರ್ಚೆಗಳನ್ನು 'ಚೋಮನ ದುಡಿ' ಕಾದಂಬರಿಯ ಮೂಲಕ ಅರ್ಥಮಾಡಿಕೊಳ್ಳಬಹುದು. ಅವರ 'ಚಿಗುರಿದ ಕನಸು' ಕೂಡಾ ಮನುಷ್ಯ ಮತ್ತು ಪರಿಸರದ ನಡುವಿನ ಸಂಬಂಧವನ್ನು ಆಳವಾಗಿ ನಮಗೆ ತಿಳಿಸುತ್ತದೆ. ಅಂದರೆ ಪರಿಸರ ಮತ್ತು ಮನುಷ್ಯನಿಗೆ ಇರಬಹುದಾದಂತಹ ನೆಂಟಸ್ತಿಕೆ, ಪರಿಸರ ಮತ್ತು ಒಟ್ಟು ಮನುಷ್ಯ ಸಂಬಂಧದ ಬೇರೆ ಬೇರೆ ಸಂಹಿತೆಗಳನ್ನು ಕಾರಂತರು ನಮಗೆ ಬಹಳ ಕ್ರಿಯಾಶೀಲವಾಗಿ ಮತ್ತು ಸೃಜನಶೀಲವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಅವರ ಪರಿಸರ ಜಾಗೃತಿ, ಪರಿಸರದ ಕುರಿತ ಯೋಚನೆ, ಚಿಂತನೆಗಳು, ಅವರ ಸೃಜನಶೀಲ ಕ್ರಿಯಾ ವರ್ತುಲ ಹಾಗೂ ನಿರೂಪಣೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಬಹಳ ತೀವ್ರ ಕಾಳಜಿಯಾಗಿ ಹೊರಹೊಮ್ಮಿವೆ. ಅಂದರೆ ಶಿವರಾಮ ಕಾರಂತರನ್ನು ಒಬ್ಬ ನಾಟಕಕಾರರನ್ನಾಗಿ, ಕಾದಂಬರಿಕಾರನನ್ನಾಗಿ, ಮಕ್ಕಳ ಸಾಹಿತ್ಯದ ಪ್ರತೀಕವಾಗಿಯೂ ನೋಡಲಿಕ್ಕೆ ಸಾಧ್ಯವಾಗಿದೆ. ವಿಜ್ಞಾನದ ಮನೋಧರ್ಮ, ವೈಚಾರಿಕ ಮನೋಧರ್ಮ ಹಾಗೂ ಸಾಹಿತ್ಯಕ ಮನೋಧರ್ಮ ಅವರಲ್ಲಿತ್ತು, ಅವರ ಇಡೀ ಗ್ರಹಿಕೆ ಎನ್ನುವುದು ಅದು ಹಲವು ಆಯಾಮಗಳಿಂದ ಕೂಡಿರುವಂತಹ ಒಂದು ಸುಂದರವಾದ ಮನಸ್ಸು ಅದು ಆಗಿತ್ತು. ಕಾರಂತರು ಸಮಾಜದ ಸುಧಾರಣೆಗೆ ಬೇಕಾದಂತಹ ಹಲವಾರು ಸಂಗತಿಗಳನ್ನು, ಸಂಹಿತೆಗಳನ್ನು ಸೂಚ್ಯವಾಗಿ ಮತ್ತು ಬಹಳ ಅಪ್ಯಾಯಮಾನವಾಗಿ ತಮ್ಮ ಮೂಕಜ್ಜಿಯ ಕನಸುಗಳು, ಮರಳಿ ಮಣ್ಣಿಗೆ ಮುಂತಾದ ಕಾದಂಬರಿಗಳಲ್ಲಿ ನಿರೂಪಿಸಿದ್ದಾರೆ. ಕಾರಂತರ ಒಟ್ಟು ಗ್ರಹಿಕೆಯೊಳಗಡೆ ಯಾವುದೇ ಒಂದು ವರ್ಗದ ಸಮುದಾಯ ಇರಲಿಲ್ಲ, ಅಲ್ಲಿ ಹೆಚ್ಚು ಸಾಮಾಜಿಕ ನ್ಯಾಯಕ್ಕೆ ಯಾರನ್ನು ಮುನ್ನೆಲೆಗೆ ತರಬೇಕು, ಸಾಮಾಜಿಕ ನ್ಯಾಯ ಎಂದರೆ ಏನು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಂತಹ ಕಾರಂತರು ಗಾಂಧಿಯ ತಾತ್ವಿಕತೆಯನ್ನು ಮಾತ್ರ ಅನುಸರಿಸದೇ ಅದರ ಜೊತೆಗೆ ಲೋಹಿಯಾ ಅವರ ಚಿಂತನೆಗಳನ್ನು ಕೂಡಾ ಅಳವಡಿಸಿಕೊಂಡಿದ್ದರು. ಹಾಗಾಗಿ ತೇಜಸ್ವಿಯವರು ತಮ್ಮ ಹೊಸ ದಿಗಂತದೆಡೆಗೆ ಎನ್ನುವ ಅಬಚೂರಿನ ಪೋಸ್ಟ್ ಆಫೀಸಿನ ಕಥಾ ಸಂಕಲನದಲ್ಲಿ ಅವರಿಗೆ ಅತ್ಯಂತ ಪ್ರಭಾವ ಬೀರಿದ ಕಾರಂತರು ಕೈಗೊಳ್ಳುತ್ತಿದ್ದಂತಹ ಅವರ ಕಲಾ ಜಗತ್ತಿನಲ್ಲಿ, ಸಾಹಿತ್ಯದ ಜಗತ್ತಿನಲ್ಲಿ, ಶಿಕ್ಷಣದ ಜಗತ್ತಿನಲ್ಲಿ ಕೈಗೊಳ್ಳುತ್ತಿದ್ದಂತಹ ಪ್ರಾಯೋಗಿಕತೆ ಎಷ್ಟೊಂದು ಮುಖ್ಯವಾಗಿತ್ತು, ಮಹತ್ವದ್ದು ಎನ್ನುವುದನ್ನು ತಿಳಿಸಿದ್ದಾರೆ. ಅಂದರೆ ಅವರಿಗೆ ಕುವೆಂಪು ಅವರ ಕಲಾಸೃಷ್ಟಿ ಮತ್ತು ಕಾರಂತರ ಪ್ರಾಯೋಗಿಕತೆ ಮತ್ತು ಲೋಹಿಯಾ ಅವರ ವೈಚಾರಿಕತೆ ಅದು ಹೇಗೆ ಒಂದು ಸೃಜನಶೀಲ ಅಭಿವ್ಯಕ್ತಿ ಮತ್ತು ಒಂದು ಆಲೋಚನಾ ಕ್ರಮವನ್ನು ರೂಪಿಸುವುದಕ್ಕೆ ಮುಖ್ಯ ಆಗುತ್ತದೆ ಎನ್ನುವುದನ್ನು ತೇಜಸ್ವಿಯವರು ಸೂಚ್ಯವಾಗಿ ಹೇಳಿದ್ದಾರೆ ಎಂದರು.

ಅದೇ ರೀತಿಯಲ್ಲಿ ಕಾರಂತರು ಕೂಡಾ ಗಾಂಧೀಜಿ ಮತ್ತು ಲೋಹಿಯಾ ಅವರ ಜೊತೆಗೆ ಕರಾವಳಿ ಪ್ರದೇಶದ ಸಾಂಪ್ರದಾಯಕ ಕಲಾ ಪ್ರಕಾರಗಳು ಮತ್ತು ರಂಗಭೂಮಿಯ ಬೇರೆ ಬೇರೆ ಆಯಾಮಗಳಿಗೆ ಹೊಸ ಸ್ಪರ್ಶವನ್ನು ಕೊಟ್ಟು ಅದಕ್ಕೆ ಆಧುನಿಕವಾದ ಒಂದು ನೆಲೆಗಳನ್ನು ಮತ್ತು ಒಂದು ವಿಶೇಷವಾದ ಆಯಾಮವನ್ನು ಕೊಟ್ಟರು. ಆ ಕಾರಣದಿಂದ ಗ್ರಾಮೀಣ ಜನರಿಗೆ ಒಂದು ಸಬಲೀಕರಣದ ಕಲ್ಪನೆಯನ್ನು ಕಲ್ಪಿಸುವುದರಲ್ಲಿ ಕಾರಂತರು ಬಹಳ ದೊಡ್ಡ ಕೆಲಸವನ್ನು ಮಾಡಿದರು. ಕಾರಂತರ ಸಾಮಾಜಿಕ ಹೊಣೆಗಾರಿಕೆ ಶಿಕ್ಷಣಕ್ಕೆ, ಪರಿಸರ ಸಂರಕ್ಷಣೆಗೆ, ಸಾಂಸ್ಕೃತಿಕ ಸುಧಾರಣೆಯ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ್ದು. ಆ ಒಂದು ಹಿನ್ನೆಲೆಯಲ್ಲಿಯೇ ಅವರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ಮತ್ತು ಅಂಚಿನ ವಲಯದ ಪಾತ್ರಗಳನ್ನು ಪರಿಶೀಲಿಸಿ ನೋಡಿದರೆ ಕಾರಂತರ ಒಟ್ಟು ಬದುಕಿನ ಒಂದು ದೃಷ್ಟಿಕೋನ ಮತ್ತು ದಾರ್ಶನಿಕತೆ ಏನಾಗಿತ್ತು ಎನ್ನುವುದು ನಮಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಅಂದರೆ ಕಾರಂತರು ಕೇವಲ ಸಾಹಿತಿಯಾಗಿ ಇರಲಿಲ್ಲ, ಕೇವಲ ಆಕ್ಟಿವಿಸ್ಟ್ ಆಗಿರಲಿಲ್ಲ ಅಥವಾ ಕೇವಲ ವಿಜ್ಞಾನ ಪ್ರಪಂಚವನ್ನು ರೂಪಿಸಿದಂತಹ ವೈಜ್ಞಾನಿಕ ಮನೋಭಾವವುಳ್ಳ ವ್ಯಕ್ತಿ ಮಾತ್ರ ಆಗಿರಲಿಲ್ಲ, ಈ ಬದುಕಿಗೆ ಬೇಕಾಗಿರುವಂತಹ ಬದುಕಿನ ಬಹುತೇಕ ವಲಯಗಳಿಗೆ ಬೇಕಾಗಿರುವಂತಹ ತಿಳುವಳಿಕೆಯನ್ನ, ಅನುಭವವನ್ನ ವ್ಯಾಖ್ಯಾನ ಮಾಡುವ ನಿರ್ವಹಿಸುವಂತಹ ಒಂದು ದಾರ್ಶನಿಕತೆ ಕಾರಂತರಲ್ಲಿ ಅಡಕವಾಗಿತ್ತು. ಹಾಗಾಗಿ ಅವರು 20ನೇ ಶತಮಾನವನ್ನು ಪ್ರತಿನಿಧಿಸುವಂತಹ ಬಹುಮುಖ್ಯ ದಾರ್ಶನಿಕರಲ್ಲಿ ಅವರೂ ಕೂಡಾ ಒಬ್ಬರು ಎನ್ನುವುದನ್ನು ಮನಗಾಣಬೇಕಾದಂತಹ ಸಂಗತಿ ಇಲ್ಲಿದೆ ಎಂದರು.

ಕಾರಂತರ ಬರಹ ಮತ್ತು ಬದುಕುಗಳ ನಡುವೆ ಅಂತರವಿರಲಿಲ್ಲ, ಅಂದರೆ ಅವರು ಯಾವುದನ್ನು ಬದುಕಿದರೋ ಅದನ್ನು ತಮ್ಮ ಚಿಂತನೆಯಲ್ಲಿ, ಸೃಜನಶೀಲ ನಿರೂಪಣೆಗಳಲ್ಲಿ ವ್ಯಕ್ತ ಮಾಡಿದರು. ಉದಾಹರಣೆಗೆ ಅವರು ಜಾತೀಯತೆಯ ಬಗೆಗಾಗಲೀ, ಕಂದಾಚಾರದ ಬಗೆಗಾಗಲೀ, ಮೂಢನಂಬಿಕೆಗಳ ಬಗೆಗಾಗಲೀ ಅಥವಾ ನಮ್ಮ ಸಮಾಜವನ್ನು ಮತ್ತೆ ಮತ್ತೆ ಭಾದಿಸುತ್ತಿರುವ ಈ ಕೇಡುಗಳನ್ನು ಧಿಕ್ಕರಿಸಿ ಅವರು ಹೇಗೆ ಬದುಕಿದರು ಮತ್ತು ಅದಕ್ಕೆ ಬೇಕಾದಂತಹ ಒಂದು ಮಾರ್ಗ ಯಾವುದು ಎನ್ನುವುದನ್ನು ಅವರ ವಿಚಾರಗಳಲ್ಲಿ ಅಥವಾ ಅವರ ಸೃಜನಶೀಲ ಸಾಹಿತ್ಯದಲ್ಲಿ ತೋರಿಸಿಕೊಟ್ಟಿದ್ದಾರೆ. ಅವರು ಅವತ್ತಿನ ಕಾಲದಲ್ಲಿಯೇ ಅಂದರೆ ಸ್ವಾತಂತ್ರ ಪೂರ್ವದಲ್ಲಿಯೇ ಅಂತರ್ ಜಾತೀಯ ವಿವಾಹವನ್ನು ಆಗುವುದರ ಮೂಲಕ ಮತ್ತು ರಾಜಕೀಯ ದರ್ಪಗಳನ್ನು ವಿರೋಧಿಸುವುದಕ್ಕೆ ಮತ್ತು ರಾಜಕೀಯ ಪ್ರಾಬಲ್ಯವನ್ನು ಹತ್ತಿಕ್ಕುವುದಕ್ಕೆ ಬೇಕಾದಂತಹ ಪ್ರತಿರೋಧವನ್ನು ಕೂಡ ಮಾಡಿದ್ದರು. ಅವರು ಕೇವಲ ಒಂದು ವಿಚಾರಕ್ಕೆ ಅಥವಾ ನಿಲುವಿಗೆ ಮಾತ್ರ ಬದ್ಧರಾಗದೆ ಸಮಾಜಕ್ಕೆ ಯಾವ ಯಾವ ಮೂಲದಿಂದ ಒಳ್ಳೆಯದನ್ನು ಮಾಡಬೇಕು ಮತ್ತು ಸಮಾಜಕ್ಕೆ ಯಾವ ಹಿನ್ನೆಲೆಯಲ್ಲಿ






ಪ್ರೇರಣೆಯಾಗಬೇಕು ಎನ್ನುವುದಕ್ಕೆ ಕಾರಂತರು ಒಳ್ಳೆಯ ನಿದರ್ಶನವಾಗಿದ್ದಾರೆ. ಹಾಗಾಗಿ ಅವರು ತಮಗೆ ನೀಡಿದ ಪದ್ಮಭೂಷಣ ಪ್ರಶಸ್ತಿಯನ್ನು ವಾಪಾಸ್ಸು ಕೊಡುವಂತಹ ಒಂದು ದಿಟ್ಟತನವನ್ನು ತೋರಿದರೂ ಕೂಡಾ ಅದು ಪ್ರತಿರೋಧದ ಒಂದು ಅತ್ಯುತ್ತಮವಾದ ಮಾದರಿಯಾಗಿ ನಮಗೆ ಕಾಣಿಸುತ್ತದೆ. ಅವರ ನಡೆ ಮತ್ತು ನುಡಿಯಲ್ಲಿ ಒಂದೇ ಲಯ ಇತ್ತು. ಅವರು ಏನು ನಡೆದುಕೊಳ್ಳುತ್ತಿದ್ದರೋ ಅದನ್ನು ಹೇಳುತ್ತಿದ್ದರು, ಏನು ಹೇಳುತ್ತಿದ್ದರೋ ಹಾಗೆ ನಡೆದುಕೊಳ್ಳುತ್ತಿದ್ದರು ಎಂದು ತಿಳಿಸಿದರು.

ಕಾರಂತರು ಸಮಾಜಕ್ಕೆ ಏನು ಬೇಕು, ಗ್ರಾಮೀಣ ಪ್ರದೇಶಕ್ಕೆ ಏನು ಬೇಕು, ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಏನು ಬೇಕು, ಪರಿಸರ ರಕ್ಷಣೆಗೆ ಏನು ಮಾಡಬೇಕು, ಶಿಕ್ಷಣವನ್ನು ಸುಧಾರಿಸಬೇಕಾದರೆ ಏನು ಮಾಡಬೇಕು, ಒಂದು ಕಲಾಜಗತ್ತಿನ ಒಂದು ಕಲೆಯನ್ನು ಆಧುನಿಕ ಸಂದರ್ಭಕ್ಕೆ ಮತ್ತು ಆಧುನಿಕ ಬದುಕಿಗೆ ಅದು ಹೇಗೆ ಪ್ರೇರಣೆಯಾಗಬೇಕು ಎನ್ನುವ ನಿಟ್ಟಿನಲ್ಲಿ ಅದನ್ನು ರೂಪಿಸುವುದಕ್ಕೆ ಪೂರಕವಾಗಿ ಅವರು ಬಹಳ ವಿಶೇಷವಾದಂತಹ ಸಂಹಿತೆಗಳನ್ನು ಮಾಡಿದರು. ಉದಾಹರಣೆಗೆ ಕಾರಂತರು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟಿರುವಂತಹ ಅತ್ಯಂತ ಗಮನಾರ್ಹವಾದ ಕೊಡುಗೆ ಯಾವುದು ಎಂದು ಹೇಳಿದರೆ ಅದು ಒಂದು ಪ್ರಾಯೋಗಿಕ ಶಿಕ್ಷಣ ಸಂಸ್ಥೆಯನ್ನಾಗಿ ಅವರು ಬಾಲವನವನ್ನು ರೂಪಿಸಿದರು. ಅವರಿಗೆ ಇರುವ ಶಿಕ್ಷಣದ ಬಗೆಗಿನ ತಿಳುವಳಿಕೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತಹ ಒಂದು ದಾರ್ಶನಿಕತೆಯನ್ನು ಪ್ರತಿಬಿಂಬಿಸುವುದಕ್ಕೆ ಬೇಕಾಗಿರುವಂತಹ ಒಂದು ಮುಖ್ಯ ಕ್ರಿಯೆಯನ್ನು ಅವರ ಬಾಲವನದಲ್ಲಿ ನಾವು ಕಾಣಬಹುದು. ಪಠ್ಯಪುಸ್ತಕಗಳು ನೀಡುವ ಜ್ಞಾನಕ್ಕಿಂತ ಹೆಚ್ಚಾಗಿ ಒಂದು ಸೃಜನಶೀಲತೆ, ಸ್ವತಂತ್ರತೆ ಮತ್ತು ವ್ಯಕ್ತಿಯ ಸಾಮರ್ಥ್ಯವನ್ನು ಬೆಳೆಸುವುದು ಹೇಗೆ ಎನ್ನುವುದಕ್ಕೆ ಬೇಕಾಗಿರುವಂತಹ ಒಂದು ಆಲೋಚನೆಯ ಮೂಲಕ ರೂಪುಗೊಂಡಿರುವ ಈ ಬಾಲವನ ಅತ್ಯಂತ ಮಾದರಿಯಾಗಿರುವಂತಹ ನಿಲುವು ಅದು. ಹಾಗಾಗಿ ಅದರ ಎಷ್ಟೋ ಉದ್ದೇಶಗಳನ್ನು ನಾವು ಇಂದು ವಿಶ್ವವಿದ್ಯಾಲಯ ಮತ್ತು ಕಾಲೇಜಿನಂತಹ ಶಿಕ್ಷಣ ಸಂಸ್ಥೆಗಳಲ್ಲಿ ಅನುಸರಿಸಿದರೆ ನಮ್ಮ ಇವತ್ತಿನ ಯುವಜನತೆಯನ್ನು, ಅವರಲ್ಲಿ ಒಂದು ಸೃಜನಶೀಲತೆಯನ್ನು ತರುವುದಕ್ಕೆ, ಅವರಲ್ಲಿ ಒಂದು ಸ್ವತಂತ್ರ ಚಿಂತನೆಯನ್ನು ತರುವುದಕ್ಕೆ ಮತ್ತು ಅವರ ವೈಯಕ್ತಿಕ ಸಾಮರ್ಥ್ಯವನ್ನು ಬೆಳೆಸುವುದಕ್ಕೆ ಅದು ನಮಗೆ ಒಳ್ಳೆಯ ಪ್ರೇರಣೆಯಾಗಿ ಬರುತ್ತದೆ. ಕಾರಂತರ ಬಾಲವನದಲ್ಲಿ ಯೋಚಿಸಿದಂತಹ ಉದ್ದೇಶಗಳನ್ನ ನಾವು ಇವತ್ತು ಎನ್.ಡಿ.ಪಿ.ಎ, ಎ.ಸಿ.ಪಿ.ಎ. ಈ ತರಹದ ಶಿಕ್ಷಣದ ನೀತಿಯೊಳಗಡೆ ಅವರು ಚಿಂತಿಸಿದ ಈ ಆಲೋಚನ ಕ್ರಮಗಳನ್ನ ಶಿಕ್ಷಣದ ಭಾಗವಾಗಿ ನಾವು ಅನುಸರಿಸಿದರೆ ನಮ್ಮ ಇವತ್ತಿನ ಯುವ ಜನತೆಗೆ ಬೇಕಾಗಿರುವಂತಹ ಒಂದು ವಿಶೇಷವಾದಂತಹ ವ್ಯಕ್ತಿತ್ವವನ್ನು ಕಟ್ಟಿಕೊಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಅವರಲ್ಲಿ ಒಂದು ಕ್ರಿಯೇಟಿವಿಟಿಯನ್ನು, ಸ್ವತಂತ್ರ ಚಿಂತನಾ ಮನೋಭಾವವನ್ನು ಹೇಗೆ ರೂಪಿಸಬೇಕು, ಅವರಲ್ಲಿರುವಂತಹ ಸಾಮರ್ಥ್ಯವನ್ನು ನಾವು ಹೇಗೆ ಕಟ್ಟಿಕೊಡಬೇಕು ಎನ್ನುವುದಕ್ಕೆ ಬೇಕಾಗಿರುವ ಈ ಎಲ್ಲಾ ಸಂಗತಿಗಳು ಕಾರಂತರ ಮೂಲಕ ನಮಗೆ ಲಭ್ಯವಾಗುತ್ತದೆ ಎಂದರು.

ಕಾರಂತರು ಇರಬಹುದು, ಕುವೆಂಪು ಇರಬಹುದು, ಅಂದರೆ 20ನೇ ಶತಮಾನ ಬಹಳ ದೊಡ್ಡ ದೊಡ್ಡ ದಾರ್ಶನಿಕರು, ಚಿಂತಕರು ಮತ್ತು ಬಹುತೇಕವಾಗಿ ಇಂತಹವನ್ನು ಕಂಡಂತಹ ಶತಮಾನ ಅದು. ಗಾಂಧೀಜಿ, ಲೋಹಿಯಾ, ನೆಹರೂ, ಟ್ಯಾಗೋರ್ ಅವರುಗಳು ಇರಬಹುದು. ಹಾಗಾಗಿ ರಾಮಚಂದ್ರ ಗುಹಾ ಅವರು ಕಾರಂತರನ್ನು ಕರ್ನಾಟಕದ ಟ್ಯಾಗೋರ್ ಎಂದು ಕರೆದಿದ್ದಾರೆ ಎಂದರೆ ಟ್ಯಾಗೋರ್ ಅವರು ಕಟ್ಟಿದ ಸಂಸ್ಥೆಗಳು, ಯೋಚಿಸಿದ ಚಿಂತನೆಗಳು ಮತ್ತು ಅವು ಭಾರತಕ್ಕೆ ಮತ್ತು ನಮ್ಮ 21ನೇ ಶತಮಾನದಲ್ಲಿ ಕೂಡಾ ಹೇಗೆ ಅನುಕರಣೀಸುತ್ತಿವೆಯೋ ಅದೇ ರೀತಿಯಲ್ಲಿಯೇ ಕಾರಂತರ ಚಿಂತನೆ, ಅಲೋಚನಾ ಕ್ರಮ ಮತ್ತು ಅವರ ಯಕ್ಷಗಾನ, ರಂಗಭೂಮಿ, ಶಿಕ್ಷಣ, ಪರಿಸರ ಇತ್ಯಾದಿ ಸಂಬಂಧಪಟ್ಟಂತಹ ಈ ಎಲ್ಲ ಸಂಗತಿಗಳನ್ನು ನಾವು ಗಮನಿಸಿದರೆ ಖಂಡಿತವಾಗಿಯೂ ರವೀಂದ್ರನಾಥ ಟ್ಯಾಗೋರ್ ಅವರಿಗಿರುವ ವ್ಯಕ್ತಿತ್ವಕ್ಕೆ ಸರಿಸಮಾನವಾದ ವ್ಯಕ್ತಿತ್ವವನ್ನು ಕಾರಂತರು ಹೊಂದಿದ್ದರು ಎನ್ನುವುದನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಕಾರಂತರು ನಮಗೆ ಇಂದು ಏಕೆ ಮುಖ್ಯವಾಗುತ್ತಿದ್ದಾರೆ ಎಂದರೆ ಅವರು ಕೇವಲ ಸಾಹಿತಿಯಾಗಿ ಅಲ್ಲ, ಒಬ್ಬ ಪರಿಸರ ತಜ್ಞನಾಗಿ, ಶಿಕ್ಷಣ ತಜ್ಞನಾಗಿ, ಸಾಮಾಜಿಕ ಕಾರ್ಯಕರ್ತನಾಗಿ, ಶ್ರೇಷ್ಠ ಕಲಾ ಮೀಮಾಂಸಕನಾಗಿ, ಕಲಾವಿದನಾಗಿ ನಮಗೆ ಕಂಡು ಬರುತ್ತಾರೆ ಎಂದರು.

ಕಾರಂತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿರುವುದು ಕೂಡಾ ಯಕ್ಷಗಾನದ ಬಗೆಗೆ ಬರೆದಿರುವ ಪುಸ್ತಕಕ್ಕೆ, ಅವರ ಸಾಹಿತ್ಯಕ್ಕೆ ಸಿಗಲಿಲ್ಲ. ಕಾರಂತರು ಯಕ್ಷಗಾನವನ್ನು ಕೇವಲ ಒಂದು ಕಲೆ ಮಾತ್ರ ಅಲ್ಲದೇ ಶಿಕ್ಷಣದ ಸಾಧನವಾಗಿಯೂ ಕೂಡಾ ಅದನ್ನು ಬಳಸಿಕೊಂಡರು, ಯಕ್ಷಗಾನದ ಮೂಲಕ ಗ್ರಾಮೀಣ ಜನರಿಗೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ತಿಳುವಳಿಕೆಯನ್ನ ಕೊಡುವುದಕ್ಕೆ ಮತ್ತು ಒಂದು ಜ್ಞಾನವನ್ನು ಒದಗಿಸುವುದಕ್ಕೆ ಈ ಒಂದು ಪ್ರಕಾರವನ್ನು ಅವರು ಬಹಳ ಗಂಭೀರವಾಗಿ ಪರಿಗಣಿಸಿದರು ಮತ್ತು ಅದನ್ನು ಆ ಕಾಲಕ್ಕೆ ಬೇಕಾದ ಹಾಗೆ ಅದಕ್ಕೆ ಒಂದು ಹೊಸ ಆಯಾಮವನ್ನು ಕೂಡಾ ಕೊಟ್ಟರು. ಅದಕ್ಕಾಗಿಯೇ ಅವರು ತರಬೇತಿ ಕೇಂದ್ರಗಳನ್ನು ಕೂಡಾ ನಡೆಸುತ್ತಿದ್ದರು. ತರಬೇತಿಗಳನ್ನು ನೀಡುವಾಗ ಕಲೆಯ ಜೊತೆಗೆ ಶಿಕ್ಷಣದ ಮೌಲ್ಯಗಳನ್ನು ಕೂಡಾ ಅವರು ತಿಳಿಸಿಕೊಡುತ್ತಿದ್ದರು. ಅಂದರೆ ಒಂದು ವ್ಯಕ್ತಿಗೆ ಏಕಕಾಲಕ್ಕೆ ಹಲವು ನೆಲೆಗಳಿಂದ, ಆಯಾಮಗಳಿಂದ, ಮೂಲಗಳಿಂದ ಒಂದು ತಿಳುವಳಿಕೆಯನ್ನು ಅವರು ಒದಗಿಸಿಕೊಡುತ್ತಾರೆ, ಒಂದು ಸಾಮಾಜಿಕ ಗ್ರಹಿಕೆ ಎನ್ನುವುದು ಅದು ಏಕಕಾಲಕ್ಕೆ ಒಂದು ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ರಾಜಕೀಯ ಗ್ರಹಿಕೆಯೂ ಆಗಿರುತ್ತದೆ. ಸಾಹಿತ್ಯವನ್ನು ಅಧ್ಯಯನ ಮಾಡುವ, ಸಾಹಿತ್ಯವನ್ನು ಓದುವ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿಯೇ ಸಮಾಜದ ಬಗೆಗೆ, ರಾಜಕಾರಣದ ಬಗೆಗೆ, ಶಿಕ್ಷಣದ ಬಗೆಗೆ ಮತ್ತು ನಮ್ಮ ಸುತ್ತಮುತ್ತಲಿರುವ ಜನಸಮುದಾಯಗಳ ಬಗೆಗೆ ಗ್ರಹಿಸುವ ಮತ್ತು ಅದನ್ನು ಅರ್ಥೈಸುವ ಒಂದು ಆಲೋಚನೆ ನಮ್ಮಲ್ಲಿ ಹೇಗೆ ನೆಲೆಗೊಳ್ಳಬೇಕು ಎನ್ನುವುದಕ್ಕೆ ಪೂರಕವಾಗಿರುವಂತಹ ಒಂದು ಚಿಂತನಾ ಕ್ರಮವನ್ನು ಕಾರಂತರು ರೂಪಿಸುತ್ತಾ ಬಂದರು. ಹಾಗಾಗಿ ಅವರು ವಿಶೇಷವಾಗಿ ಈ ಎಲ್ಲಾ ಚಟುವಟಿಕೆಗಳನ್ನು ಮಾಡಬೇಕಾಯಿತು. ಒಬ್ಬ ಸಾಹಿತಿಯಾಗಿ ಮಾತ್ರ ಕೆಲಸ ಮಾಡಬೇಕಾಗಿದ್ದರೆ ಕಾದಂಬರಿ ನಾಟಕಗಳನ್ನು ಮಾತ್ರ ಬರೆದುಕೊಂಡು ಇದ್ದುಬಿಡುತ್ತಿದ್ದರು. ಅವರು ತಮ್ಮ ಜೀವಿತಾವಧಿಯಲ್ಲಿ ಮಾಡಿರುವಂತಹ ಕೆಲಸ ಒಂದು ರೀತಿಯಲ್ಲಿ ನೋಡಿದರೆ 200 ರಿಂದ 250 ವರ್ಷಗಳ ಕಾಲ ಒಬ್ಬ ವ್ಯಕ್ತಿ ಮಾಡಬಹುದಾದ ಕೆಲಸವನ್ನು ಕಾರಂತರು ಮಾಡಿದ್ದಾರೆ ಎಂದು ಹೆಮ್ಮೆಯಿಂದ ಹೇಳಿದರು.

ಕಾರಂತರ ಒಟ್ಟು ಕಾರ್ಯಕ್ರಮಗಳು, ಅವರ

ವಿಚಾರಗಳು, ಆಲೋಚನಾ ಕ್ರಮಗಳು, ಸೃಜನಶೀಲತೆ ನಮಗೆ ಒಂದು ಸಾಮಾಜಿಕ ಸ್ಥಿತಿಯನ್ನು, ಒಂದು ಸಾಂಸ್ಕೃತಿಕ ಪರಿಸರವನ್ನು, ರಾಜಕೀಯ ಆಯಾಮವನ್ನ ಮತ್ತು ಒಂದು ಶೈಕ್ಷಣಿಕ ನಿಲುವನ್ನು ಧನಾತ್ಮಕವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಆ ಧನಾತ್ಮಕ ಚಿಂತನೆಯಲ್ಲಿ ನಮ್ಮ ಭಾರತದಂತಹ ದೇಶವನ್ನ, ಕರ್ನಾಟಕದಂತಹ ರಾಜ್ಯವನ್ನ ನಾವು ಹೇಗೆ ಕಟ್ಟಬೇಕು, ಹೇಗೆ ರೂಪಿಸಬೇಕು ಎಂದು ಅರ್ಥಮಾಡಿಕೊಳ್ಳುವುದಕ್ಕೆ ಅತ್ಯಂತ ಮಹತ್ವವಾದ ಸಂಗತಿಯಾಗಿ ನಮಗೆ ಒದಗಿ ಬರುತ್ತದೆ. ಅಂದರೆ ಅವರ ಚಿಂತನೆಗೆ ಒಂದು ಸಮಗ್ರ ನೆಲೆಯಿದೆ, ಒಂದು ಸಮುದಾಯಕ್ಕೆ ಬೇಕಾಗುವ ಬೇರೆ ಬೇರೆ ಆಲೋಚನಾ ಕ್ರಮಗಳು ಅಥವಾ ಒಂದು ಸಮುದಾಯಕ್ಕೆ ಬೇಕಾಗುವ ಬೇರೆ ಬೇರೆ ಚಾರಿತ್ರಿಕ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ನಿಲುವುಗಳನ್ನು ಕಟ್ಟಿಕೊಡುವುದಕ್ಕೆ ಬೇಕಾಗಿರುವಂತಹ ಒಂದು ಪ್ಯಾಕೇಜ್ ಅದು. ಅಂದರೆ ಒಂದು ಟೂಲ್‌ಕಿಟ್ ರೀತಿ, ಟೂಲ್‌ಕಿಟ್‌ನಲ್ಲಿ ಹೇಗೆ ಎಲ್ಲ ಟೂಲ್‌ಗಳನ್ನು ಸಂಗ್ರಹಿಸಿ ಇಡುತ್ತೇವೆಯೋ ಹಾಗೆ ಕಾರಂತರನ್ನು ಓದುವಾಗ ನಮಗೆ ಬೇರೆ ಬೇರೆ ಹಿನ್ನೆಲೆ ಅರ್ಥವಾಗುತ್ತದೆ. ಅವರ 'ಸರಸಮ್ಮನ ಸಮಾಧಿ' ಓದಿದರೆ ಒಂದು ಬಗೆಯ ತಿಳುವಳಿಕೆ, 'ಮೂಕಜ್ಜಿಯ ಕನಸು' ಓದಿದರೆ ಒಂದು ಬಗೆಯ ತಿಳುವಳಿಕೆ, 'ಮೈಮನಗಳ ಸುಳಿಯಲ್ಲಿ' ಓದಿದರೆ ಇನ್ನೊಂದು ಬಗೆಯ ತಿಳುವಳಿಕೆ, ಅವರ ಮೊದಲ ಕಾದಂಬರಿ 'ಚಿತ್ರಕೂಟ' ಓದಿದರೆ ಒಂದು ಬಗೆಯ ತಿಳುವಳಿಕೆ ಆಗುತ್ತದೆ ಎಂದರು.

90 ವರ್ಷಗಳ ಹಿಂದೆ ಬರೆದ 'ಚೋಮನ ದುಡಿ' ಇಂದಿಗೂ ಬಹಳ ಮಹತ್ವದ್ದಾಗಿದೆ. ಅಂದರೆ ಅಲ್ಲಿ ಬರುವ ವಿಷಯಗಳನ್ನು ತೀವ್ರವಾದ ವಿಮರ್ಶೆಗೆ ಒಡ್ಡಿ ಆ ಕೃತಿಯನ್ನ ಅರ್ಥ ಮಾಡಿಕೊಳ್ಳಬೇಕಾದಾಗ ನಾವು ಆ ಚರ್ಚೆಯನ್ನು ಮಾಡಬಹುದು. ಆದರೆ ಚೋಮ ಎನ್ನುವ ವ್ಯಕ್ತಿ ಅದು ಇಂದಿಗೂ ಕೂಡಾ ಮೆಟಾಫರ್ ಅಗಿ ಕಾಣಿಸುತ್ತಾ ಇದೆ. ಆ ಭೂಮಿಯ ಬಗೆಗಿನ ಒಂದು ಬಯಕೆ ಮತ್ತು ಭೂಸುಧಾರಣೆಯ ಚಳವಳಿ, ಭೂಮಿಗೆ ಸಂಬಂಧಪಟ್ಟಂತಹ ಎಷ್ಟೋ ಸಂಗತಿಗಳನ್ನು ಅರ್ಥಮಾಡಿಕೊಳ್ಳುವ ವಿಧಾನಗಳು ಎಲ್ಲವೂ ಕೂಡಾ, ಅಲ್ಲಿ ಧರ್ಮ ಬರುತ್ತದೆ, ಜಾತಿ ಬರುತ್ತದೆ ಮತ್ತು ಭೂ ಹಕ್ಕು ಬರುತ್ತದೆ. ಆಮೇಲೆ ಈ ರೀತಿಯ ಎಲ್ಲ ಸಂಗತಿಗಳು ಬರುತ್ತವೆ. ಅದು ಒಂದು ಚಿಕ್ಕದಾದ ಕಾದಂಬರಿ ಆಗಿದ್ದರೂ ಕೂಡಾ ಬಹಳ ಗಂಭೀರವಾಗಿರುವ ಪ್ರಶ್ನೆಗಳನ್ನು ಕೇಳಿದೆ, ಆ ಪ್ರಶ್ನೆಗಳನ್ನು ಇವತ್ತಿಗೂ ಕೇಳುವುದಕ್ಕೆ ನಮಗೆ ಪ್ರೇರೇಪಿಸುತ್ತಿದೆ. ಅಂತಹ ಒಂದು ಮಹತ್ವದ ಸಂಗತಿಯನ್ನು ಮಾಡುವುದಕ್ಕೆ ಅವರ ಸ್ವಂತ ಬದುಕಿನಲ್ಲಿ ಪ್ರತಿಕ್ಷಣವೂ ಕೂಡಾ ಒಂದು ಪ್ರಾಯೋಗಿಕ ಹಿನ್ನೆಲೆಯಲ್ಲಿ ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತಿದ್ದರು. ಅವರು ಕೇವಲ ಒಬ್ಬ ವಿಚಾರಗಳನ್ನು ಹೇಗೋ ಹೆಕ್ಕಿ ಅವುಗಳ ಬಗ್ಗೆ ಒಂದು ವ್ಯಾಖ್ಯಾನ ಬರೆಯುವವರು ಆಗಿರಲಿಲ್ಲ. ಒಬ್ಬ ವೈಚಾರಿಕ ವ್ಯಕ್ತಿತ್ವದ ಜೊತೆಗೆ ಒಂದು ಪ್ರಾಯೋಗಿಕ ವ್ಯಕ್ತಿತ್ವವೂ ಕೂಡಾ ಅವರಲ್ಲಿತ್ತು. ಹಾಗಾಗಿ ಅವರು ಏನನ್ನೇ ಮಾಡಿದರೂ ಕೂಡಾ ಅದಕ್ಕೊಂದು ಪ್ರಾಯೋಗಿಕ ಹಿನ್ನೆಲೆಯೂ ಇರುತ್ತಿತ್ತು ಎಂದರು.

ಅವರ ಪರಿಸರದ ಕಾಳಜಿಯ ಪ್ರತೀಕವಾಗಿಯೇ ಉಲ್ಲಾಸ್ ಕಾರಂತ ಅವರನ್ನು ನೋಡಬಹುದು. ಅವರು ಮಾಡುತ್ತಿರುವ ಕೆಲಸ ಮತ್ತು ಅವರು ಬೆಳೆದಿರುವ ರೀತಿ ಅವೆಲ್ಲವನ್ನೂ ನೋಡಿದರೆ 'ಗೋಯಿಂಗ್ ವಿತ್ ಕಾರಂತ್' ಎನಿಸುತ್ತದೆ. ಅವರ ಮೂವರು ಮಕ್ಕಳು ಸೇರಿ ತಂದಿರುವ ಈ ಪುಸ್ತಕವನ್ನು ನೋಡಿದರೆ ಕಾರಂತರ ಇನ್ನೊಂದು ದೊಡ್ಡ ಆಯಾಮ ನಮಗೆ ಅರ್ಥವಾಗುತ್ತದೆ. ಕಾರಂತ ಎನ್ನುವ ಒಬ್ಬ ತಂದೆ, ವಿಚಾರವಾದಿ, ಶಿಕ್ಷಣ ತಜ್ಞ, ಪರಿಸರ ಸಂರಕ್ಷಕ, ವಿಜ್ಞಾನಿ ಇವೆಲ್ಲವನ್ನು ನಾವು ಗಂಭೀರವಾಗಿ ಅರ್ಥಮಾಡಿಕೊಳ್ಳಬೇಕಾದರೆ 'ಗೋಯಿಂಗ್ ವಿತ್ ಕಾರಂತ್' ಪುಸ್ತಕದಲ್ಲಿ ನಾವು ನೋಡಬಹುದು. ಅದರಲ್ಲಿ ಅವರು ಮಕ್ಕಳಲ್ಲಿ ಸ್ವತಂತ್ರ ಚಿಂತನೆಯನ್ನು ಹೇಗೆ ಬೆಳೆಸಿದರು, ಮಕ್ಕಳಲ್ಲಿ ಕಲೆ ಬಗೆಗೆ, ಸಂಸ್ಕೃತಿಯ ಬಗೆಗೆ, ಪರಿಸರದ ಬಗೆಗೆ, ಈ ಪ್ರಾಯೋಗಿಕತೆ ಬಗೆಗೆ ಹೇಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದರು, ಮಕ್ಕಳು ಹಾಗೆ ಬೆಳೆಯುವುದಕ್ಕೆ ಬೇಕಾಗಿದ್ದಂತಹ ಆ ಕೆಲಸವನ್ನು ಅವರು ಹೇಗೆ ಮಾಡಿದರು ಎನ್ನುವುದಕ್ಕೆ ಅವರ ಬಾಲವನದಲ್ಲಿಯೂ ಕೂಡಾ ಸಿಗುತ್ತದೆ. ಹಾಗೇಯೇ ಅವರ ಮಕ್ಕಳಲ್ಲಿಯೂ ಅದು ಕಂಡು ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ಒಟ್ಟಾರೆಯಾಗಿ ಕಾರಂತರನ್ನು ಕುರಿತು ನಾವು ಚರ್ಚೆ ಮಾಡಬೇಕಾದರೆ ಕಾರಂತರ ಯೋಚನಾ ಕ್ರಮ, ಸೃಜನಶೀಲತೆ ಅವರ ಈ ಬೌದ್ಧಿಕ ಮತ್ತು ಪ್ರಾಯೋಗಿಕ ನಿಲುವುಗಳು ಏನಿವೆ ಅವು ಇವತ್ತಿನ ಸಮಾಜಕ್ಕೆ ಮತ್ತು ಇವತ್ತಿನ ಭಾರತಕ್ಕೆ, ಯುವ ಪೀಳಿಗೆಗೆ ಎಷ್ಟು ಒತ್ತಾಸೆಯಾಗಿವೆ, ಎಷ್ಟು ಉಪಕಾರಿಯಾಗಿವೆ ಎನ್ನುವುದನ್ನು ತಿಳಿಯಬೇಕಾದರೆ ಕಾರಂತರ ಸಾಹಿತ್ಯವನ್ನು ಓದುವುದರ ಜೊತೆಗೆ ಮಾಡಿರುವಂತಹ ಬೇರೆ ಬೇರೆ ಕೆಲಸಗಳನ್ನು ಪ್ರಾಣಿ ಪ್ರಪಂಚದ ಮತ್ತು ವಿಜ್ಞಾನ ಪ್ರಪಂಚದ ಬಗೆಗೆ ಬರೆದಿರುವಂತಹ ಮತ್ತು ಯಕ್ಷಗಾನ, ಬಯಲಾಟ, ರಂಗಭೂಮಿ, ನಾಟಕ, ಕಲೆ ಈ ಎಲ್ಲಾ ಸಂಗತಿಗಳನ್ನು ನಾವು ಅಧ್ಯಯನ ಮಾಡಿದರೆ, ಗಂಭೀರವಾಗಿ ನಮ್ಮ ಶಿಕ್ಷಣದ ಭಾಗವಾಗಿ, ನಮ್ಮ ಆಲೋಚನಾ ಕ್ರಮವಾಗಿ ಅದನ್ನು ಅನುಸರಿಸಿದರೆ ಖಂಡಿತವಾಗಿಯೂ ಯಾವುದು ಸ್ವತಂತ್ರ ಚಿಂತನೆ, ಮುಕ್ತ ಚಿಂತನೆ ಮತ್ತು ಸಾಮಾಜಿಕ ವಾತಾವರಣ ಎಂದು ಕರೆಯುತ್ತೇವೆಯೋ ಅಂತಹ ಎಲ್ಲ ಸಂಗತಿಗಳನ್ನು ನಮಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ ಎಂದು ಹೇಳುತ್ತಾ ಡಾ. ಮಲ್ಲಿಕಾರ್ಜುನ ತಮ್ಮ ಮಾತಿಗೆ ವಿರಾಮ ಹೇಳಿದರು.

ಸಂಘದ ಅಧ್ಯಕ್ಷರು ಡಾ. ಮೇಟಿ ಮಲ್ಲಿಕಾರ್ಜುನ ಅವರಿಗೆ ಈ ಸಾಹಿತ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರಂತರ ಬಗ್ಗೆ ಅತ್ಯಂತ ಚೆನ್ನಾಗಿ ವಿಷಯ ಮಂಡನೆ ಮಾಡಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದ ಸಂಚಾಲಕರಾದ ಶ್ರೀ ಅರುಣ್ ಸಿ.ಎಸ್. ಅವರು ಮಾತನಾಡುತ್ತ ಶಿವರಾಮ ಕಾರಂತರ ಸಾಹಿತ್ಯದ ಒಳನೋಟವನ್ನು ಡಾ. ಮೇಟಿ ಮಲ್ಲಿಕಾರ್ಜುನ ಅವರು ತಮ್ಮ ವಿಷಯ ಮಂಡನೆಯಲ್ಲಿ ತೆರೆದಿಟ್ಟಿದ್ದಾರೆ. ಕಾರಂತರ ಬಗ್ಗೆ ಅವರು ಹೇಳುತ್ತಿದ್ದಾಗ ಕಾರಂತರು ಬರೆದಿದ್ದ ಒಂದು ಸಾಲು ನೆನಪಿಗೆ ಬರುತ್ತದೆ: 'ಯಾರಿಗೂ ಉಪದೇಶವನ್ನ ಮಾಡಬೇಡಿ', ನೀವು ಏನು ಹೇಳಬೇಕು ಅಂತ ಅಂದುಕೊಂಡಿದ್ದೀರೋ ಹಾಗೆಯೇ ಬದುಕಿ ತೋರಿಸಿ, ಅವರು ಬದುಕಿದಂತೆ ಬರೆದವರು– ಬರೆದಂತೆ ಬದುಕಿದವರು ಅಂತಹ ಮಹಾನ್ ಕವಿ ಕಾರಂತರು. ಅವರು ಒಬ್ಬ ವ್ಯಕ್ತಿಯಲ್ಲ, ಸಾಹಿತ್ಯದ ಒಂದು ಕ್ರಾಂತಿ, ಕನ್ನಡದ ಶಕ್ತಿ ಎಂದು ಹೇಳುತ್ತಾ ಡಾ. ಮೇಟಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಧನ್ಯವಾದಗಳನ್ನು ಹೇಳಿದರು.



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೆಹಲಿ ಫ್ರೆಂಡ್ಸ್ ತಂಡದ ಕಲಾವಿದರುಗಳಾದ ಶ್ರೀಮತಿ ಮಮತಾ ಜಿಂದೆ, ಶ್ರೀ ವೆಂಕಟೇಶ್, ಶ್ರೀಮತಿ ಮೈಥಿಲಿ ಅತ್ತಾವರ್ ಅವರು "ಮುಂಗೋಳಿ ಕೂಗ್ಯಾವೋ ಮೂಡಾಣ ಬೆಳಗಿ" ಎನ್ನುವ ಗೀತೆಯನ್ನು ಹಾಡಿದರು. ನಂತರ ಶ್ರೀಮತಿ ಮಮತಾ ಪ್ರವೀಣ್ ಅವರು "ಬ್ಯಾಟಿ ಬ್ಯಾಟಿಯನ್ನಾಡಿದ" ಗೀತೆಯನ್ನು ಪ್ರಸ್ತುತಪಡಿಸಿದರು.

ತರವಾಯ, ಡಾ. ಚಂದ್ರಶೇಖರ್ ಕಂಬಾರ ಕುರಿತು ವಿಚಾರ ಮಂಡನೆ ಮಾಡಲು ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗಿಯಾಗಿದ್ದ ಪ್ರೊ. ತ್ಯಾಗರಾಜು, ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ ಇವರ ಪರಿಚಯವನ್ನು ಸ್ಥೂಲವಾಗಿ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಸಭೆಗೆ ಮಾಡಿಕೊಟ್ಟರು. ಪ್ರೊ. ತ್ಯಾಗರಾಜು ಅವರು ಮಾತನಾಡುತ್ತಾ ಡಾ. ಚಂದ್ರಶೇಖರ ಕಂಬಾರ ಅವರು 1937ರ ಜನವರಿ 2ರಂದು ಬೆಳಗಾವಿ ಜಿಲ್ಲೆಯ ಗೋಡಗೇರಿ, ಹುಕ್ಕೇರಿ ಗ್ರಾಮದಲ್ಲಿ ಶ್ರೀ ಬಸವಣ್ಣೆಪ್ಪ ಮತ್ತು ಶ್ರೀಮತಿ ಚೆನ್ನಮ್ಮ ಅವರ ಸುಪುತ್ರರಾಗಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಗೋಕಾಕ್‌ನ ಶಾಲೆಯಲ್ಲಿ ನಂತರ ಉನ್ನತ ಶಿಕ್ಷಣವನ್ನು ಬೆಳಗಾವಿಯ ಲಿಂಗರಾಜು ಕಾಲೇಜಿನಲ್ಲಿ ಪಡೆದು, 1962ರಲ್ಲಿ ಎಂ.ಎ. ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದರು. ಡಾ. ಚಂದ್ರಶೇಖರ್ ಕಂಬಾರ ಅವರು ಕನ್ನಡದ ಬಹುದೊಡ್ಡ ಪ್ರತಿಭೆಯ ವಿಶಿಷ್ಟ ವ್ಯಕ್ತಿತ್ವದ ಕವಿ, ಕಾದಂಬರಿಕಾರ, ನಾಟಕಕಾರ, ಜಾನಪದ ತಜ್ಞ, ಸಂಗೀತ ನಿರ್ದೇಶಕ ಮತ್ತು ಸಿನಿಮಾ ನಿರ್ದೇಶಕ ಹೀಗೆ ಹತ್ತು ಹಲವು ಆಯಾಮಗಳ ವ್ಯಕ್ತಿತ್ವ ಅವರದ್ದಾಗಿತ್ತು ಎಂದು ಹೇಳಿದರು.

ಅವರ ವೃತ್ತಿ ಜೀವನದ ಬಗ್ಗೆ ತಿಳಿಸುತ್ತಾ ಕಂಬಾರರು ಯುವಕರಾಗಿದ್ದಾಗ ಅವರ ಕಾಲೇಜು ದಿನಗಳ ಕುರಿತು ಹೇಳುವುದಾದರೆ ಕಲೆಗಳಲ್ಲಿ ಇವತ್ತು ಸಾವಿರಾರು ವರ್ಷಗಳ ಇತಿಹಾಸವುಳ್ಳ ನಮ್ಮ ಕನ್ನಡ ಭಾಷೆ, ಪಂಪನಿಂದ ಹಿಡಿದು ಕುವೆಂಪುವರೆಗೆ ಎಂದು ಹೇಳುತ್ತಾರಲ್ಲ, ಕನ್ನಡ ಭಾಷೆಯನ್ನು, ಸಾಧ್ಯತೆಗಳನ್ನ ಮತ್ತು ಅನಂತರ ಇಡೀ ಕನ್ನಡ ದೇಶೀಯ ಭಾಷಾ ಸಾಹಿತ್ಯದ ಸೌಂದರ್ಯವನ್ನು ಸೂರೆಗೊಂಡವರಲ್ಲಿ ಕಂಬಾರರು ಅದ್ವಿತೀಯರು ಎಂದರೆ ಎರಡು ಮಾತಿಲ್ಲ, ಕಂಬಾರರು ತಮ್ಮ ಆರಂಭದ ದಿನಗಳಲ್ಲಿ ಧಾರವಾಡದಲ್ಲಿ ಒಂದು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರಂತೆ, ಅಲ್ಲಿ ಕಂಬಾರರು ಬರೆದ ಕವಿತೆ ಬೇರೆ ಎಲ್ಲ ಕವಿಗಳ ಕವಿತೆಗಳಿಗಿಂತ ಭಿನ್ನವಾಗಿತ್ತು, ಇದು ಎಲ್ಲರ ಗಮನಕ್ಕೆ ಬಂತು, ಆದರೆ ಕವಿ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದಂತಹ ವ್ಯಕ್ತಿ ಕಂಬಾರರ ಬಗ್ಗೆ ಒಂದು ಕುಹಕದ ಮಾತನ್ನು ಹೇಳಿದರು–ಆ ಅಧ್ಯಕ್ಷರ ಮಾತು ಕಂಬಾರರ ಸ್ವಾಭಿಮಾನವನ್ನೇ ಕಲಕಿತು. ಅಲ್ಲಿ ಕಂಬಾರರು ಬೇಜಾರು ಮಾಡಿಕೊಳ್ಳುತ್ತಾರೆ ಎಂಬ ನಿದರ್ಶನವನ್ನು ಪ್ರೊ. ತ್ಯಾಗರಾಜು ನೀಡಿದರು.

ಕನ್ನಡದ ಒಂದು ಸೌಂದರ್ಯ, ಜಾನಪದದ ಸೊಗಡು, ಈ ಎಲ್ಲವನ್ನೂ ಮೈಗೂಡಿಸಿಕೊಂಡಂತಹ ಕಾವ್ಯ ಅವರ ಪರಿಶ್ರಮದ ಫಲ. ಕಂಬಾರರು ಹಲವು ಪ್ರತಿಭೆಗಳ ಸಂಗಮ. ಕವಿ, ನಾಟಕಕಾರ, ಸಂಗೀತ ನಿರ್ದೇಶಕ, ಚಲನಚಿತ್ರ ನಿರ್ದೇಶಕ ಹೀಗೆ ಹಲವು ಪ್ರತಿಭೆಗಳನ್ನೊಳ್ಳವರಾಗಿದ್ದರು. ಇದರ ಜೊತೆಗೆ ಕಾಂಗ್ರೆಸ್ ಪಕ್ಷದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಅವರು ಸೇವೆ ಸಲ್ಲಿಸಿದರು. ಸ್ನಾತಕೋತ್ತರ ಶಿಕ್ಷಣದ ನಂತರ ತಮ್ಮ ಸಾಹಿತ್ಯದ ಗುರುಗಳಾದ ಶ್ರೀ ಗೋಪಾಲಕೃಷ್ಣ ಅಡಿಗರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಂತಹ ಸಾಗರದ ಲಾಲ್‌ಬಹದ್ದೂರ್ ಶಾಸ್ತ್ರೀ ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾರೆ. ನಂತರ 2019ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 6–7 ವರ್ಷಗಳ ಉಪನ್ಯಾಸ ವೃತ್ತಿಯಲ್ಲಿ ತೊಡಗಿಸಿಕೊಂಡ ಕಾಲ ನಂತರ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಮೊದಲನೇ ಕುಲಪತಿಯಾಗಿ ಸೇವೆ ಸಲ್ಲಿಸಿದರು. ಈ ನಡುವೆ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿಯೂ, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿಯೂ ಕಂಬಾರರು ಸೇವೆ ಸಲ್ಲಿಸಿದ್ದಾರೆ. ಈಗ ಬೆಂಗಳೂರಿನ ಬನಶಂಕರಿಯಲ್ಲಿ ತಮ್ಮ ನಿವೃತ್ತಿ ಜೀವನ ನಡೆಸುತ್ತಿದ್ದಾರೆ ಎಂದರು.

ಕಂಬಾರರಿಗೆ ಪ್ರಭಾವ ಬೀರಿದಂತಹ ಅವರ ಊರು ಗೋಡಗೇರಿ. ಅಲ್ಲಿನ ವಾತಾವರಣದ ಜಾನಪದ ಹಾಡು, ಕುಣಿತ, ನಾಟ್ಯ ಇವುಗಳ ಬಗ್ಗೆ ವಿಶೇಷ ಕಾಳಜಿಯಿಂದ ಅವುಗಳ ಸಂಗ್ರಹ, ಬರವಣಿಗೆಯನ್ನು ರೂಡಿಸಿಕೊಂಡರು. ಉತ್ತರ ಕರ್ನಾಟಕ ಅದರಲ್ಲೂ ಗೋಕಂಡ, ಬೆಳಗಂಡಿ ಮತ್ತು ಧಾರವಾಡದ ಗಂಡು ಭಾಷೆಯನ್ನು ಕನ್ನಡ ಸಾಹಿತ್ಯಕ್ಕೆ ಕಂಬಾರರು ಬಳಸಿಕೊಂಡರು. ಧಾರವಾಡದಲ್ಲಿ ವರಕವಿ ಬೇಂದ್ರೆಯವರು ಹೇಗೋ ಹಾಗೆ ನಂತರ ಕನ್ನಡದ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವರಲ್ಲಿ ಕಂಬಾರರು ಅದ್ವಿತೀಯರು. ಜೊತೆಗೆ ಕಂಬಾರರು ತಾವು ಬರೆದ ಕೆಲವು ಕಾದಂಬರಿಯನ್ನು ಚಲನಚಿತ್ರವನ್ನಾಗಿಸಿದರು. ಕರಿಮಾಯಿ, ಕಾಡುಕುದುರೆ, ಸಿಂಗಾರವ್ವ, ಹರಕೆಯ ಕುರಿ ಇವು ಅವರ ಕೆಲವು ಪ್ರಮುಖ ಕೃತಿಗಳು. ಕಂಬಾರರ 'ಕಾಡುಕುದುರೆ' ಚಲನಚಿತ್ರದ ಸಂಗೀತಕ್ಕೆ ಶಿವಮೊಗ್ಗ ಸುಬ್ಬಣ್ಣ ಹಾಡಿರುವ ಕಾಡುಕುದುರೆ ಓಡಿ ಬಂದಿತ್ತಾ ಗೀತೆಗೆ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದೆ. ಹತ್ತಾರು ಸಾಕ್ಷ್ಯ ಚಿತ್ರಗಳನ್ನು ಕೂಡಾ ನಿರ್ಮಿಸಿರುವ ಕಂಬಾರರು ಜಾನಪದ ಶೈಲಿಯ ಹಾಡಿಗೆ ಜನಪ್ರಿಯರು ಅಲ್ಲದೇ ಅವರು ಸ್ವತಃ ಹಾಡುಗಾರರಾಗಿದ್ದರು. ಕಂಬಾರರು ರಚಿಸಿದ ಅನೇಕ ಕೃತಿಗಳಲ್ಲಿ ಅದರಲ್ಲಿ 10 ಕಾವ್ಯ, 25 ನಾಟಕ, 1 ಮಹಾಕಾವ್ಯ, 17 ಬೇರೆ ಬೇರೆ ಗದ್ಯ ಸಂಪಾದನೆಗಳು, 5 ಕಾದಂಬರಿ. ಪ್ರಬಂಧ ಸಂಕಲನ, ಸಂಶೋಧನಾ ಗ್ರಂಥ, ಅಭಿನಂದನಾ ಗ್ರಂಥಗಳು ಪ್ರಕಟಗೊಂಡಿವೆ ಎಂದರು.

ಅವರ ಕಾವ್ಯಗಳನ್ನು ನಾವು ಗಮನಿಸುತ್ತಾ ಹೋದರೆ ಮಗಳು–1958, ಸಾವಿರಾರು ನೆರಳು–1979, ಬೆಳ್ಳಿ ಮೀನು–1989, ಈವರೆಗಿನ ಕತೆ ಹೇಳತೇನ–1993 ಎಲ್ಲಿದೆ ಶಿವಾಪುರ–2009 ಹೀಗೆ ಅನೇಕ ಕೃತಿಗಳು ಪ್ರಕಟವಾಗಿವೆ. ಹಂಪಿಯ ಕಲ್ಲುಗಳು ಎಂಬ ಕಾವ್ಯವನ್ನು ಶ್ರೀ ಓ.ಎಲ್.ನಾಗಭೂಷಣ ಸ್ವಾಮಿಯವರು ಸಾಹಿತ್ಯ ಅಕಾಡೆಮಿಗಾಗಿ ಇಂಗ್ಲೀಷ್ ಭಾಷೆಗೆ ಅನುವಾದ ಮಾಡಿದ್ದಾರೆ. ಕಂಬಾರರ ಕೆಲವು ನಾಟಕಗಳು– ಬೆಂಬತ್ತಿದ ಕಣ್ಣು–1961, ನಾರ್ಸಿಸ್–1969, ಋಷ್ಯಶೃಂಗ–1970 (ಇದು ಸಿನಿಮಾ ಆಗಿದೆ) ಜೋಕುಮಾರಸ್ವಾಮಿ, – 1972 (ನಾಟ್ಯರಂಗ ಪ್ರಶಸ್ತಿ ಪಡೆದಿದೆ) ಚಾಲೇಶ–1973, ಸಂಗ್ಯಾಬಾಳ್ಯಾ–1975, ಕಿಟ್ಟಿಯ ಕಥೆ–1974, ಜೈಸಿದ್ಧನಾಯಕ–1975 (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ) ಆಲಿಬಾಬ–1980, ಕಾಡುಕುದುರೆ–1979 (ಸಿನೆಮಾ ಆಗಿದೆ) ನಾಯಿಕಥೆ–1980, ಖಾರೋಖಾರ–1977, ಮತಾಂತರ–1978, ಹರಕೆಯ ಕುರಿ–1983 (ಸಿನೆಮಾ ಆಗಿದೆ) ಕಂಬಾರ ಅವರ ನಾಟಕಗಳು–1984, ಸಾಂಬಶಿವ ಪ್ರಹಸನ–1987, ಸಿರಿಸಂಪಿಗೆ–1991 (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ) ತಮ್ಮ ಸಮಗ್ರ ಸಾಹಿತ್ಯ ಕೊಡುಗೆಗಾಗಿ ಡಾ.ಚಂದ್ರಶೇಖರ ಕಂಬಾರರು ಪಡೆದ ಜ್ಞಾನಪೀಠ ಪ್ರಶಸ್ತಿಯ ಜೊತೆಗೆ ಇನ್ನೂ ಹಲವಾರು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ ಎಂದು ಹೇಳಿ ಪ್ರೊ. ತ್ಯಾಗರಾಜು ತಮ್ಮ ವಿಚಾರ ಮಂಡನೆಯನ್ನು ಮುಗಿಸಿದರು.

ಸಂಘದ ಅಧ್ಯಕ್ಷರು ಪ್ರೊ. ತ್ಯಾಗರಾಜು ಅವರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಡಾ. ಕಂಬಾರರ ಜೀವನ ಮತ್ತು ಸಾಹಿತ್ಯದ ಕುರಿತಾಗಿ ತುಂಬಾ ಚೆನ್ನಾಗಿ ನಿರೂಪಿಸಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು. ನಂತರ ಶ್ರೀ ಕಿರಣ್ ಅನಂದ್ ಅವರಿಂದ 'ಮರೆತೆನೆಂದರೆ ಮರೆಯಲಿ ಹ್ಯಂಗಾ' ಎನ್ನುವ ಗೀತೆ ಪ್ರಸ್ತುತಿಗೊಂಡಿತು. ಕಲೆ, ಸಾಹಿತ್ಯ, ಸಂಗೀತ, ನೃತ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಅಭಿರುಚಿಯನ್ನು ಹೊಂದಿರುವ ಬಹುಮುಖ ಪ್ರತಿಭೆ ದೆಹಲಿ ಕರ್ನಾಟಕ ಸಂಘದ ಸದಸ್ಯೆ, ನವದೆಹಲಿಯ ಸುಪ್ರೀಂಕೋರ್ಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ವೈಜಯಂತಿ ಗಿರೀಶ್ ಅವರು ಶಿವರಾಮ ಕಾರಂತರ "ಹಾವು" ಎಂಬ ಸಣ್ಣ ಕಥೆಯನ್ನ ವಿಮರ್ಶೆಯೊಂದಿಗೆ ಪ್ರಸ್ತುತಪಡಿಸಿದರು.

ಮುಖ್ಯ ಅತಿಥಿಗಳಾದ ಡಾ. ಶ್ರೀನಿವಾಸ ವರಖೇಡಿ, ಉಪಕುಲಪತಿಗಳು, ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯ, ನವದೆಹಲಿ ಅವರ ಪರಿಚಯವನ್ನು ಶ್ರೀ ಕೆ.ಎಸ್.ಮೂರ್ತಿ ಸಭೆಗೆ ಮಾಡಿಕೊಟ್ಟರು. ಡಾ. ಶ್ರೀನಿವಾಸ ವರಖೇಡಿ ಅವರು ಮಾತನಾಡುತ್ತಾ ಹೊರನಾಡ ಕನ್ನಡಿಗರಿಗೆ, ಅದರಲ್ಲೂ ದೆಹಲಿಯ ಕನ್ನಡಿಗರಿಗೆ ತುಂಬಾ ಹತ್ತಿರದ ಗೆಳೆಯನಂತಿರುವ ಅಧ್ಯಕ್ಷ ಶ್ರೀ ನಾಗರಾಜ ಅವರು ಇಲ್ಲಿ ಬರುವ ಎಲ್ಲರಿಗೆ ಇದು ನಮ್ಮನೆ ಎನ್ನುವ ಭಾವನೆಯನ್ನು ಉಂಟುಮಾಡುವಂತೆ ದೆಹಲಿಯಲ್ಲಿ ಕನ್ನಡದ ಕೆಲಸವನ್ನು ಮಾಡುತ್ತಿದ್ದಾರೆ. ಸಾಹಿತ್ಯದ ಹಾಗೂ ಇನ್ನಿತರೆ ಕನ್ನಡ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ನಮಗೆ ಕರ್ನಾಟಕದ, ಕನ್ನಡದ ಕಂಪನ್ನು ನೀಡುವ ಕೆಲಸವನ್ನು ದೆಹಲಿಯ ಕರ್ನಾಟಕ ಸಂಘ ಮಾಡುತ್ತಾ, ಕರ್ನಾಟಕವನ್ನು ಹತ್ತಿರವಾಗಿಸುತ್ತಿದೆ. ಶ್ರೀಮತಿ ವೈಜಯಂತಿಯವರು ಪ್ರಸ್ತುತಪಡಿಸಿದ ಸಣ್ಣಕಥೆಯನ್ನು ಉಲ್ಲೇಖಿಸುತ್ತಾ ಆ ಕಥೆ ಬಹಳ ಚೆನ್ನಾಗಿದೆ, ಅದು ಒಬ್ಬ ವ್ಯಕ್ತಿಯ ಕಥೆ ಎನ್ನುವುದಕ್ಕಿಂತ ನಮ್ಮ ಸಮಾಜವೂ ಹಾಗೆಯೇ ಇವತ್ತು ಶಾಂತಿಯ ಹೂದೋಟ ಎನ್ನುತ್ತಾರೆ, ಆದರೆ ಅದರಲ್ಲಿ ನಾವು ಎಷ್ಟೊಂದು ಹಾವುಗಳನ್ನು ಬಿಟ್ಟಿದ್ದೇವೆ ಎಂದರೆ ಭಾಷೆಯನ್ನೇ ಹಾವು ಮಾಡಿಕೊಂಡಿದ್ದೇವೆ, ಜಾತಿ–ಮತಗಳನ್ನು ಹಾವು ಮಾಡಿಕೊಂಡಿದ್ದೇವೆ, ಅವುಗಳಿಂದ ಕಡಿಸಿಕೊಂಡು ಒದ್ದಾಡುತ್ತಿದ್ದೇವೆ. ಒಂದು ಕಡೆ ಕವಿ ಇದನ್ನು ಶಾಂತಿಯ ಹೂದೋಟ ಎಂದು ಕರೆಯುತ್ತಾರೆ, ಕಾರಂತರು ಇದನ್ನೇ ಹೇಳುತ್ತಾರೆ, ಕಂಬಾರರು ಇದನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ. ಕವಿಗಳು, ಸಾಹಿತಿಗಳು ಯೋಚನೆ ಮಾಡುವ ರೀತಿ ಒಂದೇ ರೀತಿಯದ್ದು. ಈ ಸಾಹಿತ್ಯದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ವಿಚಾರಗಳನ್ನು ಕೇಳಬೇಕೇ ಹೊರತು ಮಾತನಾಡುವುದಲ್ಲ, ಕಾಯಕ್ರಮದಲ್ಲಿನ ವಿಚಾರ ಧಾರೆಯನ್ನು ಕೇಳಿದ್ದೇನೆ ಮತ್ತು ರಸಭರಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಸ್ವಾದಿಸಿದ್ದೇನೆ ಎಂದು ಹೇಳಿ ತಮ್ಮ ಮಾತನ್ನು ಮುಗಿಸಿದರು.

ಶ್ರೀ ಅರುಣ್ ಸಿ.ಎಸ್. ಅವರು ಅತಿಥಿಗಳ ನುಡಿಗಳಿಗೆ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಕೊನೆಯಲ್ಲಿ ಶ್ರೀಮತಿ ಶುಭಾ ದೇವಿಪ್ರಸಾದ್ ಅವರ 'ಕಾಂತನಿಲ್ಲದ ಮೇಲೆ' ಹಾಗೂ ಶ್ರೀ ಹರಿಪ್ರಿಯ ತಂಡದಿಂದ 'ಮರೆತೆನೆಂದರೆ ಮರೆಯಲಿ ಹ್ಯಾಂಗಾ' ಎನ್ನುವ ಗೀತೆಗಳ ಪ್ರಸ್ತುತಿಯೊಂದಿಗೆ ಸಾಹಿತ್ಯೋತ್ಸವ–4ರ ಕಾರ್ಯಕ್ರಮ ಮುಕ್ತಾಯವಾಯಿತು. ❑

***ಅಭಿಮತ ವರದಿ***

# ಕನ್ನಡದ ಮೇರು ಸಾಹಿತಿಗಳಾದ ಡಾ. ಡಿ.ವಿ. ಗುಂಡಪ್ಪ, ಡಾ. ಎಂ. ಗೋಪಾಲಕೃಷ್ಣ ಅಡಿಗ, ಶ್ರೀ ಬಿ.ಎಂ.ಶ್ರೀ., ಡಾ. ಎಸ್.ಎಲ್. ಭೈರಪ್ಪ, ಶ್ರೀ ಎಂ. ಗೋವಿಂದ ಪೈ, ಮತ್ತು ಡಾ. ಸಿದ್ದಲಿಂಗಯ್ಯ ಅವರ ಸಾಧನೆಗಳ ಕುರಿತು ಸಾಹಿತ್ಯ ಸಂವಾದ




ದೆಹಲಿ ಕರ್ನಾಟಕ ಸಂಘದಲ್ಲಿ ಜ್ಞಾನಪೀಠ ಪುರಸ್ಕೃತ ಸಾಹಿತಿಗಳ ಕುರಿತಾದ ನಾಲ್ಕು ಸಾಹಿತ್ಯ ಕಾರ್ಯಕ್ರಮದ ಆಯೋಜನೆಯ ನಂತರ ಮುಂದುವರಿದ ಭಾಗವಾಗಿ ಕನ್ನಡದ ಇತರ ಅಗ್ರಗಣ್ಯ ಸಾಹಿತಿಗಳು ಮತ್ತು ಕವಿಗಳ ಕುರಿತು ವಿಚಾರ ಸಂಕಿರಣವನ್ನೊಳಗೊಂಡ ಸಾಹಿತ್ಯೋತ್ಸವದ ಆರನೇ ಮಾಲಿಕೆ ಕಾರ್ಯಕ್ರಮವನ್ನು ದಿನಾಂಕ 07.09.25ರಂದು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಡಾ. ಡಿ.ವಿ. ಗುಂಡಪ್ಪ, ಡಾ. ಎಂ. ಗೋಪಾಲಕೃಷ್ಣ ಅಡಿಗ, ಶ್ರೀ ಬಿ.ಎಂ. ಶ್ರೀಕಂಠಯ್ಯ, ಡಾ. ಎಸ್.ಎಲ್. ಭೈರಪ್ಪ, ಶ್ರೀ ಎಂ. ಗೋವಿಂದ ಪೈ ಹಾಗೂ ಡಾ. ಸಿದ್ದಲಿಂಗಯ್ಯ, ಈ ಸಾಹಿತಿಗಳ ಕುರಿತು ಸಾಹಿತ್ಯ ಸಂವಾದವನ್ನು ಆಯೋಜಿಸಿರುವುದಾಗಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸಭೆಗೆ ತಿಳಿಸುತ್ತಾ ಇಂದು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ಡಾ. ರಮೇಶ್ ಸಿ.ಎ., ನಿವೃತ್ತ ಪ್ರಾಧ್ಯಾಪಕರು, ಕೋಲಾರ, ಡಾ. ಆರ್. ಚಲಪತಿ, ಹಿರಿಯ ಸಂಶೋಧಕರು, ಶಾಸ್ತ್ರೀಯ ಅತ್ಯುನ್ನತ ಕನ್ನಡ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಮೈಸೂರು, ಡಾ. ರಿಯಾಜ್ ಪಾಷ, ಸಹ ಪ್ರಾಧ್ಯಾಪಕರು, ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು, ಡಾ. ರುದ್ರೇಶ್ ಅದರಂಗಿ, ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು, ಡಾ. ಸುಭಾಷ್ ರಾಜಮಾನೆ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಆರ್.ಸಿ. ಕಾಲೇಜು, ಬೆಂಗಳೂರು ಮತ್ತು ಡಾ. ಡಿ.ಆರ್. ದೇವರಾಜ್, ಕನ್ನಡ ಅಧ್ಯಾಪಕರು, ಬಾಲಕಿಯ ಸರ್ಕಾರಿ ಕಾಲೇಜು, ಚನ್ನಪಟ್ಟಣ ಈ ಎಲ್ಲ ಅತಿಥಿಗಳನ್ನು ಹಾಗೂ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಡಾ. ವಾಗೀಶ್ ಸೀನಿಯರ್ ಕನ್ಸಲ್ಟೆಂಟ್ ಗ್ಯಾಸ್ಟ್ರೋ ಎಂಟರಾಲಾಜಿಸ್ಟ್, ಜಿ.ಬಿ. ಪಂತ್ ಆಸ್ಪತ್ರೆ, ನವದೆಹಲಿ ಅವರುಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ಸಂಚಾಲಕರಾದ ಶ್ರೀ ಅರುಣ್ ಸಿ.ಎಸ್. ಅವರು ಎಲ್ಲ ಶಿಕ್ಷಕರಿಗೆ ಸೆಪ್ಟೆಂಬರ್ 5ರ ಶಿಕ್ಷಕರ ದಿನಾಚರಣೆಯ ಶುಭಾಶಯಗಳನ್ನು ಕೋರುತ್ತಾ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

ಆಗಮಿಸಿದ ಎಲ್ಲ ಅತಿಥಿಗಳನ್ನು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡುವ ಸ್ಥಳೀಯ ಕಲಾವಿದರನ್ನು, ಸಭಿಕರನ್ನು ಔಪಚಾರಿಕವಾಗಿ ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಅವರು ಸ್ವಾಗತಿಸಿದರು. ನಂತರ ಶ್ರೀ ಅರುಣ್ ಅವರು ಮಾತನಾಡಿ ಸಂಘದ ಅಧ್ಯಕ್ಷರ ಪರಿಕಲ್ಪನೆಯಲ್ಲಿ ಕಳೆದ ಒಂದು ತಿಂಗಳಿನಿಂದ ಪ್ರತೀ ವಾರ ಸಾಹಿತ್ಯೋತ್ಸವ ಕಾರ್ಯಕ್ರಮವ ನಡೆಯುತ್ತಿದೆ, ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟಂತಹ ಎಂಟು ಜನ ಮಹನೀಯರ ಜೀವನ, ಸಾಹಿತ್ಯದ ಕುರಿತಂತೆ ಸಂವಾದ, ವಿಚಾರ ಮಂಡನೆಯನ್ನು ಅನೇಕ ಹಿರಿಯ ವಿದ್ವಾಂಸರು ಮತ್ತು ಸಾಹಿತಿಗಳಿಂದ ಕೇಳಿದ್ದೇವೆ, ಅದರ ನಂತರ ಈಗ 20ನೇ ಶತಮಾನದ ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ನಮ್ಮ ನಾಡಿನಲ್ಲಿ ಜನಿಸಿದಂತಹ ಅನೇಕ ಮಹಾನ್ ದಿಗ್ಗಜ ಕವಿಗಳನ್ನು ಕೂಡಾ ಸ್ಮರಿಸಬೇಕು, ಅವರ ಸಾಹಿತ್ಯ ಬರಹಗಳನ್ನು ನಾವು ವಿಚಾರ ವಿನಿಮಯ ಮಾಡಿಕೊಳ್ಳಬೇಕೆಂಬ ಕಲ್ಪನೆಯಲ್ಲಿ ಈ ಸಾಹಿತ್ಯೋತ್ಸವ ಕಾರ್ಯಕ್ರಮ ಮುಂದುವರಿದಿದೆ, ಅದರಲ್ಲಿ ಪ್ರಮುಖವಾಗಿ ನಾಡಿಗೆ ದೊಡ್ಡ ಕೊಡುಗೆ ಕೊಟ್ಟಂತಹ ಹಾಗೂ ಕನ್ನಡ ಸಾಹಿತ್ಯ ಲೋಕಕ್ಕೆ ಒಂದು ಹೊಸ ರೂಪವನ್ನು ನೀಡಿದ ಶ್ರೀ ಬಿ.ಎಂ. ಶ್ರೀಕಂಠಯ್ಯ, ಕರ್ನಾಟಕದ ಪ್ರಪ್ರಥಮ ರಾಷ್ಟ್ರಕವಿ ಎಂದೇ ಪ್ರಸಿದ್ಧಿಯಾಗಿರುವ ಶ್ರೀ ಎಂ. ಗೋವಿಂದ ಪೈ, ನಾಡಿನ ದಿಗ್ಗಜ ಕವಿ ಡಾ. ಡಿ.ವಿ. ಗುಂಡಪ್ಪ, ಕನ್ನಡ ಸಾರಸ್ವತ ಲೋಕಕ್ಕೆ ಅನನ್ಯ ಕೊಡುಗೆ ನೀಡಿರುವ ಡಾ. ಎಂ. ಗೋಪಾಲಕೃಷ್ಣ ಅಡಿಗ, ಪದ್ಮಭೂಷಣ ಪ್ರಶಸ್ತಿ ಹಾಗೂ ಸರಸ್ವತಿ ಸಮ್ಮಾನ್ ಪುರಸ್ಕೃತ ಪ್ರಸಿದ್ಧ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಹಾಗೂ ಕವಿ ಡಾ. ಸಿದ್ದಲಿಂಗಯ್ಯನವರಂತಹ ಆರು ಮಹಾನ್ ಸಾಹಿತಿಗಳ ಕುರಿತು ಇಂದಿನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು. ಮೊದಲಿಗೆ ಕು. ಸಾನಿಧ್ಯ ಎಸ್ ಅವರ ಮಂಕುತಿಮ್ಮನ ಕಗ್ಗದ 'ಅಪ್ಪಾಲೆ ತಿಪ್ಪಾಲೆ' ಎನ್ನುವ ಕವಿತೆಯಿಂದ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಕು. ಸನ್ನಿಧಿ ಮಂಕುತಿಮ್ಮನ ಇನ್ನೊಂದು ಕಗ್ಗ 'ತಿರು ತಿರುಗಿ ತಿರುಗತ್ತೇ ತಾನೆ ಬುಗರಿ ತಾನೇ ಸೋತು' ಪ್ರಸ್ತುತಪಡಿಸಿದರು.

ಡಾ. ಡಿ.ವಿ. ಗುಂಡಪ್ಪನವರ ಕುರಿತಾಗಿ ತಮ್ಮ ವಿಚಾರವನ್ನು ಮಂಡನೆ ಮಾಡಿದ ಡಾ. ರಮೇಶ್ ಸಿ.ಎ. ಅವರ ಪರಿಚಯವನ್ನು ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಸಭೆಗೆ ಮಾಡಿಕೊಟ್ಟರು. ನಂತರ ಡಾ. ರಮೇಶ್ ಅವರು ಮಾತನಾಡುತ್ತಾ– ನನಗೆ ಡಿ.ವಿ.ಜಿ.ಯವರು ಆಪ್ತರಾಗಿದ್ದು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ. ಆ ಮೂರು ವರ್ಷವೂ ಶಾಲೆಯ ಬೆಳಗ್ಗಿನ ಪ್ರಾರ್ಥನೆಯಲ್ಲಿ "ವನಸುಮದೊಲೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ ಹೇ ದೇವ" ಎನ್ನುವ ಅವರ ಕವಿತೆಯ ಸಾಲು ಇರುತ್ತಿತ್ತು. ಇದು ಬಹಳ ಸರಳ ರೀತಿಯಲ್ಲಿ ಜೀವನ ಸಾರವನ್ನು ಹೇಳುತ್ತದೆ. ಕಾವ್ಯ ಯಾವುದೋ ಮೂಲೆಯಲ್ಲಿ ಘಮ್ಮನೆ ಅರಳುವ ಒಂದು ಕಾಡಿನ ಹೂವಿನಂತೆ ಯಾವ ಹೊಗಳಿಕೆಯನ್ನು ಬಯಸದೇ ತನ್ನ ಪಾಡಿಗೆ ತಾನು ಅರಳಿ ಕಂಪನ್ನು ಸೂಸಿ ಕೆಳಗೆ ಮುಗಿ ಬೀಳುವ ಹಾಗೆ ನಾವು ಮನುಷ್ಯರೂ ಕೂಡಾ ನಮ್ಮ ಕೆಲಸವನ್ನು, ಜೀವನವನ್ನು ನಡೆಸುತ್ತಾ ಕಳೆಯಬೇಕು ಎಂಬ ಸಂದೇಶವನ್ನು ಇಲ್ಲಿ ನೀಡಿದ್ದಾರೆ. "ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ ಸೌರಭವ ಸೂಸಿ ನಲವಿಂ ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು

ಕೃತಜ್ಞತೆಯ ಪಡೆವಂತೆ ಉಪಕಾರಿ ನಾನು ಎನ್ನುವ ಪ್ರಕೃತಿಯು ಜಗಕೆಂಬ ವಿಪರೀತ ಮತಿಯನುಳಿದ ವಿಪುಲಾಶಯನೀವ ಸುಫಲ ಸುಮಭರಿತ ಪಾದಪದಂತೆ ನೈಜಮಾದೊಳ್ಪಿನಿಂ ಬಾಳ್ವೊವೊಲು" ಈ ವನಸುಮದಂತೆಯೇ ತಮ್ಮ ಜೀವನವನ್ನು ನಿಜವಾಗಿ ಬಾಳಿ ಬದುಕಿದವರು ಡಿ.ವಿ.ಜಿ. ಎಂದರು.

ಸಾಮಾನ್ಯ ಕುಟುಂಬದಿಂದ ಬಂದಿದ್ದರೂ ಓದಿನ ಆಸಕ್ತಿ ಮತ್ತು ಕಠಿಣ ಪರಿಶ್ರಮದಿಂದ ಅವರು ಬೆಳೆದವರು. ಹಣದ ಕೊರತೆಯಿದ್ದರೂ ವಿದ್ಯಾಭ್ಯಾಸವನ್ನು ಕೈ ಬಿಡದೇ ಸಾಹಿತ್ಯ ಮತ್ತು ತತ್ವಶಾಸ್ತ್ರದಲ್ಲಿ ಆಳವಾದ ಆಧ್ಯಯನ ಮಾಡಿದರು. ಸಾಮೂಹಿಕ ಜನರ ಜೀವನ ಮತ್ತು ಭಾರತೀಯ ಸಂಸ್ಕೃತಿಯ ಮೌಲ್ಯಗಳು ಅವರ ಬರಹಗಳ ಮೂಲವಾಯಿತು. ಡಿ.ವಿ.ಜಿ.ಯವರ ಜೀವನವೇ ಸರಳತೆಗೆ ಮಾದರಿ. ವೈಭವ, ಪ್ರದರ್ಶನ ಅವರಿಂದ ತುಂಬಾ ದೂರ. ಅವರು ನಡತೆಯಲ್ಲಿಯೂ ಮತ್ತು ಬರಹದಲ್ಲಿಯೂ ಸದಾ ನಿಷ್ಠಾವಂತರಾಗಿದ್ದರು. ಸಾಮಾನ್ಯ ಮನುಷ್ಯರಿಗೂ ಜೀವನದ ಮಾದರಿಯು ಅರ್ಥವಾಗುವಂತೆ ಮಂಕುತಿಮ್ಮನ ಕಗ್ಗದಲ್ಲಿ ವಿವರಿಸಿದ್ದಾರೆ. ಈ ಒಂದು ಕೃತಿಯಿಂದ ಅವರು ಎಲ್ಲರ ಮನೆಮಾತಾದರು. ಮಂಕುತಿಮ್ಮನ ಕಗ್ಗವು ದಿನನಿತ್ಯವೂ ಒಂದಲ್ಲ ಒಂದು ಕಡೆ ಪ್ರಸ್ತಾಪಿಸಲ್ಪಡುವ ಕೃತಿಯಾಗಿ ಅಮರವಾಗಿ ಇಂದಿಗೂ ಉಳಿದಿದೆ. ಕಗ್ಗದ ಪ್ರತಿಯೊಂದು ಕವಿತೆಯೂ ನಾಲ್ಕೇ ನಾಲ್ಕು ಸಾಲುಗಳಲ್ಲಿ ಸೊಗಸಾಗಿ ಅವರ ತತ್ವ ಮೂಲದ ವ್ಯಕ್ತಿತ್ವವನ್ನು ತೋರಿಸುತ್ತದೆ. ಲೋಕವನ್ನು ಆಳವಾಗಿ ಅರ್ಥಮಾಡಿಕೊಂಡ ಡಿ.ವಿ.ಜಿಯವರು ಸಾಮಾನ್ಯರಿಗೂ ತಲುಪುವ ಶೈಲಿಯಲ್ಲಿ ಬರೆದರು. ಅವರ **"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ, ಎಲ್ಲರೊಳಗೊಂದಾಗು"**– ಮಂಕುತಿಮ್ಮ ಎಂಬ ಕಗ್ಗ ಬಹು ಜನಪ್ರಿಯವಾಗಿದೆ. ಅವರು ಕೇವಲ ಕವಿಯಲ್ಲ, ಜನರಿಗೆ ಬದುಕಿನ ಮಾರ್ಗ ತೋರಿಸಿದವರು, ಅವರ ವ್ಯಕ್ತಿತ್ವವೇ ನೈತಿಕ ಬಲದ ಸಂಕೇತ. ಅವರು ಅನುಭವಿಸಿದ ಬಡತನ, ಹೋರಾಟ, ಅಧ್ಯಯನ, ಸಮಾಜಸೇವೆ ಈ ಎಲ್ಲದರುಗಳ ಅನುಭವವೇ ಅವರ ಬರಹಗಳಿಗೆ ಜೀವ ತುಂಬಿತು. ಇಂತಹ ಅಂಗ ಸಂಪನ್ನ ವ್ಯಕ್ತಿಯಾಗಿ, ಪತ್ರಕರ್ತನಾಗಿ ಅವರು ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ತೋರಿದರು. ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡರು, ರಾಜಕೀಯವನ್ನು ಸೇವೆಯ ವೇದಿಕೆಯೆಂದು ಅವರು ನಂಬಿದವರು ಎಂದು ತಿಳಿಸಿದರು.

1943ರಲ್ಲಿ ಮೊದಲು ಪ್ರಕಟವಾದ ಈ ಪುಟ್ಟ ಅಂಗೈಯಲ್ಲಿ ಕೂರುವ ಚಿಕ್ಕ ಪುಸ್ತಕವನ್ನು ನೋಡಿ ಸ್ವತಃ ಕುವೆಂಪುರವರೇ ಮೊದಲು ನಕ್ಕರಂತೆ, ಓದುತ್ತಾ ಓದುತ್ತಾ ಅದರ ವಿಸ್ತಾರ ದರ್ಶನಕ್ಕೆ ಬೆರಗಾಗಿ ಮಸ್ತಕಕ್ಕೆ ಇಟ್ಟರಂತೆ. ಅವರ ಒಂದು ಮುಕ್ತಕದಲ್ಲಿ ಕಗ್ಗದ ಶೈಲಿಯಲ್ಲಿಯೇ ಹೇಳುತ್ತಾರೆ. ಅಸ್ತಕ್ಕೆ ಬರೆದದ್ದಕ್ಕೆ ಓದುತ್ತ ಓದುತ್ತ ಮಸ್ತಕಕ್ಕೆ ಇಟ್ಟು ಗಂಭೀರವಾದೆ, ವಿಸ್ತಾರದ ದರ್ಶನಕ್ಕೆ ತುತ್ತ ತುದಿಯಲಿ ನಿನ್ನ ಪುಸ್ತಕಕ್ಕೆ ಕೈ ಮುಗಿದೆ ಮಂಕುತಿಮ್ಮ. 945 ಕವನಗಳ ಈ ಸಂಕಲನವನ್ನು ಕನ್ನಡದ ಭಗವದ್ಗೀತೆ ಎಂದೇ ಕರೆಯುತ್ತಾರೆ. ಮಂಕುತಿಮ್ಮನ ಕಗ್ಗ ಈಗ 16ನೇ ಮುದ್ರಣ ದಾಟಿದರೂ ಇನ್ನೂ ಅಷ್ಟೇ ಜನಪ್ರಿಯವಾಗಿದೆ. ಉಮರನ ಒಸಗೆ, ಅಂತಃಪುರ ಗೀತೆ ಈ ಎರಡೂ ಕನ್ನಡ ಸಾಹಿತ್ಯದ ವಿಶಿಷ್ಠ ಮತ್ತು ಶ್ರೇಷ್ಠ ಕೃತಿಗಳು. ಜ್ಞಾಪಕ ಚಿತ್ರ ಶಾಲೆ ಎನ್ನುವುದು 8 ಪುಸ್ತಕಗಳ ಸರಣಿ. ಇದೂ ಕೂಡಾ ಡಿ.ವಿ.ಜಿ.ಯವರ ಅನನ್ಯವಾದ ಕೃತಿ. ಅವರು ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಸಮೃದ್ಧಿ ಪಡಿಸಿದ್ದೇ ಅಲ್ಲದೇ ಪಾಶ್ಚಾತ್ಯ ಆಧುನಿಕತೆ ಪ್ರಭಾವ ಹೆಚ್ಚುತ್ತಿದ್ದ ಕಾಲದಲ್ಲಿ ಭಾರತೀಯ ಸಂಸ್ಕೃತಿಯ ಆಳವಾದ ಮೌಲ್ಯಗಳನ್ನು ಬರಹಗಳ ಮೂಲಕ ಉಳಿಸಿದರು. ಅವರ ಕೃತಿಗಳು ಜಾತಿ, ಧರ್ಮ, ವರ್ಣಗಳ ಎಲ್ಲೆಯನ್ನು ಮೀರಿ ಮಾತನಾಡುತ್ತವೆ. ಸರಳ ಮಾನವೀಯ ಸಂದೇಶವನ್ನು ನೀಡುತ್ತವೆ. ಅಂದರೆ ಮನುಷ್ಯನ ಅಸ್ತಿತ್ವ, ಮೌಲ್ಯ, ನೀತಿ ಇವುಗಳನ್ನು ಅತೀ ಸರಳ ಶಬ್ದಗಳಲ್ಲಿ ತಿಳಿಸುತ್ತವೆ. ಸಮತೋಲನ, ಸಹನೆ, ತಾಳ್ಮೆ, ಸೇವಾಭಾವ ಇವೆಲ್ಲಾ ಅವರು ನಮ್ಮ ಸಂಸ್ಕೃತಿಗೆ ಕೊಟ್ಟ ಅಮೂಲ್ಯ ಕೊಡುಗೆಗಳು ಎಂದರು.

ಡಿ.ವಿ.ಜಿ. ಒಬ್ಬ ಅಪ್ರತಿಮ ಸಮಾಜಚಿಂತಕರು. ಅವರು ಸ್ಥಾಪಿಸಿದ ಗೋಖಲೆಯವರ ಸಾರ್ವಜನಿಕ ಸೇವಾ ಸಂಕಲ್ಪದಿಂದ ಸ್ಫೂರ್ತಿಗೊಂಡು ಗೋಖಲೆ ಸಾರ್ವಜನಿಕ ವಿಚಾರ ಸೇವಾ ಸಂಸ್ಥೆ, ಸಾಂಸ್ಕೃತಿಕ ಚರ್ಚೆಗಳ ಕೇಂದ್ರವಾಗಿದೆ. ಬೆಂಗಳೂರಿನಲ್ಲಿರುವ ಈ ಸಂಸ್ಥೆ ಇಂದಿಗೂ ಚಿಂತಕರನ್ನು ಬೆಳೆಸುತ್ತಿದೆ. ಸ್ವಾತಂತ್ರ ಹೋರಾಟಗಾರರ ಭಾಷಣಗಳು ಡಿ.ವಿ.ಜಿ.ಯವರ ಮೇಲೆ ಪ್ರಭಾವ ಬೀರಿದ್ದವು. ಮುಖ್ಯವಾಗಿ ಗೋಖಲೆಯವರ ವಿಚಾರಧಾರೆ ಮತ್ತು ವ್ಯಕ್ತಿತ್ವ ಡಿ.ವಿ.ಜಿ.ಯವರಲ್ಲಿ ಪ್ರೋತ್ಸಾಹಧಾರೆ ಹುಟ್ಟಿಸಿತ್ತು. ಸಾರ್ವಜನಿಕವಾಗಿ ಸಂಗ್ರಹಿಸಿದ ಒಂದು ಲಕ್ಷ ರೂಗಳನ್ನು ಇದೇ ಸಂಸ್ಥೆಗೆ ಡಿ.ವಿ.ಜಿ. ದಾನ ಮಾಡುತ್ತಾರೆ. ತಮಗೆ ಬಂದ ಪ್ರಶಸ್ತಿಯ ಹಣವನ್ನೂ ಕೂಡ ಗೋಖಲೆ ಸಂಸ್ಥೆಗೆ ಕೊಡುಗೆಯಾಗಿ ಕೊಡುತ್ತಾರೆ. ಕೊನೆಗೆ ತಮ್ಮ ಎಲ್ಲಾ ಕೃತಿಗಳ ಹಕ್ಕನ್ನೂ ಈ ಸಂಸ್ಥೆಗೆ ಬಿಟ್ಟು ಹೋದಂತಹ ಧೀಮಂತ ವ್ಯಕ್ತಿ ಡಿ.ವಿ.ಜಿ. ಈಗ ಈ ಸಂಸ್ಥೆ 60 ಸಾವಿರಕ್ಕೂ ಹೆಚ್ಚು ಪುಸ್ತಕಗಳ ಗ್ರಂಥಾಲಯವನ್ನು ಹೊಂದಿದೆ. ಇದು ಸಂಶೋಧಕರಿಗೆ ಉಪಯುಕ್ತವಾದುದು. ಈಗಲೂ ಪ್ರಬುದ್ಧ ಚಟುವಟಿಕೆ, ಸಂಗೀತ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳ ವೇದಿಕೆಯಾಗಿದೆ. ನೀತಿ ಶಿಕ್ಷಣ, ಸಮಾಜ, ದೇಶದ ಜಾಗೃತಿ ಮತ್ತು ಸಂವಾದಗಳ ಕ್ಷೇತ್ರದಲ್ಲಿ ಅನನ್ಯವಾದ ಸಾಧನೆಯನ್ನು ಈ ಸಂಸ್ಥೆ ಮಾಡಿದೆ ಎಂದು ತಿಳಿಸಿದರು.

ಡಿ.ವಿ.ಜಿ.ಯವರ ಅಂತಃಪುರ ಗೀತೆಯನ್ನು ಪರಿಚಯಿಸುತ್ತಾ ಇದು ಒಂದು ಶಿಲ್ಪ ಕಲೆಯ ಸೌಂದರ್ಯವನ್ನು ವರ್ಣಿಸಿದ 69 ಗೀತೆಗಳ ಸಂಗ್ರಹ. ಬೇಲೂರಿನ ಶಿಲಾ ಬಾಲಿಕೆಯರ ಸಮ್ಮಿಲನ, ಸಂಗೀತ, ನೃತ್ಯ ಮತ್ತು ಆಧ್ಯಾತ್ಮಿಕತೆಗಳನ್ನು ಸಂಯೋಜಿಸಿ ಬರೆದ ಮೊದಲನೇ ಕನ್ನಡ ಕಾವ್ಯ ಸಂಕಲನ. ಶಿಲಾಬಾಲಿಕೆಯರ ವಿವಿಧ ಭಾಗಗಳು, ಸಂಗೀತ ವಾದ್ಯಗಳು ಮತ್ತು ಚನ್ನಕೇಶವನ ಭಕ್ತಿಯನ್ನು ಇಲ್ಲಿ ನೋಡುತ್ತೇವೆ. ಡಿ.ವಿ.ಜಿ.ಯವರೇ ಇಲ್ಲಿ ಪ್ರತಿ ಗೀತೆಗೆ ರಾಗ ಮತ್ತು ತಾಳಗಳನ್ನು ಸೃಷ್ಟಿಸಿದ್ದಾರೆ. ಇದು ಸಂಗೀತ ಮತ್ತು ನೃತ್ಯ ಮಾಧ್ಯಮಗಳಲ್ಲಿ ಪ್ರದರ್ಶನಕ್ಕೆ ಸಹಾಯಕವಾಗಿವೆ. ಶಿಲ್ಪದ ಹೊರ ಸೌಂದರ್ಯವನ್ನು ಒಳಗಿನ ಭಗವಂತನ ಸೌಂದರ್ಯಕ್ಕೆ ಹೊಂದಿರುವುದು ಈ ಕೃತಿಯ ವಿಶಿಷ್ಟತೆ. ಇಡೀ ಜಗತ್ತು ಅಂತಃಪುರ, ಬಟ್ಟೆಯೆಲ್ಲ ಪ್ರೇಮಿಗಳು, ಅವರ ಪ್ರೇಮದ ಪರಮ ಪಾತ್ರ ಚನ್ನಕೇಶವ ಎಂಬ ಅರ್ಥವುಳ್ಳ, ಸಂಕೇತವುಳ್ಳ, ಕಾವ್ಯ ಇದು ಎಂದು ಕೆಲವರು ಅರ್ಥೈಸಿದ್ದಾರೆ. ಜೊತೆಗೆ ಭಕ್ತಿ ಮತ್ತು ಸೌಂಧರ್ಯದ ಸಮನ್ವಯವನ್ನು ಪ್ರತಿಪಾದಿಸುತ್ತದೆ ಎಂದು ಇನ್ನೂ ಕೆಲವರು ಹೇಳುತ್ತಾರೆ. ಹೊಸ ಗೀತಕ್ಕೆ ಒಂದೆರಡು ಮಾತು ಪರ್ಷಿಯನ್ ಕವಿಯವರ ಪ್ರಭಾವಕ್ಕೆ ಒಳಗಾದ ಕನ್ನಡದಲ್ಲಿ ನೀಡಿದ ಸೃಜನಾತ್ಮಕ ಅನುವಾದ ಇವರ ಕೃತಿಯಾಗಿತ್ತು ಎಂದರು.



ಸಮಯದ ಅರಿವು, ಸೌಂದರ್ಯದ ಕ್ಷಣಿಕತೆ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಮಾರ್ಮಿಕವಾಗಿ ವ್ಯಕ್ತಪಡಿಸುವ ಮಾನವ ನಂತರದ ಜಗತ್ತಿನ ಬಗ್ಗೆ ಸಂದೇಹ ಮತ್ತು ಈ ಕ್ಷಣದ ಆಗುಗಳನ್ನು ಒತ್ತಿ ಹೇಳುವ ಕೃತಿ ಇದು. ಇದನ್ನು ಕನ್ನಡದ ಸೊಗಸಿನಲ್ಲಿ ಮರುಜೀವಗೊಳಸಿದ್ದಾರೆ ಡಿ.ವಿ.ಜಿ. ಒಂದು ವಿದೇಶಿ ಕಾವ್ಯವನ್ನು ಸ್ಥಳೀಯ ಭಾಷೆಗೆ ಡಿ.ವಿ.ಜಿ.ಯವರ ಪ್ರತಿಭೆಯನ್ನು ಈ ಕೃತಿ ಪ್ರೇರೇಪಿಸುತ್ತದೆ. ಜ್ಞಾಪಕ ಚಿತ್ರ ಶಾಲೆ ಡಿ.ವಿ.ಜಿ.ಯವರ 8 ಪುಸ್ತಕಗಳ ಸರಣಿ. ಅವರ ಜೀವನ, ಸಂದರ್ಶನಗಳು ಮತ್ತು ಅವರು ಭೇಟಿ ಮಾಡಿದ ಜನರ ಬಗ್ಗೆ ಈ ಕೃತಿ ಹೇಳುತ್ತದೆ. ಮತ್ತು ಡಿ.ವಿ.ಜಿ.ಯವರು ತಮ್ಮ ಜೀವನದುದ್ದಕ್ಕೂ ಭೇಟಿ ನೀಡಿದ ವಿಭಿನ್ನ ವ್ಯಕ್ತಿಗಳ ಜೀವನ ಕ್ರಮ ಮತ್ತು ಅವರ ಪಾತ್ರ ಇವುಗಳನ್ನು ವಿವರಿಸುತ್ತದೆ. ಸುಮಾರು 70 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಡಿ.ವಿ.ಜಿ. ಕನ್ನಡ ಸಾಹಿತ್ಯಲೋಕದ ಅದ್ವಿತೀಯ, ಅಪ್ರತಿಮ ಕವಿ. 1961ರಲ್ಲಿ ಡಿ.ವಿ.ಜಿ.ಯವರಿಗೆ ಮೈಸೂರು ವಿಶ್ವವಿದ್ಯಾಲಯವು ಡಿಲಿಟ್ ಪದವಿ ನೀಡಿತ್ತು. 1968ರಲ್ಲಿ ಭಗವದ್ಗೀತಾ ತಾತ್ಪರ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಡಿ.ವಿ.ಜಿ.ಯವರು 1932ರಲ್ಲಿ ಮಡಿಕೇರಿಯಲ್ಲಿ ನಡೆದ 18ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1928ರಲ್ಲಿ ಬಾಗಲಕೋಟೆಯಲ್ಲಿ ನಡೆದ ಅಖಿಲ ಭಾರತ ಕರ್ನಾಟಕ ವೃತ್ತಿ ಪತ್ರಕರ್ತರ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಡಿ.ವಿ.ಜಿ. ಅವರಿಗೆ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ ಕೂಡಾ ಸಿಕ್ಕಿತ್ತು ಎಂದು ಹೇಳಿ ಈ ಒಂದು ಸಾಹಿತ್ಯ ಕಾರ್ಯಕ್ರಮದಲ್ಲಿ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿ ತಮ್ಮ ವಿಚಾರ ಮಂಡನೆಯನ್ನು ಮುಗಿಸಿದರು.

ನಂತರ ಸಂಘದ ಕಲಿಕಾ ಕೇಂದ್ರದಲ್ಲಿ ಕನ್ನಡ ಕಲಿಯುತ್ತಿರುವ ಮಕ್ಕಳಾದ ಕು. ನವೀಕಾ ಅವರಿಂದ "ಹಾಲಕಾಯಿಸಿ ಹೆಪ್ಪನಿಕ್ಕಿ" ಹಾಗೂ ಕು.ತಾನ್ಯ ಅವರಿಂದ "ಋಣವನ್ನು ತೀರಿಸಬೇಕು, ಋಣವನ್ನು ತೀರಿಸಬೇಕು", ಚಾರ್ವಿಕ್, ರಿತ್ವಿಕ್, ಸನ್ಮೃಕ್ ಅವರುಗಳಿಂದ "ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು" ಎನ್ನುವ ಮಂಕುತಿಮ್ಮನ ಕಗ್ಗ ಪ್ರಸ್ತುತಗೊಂಡವು.

ಶ್ರೀ ಬಿ.ಎಂ. ಶ್ರೀಕಂಠಯ್ಯ ಅವರ ಕುರಿತು ವಿಚಾರ ಮಂಡನೆ ಮಾಡಲು ಭಾಗಿಯಾಗಿದ್ದ ಡಾ. ರಿಯಾಜ್ ಪಾಷ, ಸಹ ಪ್ರಾಧ್ಯಾಪಕರು, ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು ಅವರ ಪರಿಚಯವನ್ನು ಸಂಘದ ಉಪಾಧ್ಯಕ್ಷೆಯಾದ ಶ್ರೀಮತಿ ಪೂಜಾ ಪಿ. ರಾವ್ ಅವರು ಸಭೆಗೆ ಮಾಡಿಕೊಟ್ಟರು. ಡಾ. ರಿಯಾಜ್ ಪಾಷ ಅವರು ಮಾತನಾಡುತ್ತಾ, 20ನೇ ಶತಮಾನದ ಆದಿ ಭಾಗದಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸ ರೂಪವನ್ನು ನೀಡಿದಂತಹ ನವೋದಯ ಪ್ರವರ್ತಕ ಶ್ರೀ ಬಿಎಂಶ್ರೀ ಅವರು. ಅವರನ್ನು ಹೊಸ ಕನ್ನಡ ಸಾಹಿತ್ಯದ ರೂವಾರಿ ಅಂತಾನೂ ಹೇಳಬಹುದು. ಕನ್ನಡವನ್ನು ಬೆಳಸಲಿಕ್ಕೆ ಅವರು ಪಟ್ಟಂತಹ ಶ್ರಮ ಬಹಳ ಅನನ್ಯವಾದದ್ದು. ಬಿಎಂಶ್ರೀ ಕೊಟ್ಟಂತಹ ಒಂದು ಮಾದರಿ 'ಕಾಣಿಕೆ' ಎನ್ನುವ ಕವನದಲ್ಲಿ ಬರುತ್ತದೆ. "ಒಮ್ಮೆ ಇವಳು, ಒಮ್ಮೆ ಅವಳು, ಹೋಗೆ ನನಗೆ ಹಬ್ಬವಾಗಿ ಇನಿಯರಿಬ್ಬರನ್ನು ತೂಗಿ ಇವಳ ಸೊಬಗನವಳು ತೊಟ್ಟು ನೋಡಬಯಸಿದೆ, ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ" ಮೂಲತಃ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದಂತಹ ಶ್ರೀ ಬಿಎಂಶ್ರೀ



ಎರಡೂ ಭಾಷೆಗಳನ್ನು ಆಳವಾಗಿ ಪ್ರೀತಿಸುತ್ತಿದ್ದವರು. ಹಾಗಾಗಿ ಕನ್ನಡವನ್ನು ಹೇಗೆ ಬೆಳೆಸಬೇಕು ಎನ್ನುವುದಕ್ಕೆ ಇನ್ನೊಂದು ಮಾದರಿಯನ್ನು ಕೊಟ್ಟಿದ್ದಾರೆ. ಅಂದರೆ ಕೊಡು–ಕೊಳ್ಳುವಿಕೆಯ ಮೂಲಕವಾಗಿ ಕನ್ನಡ ಭಾಷೆಯನ್ನು ಬಳಸಿಕೊಳ್ಳಬಹುದು ಎನ್ನುವ ಸಂದೇಶವನ್ನು ಈ ಪದ್ಯದ ಮೂಲಕವಾಗಿ ನಮಗೆ ತಿಳಿಸಿಕೊಡುತ್ತಾರೆ ಎಂದರು.

ಅದೇ ಇನ್ನೊಂದು ಕಡೆ ಶ್ರೀ ಜಿ.ಪಿ. ರಾಜರತ್ನಂ ನರಕಕ್ ಇಳ್ಸಿ ನಾಲ್ಗೆ ಸೀಳಿದ್ರು ಮೂಗ್ನಲ್ಲಿ ಕನ್ನಡ ಪದವಾಡ್ತೀನಿ ನನ್ನ ಮನಸ್ಸಲ್ಲಿ ನೀನ್ ಕಾಣೆ ಎನ್ನುವ ಮಾತುಗಳನ್ನು ಹೇಳುತ್ತ, ಅತಿಯಾದ ಅಭಿಮಾನವನ್ನು ತೋರಿಸಿ ನಮ್ಮ ಮೂಲ ಕನ್ನಡವನ್ನು ಯಾವ ರೀತಿ ಬಳಸಬೇಕಾಗಿದೆ ಎನ್ನುವ ಮಾತುಗಳನ್ನು ಜಿ.ಪಿ. ರಾಜರತ್ನಂ ತಿಳಿಸಿಕೊಡುತ್ತಾರೆ. ಹಾಗಾಗಿ ಜಿ.ಪಿ. ರಾಜರತ್ನಂರವರ ಒಂದು ಮಾದರಿ ಮತ್ತು ಬಿಎಂಶ್ರೀಯವರ ಮಾದರಿ, ಎರಡೂ ಮಾದರಿಗಳು ನಮ್ಮ ಮುಂದಿವೆ ಕನ್ನಡ ಭಾಷೆಯನ್ನು ಬೆಳೆಸುವುದಕ್ಕೆ. ಬಿಎಂಶ್ರೀಯವರನ್ನು ಮೂರು ಭಾಗಗಳಲ್ಲಿ ಪರಿಚಯಿಸಬಹುದು. ಮೊದಲನೆಯದು ಅವರ ಶಿಕ್ಷಣ ಮತ್ತು ವೃತ್ತಿ, ಎರಡನೇಯದು ಅವರ ಸಾಹಿತ್ಯ ಕೃಷಿ, ಮೂರನೇಯದು ಅವರು ನಾಡು, ನುಡಿ, ವಿದ್ವತ್ ಜಗತ್ತಿಗೆ ಕೊಟ್ಟಂತಹ ಕೊಡುಗೆ. ಬಿಎಂಶ್ರೀ ನವೋದಯ ಸಾಹಿತ್ಯದ ಆಚಾರ್ಯ ಪುರುಷರು. ಶ್ರೀ ಎಂಬ ಕಾವ್ಯನಾಮದಿಂದ ಜನಜನಿತರಾಗಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಯಾಗಿ, ಪ್ರಾಧ್ಯಾಪಕರಾಗಿ, ವಿವಿಧ ಶಿಕ್ಷಣ ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಉನ್ನತ ಅಧಿಕಾರಿಗಳಾಗಿ, ಕವಿಗಳಾಗಿ, ವಿದ್ವಾಂಸರಾಗಿ ದುಡಿದಂತಹ ಇವರು ತುಂಬು ಜೀವನ ನಡೆಸಿ ಕನ್ನಡ ನಾಡಿನ ಚರಿತ್ರೆಯಲ್ಲಿ ಚಿರಸ್ಮರಣಿಯರಾಗಿದ್ದಾರೆ ಎಂದು ತಿಳಿಸಿದರು.

ಬಿಎಂಶ್ರೀ ಅವರು 1884ರಲ್ಲಿ ತುಮಕೂರು ಜಿಲ್ಲೆ ಸಂಪಿಗೆಯಲ್ಲಿ ಜನಿಸುತ್ತಾರೆ. ತಂದೆ ಮೈಲಾರಯ್ಯನವರಿಂದ ಅವರು ಇಂಗ್ಲೀಷ್ ಕಲಿದುಕೊಳ್ಳುತ್ತಾರೆ. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಮತ್ತು 1907ರಲ್ಲಿ ಮದರಾಸು ವಿ.ವಿ.ಯಲ್ಲಿ ಬಿ.ಎಲ್. ಪದವಿ ಹಾಗೂ 1909ರಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡು ನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿಯೇ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇರಿಕೊಳ್ಳುತ್ತಾರೆ. ಅನಂತರ ಪ್ರಾಚಾರ್ಯ ಹುದ್ದೆಗೆ ಪದೋನ್ನತಿ ಹೊಂದುತ್ತಾರೆ. ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಕೂಡ 4 ವರ್ಷ ಸೇವೆ ಸಲ್ಲಿಸುತ್ತಾರೆ. 1938ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಸ್ಥಾನವನ್ನೂ ಕೂಡ ಇವರು ಅಲಂಕರಿಸುತ್ತಾರೆ, 1942ರಲ್ಲಿ ಧಾರವಾಡದ ಆರ್ಟ್ಸ್ ಕಾಲೇಜಿನ



ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಾರೆ. ಸಾರ್ಥಕ ಜೀವನ ನಡೆಸಿ 1946ರ ಜನವರಿ 5ರಂದು ಬಿಎಂಶ್ರೀಯವರು ನಿಧನ ಹೊಂದುತ್ತಾರೆ ಎಂದರು.

ಹೀಗೆ ಬಿಎಂಶ್ರೀ ಅವರು ಬೇರೆ ಬೇರೆ ಕ್ಷೇತ್ರಗಳಲ್ಲಿ ಶಿಕ್ಷಣ ಕ್ಷೇತ್ರ, ಆಡಳಿತದಲ್ಲಿ ಅಪಾರವಾದಂತಹ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಸಾಹಿತ್ಯ ಕೃಷಿಗೆ ಸಂಬಂಧಿಸಿದಂತೆ ಹೇಳುವುದಾದರೆ ಇಂಗ್ಲೀಷ್ ಗೀತಗಳು, ಹೊಂಗನಸುಗಳು ಎಂಬ ಕವನ ಸಂಕಲನಗಳನ್ನು ಬರೆಯುತ್ತಾರೆ. ಗದಾಯುದ್ಧ, ಅಶ್ವತ್ಥಾಮನ್, ಪಾರಸಿಕರು ಇವರ ರಚನೆಯ ನಾಟಕಗಳು, ಕನ್ನಡ ಮಾತು ತಲೆಯೆತ್ತುವ ಬಗ್ಗೆ, ಕನ್ನಡವನ್ನು ಕಟ್ಟಿ ಎನ್ನುವಂತಹ ಅದ್ಭುತವಾದ ಭಾಷಣಗಳನ್ನು ಇವರು ಮಾಡುತ್ತಾರೆ. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕನ್ನಡ ಸಾಹಿತ್ಯದ ಚರಿತ್ರೆ, ಕನ್ನಡ ಛಂದಸ್ಸಿನ ಚರಿತ್ರೆ, ಇಸ್ಲಾಂ ಸಂಸ್ಕೃತಿ ಎನ್ನುವುದನ್ನು ಇವರು ಅನುವಾದ ಮಾಡುತ್ತಾರೆ. ಇವರ ಕೃತಿಗಳ ವಿಶೇಷತೆ ಏನೆಂದರೆ ಗಾತ್ರದಲ್ಲಿ ಸಣ್ಣದಾದರೂ ಕೂಡಾ ತೂಕದಲ್ಲಿ ಬಹಳ ದೊಡ್ಡದಾದಂತಹದು. ಪ್ರಾರಂಭದಲ್ಲಿ ಇವರು ವಿದ್ಯಾರ್ಥಿಗಳಿಗಾಗಿ ಬರೆದಂತಹ A Hand Book of Rhetoric ಅಲಂಕಾರ ಶಾಸ್ತ್ರ ಟಿಪ್ಪಣಿ ಬಹಳ ಬೇಗ ಕಣ್ಮರೆಯಾಗುತ್ತದೆ. Tragic Ravana ಎನ್ನುವಂತಹ ಇಂಗ್ಲೀಷ್ ಲೇಖನವನ್ನು ಇವರು ಬರೆದಿದ್ದಾರೆ. ಇಂಗ್ಲೀಷ್‌ನಲ್ಲಿ ಬರೆದಂತಹ ಇವರ ಸಾಹಿತ್ಯ ಕೃತಿಗಳು ಹೆಚ್ಚು ಪ್ರಚಾರವನ್ನು ಪಡೆದುಕೊಳ್ಳುವುದಿಲ್ಲ. ಕುವೆಂಪುರವರು ಪ್ರಾರಂಭದಲ್ಲಿ ಇಂಗ್ಲೀಷಿನಲ್ಲಿ ಬರೆದ ಕವನಗಳು ಹೆಚ್ಚು ಮಾನ್ಯತೆಯನ್ನು ಪಡೆದುಕೊಂಡಿದ್ದರೂ ಕೂಡಾ ಹೆಚ್. ಕನ್‌ವಿನ್ಸ್‌ರವರು ಬಂದಾಗ ಅದನ್ನು ತಿರಸ್ಕರಿಸುತ್ತಾರೆ. ನಿನ್ನ ಮಾತೃಭಾಷೆಯಲ್ಲಿ ಏನು ಬರೆದಿದ್ದೀಯ ಅದನ್ನು ತೋರಿಸು ಎಂದು ಕೇಳುತ್ತಾರಲ್ಲ ಹಾಗೆಯೇ ಇಲ್ಲಿ ಬಿಎಂಶ್ರೀ ಅವರು ಬರೆದಂತಹ ಇಂಗ್ಲೀಷ್ ಸಾಹಿತ್ಯ

ಕೃತಿಗಳು ಹೆಚ್ಚು ಮನ್ನಣೆಯನ್ನು ಪಡೆದುಕೊಳ್ಳುವುದಿಲ್ಲ ಎಂದರು.

ಬಿಎಂಶ್ರೀ ಅವರು ಇದ್ದಂತಹ ಕಾಲ ಸ್ವಾತಂತ್ರ್ಯ ಪೂರ್ವ. ಆ ಕಾಲದಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ಇಂಗ್ಲೀಷ್‌ಗೆ ಪ್ರಾಧಾನ್ಯತೆ ಇತ್ತು. ಕನ್ನಡವನ್ನು ಓದುವಂತಹವರು ಯಾರೂ ಇರಲಿಲ್ಲ, ಕನ್ನಡವನ್ನು ಮಾತನಾಡುವಂತಹವರು ಕೂಡಾ ಹೆಚ್ಚು ಆ ಕಾಲ ಘಟ್ಟದಲ್ಲಿ ಕಾಣಿಸಿಕೊಳ್ಳುವುದಿಲ್ಲ, ಕನ್ನಡದಲ್ಲಿ ಮಾತನಾಡುವುದೆಂದರೆ ಒಂದು ರೀತಿಯ ಸಂಕೋಚವನ್ನು ಅನುಭವಿಸುತ್ತಿರುತ್ತಾರೆ, ಕನ್ನಡದಲ್ಲಿ ಓದಲು ಏನಿದೆ ಅನ್ನುವ ಪ್ರಶ್ನೆಯನ್ನು ಕೇಳುವಂತಹ ಕಾಲಘಟ್ಟದಲ್ಲಿ ಬಿಎಂಶ್ರೀ ಕನ್ನಡವನ್ನು ಬೆಳೆಸುವಂತಹ ಕಾಯಕವನ್ನು ಮಾಡುತ್ತಾರೆ. ಕಣ್ವ ಮಹರ್ಷಿಗಳು ಹೇಗೆ ವಿಶ್ವಾಮಿತ್ರ ಮತ್ತು ಮೇನಕೆ ಬಿಟ್ಟು ಹೋದಂತಹ ಅನಾಥ ಶಕುಂತಲೆಯನ್ನು ಸಾಕಿ ಬೆಳೆಸುತ್ತಾರೋ ಹಾಗೆ ಕನ್ನಡವನ್ನು, ಕನ್ನಡ ಸಾಹಿತ್ಯವನ್ನು ಬೆಳೆಸಿದವರು ಬಿಎಂಶ್ರೀ ಅವರು. ಆದ್ದರಿಂದ ಬಿಎಂಶ್ರೀ ಅವರಿಗೆ ಕನ್ನಡದ ಕಣ್ವ ಎನ್ನುವ ಬಿರುದು ಬರುತ್ತದೆ ಎಂದರು.

ಇವರ ಹೊಂಗನಸುಗಳು ಕವನ ಸಂಕಲನದಲ್ಲಿನ ಹಲವಾರು ಕವನಗಳು ಈ ಅಭಿಯಾನದಲ್ಲಿ ಪ್ರಕಟವಾಗುತ್ತವೆ. ಬ್ರಹ್ಮನ ಕಾವ್ಯವನ್ನು ಆಧರಿಸಿದಂತಹ ಗದಾಯುದ್ಧ ನಾಟಕ 1926ರಲ್ಲಿ ಪ್ರಕಟವಾಗುತ್ತದೆ. ಈ ಒಂದು ಗದಾಯುದ್ಧ ನಾಟಕದಲ್ಲಿ ಬಿಎಂಶ್ರೀ ಅವರು ದುರ್ಯೋದನನನ್ನು ನಾಯಕನ ಪಟ್ಟಕ್ಕೇರಿಸುವಂತಹ ಒಂದು ಕೆಲಸವನ್ನು ಮಾಡುತ್ತಾರೆ. ಹೀಗೆ ಇವರು ಬರೆದಂತಹ ಅಶ್ವತ್ಥಾಮನ್ ನಾಟಕ ಒಂದು ರುದ್ರ ನಾಟಕ. ಸಾಕ್ರೆಟಿಸ್ ಗ್ರೀಸ್‌ನಲ್ಲಿ ಬರೆದಿರುವ ದುರಂತ ನಾಟಕವನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನು ಬಿಎಂಶ್ರೀ ಅವರು ಮಾಡಿದ್ದಾರೆ. ಈ ನಾಟಕದಲ್ಲಿ ಕೊನೆಗೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಅಶ್ವತ್ಥಾಮನನ್ನು ಒಂದು ವಿಶೇಷವಾದ ರೂಪದಲ್ಲಿ ಬಿಂಬಿಸಲಿಕ್ಕೆ ಪ್ರಯತ್ನಿಸುತ್ತಾರೆ. ಆದರೆ ಈ ನಾಟಕ ಮುಂದೆ ವಾದ–ವಿವಾದಕ್ಕೆ ಎಡೆ ಮಾಡಿಕೊಡುತ್ತದೆ. ಏಕೆಂದರೆ ಪೌರಾಣಿಕ ವ್ಯಕ್ತಿಯಾದಂತಹ ಅಶ್ವತ್ಥಾಮ ಚಿರಂಜೀವಿ ಎನ್ನುವುದು ಮೂಲಭೂತವಾಗಿ ಬರುವ ಚಿಂತನೆಯಲ್ಲಿ ಇರುವಂತಹದ್ದು, ಹಾಗಾಗಿ ಬಿಎಂಶ್ರೀಯವರು ಆತ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ ಎಂದು ತೋರಿಸಿಕೊಡುತ್ತಾರೋ ಓದುಗರಿಗೆ ಅದನ್ನು ಅರಗಿಸಿಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ, ಕನ್ನಡ ಸಾಹಿತ್ಯದಲ್ಲಿ ಈ ರೀತಿಯಾದತಂಹ ಒಂದು ಸಾಹಿತ್ಯ ಕೃತಿ ನಾಟಕ ಬಂದಾಗ ಅದರ ವಿರೋಧವನ್ನು ಎದುರಿಸಬೇಕಾಗಿ ಬಿಎಂಶ್ರೀ ಅವರಿಗೆ ಬರುತ್ತದೆ. ಇವರಿಗೆ ತುಂಬಾ ಹೆಸರನ್ನು ತಂದುಕೊಟ್ಟಿದ್ದು ವಿದ್ಯಾವರ್ಧಕ ಸಂಘದಲ್ಲಿ ಮಾಡಿದ ಕನ್ನಡ ಮಾತು ತಲೆಯೆತ್ತುವ ಬಗ್ಗೆ ಮಾಡಿದ ಭಾಷಣ. ಬಹಳ ಅರ್ಥಗರ್ಭಿತವಾಗಿರುತ್ತದೆ ಮತ್ತು ಈಗಲೂ ಪ್ರಸ್ತುತ ಎನಿಸಿಕೊಳ್ಳುತ್ತದೆ. ಬಿಎಂಶ್ರೀಯುವರು ಕೇವಲ ವಿದ್ವಾಂಸರು ಮಾತ್ರ ಆಗಿರಲಿಲ್ಲ, ಕನ್ನಡವನ್ನು ಕಟ್ಟುವಂತಹ ನಿಟ್ಟಿನಲ್ಲಿ ಏನೆಲ್ಲ ಪ್ರಯತ್ನಗಳನ್ನು ಮಾಡಬೇಕು ಆ ಎಲ್ಲ ಪ್ರಯತ್ನಗಳನ್ನು ಮಾಡಿದವರು. ಅವರ ಕಂಠಸಿರಿ ಬಹಳ ಅದ್ಭುತವಾಗಿತ್ತು. ಬಹಳ ಸುಲಲಿತವಾಗಿ ಮಾತುಗಳನ್ನಾಡುತ್ತಿದ್ದರು. ಹಾಗಾಗಿ ಬಿಎಂಶ್ರೀ ಹೆಚ್ಚು ಪ್ರಚಾರಗಳನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇಡೀ ನಾಡಿನ ಉದ್ದಕ್ಕೂ ಕನ್ನಡವನ್ನು ಕಟ್ಟುವುದಕ್ಕೆ ಹೋರಾಟವನ್ನು ಅವರು ಮಾಡುತ್ತಾರೆ. ಬಿಎಂಶ್ರೀ ಕನ್ನಡದ ಕಟ್ಟಾಳು, ಅಂತಹ ಸಾಹಿತಿ, ವಾಗ್ಮಿಗಳು ಮತ್ತು ಕನ್ನಡಕ್ಕಾಗಿ ದುಡಿದವರಂತವರ ಬಗ್ಗೆ ಮಾತನಾಡಲಿಕ್ಕೆ ಇಂದು ಅವಕಾಶ ಮಾಡಿಕೊಟ್ಟಿದ್ದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿ ಡಾ. ರಿಯಾಜ್ ಪಾಷ ತಮ್ಮ ಮಾತನ್ನು ಮುಗಿಸಿದರು.

ಡಾ. ಎಂ. ಗೋಪಾಲಕೃಷ್ಣ ಅಡಿಗ ಅವರ ಕುರಿತು ವಿಚಾರ ಮಂಡನೆ ಮಾಡಲು ಕಾರ್ಯಕ್ರಮದಲ್ಲಿ ಆನ್ಲೈನ್ ಮೂಲಕ ಭಾಗಿಯಾದ ಡಾ. ಆರ್. ಚಲಪತಿ ಅವರ ಪರಿಚಯನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಸಭೆಗೆ ಮಾಡಿಕೊಟ್ಟರು. ಡಾ. ಆರ್. ಚಲಪತಿ ಅವರು ಮಾತನಾಡುತ್ತಾ "ಯಾವ ಮೋಹನ ಮುರಳಿ ಕರೆಯಿತೋ ದೂರ ತೀರಕೆ ನಿನ್ನನು, ಯಾವ ಬೃಂದಾವನವು ಸೆಳೆಯಿತೋ ನಿನ್ನ ಮಿಂಚಿನ ಕಣ್ಣನು"–ಎಂದು ಸುಶ್ರಾವ್ಯವಾಗಿ ಹಾಡುತ್ತ ಅಡಿಗರು ಬರೆದ ಈ ಕವಿತೆಯ ಹಾಡನ್ನು ಹಾಡಾಗಿ ಕೇಳದೇ ಇರುವವರು ಇಲ್ಲ ಎಂದುಕೊಂಡಿದ್ದೇನೆ, ಏಕೆಂದರೆ ಅಷ್ಟರ ಮಟ್ಟಿಗೆ ಈ ಹಾಡು ಜನಮನದಲ್ಲಿ ನೆಲೆಸಿರುವಂತಹದ್ದು. ಇದರ ಕೊನೆಯ ಸಾಲುಗಳು ಯಾವಾಗಲೂ ಕೂಡಾ ಬಹಳ ಚಂದ. "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ" ಎಂದು ಹೇಳಿದವರು ಕವಿ ಅಡಿಗರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರಿಯವರು. ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೇ ಮುಗಿಸಿ ನಂತರ ಮೈಸೂರಿನಲ್ಲಿ ತಮ್ಮ ಬಿ.ಎ. ಆನರ್ಸ್–ಇಂಗ್ಲೀಷಿನಲ್ಲಿ ಮುಗಿಸಿಕೊಂಡು ಮೈಸೂರಿನ ಶಾರದಾ ವಿಲಾಸ ಕಾಲೇಜು ಮತ್ತು ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ನಂತರದಲ್ಲಿ ಕುಮಟಾದ ಸರ್ಕಾರಿ ಪದವಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ತದನಂತರ ಉಡುಪಿಯ ಪೂರ್ಣಪ್ರಜ್ಞಾ ಕಾಲೇಜು ಹಾಗು ಸಾಗರದ ಲಾಲ್ ಬಹದ್ದೂರ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡಿದರು ಎಂದು ತಿಳಿಸಿದರು.

ಕವಿಯಾಗಿಯೂ ಹೆಸರು ಮಾಡಿದವರು ಅಡಿಗರು. ಏಕೆಂದರೆ ಕನ್ನಡದಲ್ಲಿ ನಾಲ್ಕು ಚಳವಳಿಗಳನ್ನು ಗುರುತಿಸಲಾಗುತ್ತದೆ. ಅದು ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ. ಈ ನವ್ಯ ಚಳವಳಿಯ ಪ್ರವರ್ತಕರು ಅಡಿಗರು ಎಂದು ಹೇಳಿ ಕನ್ನಡ ಜಗತ್ತು ಅವರನ್ನು ಕೊಂಡಾಡುತ್ತದೆ. ಅವರು ತಮ್ಮ 13ನೇ ವಯಸ್ಸಿನಲ್ಲಿಯೇ ಕಾವ್ಯ ರಚನೆಯನ್ನು ಪ್ರಾರಂಭಿಸುತ್ತಾರೆ ಎಂದು ಅವರ ಚರಿತ್ರೆ ಹೇಳುತ್ತದೆ. ಸುಮಾರು 1933–34ರ ಹೊತ್ತಿಗೆ ಅವರು ಕವಿಯಾಗಿ ತಮ್ಮ ರಚನೆಗಳನ್ನು ಪ್ರಾರಂಭಿಸಿದರು, ಅವರ ಮೊದಲನೇ ಕವನ ಸಂಕಲನ 'ಭಾವತರಂಗ' ಬಂದಿದ್ದು 1946ರಲ್ಲಿ. ನಂತರ ಅವರ 'ಕಟ್ಟುವೆವು ನಾವು' ಕವನ ಸಂಕಲನ 1948ರಲ್ಲಿ ಪ್ರಕಟಗೊಂಡಿತು. ಈ ಎರಡೂ ನವೋದಯ ಕಾವ್ಯಪರಂಪರೆಯ ಒಳಗಡೆಯೇ ಇದ್ದುಕೊಂಡು ಬರೆದ ಅವರ ಕವನ ಸಂಕಲನಗಳು. ಅಲ್ಲಿ ಒಂದು ರೀತಿ ಭಾವತೀವ್ರತೆ, ದೇಶಪ್ರೇಮದ ನೆಲೆ ಈ ಎರಡೂ ಕೂಡ ಕಾಣಿಸುತ್ತವೆ. ಕಟ್ಟುವೆವು ನಾವು ಎನ್ನುವ ಹೆಸರಿನ ಆ ಕವಿತೆಯನ್ನೇ ನೋಡಿದರೆ ಗೊತ್ತಾಗುತ್ತದೆ–ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು ಎಂದು ಪ್ರಾರಂಭವಾಗುತ್ತದೆ. ಅಂಥ ಭಾವತೀವ್ರತೆಯ ಒಳಗಡೆ ಇದ್ದಂತಹ ಕವಿ ದೇಶಕ್ಕೆ ಸ್ವಾತಂತ್ರ್ಯ ಬಂದ ಕೆಲವೇ ವರ್ಷಗಳ ಒಳಗಡೆ ಬಹುಶ; ಈ ದೇಶದ ಸ್ಥಿತಿ ಏನಿದೆ, ಸಾಮಾಜಿಕ ವಾಸ್ತವ ಏನಿದೆ ಆ ಕುರಿತು ಆ ಸಾಮಾಜಿಕ ವಾಸ್ತವದಲ್ಲಿ ಭಾರತೀಯ ವ್ಯಕ್ತಿ ಬದುಕಿನೊಳಗಡೆ ಏನಾಗುತ್ತಿದ್ದಾನೆ, ಆ ಭಾರತೀಯ ವ್ಯಕ್ತಿಯ ಸ್ಥಿತಿ ಯಾವ ರೀತಿಯದ್ದು, ಅನ್ನುವಂತಹ ಈ ಆಧುನಿಕತೆಯ ಪರಿಣಾಮಗಳನ್ನು ಇಟ್ಟುಕೊಂಡು ಗ್ರಹಿಸಲಿಕ್ಕೆ ಪ್ರಾರಂಭಿಸಿದಂತಹ ಕವಿ ಶ್ರೀ ಅಡಿಗರು ಎಂದು ಡಾ. ಚಲಪತಿ ಹೇಳಿದರು.

1952ರಲ್ಲಿ ಅವರ ಮೂರನೇ ಕವನ ಸಂಕಲನ 'ನಡೆದು ಬಂದ ದಾರಿ' ಪ್ರಕಟಗೊಳ್ಳುತ್ತದೆ. ಅದರ ಮುಖಪುಟ ನೋಡಿದರೆ ಗೊತ್ತಾಗುತ್ತದೆ, ಗಾಂಧೀಜಿ ಒಂದು ಕೋಲು ಹಿಡಿದುಕೊಂಡು ಹೋಗುವ ಒಂದು ರೇಖಾ ಚಿತ್ರ ಇದೆ. ಅವರು ಹೇಳುವುದು ಏನೆಂದರೆ ನಡೆದು ಬಂದ ದಾರಿಯನ್ನು ಹಿಂದಿರುಗಿ ನೋಡಬೇಡ. ಇನ್ನು ಈಗ ನಮಗೆ ಹೊಸ ದಾರಿ ಬೇಕಾಗಿದೆ, ಕಾವ್ಯ ಕುಸರಿಯ ಹಾಗು ರಚನೆಯ ವಿಧಾನಗಳನ್ನು ಕುರಿತ ಹಾಗೆ ಇವರು ಎತ್ತಿದಂತಹ ಪ್ರಶ್ನೆ ಆಗ. ಆದ್ದರಿಂದ ನವೋದಯದಲ್ಲಿ ಬರೆದಂತಹ ಭಾವತೀವ್ರತೆಯ ಕವಿತೆ, ಪ್ರಕೃತಿದತ್ತವಾದಂತಹ ಕವಿತೆಗಳು, ಪ್ರೇಮ ಕವಿತೆಗಳು ಏನಿತ್ತು ಅವುಗಳ ಕಡೆ ಅವರು ತಿರುಗಿ ಕೂಡಾ ನೋಡುವುದಿಲ್ಲ. ಅವರ 1992ರಲ್ಲಿ ಬಂದ ಕೊನೆಯ ಕವನ ಸಂಕಲನ ಬಾ ಇತ್ತ ಇತ್ತ ಅಲ್ಲಿಯ ತನಕ ಅವರು ಆ ದಿನನಿತ್ಯದ ಗೋಜಲುಗಳ ಕಡೆ ಹೋಗುವುದಿಲ್ಲ. ಅವರ ಹುಡುಕಾಟ ಏನಿದ್ದರೂ ಕೂಡಾ ಒಂದು ಸ್ವತಂತ್ರ ಭಾರತದೊಳಗಿನ ಒಂದು ಸ್ಥಿತಿ ಏನು, ಸಾಮಾಜಿಕ ವಾಸ್ತವ ಏನು, ಸಂಸ್ಕೃತಿ ಪ್ರಶ್ನೆ ಏನು ಅನ್ನುವಂತಹದ್ದು. ಏಕೆಂದರೆ ಅಡಿಗರು ಮೂಲತಃ ಒಂದು ಪುರೋಹಿತ ಮನೆತನದಿಂದ ಬಂದವರು. ಅವರ ತಂದೆ ಸಂಸ್ಕೃತ ಶ್ಲೋಕಗಳನ್ನು ಹಾಗೂ ಭಕ್ತಿಗೀತೆಗಳನ್ನು ರಚಿಸುತ್ತಿದ್ದರು. ಅವರ ಸೋದರ ಅತ್ತೆ, ಜೈಮಿನಿ ಭಾರತ, ಕುಮಾರ ವ್ಯಾಸ ಭಾರತ ಇವೆಲ್ಲವುಗಳನ್ನು ಅವರ ಮನೆಯಲ್ಲಿ ಓದಿ ಹೇಳುತ್ತಿದ್ದರು ಎಂದು ಅವರ ಜೀವನ ವಿಚಾರಗಳನ್ನು ನೋಡಿದರೆ ಗೊತ್ತಾಗುತ್ತದೆ. ಅಂತಹ ಪರಿಸರದಲ್ಲಿ ಬೆಳೆದ ಇವರ ಹುಡುಕಾಟ ಎಲ್ಲಿತ್ತು ಎಂದು ಹೇಳಿದರೆ ಆಧುನಿಕತೆ ನಮ್ಮ ಬದುಕನ್ನು ತೊಂದರೆ ಮಾಡುವುದು ಏನಿದೆ ಇದರೊಳಗಡೆ ನಮ್ಮ ಬೇರುಗಳನ್ನು ಹೇಗೆ ಹುಡುಕಿಕೊಳ್ಳಬೇಕು ಎನ್ನುವುದರಲ್ಲಿತ್ತು ಹಾಗಾಗಿ ಅವರ ಯಾವುದೇ ಕಾವ್ಯಗಳನ್ನು ಓದಿದರೂ ಕೂಡಾ ಭೂತ ಕಾಲಕ್ಕೆ ನಾವು ಹಿಂದಿರುಗುವುದನ್ನು ನೋಡುತ್ತೇವೆ. ಅಲ್ಲಿಂದ ನಾವು ಆರಿಸಿ ಇವತ್ತಿನ ಬದುಕಿಗೆ ಬೇಕಾಗಿದ್ದನ್ನು ತೆಗೆದುಕೊಳ್ಳಬೇಕಾಗಿದ್ದು ಎನ್ನುವಂತಹದ್ದು ಅಡಿಗರ ಬಹಳ ಮುಖ್ಯವಾದಂತಹ



ವಿಚಾರವಾಗಿತ್ತು ಎಂದರು.

ಅವರು 'ನಡೆದು ಬಂದ ದಾರಿ' ಕವನದ ನಂತರ 1954ರಲ್ಲಿ ಚಂಡೆಮದ್ದಳೆ, 1959ರಲ್ಲಿ ಭೂಮಿಗೀತ, 1972ರಲ್ಲಿ ವರ್ಧಮಾನ ಕವಿತೆಗಳನ್ನು ಬರೆಯುತ್ತಾರೆ. 1959 ರಿಂದ 1972ರ ತನಕ ಅವರು ಕಾವ್ಯಗಳನ್ನು ಬರೆದಿದ್ದು ಬಹಳ ಕಡಿಮೆ. ಆವರೆಗಿನ ಅವರ ಕಾವ್ಯ ರಚನೆಯ ಪ್ರಯಾಣ ಅದು. ಈ ರೀತಿಯ ಒಂದು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಜೆಗಳಲ್ಲಿ ಉಂಟಾದ ಒಂದು ಏಕಾಂಗಿತನವನ್ನು, ಏಕೆಂದರೆ ಸ್ವಾತಂತ್ರ್ಯ ಬರುವಲ್ಲಿಯ ತನಕ ಒಂದು ಹೋರಾಟವಿತ್ತು, ಉತ್ಸಾಹವಿತ್ತು, ಆ ಉತ್ಸಾಹ ಕಳೆದುಹೋಗಿದ್ದಾದ ಮೇಲೆ ಭಾರತೀಯರ ಬದುಕು ಏನು? ಇದು ಅವರ ಪ್ರಶ್ನೆಯಾಗಿತ್ತು. ಈ ಪ್ರಶ್ನೆಯನ್ನು ಇಟ್ಟುಕೊಂಡು ಅವರು ತಮ್ಮ ಸಂಸ್ಕೃತಿಯ ಹುಡುಕಾಟಕ್ಕೆ ಪ್ರಾರಂಭಿಸುತ್ತಾರೆ. ತಮ್ಮ ಸಂಸ್ಕೃತಿ ಎಂದರೆ ಯಾವುದು, ಅವರಿಗೆ ಅವರು ಬೆಳೆದ ಸಂಸ್ಕೃತಿ ಪರಂಪರೆಯ ಮೂಲಕ ಬದುಕನ್ನು ನೋಡುವುದಕ್ಕೆ ಪ್ರಯತ್ನಪಡುತ್ತಾರೆ, ಮತ್ತೆ ನಾವಲ್ಲಿ ಹೋಗಬೇಕು ನಾವು ಅದನ್ನು ತೆಗೆದುಕೊಳ್ಳಬೇಕು ಎನ್ನುವುದು ಅವರ ಬಹಳ ಮುಖ್ಯವಾದ ಉದ್ದೇಶವಾಗಿ ಬಿಡುತ್ತದೆ. ಇದು ನಾವು ಒಂದು ಕಡೆ ನವೋದಯ ಕವಿಗಳನ್ನು ಮತ್ತೆ ನವ್ಯದ ನಂತರದ ದಲಿತ ಬಂಡಾಯವನ್ನು ಇಟ್ಟುಕೊಂಡರೆ ಇದರ ಸಾಧ್ಯತೆ ಮತ್ತು ಮಿತಿಗಳು ಯಾವ ತರಹದ್ದು ಎನ್ನುವುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದು ತಿಳಿಸಿದರು.

ಅಡಿಗರು 1972ರಲ್ಲಿ 'ವರ್ಧಮಾನ' 1975ರಲ್ಲಿ 'ಇದನ್ನು ಬಯಸಿರಲಿಲ್ಲ' 1980ರಲ್ಲಿ 'ಮೂಲಕ ಮಹಾಶಯರು' 1983ರಲ್ಲಿ 'ಬತ್ತಲಾರದ ಗಂಗೆ' 1987ರಲ್ಲಿ 'ಚಿಂತಾಮಣಿಯಲ್ಲಿ ಕಂಡ ಮುಖ' ಹಾಗೂ 1990ರಲ್ಲಿ 'ಸುವರ್ಣ ಪುತ್ಥಳಿ' ಕವನ ಸಂಕಲನ ಬರೆದರು. ಇದು ಅವರ ಕಾವ್ಯದ ಪ್ರಯಾಣ. ಇದಲ್ಲದೇ ಅವರು 'ಅನಾಥೆ' ಮತ್ತು 'ಆಕಾಶ ದೀಪ' ಎಂಬ ಎರಡು ಕಾದಂಬರಿಗಳನ್ನು ಕೂಡಾ ಬರೆದಿದ್ದಾರೆ. ಅವರು ಕಾದಂಬರಿಕಾರರಾಗಿ ಹೆಸರು ಮಾಡಿದವರಲ್ಲ. ಕವಿಯಾಗಿ ನಿರಂತರವಾಗಿ ಹಿರಿಯ ಕವಿಗಳ ಜೊತೆ ಒಂದು ಒಡನಾಟದಲ್ಲಿ ಇದ್ದವರು. ಅಡಿಗರ ಕಾವ್ಯ ಶಕ್ತಿಯ ಕುರಿತಾಗಿ ಅವರ 'ಭಾವ ತರಂಗ' ಮೊದಲ ಕಾವ್ಯಕ್ಕೆ ಮುನ್ನುಡಿಯನ್ನು ಬರೆಯುತ್ತಾ ಬೇಂದ್ರೆಯವರು ಹೇಳುತ್ತಾರೆ–ನನ್ನ ಸಣ್ಣ ವಯಸ್ಸಿಗೆ ಅಡಿಗರ ಇಷ್ಟು ಬರವಣಿಗೆಯ ಶೈಲಿ ನನಗೆ ಸಿದ್ಧಿಸಿರಲಿಲ್ಲ, ಅಂಥ ಶೈಲಿಯನ್ನು ಸಿದ್ಧಿಸಿಕೊಂಡಿದ್ದಾರೆ ಎಂದು ಹೇಳಿ ಅವರ ಬಗ್ಗೆ ಹೊಗಳಿ ಬರೆಯುತ್ತಾರೆ. ಅಂದರೆ ಕಾವ್ಯ ಕಟ್ಟುವ ಕಲೆಯಲ್ಲಿ ಎತ್ತಿದ ಕೈ ಶ್ರೀ ಗೋಪಾಲ ಕೃಷ್ಣ ಅಡಿಗರದು ಎಂದರು.

ಇನ್ನು ಆಶಯದ ಬಹಳಷ್ಟು ಪ್ರಶ್ನೆಗಳಿಗೆ, ಪ್ರತಿವ್ಯಕ್ತಿಗಳಿಗೆ ಒಳಗಾಗಿರುವುದನ್ನು ಕೂಡಾ ನಾವು ನೋಡುತ್ತೇವೆ. ಹೀಗೆ ಶ್ರೀ ಗೋಪಾಲ ಕೃಷ್ಣ ಅಡಿಗರು ಸ್ವತಂತ್ರ ಭಾರತದ ಒಂದು ಆಧುನಿಕ ಸಂವೇದನೆ ಅನ್ನುವಂತಹದ್ದನ್ನು ರಾಜಕೀಯವಾಗಿ, ಆಧುನಿಕತೆ ಒಡ್ಡುತ್ತಿರುವ ಸವಾಲುಗಳ ಮೂಲಕ, ಸಾಮಾಜಿಕತೆ ಬೆಳವಣಿಗೆಯ ಮೂಲಕ, ಸಾಂಸ್ಕೃತಿಕ ಬೆಳವಣಿಗೆಯ ಮೂಲಕ ಕನ್ನಡಿಗರ ಎದುರು ಕಾವ್ಯದ ಮೂಲಕ ಇಡುತ್ತಾ ಹೋಗುತ್ತಾರೆ. ಅವರ ನವೋದಯದಲ್ಲಿ ರೂಪುಗೊಂಡ ಒಂದು ಸಿದ್ಧ ಶೈಲಿಯು ಅವರ ಕಾವ್ಯ ರಚನೆಯ ಬಗೆಗಳೇ ಬೇರೆ ರೀತಿಯದ್ದು. ಭೂಮಿ ಗೀತೆ ಕವಿತೆಯನ್ನು ನೋಡಿದರೆ ಗೊತ್ತಾಗುತ್ತದೆ ಮಳೆಗಟ್ಟ ಸೋಪಾನ ಕೆಳಗಟ್ಟಿಯಲಿ ಉಳಿಯಲಿ ಈ ಬಗೆ ಅವರದು. ದಿನನಿತ್ಯದ ನೋವು, ಉತ್ಸಾಹ, ಚೆಲವು ಅವರ ಕಾವ್ಯದಲ್ಲಿ ಕಾಣವುದು ಬಹಳ ಕಡಿಮೆ. ಅವರ ಕೊನೆಯ ಕವನ ಸಂಕಲನ 'ಬಾ ಇತ್ತ ಇತ್ತ' ದಲ್ಲಿ ಅವರ ಹೆಂಡತಿಯ ಬಗ್ಗೆ ನೆನಪಿಸಿಕೊಂಡು ಬರೆಯುವ ಕವಿತೆ ತುಂಬಾ ಚೆನ್ನಾಗಿದೆ. ಆ ಭಾವನಾತ್ಮಕತೆ ಅವರನ್ನು ಕಾಡುವುದು ಮೊದಲನೆಯ ಮತ್ತು ಕೊನೆಯ ದಿನಗಳಲ್ಲಿ. ಆ ಬಗ್ಗೆ ಅವರು ಇಡೀ ಭಾರತದ ಸನ್ನಿವೇಶವನ್ನು ಅದು ಬದಲಾಗುತ್ತಿರುವ ಸನ್ನಿವೇಶದಲ್ಲಿ ನಾವು ಭಾರತೀಯರು ಏನಾಗುತ್ತೇವೆ ಅನ್ನುವುದನ್ನು ಹುಡುಕುವುದಕ್ಕೆ ಶುರು ಮಾಡುತ್ತಾರೆ. ಅದರ ಮೇಲೆ ಮತ್ತೆ ಮತ್ತೆ ಸಂಪ್ರದಾಯಕ್ಕೆ, ಪರಂಪರೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತಾ ಇರುತ್ತಾರೆ. ಆ ನೆಲೆಯಲ್ಲಿ ನಾವು ಅವರ ಯಾವ ಕವಿತೆಗಳನ್ನು ಬೇಕಾದರೂ ಕೂಡಾ ಗಮನಿಸಬಹುದು. ನನ್ನ ಅವತಾರ ಎನ್ನುವ ಅವರ ಕವಿತೆಯಲ್ಲಿ ಅವರು ವ್ಯಕ್ತಪಡಿಸಿರುವಂತೆ ಹೇಗೆ ತಮ್ಮ ಪರಂಪರೆಯ, ಸಂಸ್ಕೃತಿಯ, ಸಂಪ್ರದಾಯದ ನೆಲೆಗಳನ್ನು ಮತ್ತೆ ಮತ್ತೆ ಹೋಗಿ ಭಾರತೀಯ ನೆಲೆಯೊಳಗಡೆ ರಾಮಾಯಣ ಮಹಾಭಾರತಗಳನ್ನು ಮುಟ್ಟುತ್ತಾ ಹೋಗುತ್ತಾರೆ ಎನ್ನುವುದು ಅವರ ಕಾವ್ಯದ ಪ್ರತಿಭೆಗಳ ಅರ್ಥ. ಆಧುನಿಕತೆಯನ್ನು ಅವರು ಉದಾರದ ಪ್ರತಿಮೆಗಳ ಮೂಲಕ ಹೇಳುವುದನ್ನು ನಾವು ನೋಡುತ್ತೇವೆ ಎಂದರು.

ಅಡಿಗರು ಇಂಗ್ಲೀಷ್ ಪ್ರಾಧ್ಯಾಪಕರು ಆಗಿದ್ದರು. ಇಂಗ್ಲೀಷ್ ಮೂಲಕ ಬಂದಂತಹ ಆಧುನಿಕತೆಯನ್ನು ಕಟ್ಟಿ ಕೊಳ್ಳುತ್ತಾ ನಮ್ಮ ಮೂಲ ಬೇರುಗಳನ್ನು ನಾವು ಏನು ಮಾಡಿಕೊಂಡಿದ್ದೇವೆ ಎಂಬ ಹುಡುಕಾಟದಲ್ಲಿಯೇ ಇಡೀ ಕಾವ್ಯವನ್ನು ಕಟ್ಟಿದ್ದನ್ನು ನಾವು ನೋಡುತ್ತೇವೆ. ಅವರು ಯಾವ ಕಡೆ ಹೊರಟಿದ್ದರು, ಏನನ್ನು ಹೇಳಲು ಹೊರಟಿದ್ದರು, ಏಕೆ ಪರಂಪರೆಗೆ, ಸಂಪ್ರದಾಯಕ್ಕೆ ಹಿಂದಿರುಗಿ ನೋಡಲು ಪ್ರಯತ್ನಪಟ್ಟರು ಎನ್ನುವುದನ್ನು ಬಹಳಷ್ಟು ಕವಿತೆಗಳಲ್ಲಿ ನೋಡಬಹುದು. ಇನ್ನೊಂದು ಕವಿತೆ 'ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ' ಎನ್ನುವುದು ಸಹಾ ಸಂಪೂರ್ಣವಾಗಿ ಒಂದು ರೀತಿ ಯುದ್ಧಕ್ಕೆ ನಿಂತ ಹಾಗೆ ಮಾತನಾಡುತ್ತೆ. ನಮ್ಮ ಸಂಸ್ಕೃತಿ, ಪರಂಪರೆಯ ಪರವಾಗಿ ನಾವು ಹಿಂದಕ್ಕೆ ನಿಲ್ಲಬೇಕು, ಅದೇ ರೀತಿಯೇ ಆ ಕವಿತೆಯೊಂದು ರೂಪುಗೊಂಡಿರುವುದನ್ನು ನಾವು ನೋಡಬಹುದು. ಇಂತಹ ಅನೇಕ ಕವಿತೆಗಳನ್ನು ಅಡಿಗರು ಬರೆದಿದ್ದಾರೆ ಎನ್ನುತ್ತಾ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿ ಡಾ. ಚಲಪತಿ ತಮ್ಮ ವಿಚಾರ ಮಂಡನೆ ಮುಗಿಸಿದರು.

ನಂತರ ಶ್ರೀಮತಿ ಸುನಿತಾ ಅರವಿಂದ್ ಅವರಿಂದ ಶ್ರೀ ಗೋಪಾಲಕೃಷ್ಣ ಅಡಿಗರ "ಯಾವ ಮೋಹನ ಮುರಳಿ ಕರೆಯಿತೋ ದೂರ ತೀರಕೆ ನಿನ್ನನು, ಯಾವ ಬೃಂದಾವನವು ಸೆಳೆಯಿತೋ ನಿನ್ನ ಮಿಂಚಿನ ಕಣ್ಣನು" ಗೀತೆ ಪ್ರಸ್ತುತಗೊಂಡಿತು. ಕು. ಮೋನಿಷ್ಕಾ 'ಮುಂದೇನು ಮತ್ತೇನು ಇನ್ನೀಗ ಆ ಮಾತೇಕೆ', ಕು. ನಿರಳ್ಯಾ ಅವರಿಂದ 'ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ' ಕು.ಸಾನ್ವಿಕ ಅವರಿಂದ 'ಶರಧಿಯನೀಜುವವನು' ಕು. ದಿವ್ಯಾ ಅವರಿಂದ 'ಬರೆಯೋದು ಬರೆವಾಗು ಬರಿ ಬುದ್ಧಿ ದೊರಕಿಸದು' ಎಂಬ ಕಗ್ಗಗಳು ಪ್ರಸ್ತುತಗೊಂಡವು.

ಅನಂತರ ಶ್ರೀ ಎಂ. ಗೋವಿಂದ ಪೈ ಅವರ ಕುರಿತು ಡಾ.ಸುಭಾಷ್ ರಾಜಮಾನೆ, ಅವರು ತಮ್ಮ ವಿಷಯ ಮಂಡನೆ ಮಾಡಿದರು. ಅವರ ವಿಷಯ ಮಂಡನೆಗೂ ಮುನ್ನ ಅವರ ಪರಿಚಯವನ್ನು ಶ್ರೀ ಪುನಿತ್ ಸಭೆಗೆ ಮಾಡಿಕೊಟ್ಟರು. ಡಾ. ಸುಭಾಷ್ ಅವರು 'ತಾಯಿ ಬಾರೆ ಮೊಗವ ತೋರೆ' ಎನ್ನುವ ಶ್ರೀ ಎಂ. ಗೋವಿಂದ ಪೈ ಅವರ ಪ್ರಸಿದ್ಧವಾದ ಹಾಗೂ ಜನಪ್ರಿಯವಾದ ಭಾವಗೀತೆ ಹಾಡುವುದರೊಂದಿಗೆ ತಮ್ಮ ಮಾತನ್ನು ಆರಂಭಿಸಿದರು. ಕನ್ನಡ ನಾಡಿನ ಕುರಿತ ಬರೆದಂತಹ ಪ್ರಮುಖ ಗೀತೆಗಳಲ್ಲಿ ಇದು ಕೂಡ ಒಂದು. ಕನ್ನಡಕ್ಕೆ ಮೊಟ್ಟಮೊದಲು ರಾಷ್ಟ್ರಕವಿ ಪ್ರಶಸ್ತಿಯನ್ನು ದೊರಕಿಸಿಕೊಟ್ಟವರು ಶ್ರೀ ಗೋವಿಂದ ಪೈ. ಕನ್ನಡದ ನವೋದಯ ಕಾಲ ಘಟ್ಟದ ಮೊದ ಮೊದಲ ಪ್ರಮುಖ ಕವಿಗಳು ಹಾಗೂ ಸಂಶೋಧಕರರಾದ ಅವರು ಮಂಗಳೂರಿನವರು. ಪ್ರಾಥಮಿಕ ಶಿಕ್ಷಣವನ್ನು ಪಡೆದ ನಂತರ ಪದವಿ ಪೂರ್ವ ಶಿಕ್ಷಣವನ್ನು ಸಹಾ ಮಂಗಳೂರಿನಲ್ಲಿಯೇ ಮುಗಿಸುತ್ತಾರೆ. 1903 ರಿಂದ 1906ರವರೆಗೆ ಅಂದಿನ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಗಾಗಿ ವ್ಯಾಸಂಗ ಮಾಡುತ್ತಾರೆ ಇವರು ಬಿ.ಎ. ಪದವಿ ಪರೀಕ್ಷೆಯ ಮಧ್ಯದಲ್ಲಿಯೇ ತಮ್ಮ ತಂದೆಯ ಮರಣದಿಂದಾಗಿ ಮಂಗಳೂರಿಗೆ ಹಿಂದಿರುಗುತ್ತಾರೆ. ಬಿ.ಎ. ಪದವಿಯನ್ನು ಪಡೆಯಲಾಗದಿದ್ದರೂ ಅವರು ಇಂಗ್ಲೀಷ್ ವಿಭಾಗದಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದರಿಂದ ಅವರಿಗೆ ಚಿನ್ನದ ಪದಕ ನೀಡಲಾಗುತ್ತದೆ. 1949ರಲ್ಲಿ ಮದರಾಸ್ ಸರ್ಕಾರದಿಂದ ರಾಷ್ಟ್ರಕವಿ ಪ್ರಶಸ್ತಿಯನ್ನು ಪಡೆಯುತ್ತಾರೆ ಎಂದು ತಿಳಿಸಿದರು.

ಅವರು ಬಹುಭಾಷಾ ಪಂಡಿತರು. ರಾಷ್ಟ್ರಕವಿ ಪ್ರಶಸ್ತಿಯನ್ನು ಪಡೆಯಬೇಕಾದರೆ ಅವರು ತಮ್ಮ ಕವಿತೆಯನ್ನು ಎಲ್ಲರಿಗೂ ಅರ್ಥವಾಗಬೇಕು ಎನ್ನುವ ಕಾರಣಕ್ಕೆ ಇಂಗ್ಲೀಷಿನಲ್ಲಿ ಓದಿ ಹೇಳುತ್ತಾರೆ. ಅಂದು ರಾಷ್ಟ್ರಕವಿ ಪ್ರಶಸ್ತಿಯನ್ನು ಪಡೆದವರಲ್ಲಿ ತೆಲುಗು,



ಮಲೆಯಾಳಂ, ತಮಿಳು ಭಾಷೆಯವರು ಕೂಡಾ ಇರುತ್ತಾರೆ. ಅವರು ತಮ್ಮ ತಮ್ಮ ಭಾಷೆಗಳಲ್ಲಿ ಕವಿತೆಗಳನ್ನು ಓದಿದರೆ ಶ್ರೀ ಗೋವಿಂದ ಪೈ ಅವರು ತಮ್ಮ ಕವಿತೆಗಳನ್ನು ಅವರ ಭಾಷೆಗೆ ತರ್ಜುಮೆ ಮಾಡಿ ಓದುತ್ತಾರೆ.ಗೋವಿಂದ ಪೈ ಅವರಿಗೆ 20ಕ್ಕೂ ಹೆಚ್ಚು ಭಾಷೆಗಳು ಬರುತ್ತಿದ್ದವು. ಕೊಂಕಣಿ ಅವರ ಮಾತೃಭಾಷೆ. ಅವರಿಗೆ ಗುರುಗಳಾಗಿದ್ದವರು ಪಂಜೆ ಮಂಗೇಶರಾಯರು. ಅವರು ಒಮ್ಮೆ ಮಂಗೇಶರಾಯರನ್ನು ಕೇಳುತ್ತಾರೆ ನಾನು ಕನ್ನಡದಲ್ಲಿ ಕವಿತೆಯನ್ನು ಬರೆಯಬೇಕಾದರೆ ಪ್ರಾಸಗಳನ್ನು ಬಿಡಬೇಕೆಂದಿದ್ದೇನೆ ಎಂದು, ಅದಕ್ಕೆ ಮಂಗೇಶರಾಯರು ತಕ್ಷಣ ಹೇಳುತ್ತಾರೆ ನಿನ್ನ ಪ್ರಾಣ ಬಿಡು ಎಂದು. ಅಂದರೆ ಆಗಿನ ಕಾಲದಲ್ಲಿ ಆದಿ ಪ್ರಾಸವನ್ನು ಬಿಡುವುದು ಬಹಳ ಕಷ್ಟವಾಗಿತ್ತು, ಸಂಪ್ರದಾಯಕ್ಕೆ ಕಟ್ಟು ಬಿದ್ದಿದ್ದ ಯಾರೂ ಕೂಡಾ ಆ ಒಂದು ಸಾಹಸವನ್ನು ಮಾಡುತ್ತಿರಲಿಲ್ಲ. ಆದರೆ ಶ್ರೀ ಗೋವಿಂದ ಪೈ ಅವರು ಮೊಟ್ಟಮೊದಲ ಬಾರಿಗೆ 1911ರಲ್ಲಿ ಕನ್ನಡದಲ್ಲಿ ಆದಿ ಪ್ರಾಸವನ್ನು ತೊರೆದು ಕವಿತೆಗಳನ್ನು ಪ್ರಕಟ ಮಾಡುತ್ತಾರೆ ಎಂದರು. ಅರಂಭದಲ್ಲಿ ಕವಿತೆಗಳನ್ನು ಹಾಗೂ ನಾಟಕಗಳನ್ನು ಬರೆಯುತ್ತಿದ್ದರು. 1900ನೇ ಇಸವಿಯಿಂದ 1930ನೇ ಇಸವಿಯವರೆಗೂ ಕೂಡ ಇವರು ಬಹುತೇಕವಾಗಿ ಕವಿತೆಗಳನ್ನೇ ಬರೆಯುತ್ತಿದ್ದರು. ಆದರೆ ಅವರ ಯಾವ ಕವನ ಸಂಲನಗಳು ಕೂಡಾ ಪ್ರಕಟವಾಗಿರಲಿಲ್ಲ. ಇವರ ಮೊದಲ ಕವನ ಸಂಕಲನ 1930ರಲ್ಲಿ ಗಿಳಿಹಿಂಡು ಹೆಸರಿನಲ್ಲಿ ಪ್ರಕಟವಾಗುತ್ತದೆ. ಶ್ರೀ ಗೋವಿಂದ ಪೈ  ಹೊಸ ರೀತಿಯ ಭಾಷೆಯನ್ನು, ನುಡಿಗಟ್ಟನ್ನು ರೂಪಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಅವರು ಸ್ವಲ್ಪ ಹಳೆಗನ್ನಡ ಮತ್ತು ನಡುಗನ್ನಡ ಶೈಲಿಗೆ ಒಳಗಾಗುತ್ತಾರೆ. 1930ರ ನಂತರ ಅವರು ಹೆಚ್ಚು ಸಂಶೋಧನೆಯ ಕಡೆಗೆ ವಾಲುತ್ತಾರೆ. ಅಲ್ಲಿಂದ ಅವರ ಜೀವನದ ಎರಡು ಪ್ರಮುಖ ಘಟ್ಟಗಳು ಪ್ರಾರಂಭವಾಗುತ್ತವೆ. ಒಂದು ಕವಿತಾ ಮಾರ್ಗ, ಇನ್ನೊಂದು ಸಂಶೋಧನಾ ಮಾರ್ಗ. ಸಂಶೋಧನೆಯಲ್ಲಿ ಇವರು ಬಹಳ ದೊಡ್ಡ ಹೆಸರು ಮಾಡಿದವರು. ಸಂಶೋಧನೆಯ ಮಾರ್ಗದಲ್ಲಿ ಬರೆಯುವಾಗ ಅವರ ಹೆಚ್ಚಿನ ಒಲವು ಕನ್ನಡ ಭಾಷೆಯ ಪ್ರಾಚೀನತೆ ಕುರಿತು. ಅದರಲ್ಲೂ ಮುಖ್ಯವಾಗಿ ಇವರು ಗ್ರೀಕ್ ಭಾಷೆಯನ್ನು ಕಲಿತು ಗ್ರೀಕ್ ಪ್ರಹಸನಗಳಲ್ಲಿ ಕನ್ನಡ ಶಬ್ಧಗಳು ಮತ್ತು ಕನ್ನಡ ಮಾತುಗಳು ಇರುವುದನ್ನು ತಿಳಿಸಿ ಕನ್ನಡ ಭಾಷೆಗೆ 2 ಸಾವಿರ ವರ್ಷಗಳ ಒಂದು ಪ್ರಾಚೀನತೆ ಇದೆ ಎಂದು ಗುರುತಿಸುತ್ತಾರೆ. ಕವಿಗಳ ಕಾಲ, ದೇಶ, ವಿಚಾರ ಇವುಗಳ ಬಗ್ಗೆ ಸಂಶೋಧನೆಯಲ್ಲಿ ತೊಡಗುತ್ತಾರೆ ಎಂದು ತಿಳಿಸಿದರು.

ಶ್ರೀ ಶ್ರೀನಿವಾಸ್ ಹಾವನೂರು ಅವರು ಶ್ರೀ ಗೋವಿಂದ ಪೈ ಅವರು ಜ್ಯೋತಿಷ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದರು, ಹಾಗಾಗಿಯೇ ಇವರು ಕವಿಗಳ ಕಾಲ ನಿರ್ಣಯದ ಕಡೆಗೆ ಹೆಚ್ಚು ಗಮನಕೊಟ್ಟಿರಬಹುದು ಎಂದು ಒಂದು ಕಡೆ ಬರೆಯುತ್ತಾರೆ. ಅವರು ಕನ್ನಡದ ಲಕ್ಷ್ಮೀಶ ಇರಬಹುದು, ಹರಿಹರ ಆಗಿರಬಹುದು ಹಾಗೂ ಇನ್ನೂ ಅನೇಕ ಕವಿಗಳ ಒಂದು ಕಾಲವನ್ನು ನಿರ್ಣಯ ಮಾಡುತ್ತಾರೆ. ಸಾಹಿತ್ಯದ ಚರಿತ್ರೆಯನ್ನು ಬರೆಯಬೇಕಿದ್ದರೆ ಆಯಾ ಕವಿಗಳ ಕಾಲ, ಕಾವ್ಯ, ದೇಶ ಅವುಗಳ ಹಿನ್ನೆಲೆ, ಇವುಗಳೆಲ್ಲವೂ ಕೂಡಾ ಸಹಾಯ ಮಾಡುತ್ತವೆ. ನಮ್ಮ ಕನ್ನಡ ಭಾಷೆಗೆ ಒಂದು ಚರಿತ್ರೆ ಎನ್ನುವುದು ಇರಲಿಲ್ಲ, ಅದನ್ನು ರಚಿಸಬೇಕಿತ್ತು ಹೊಸದಾಗಿ ಬರೆಯಬೇಕಿತ್ತು, ಈ ಸಂದರ್ಭದಲ್ಲಿ ಗೋವಿಂದ ಪೈ ಅವರ ಸಂಶೋಧನೆಗಳು ಅವುಗಳಿಗೆ ಒಂದು ಭದ್ರವಾದ ನೆಲೆಗಟ್ಟನ್ನು ಒದಗಿಸಿಕೊಡುತ್ತವೆ.




ಇವರು ಅನೇಕ ಹೃದಯಗೀತೆಗಳನ್ನು ಕನ್ನಡದಲ್ಲಿ ಮೊಟ್ಟ ಮೊದಲಿಗೆ ಅನುವಾದ ಮಾಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.  50 ಪದ್ಯಗಳನ್ನು ನೇರವಾಗಿ ಪರ್ಶಿಯನ್ ಭಾಷೆಯಿಂದ ಅನುವಾದ ಮಾಡಿ ಪತ್ರಿಕೆಗಳಲ್ಲಿ ಪ್ರಕಟ ಮಾಡುತ್ತಾರೆ. ಹಾಗೆಯೇ ಗೋವಿಂದ ಪೈ ಅವರು ಮೊದಲ ಬಾರಿಗೆ ಕನ್ನಡದಲ್ಲಿ ಸಾನೆಟ್‌ಗಳನ್ನು ಬರೆಯುತ್ತಾರೆ. ಸಾನೆಟ್ ಎಂದರೆ 14 ಸಾಲಿನ ಪದ್ಯ. ಅದಕ್ಕೆ ಅವರು ಕನ್ನಡದಲ್ಲಿ ಅಷ್ಟ ಷಟ್ಪದಿ ಎನ್ನುವ ಹೆಸರನ್ನು ಕೊಡುತ್ತಾರೆ. ಇವರು ಕನ್ನಡದಲ್ಲಿ ಖಂಡ ಕಾವ್ಯಗಳನ್ನು ಕೂಡಾ ರಚಿಸಿದ್ದಾರೆ. ಗೊಲೊಥಾ ಎನ್ನುವ ಕ್ರಿಸ್ತನ ಕೊನೆಯ ದಿನಗಳನ್ನು ನೆನೆಪಿಸುವ ಒಂದು ಖಂಡ ಕಾವ್ಯವನ್ನು, ಬುದ್ಧನ ಕೊನೆಯ ದಿನಗಳ ಕುರಿತಾಗಿ ವೈಶಾಖಿ ಎನ್ನುವ ಖಂಡ ಕಾವ್ಯವನ್ನು ಬರೆಯುತ್ತಾರೆ. ಕೃಷ್ಣನ ಕೊನೆಯ ದಿನಗಳನ್ನು ಕುರಿತು ಹಾಗೂ ಮಹಾತ್ಮ ಗಾಂಧೀಜಿಯವರ ಕೊನೆಯ ದಿನಗಳ ಕುರಿತಾಗಿ ಎರಡು ಖಂಡ ಕಾವ್ಯಗಳು ಅಪೂರ್ಣವಾಗಿಯೇ ನಿಂತಿವೆ ಎಂದು ಹೇಳಿದರು.

ಶ್ರೀ ಗೋವಿಂದ ಪೈ ಅವರು ಬರೋಡಕ್ಕೆ ಯಾವುದೋ ಒಂದು ಸಂಸ್ಥೆಯ ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ ಗಾಂಧೀಜಿಯವರ ಆಪ್ತ ಶಿಷ್ಯರಾಗಿದ್ದ ತಾತಾ ಸಾಹೇಬ್ ಪಾಲೇಂಕರ್ ಅವರನ್ನು ಭೇಟಿಯಾಗುತ್ತಾರೆ. ಶ್ರೀ ಗೋವಿಂದ ಪೈ ಅವರ ಹೆಂಡತಿ ಶ್ರೀಮತಿ ಕೃಷ್ಣಬಾಯಿ ಮರಾಠಿ ಭಾಷೆಯ ಸಾಹಿತ್ಯ ಕೃತಿಗಳನ್ನು ಬಹಳ ಆಸಕ್ತಿಯಿಟ್ಟು ಓದುತ್ತಿದ್ದರು ಮತ್ತು ಮರಾಠಿ ಅಭಂಗಗಳನ್ನು ಹಾಗೂ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಅವರಿಂದಾಗಿ ಪೈ ಅವರಿಗೆ ಮರಾಠಿ ಭಾಷೆಯಲ್ಲೂ ಕೂಡಾ ಆಸಕ್ತಿ ಬಂದಿರುತ್ತದೆ. ತಾತಾ ಸಾಹೇಬ್ ಪಾಲೇಂಕರ್ ಅವರೊಂದಿಗೆ ಪೈ ಅವರು ಮರಾಠಿ ಭಾಷೆಯಲ್ಲಿಯೇ ಎಲ್ಲ ಚರ್ಚೆಗಳನ್ನು ಮಾಡುತ್ತಾರೆ. ಅವರ ನಡುವಿನ ಭಾಂದವ್ಯ ಎಷ್ಟರಮಟ್ಟಿಗೆ ಇತ್ತು ಎಂದರೆ ಒಮ್ಮೆ ತಾತಾ ಸಾಹೇಬ್ ಪಾಲೇಂಕರ್ ಅವರು ಗೋವಿಂದ ಪೈ ಅವರನ್ನು ಮಂಜೇಶ್ವರಕ್ಕೆ ಹುಡುಕಿಕೊಂಡು ಬಂದು ಅಲ್ಲಿ ಒಂದೆರೆಡು ದಿನವಿದ್ದು ಮಾತುಕತೆಗಳನ್ನಾಡಿಕೊಂಡು ಹೋಗುತ್ತಾರೆ. ಪಾಲೇಂಕರ್ ಮರಳಿ ಹೋಗುವಾಗ ಅವರಿಗೆ ಒಂದು ಬೆತ್ತದ ಊರುಗೋಲನ್ನು ಕಾಣಿಕೆಯಾಗಿ ಶ್ರೀ ಗೋವಿಂದ ಪೈ ಕೊಡುತ್ತಾರೆ. ಅವರು ಅದನ್ನು ಬಹಳ ಪ್ರೀತಿಯಿಂದ ತೆಗೆದುಕೊಂಡು ಹೋಗಿ ಗಾಂಧೀಜಿಯವರಿಗೆ ವಯಸ್ಸಾಗಿದ್ದರಿಂದ ಅದನ್ನು ಅವರಿಗೆ ಉಡುಗೊರೆಯಾಗಿ ಕೊಡುತ್ತಾರೆ. 1930–31ರ ದಂಡೀ ಸತ್ಯಾಗ್ರಹದಲ್ಲಿ ಬೆತ್ತವನ್ನು ಊರಿಕೊಂಡು ಹೋಗುತ್ತಾರಲ್ಲ ಅದು ಇದೇ ಊರುಗೋಲಾಗಿರುತ್ತದೆ. ಹಾಗಾಗಿ ಗಾಂಧೀಜಿಯವರ ದಂಡೀ ಸತ್ಯಾಗ್ರಹಕ್ಕೂ ಮತ್ತು ಕನ್ನಡದ ಒಬ್ಬ ಕವಿಗಳಿಗೂ ಒಂದು ಮುಕ್ತವಾದ ಸಂಬಂಧ ಕೂಡ ಇದೆ ಅನ್ನಬಹುದು ಎಂದು ಅಭಿಪ್ರಾಯ ತಿಳಿಸಿದರು

ಶ್ರೀ ಗೋವಿಂದ ಪೈ ಅವರಿಗೆ ಭಾಷೆಗಳ ಬಗ್ಗೆ ತುಂಬಾ ಆಸಕ್ತಿ ಇತ್ತು. ಇಂಗ್ಲೀಷ್, ಗ್ರೀಕ್, ಪ್ರೆಂಚ್, ಜರ್ಮನ್ ಭಾಷೆಗಳನ್ನು ಬಲ್ಲವರಾಗಿದ್ದರು. ಜಪಾನೀ ಭಾಷೆಯನ್ನು ಸಹ ಕಲಿತು ಅವರು ಜಪಾನೀ ಭಾಷೆಯ 8 ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಹೆಬ್ಬೆರಳು ಮತ್ತು ಚಿತ್ರಭಾನು ಎನ್ನುವ ನಾಟಕಗಳನ್ನು ಬರೆಯುತ್ತಾರೆ. ಹೀಗೆ ಗೋವಿಂದ ಪೈ ಅವರು ಒಬ್ಬ ಹಿರಿಯ ಸಂಶೋಧಕರು ಹಾಗೂ ಕವಿಗಳಾಗಿದ್ದರು. ಈ ರೀತಿಯಾಗಿ ನಮ್ಮ ಪೂರ್ವಿಕರನ್ನು ಮತ್ತೆ ಸ್ಮರಿಸಿಕೊಳ್ಳಬೇಕಾಗುತ್ತದೆ. ದೆಹಲಿ  ಕರ್ನಾಟಕ ಸಂಘ ಈ ಸಾಹಿತ್ಯ ಕಾರ್ಯಕ್ರಮದ ಮೂಲಕ ಅವರನ್ನು ಮತ್ತೆ ನೆನಪಿಸಿಕೊಳ್ಳುವ ಮತ್ತು ಓದುವ ಅವಕಾಶವನ್ನು ಮಾಡಿಕೊಟ್ಟಿದೆ ಎಂದು ಕೃತಜ್ಞತೆಯನ್ನು ಸಲ್ಲಿಸಿ ಡಾ. ಸುಭಾಷ್ ರಾಜಮಾನೆ ತಮ್ಮ ವಿಚಾರ ಮಂಡನೆ ಮುಗಿಸಿದರು. ಬಳಿಕ ಶ್ರೀಮತಿ ಪೂಜಾ ಪಿ. ರಾವ್ ಅವರು ಡಿ.ವಿ.ಜಿ. ಯವರ "ಏನೀ ಮಹಾನಂದವೇ ಓ ಭಾಮಿನಿ" ಹಾಡನ್ನು ಸುಶ್ರಾವ್ಯವಾಗಿ ಹಾಡಿದರು.

ಅನಂತರ ಪ್ರಸಿದ್ಧ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ, ಅವರ ಕುರಿತು ವಿಚಾರ ಮಂಡನೆ ಮಾಡಲು ಭಾಗಿಯಾದ ಡಾ. ರುದ್ರೇಶ್ ಅದರಂಗಿ ಅವರ ಪರಿಚಯುವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಶುಭಾದೇವಿ ಪ್ರಸಾದ್ ಮಾಡಿಕೊಟ್ಟರು. ಡಾ. ರುದ್ರೇಶ್ ಅವರು ಮಾತನಾಡುತ್ತಾ ಭಾರತೀಯ ಸಾಹಿತಿಗಳ ಕುರಿತು, ಕವಿಗಳ ಕುರಿತು ಮಾತನಾಡಬೇಕಿದ್ದರೆ ಸಾಮಾನ್ಯವಾಗಿ ನಾವು ಹಿಂದಿ ಕವಿಗಳನ್ನು ಪ್ರಧಾನವಾಗಿ ಇಟ್ಟುಕೊಂಡು ಮಾತನಾಡುತ್ತೇವೆ. ಆದರೆ ಭಾರತೀಯ  ಕವಿಗಳಲ್ಲಿ ಅಗ್ರಮಾನ್ಯ ಸ್ಥಾನಗಳಲ್ಲಿ ನಿಲ್ಲುವಂತಹ ಕನ್ನಡದ ಕುವೆಂಪು, ದ.ರಾ. ಬೇಂದ್ರೆ, ಅದೇ ಸಾಲಿನಲ್ಲಿ ನಿಲ್ಲುವ ಡಾ. ಎಸ್.ಎಲ್. ಭೈರಪ್ಪ ಇವರೆಲ್ಲರೂ ಕೂಡಾ ಭಾರತೀಯ ಸಾಹಿತ್ಯದಲ್ಲಿ ಮುಂಚೂಣಿಯಲ್ಲಿರುವವರು ಹಾಗೂ ಜಾಗತಿಕ ಸಾಹಿತ್ಯದಲ್ಲಿ ಉನ್ನತವಾದ ಸಾಧನೆಯನ್ನು ಮಾಡಿದಂತಹವರು. ಕನ್ನಡಕ್ಕೆ ಎಂಟು ಜ್ಞಾನಪೀಠಗಳು ಬಂದಿದ್ದರೂ ಅದು ಕಡಿಮೆಯೇ ಸರಿ. ಏಕೆಂದರೆ ಇನ್ನೂ ಹಲವಾರು ಸಾಹಿತಿಗಳು ಸಮರ್ಥರಿದ್ದಾರೆ. ಅವರಲ್ಲಿ ಒಬ್ಬರಾದ ಡಾ. ಎಸ್.ಎಲ್. ಭೈರಪ್ಪನವರು  ದಿನಾಂಕ 26.07.1934ರಂದು ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರದಲ್ಲಿ ಜನಿಸಿದರು. ಮಹಾತ್ಮ ಗಾಂಧೀಜಿಯವರ ವಿಚಾರಕ್ಕೆ ಪ್ರೇರೇಪಿತರಾದಂತಹ ಅವರು ತಮ್ಮ 13ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಚಳವಳಿಯಲ್ಲಿ

ಭಾಗವಹಿಸಿದವರು ಮತ್ತು ಸ್ವಾತಂತ್ರ ಸಂಗ್ರಾಮವನ್ನು ಕುರಿತು ಉಪನ್ಯಾಸವನ್ನು ನೀಡಿದವರು. ಈ ಕಾರಣಕ್ಕಾಗಿಯೇ ಅವರು ಚಿಕ್ಕವಯಸ್ಸಿನಲ್ಲಿಯೇ ಸೆರೆಮನೆ ವಾಸವನ್ನು ಅನುಭವಿಸಬೇಕಾಯಿತು ಎಂದರು.

ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಭೈರಪ್ಪನವರು ಅಧ್ಯಯನವನ್ನು ಮಾಡುತ್ತಾರೆ. ಬರೋಡಾದ ಮಹಾರಾಜ ಸಂಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ "ಸತ್ಯ ಮತ್ತು ಸೌಂದರ್ಯ" ಎಂಬ ಇಂಗ್ಲಿಷಿನಲ್ಲಿ ರಚಿಸಿದ ಮಹಾಪ್ರಬಂಧಕ್ಕಾಗಿ ಡಾಕ್ಟರೇಟ್ ಪದವಿಯನ್ನು ಹೊಂದುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಗದ್ಯಕ್ಕೆ ಒಂದು ಘನತೆಯನ್ನು ತಂದುಕೊಟ್ಟ, ಕನ್ನಡ ಸಾಹಿತ್ಯವನ್ನು ಜಾಗತೀಕವಾಗಿ ಮತ್ತು ಭಾರತದಲ್ಲಿ ಪ್ರಚಲಿತಕ್ಕೆ ತಂದುಕೊಟ್ಟಂತಹ ಕೀರ್ತಿ ಮತ್ತು ಹಿರಿಮೆ ಡಾ.ಭೈರಪ್ಪನವರಿಗೆ ಸಲ್ಲುತ್ತದೆ. ಅವರು ಬರೆದಂತಹ ಹಲವು ಕಾದಂಬರಿಗಳು ಕೆಲವೇ ಕೆಲವು ದಿನಗಳಲ್ಲಿ ಹಲವಾರು ಭಾಷೆಗಳಿಗೆ ಭಾಷಾಂತರವಾಗಿ ಲಭ್ಯವಾಗಿದ್ದವು. ಹೇಗೆ ಕನ್ನಡಿಗರು ಅವರ ಹೊಸ ಕಾದಂಬರಿ ಯಾವಾಗ ಬರುತ್ತದೆ ಎಂದು ಕಾಯುತಿದ್ದರೋ ಹಾಗೆಯೇ ಬೇರೆ ಭಾಷೆಯವರೂ ಕೂಡಾ ಅಷ್ಟೇ ಕುತೂಹಲದಿಂದ ಅವರ ಕಾದಂಬರಿಗಳಿಗೆ ಎದುರು ನೋಡುತ್ತಿದ್ದರು. ಅವರ ಕೃತಿ ಪ್ರಕಟಗೊಂಡ ಕೆಲವೇ ದಿನಗಳಲ್ಲಿ ಮರು ಮುದ್ರಣಗೊಂಡು ಹಲವಾರು ಮುದ್ರಣಗಳನ್ನು ಹೊಂದಿದಂತಹ ಕೀರ್ತಿ ಕೂಡ ಡಾ. ಭೈರಪ್ಪನವರಿಗೆ ಸಲ್ಲುತ್ತದೆ. ಕನ್ನಡವನ್ನು ಒಳಗೊಂಡಂತೆ ಭಾರತದ ಅಪಾರ ಓದುಗರನ್ನು ಹೊಂದಿದ ಅವರು, ಬಹಳ ಚಿಕ್ಕವಯಸ್ಸಿನಲ್ಲಿಯೇ ಭೀಮಕಾಯ. ಗತ ಜನ್ಮ, ಬೆಳಕು ಮೂಡಿತು ಎನ್ನುವ ಕೃತಿಗಳನ್ನು ರಚನೆ ಮಾಡಿದರೂ ಕೂಡಾ ಇವರ ನಿಜವಾದ ಸಾಹಿತ್ಯ ಎನ್ನುವುದು ಪ್ರಾರಂಭವಾಗುವುದು 1961ರ 'ಧರ್ಮಶ್ರೀ' ಕಾದಂಬರಿಯಿಂದ. ಈ ಕಾದಂಬರಿಯಲ್ಲಿ ಬರುವ ಸತ್ಯನಾರಾಯಣ ಎನ್ನುವವನು ಮತಾಂತರಕ್ಕೆ ಸಿಲುಕಿ ಅವನು ಅನ್ಯ ಮತಕ್ಕೆ ಹೋಗಿ ಪುನಃ ಹಿಂದೂ ಧರ್ಮಕ್ಕೆ ಬರಬೇಕಾದರೆ ಅವನು ಎದುರಿಸಿದಂತಹ ಸವಾಲುಗಳನ್ನು ಅತ್ಯಂತ ಸೂಕ್ಷ್ಮವಾದಂತಹ ಒಂದು ವಸ್ತುಗಳನ್ನು ಅವರು ನಿರೂಪಿಸಿರುವಂತಹ ತಂತ್ರದಿಂದ ಧರ್ಮಶ್ರೀ ಕಾದಂಬರಿ ಹೆಚ್ಚು ಓದುಗರನ್ನು ತಲುಪಿದೆ. ಕುತೂಹಲವನ್ನು ಹೆಚ್ಚಿಸಿ ಮೆಚ್ಚುಗೆಗೆ ಕೂಡ ಪಾತ್ರವಾಗಿದೆ. 1962ರಲ್ಲಿ ಬರೆದಂತಹ 'ದೂರ ಸರಿದರು' ಕಾದಂಬರಿ ಒಂದು ಭಿನ್ನವಾದ ಕಥೆ ಹೊಂದಿದೆ. ಆನಂದ, ಗೀತಾ, ವಸಂತ, ವಾಸನ್, ವಿಜಯ ರಂಗೇಗೌಡರಿಂದ ಪ್ರೇಮ ಇವರ ನಡುವೆ ನಡೆದ ಹಲವಾರು ಘಟನೆಗಳಿಂದ ದೂರ ಸರಿದರು ಎನ್ನುವ ಕಾದಂಬರಿ ತನ್ನ ವಸ್ತುವನ್ನಾಗಿಸಿದೆ. ಅವರ ಇನ್ನೊಂದು ಪ್ರಸಿದ್ಧವಾದ ಕಾದಂಬರಿ 1962ರಲ್ಲಿ ಪ್ರಕಟಗೊಂಡ 'ವಂಶವೃಕ್ಷ' ಸಿನಿಮಾ ಕೂಡಾ ಆಗಿದೆ ಮತ್ತು ಈ ಕಾದಂಬರಿ ಬೇರೆ ಬೇರೆ ಭಾಷೆಗಳಿಗೆ ಕೂಡಾ ಅನುವಾದವಾಗಿತ್ತು. ಈ ಕಾದಂಬರಿಯಲ್ಲಿ ಬರುವ ಶ್ರೀನಿವಾಸ, ಡಾ. ಸದಾಶಿವ ರಾಯ ಮತ್ತು ಕಾತ್ಯಾಯಿನಿ ಈ ಮೂರು ಪ್ರಧಾನವಾದ ಪಾತ್ರಗಳು ಜ್ಞಾನ, ಬುದ್ಧಿ ಮತ್ತು ಪ್ರಕೃತಿಗಳಿಗೆ ಸಮಾನವಾದವು. ಜ್ಞಾನ, ಬುದ್ಧಿ ಮತ್ತು ಪ್ರಕೃತಿಯನ್ನು ಓದುಗರಿಗೆ ಸದಾಶಿವರಾಯರು ಮತ್ತು ಕಾತ್ಯಾಯಿನಿ ಮೂಲಕ ಅವರು ಹೇಳುವಂತಹ ವಿಧಾನ ಅದು ಬಹಳ ಮುಖ್ಯವಾದದ್ದು. ಜೊತೆಗೆ ಆ ವಂಶವನ್ನು ಕುರಿತ ಬಹು ಚರ್ಚಿತವಾದಂತಹ ಒಂದು ವಿಷಯವನ್ನು ಅವರು ಈ ಕಾದಂಬರಿಯಲ್ಲಿ ವ್ಯಕ್ತಪಡಿಸಿರುವುದನ್ನು ನಾವು ಕಾಣಬಹುದು ಎಂದು ಹೇಳಿದರು.

1965ರಲ್ಲಿ ಪ್ರಕಟಗೊಂಡ 'ಮತದಾನ' ಕಾದಂಬರಿಯನ್ನು ನಾವು ಇಂದು ಓದಿದರೂ ಕೂಡಾ ಈ ಕೃತಿ ಇವತ್ತಿನದ್ದೇ ಎಂದು ಅನಿಸುತ್ತದೆ. ಅದರಲ್ಲಿ ಚುನಾವಣೆ ಮತ್ತು ಚುನಾವಣೆಯಲ್ಲಿ ನಡೆಯುವಂತಹ ಬೇರೆ ಬೇರೆ ಘಟನೆಗಳು ಮತ್ತು ಪ್ರಗತಿಪರರು ಎಂದು ಅನಿಸಿಕೊಂಡವರು ಚುನಾವಣೆಯ ಬಗೆಗೆ ಮಾತನಾಡುವಂತಹದ್ದನ್ನು ಚಿತ್ರಿಸಲಾಗಿದೆ. ಆದರೆ ವಾಸ್ತವದಲ್ಲಿ ರಾಮಲಿಂಗೇಗೌಡರಂತಹ ಕಾಂಟ್ರಾಕ್ಟರ್ ವ್ಯಕ್ತಿ ಯಾವ ರೀತಿಯಾಗಿ ಮಾಡುತ್ತಾನೆ, ಡಾ. ಶಿವಪ್ಪ ಎನ್ನುವ ವ್ಯಕ್ತಿ ಯಾವ ರೀತಿಯಲ್ಲಿ ರಾಜಕೀಯ ರಂಗದಲ್ಲಿ ವಿಫಲನಾಗುತ್ತಾನೆ ಎನ್ನುವುದನ್ನು ಮತದಾನದ ಮೂಲಕವಾಗಿ ಹೇಳುತ್ತಾರೆ. 1968ರಲ್ಲಿ ಪ್ರಕಟವಾದ 'ನಾಯಿ ನೆರಳು' ಕಾದಂಬರಿಯಲ್ಲಿ ಅವರು ಕರ್ಮಗಳನ್ನು ಮುಖ್ಯ ಪಾತ್ರದವನು ಅನುಭವಿಸಲೇಬೇಕು ಎನ್ನುವ ಸಿದ್ಧಾಂತವನ್ನು ಅವರು ವ್ಯಕ್ತಪಡಿಸುತ್ತಾರೆ. ಕಾದಂಬರಿಯಲ್ಲಿ ಬರುವ ಅಚ್ಯುತ ಎನ್ನುವಂತಹ ಒಂದು ಪಾತ್ರ, ಅವನ ಹಿಂದೆ ಬರುವ ನಾಯಿಗಳೇ ಅವನ ಕರ್ಮವಾಗಿದ್ದು ಆ ಕರ್ಮಗಳನ್ನು ಹೇಗೆ ಅನುಭವಿಸಬೇಕು ಎನ್ನುವುದನ್ನು ಈ ಕಾದಂಬರಿ ಹೇಳುತ್ತದೆ. 1967ರಲ್ಲಿ ಪ್ರಕಟವಾದ 'ಜಲಪಾತ' ಕಾದಂಬರಿಯಲ್ಲಿ ಗಾಯಕಿ ವಸು ಮತ್ತು ಚಿತ್ರಕಲಾವಿದ ಶ್ರೀಪತಿ ಇವರಿಬ್ಬರನ್ನು ಕೇಂದ್ರವಾಗಿಟ್ಟುಕೊಂಡು ಬರೆಯುತ್ತಾರೆ. ಡಾ. ಭೈರಪ್ಪನವರಿಗೆ ಮತ್ತೊಂದು ಆಸಕ್ತಿದಾಯಕವಾದ ಕ್ಷೇತ್ರವೆಂದರೆ ಅದು ಸಂಗೀತವಾಗಿತ್ತು. ಆ ಸಂಗೀತವನ್ನು ಬೇರೆ ಬೇರೆ ಕಾದಂಬರಿಗಳಲ್ಲಿ ಪ್ರಸ್ತಾಪಿಸಿದ್ದರೂ ಸಹಾ ಜಲಪಾತದಲ್ಲಿ ಅದನ್ನು ಹೇಳುತ್ತಾರೆ. ನಂತರ ಮಂದ್ರಾ ಎನ್ನುವಂತಹ ಕಾದಂಬರಿಯಲ್ಲಿ ಸಂಗೀತವನ್ನೇ ಪ್ರಧಾನವಾಗಿ ಇಟ್ಟುಕೊಂಡು ಬರೆಯುತ್ತಾರೆ ಎಂದರು.

1968ರಲ್ಲಿ ಅವರ ಇನ್ನೊಂದು ಕಾದಂಬರಿ 'ತಬ್ಬಲಿಯು ನೀನಾದೆ ಮಗನೆ' ಪ್ರಕಟಗೊಳ್ಳುತ್ತದೆ. ಧರ್ಮಶ್ರೀ ಕಾದಂಬರಿಯಲ್ಲಿ ಏನು ಚರ್ಚೆಯಾಗುತ್ತದೆ ಅದೇ ಮುಂದುವರಿಕೆಯ ರೀತಿಯಲ್ಲಿಯೇ ಈ ಕಾದಂಬರಿ ಮುಂದುವರಿಯುತ್ತದೆ. ಪುಣ್ಯಕೋಟಿ ಹಸುವನ್ನು ಕೇಂದ್ರವಾಗಿಟ್ಟುಕೊಂಡು ಕಾಳಿಂಗ, ವೆಂಕಟರಮಣ, ಗಿಂಡ ಎನ್ನುವಂತಹ ಪಾತ್ರಗಳು ಬರುತ್ತವೆ. ಗೋವು ಎನ್ನುವುದು ಭಾರತೀಯರಿಗೆ ಅತ್ಯಂತ ಪವಿತ್ರವಾದುದು ಅನಿಸಿದರೆ ಅದೇ ವಿದೇಶಿಯರಿಗೆ ಗೋವು ಎನ್ನುವುದು ಒಂದು ವಾಣಿಜ್ಯ ಎನ್ನುವುದನ್ನು ಹೇಳುತ್ತಾರೆ. ಇತ್ತೀಚಿನ ಸಂದರ್ಭಗಳಲ್ಲಿಯೂ ಕೂಡಾ ಗೋಮಾಂಸ, ಗೋಹತ್ಯೆ, ಗೋಮಾಂಸ ರಫ್ತು ಹೆಚ್ಚು ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ 1968ರಲ್ಲಿಯೇ ಬರೆದಂತಹ ತಬ್ಬಲಿಯು ನೀನಾದೆ ಮಗನೇ ಸಮಕಾಲೀನದಲ್ಲಿ ಹೇಗೆ ಒಂದು ವಸ್ತುವಾಗಿದೆ ಎನ್ನುವುದನ್ನು ನಾವು ನೋಡಬಹುದಾಗಿದೆ. 1971ರಲ್ಲಿ ಪ್ರಕಟವಾದ ಅವರ 'ನಿರಾಕರಣ' ಕಾದಂಬರಿಯಲ್ಲಿ ಬರುವ ನರಹರಿ ಎನ್ನುವವನು ಅವನು ತನ್ನ ಬದುಕನ್ನು ತ್ಯಜಿಸಿ ಹಿಮಾಲಯದ ಕಡೆಗೆ ಆರೋಹಣ ಮಾಡಿ, ಹಿಮಾಲಯದಲ್ಲಿ ಪುನಃ ತನ್ನ ಬದುಕಿನ ಕಡೆಗೆ ಚಿಂತನೆ ಮಾಡುತ್ತಾ ನಂತರ ಅವನು ಹಿಮಾಲಯವನ್ನು ತೊರೆದು ಪುನ: ಬದುಕಿನ ಕಡೆಗೆ ಬರುತ್ತಾನೆ. ಅನಂತರ ಹಿಮಾಲಯವನ್ನು ನೆನಪಿಸಿಕೊಳ್ಳುತ್ತಾನೆ. ಶ್ರೀ ಗೋಪಾಲಕೃಷ್ಣ ಅಡಿಗರು ಹೇಳುವ ಹಾಗೆ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಅನ್ನುವ ರೀತಿಯಲ್ಲಿ ಇಲ್ಲಿನ ಈ ನಡವಳಿಕೆ ನೋಡಬಹುದಾಗಿದೆ. ಮತ್ತೊಂದು ಕಾದಂಬರಿ 'ಅನ್ವೇಷಣ'. ಅವರ 'ಗೃಹಭಂಗ' ಕಾದಂಬರಿಯ ರೀತಿಯಲ್ಲೇ ಇರುವುದು. ಅವರ ಇನ್ನೊಂದು ಪ್ರಸಿದ್ಧವಾದಂತಹ ಮತ್ತು ಚರ್ಚೆಗೆ ಗ್ರಾಸವಾದಂತಹ 1979ರಲ್ಲಿ ಬರೆದ ಕಾದಂಬರಿ 'ಪರ್ವ'. ವ್ಯಾಸಭಾರತವನ್ನು ಮುಖ್ಯವಾಗಿಟ್ಟುಕೊಂಡು ವಾಸ್ತವಿಕತೆಯ ನೆಲೆಯಲ್ಲಿ ಇದರಲ್ಲಿ ಬರುವಂತಹ ದ್ರೌಪದಿ, ಕುಂತಿ, ಗಾಂಧಾರಿ ಪಾತ್ರಗಳ ಮೂಲಕವಾಗಿ ಅವರು ಆ ಲೋಕವನ್ನು ಕಾಣುವಂತಹದ್ದು ಮತ್ತು ಪಾಂಡವರು ಜನಿಸಿದ ಬಗೆಗೆ ಅವರು ಹೇಳುವ ವಿಚಾರಗಳು ಹೆಚ್ಚು ಚರ್ಚೆಗೆ ಒಳಗಾದದ್ದು. ಮತ್ತು ಈ ಕಾದಂಬರಿ 7 ಗಂಟೆಗಳ ಸುದೀರ್ಘ ನಾಟಕವಾಗಿ ಹೆಚ್ಚು ಪ್ರಚಲಿತವಾಗಿರುವುದನ್ನು ಕೂಡಾ ಕಾಣಬಹುದು. 1973ರಲ್ಲಿ ಬರೆದಂತಹ 'ದಾಟು' ಕಾದಂಬರಿಯಲ್ಲಿ ಹುಟ್ಟಿಗೆ ಮಹತ್ವ ನೀಡಿದ ಜಾತಿ ಕೆಲವರ ಉನ್ನತಿಗೆ ಕಾರಣವಾದರೆ ಇನ್ನು ಕೆಲವರ ಅವನತಿಗೆ ಕಾರಣವಾಗುತ್ತದೆ ಎನ್ನುವ ಮಾತನ್ನು ವರ್ಣ ಮತ್ತು ಜಾತಿಗೆ ಸಂಬಂಧಿಸಿದಂತೆ ಅವರು ಹೇಳುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ಭೈರಪ್ಪನವರನ್ನು ಕುರಿತು ಮಾತನಾಡಬೇಕಾದರೆ ಅವರು ಪ್ರಗತಿಪರರು ಅಲ್ಲ, ಸಂಪ್ರದಾಯಸ್ಥರು ಎಂದು ಹೇಳುತ್ತಾರೆ. ಆದರೆ ಅವರ ಕೃತಿಯನ್ನು ನೋಡಿದಾಗ ಅವರು ಹೆಚ್ಚು ಪ್ರಗತಿಪರರು ಮತ್ತು ವೈಚಾರಿಕರು ಎನ್ನುವುದು ಗೊತ್ತಾಗುತ್ತದೆ. ಅವರ ಹಲವಾರು ಕಾದಂಬರಿಗಳಲ್ಲಿ ಸಂಪ್ರದಾಯವನ್ನು ಖಂಡಿಸುವುದನ್ನು, ಹಾಗೆಯೇ ಅವರ ದಾಟು ಕಾದಂಬರಿಯಲ್ಲಿ ಕೂಡಾ ಈ ಜಾತಿ ವ್ಯವಸ್ಥೆಯನ್ನು ಕಠೋರವಾಗಿ ಟೀಕೆ ಮಾಡುವುದನ್ನು ನಾವು ಕಾಣಬಹುದು. ಅವರು ನಂಬಿಕೊಂಡಂತಹ ಸತ್ಯ ಮತ್ತು ನಂಬಿಕೆಗಳಿಗೆ ಅನುಗುಣವಾಗಿ ಅದೇ ರೀತಿಯಲ್ಲಿ ಬದುಕುತ್ತಿದ್ದವರು. ತಮಗೆ ಬಂದ ಹಲವಾರು ಪ್ರಶಸ್ತಿ ಮತ್ತು ಹಣವನ್ನು ತಮ್ಮ ಹುಟ್ಟೂರಾದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರದಲ್ಲಿ "ಎಸ್.ಎಲ್. ಭೈರಪ್ಪ ಪ್ರತಿಷ್ಠಾನ" ಆರಂಭಿಸಿ ಅದರ ಇಡೀ ಗ್ರಾಮವನ್ನು ಅಭಿವೃದ್ಧಿಪಡಿಸುತ್ತಾರೆ. ಅವರ ಮತ್ತೊಂದು ಪ್ರಸಿದ್ಧವಾದ ಕಾದಂಬರಿ 'ಗೃಹಭಂಗ'ದಲ್ಲಿ ಬರುವ ನಂಜಮ್ಮ ಎಷ್ಟೊಂದು ಕಷ್ಟಗಳನ್ನು ಅನುಭವಿಸುತ್ತಾ ಗಂಡನ ಸೋಮಾರಿತನಕ್ಕೆ ಬೇಸತ್ತು ಮಕ್ಕಳನ್ನು ಹೇಗೆ ಬೆಳೆಸುತ್ತಾಳೆ ಎನ್ನುವುದನ್ನು ನೋಡಬಹುದಾಗಿದೆ. ಅವರು ಬರೆದಹಂತಹ ನೆಲೆ, ಸಾಕ್ಷಿ, ಮಂದ್ರ, ಆವರಣ, ಕವಲು, ಉತ್ತರಾಕಾಂಡ ಮುಂತಾದ ಕಾದಂಬರಿಗಳ ಮೂಲಕ ಭೈರಪ್ಪನವರು ಅತ್ಯಂತ ಜನಪ್ರಿಯರಾದರು. ಅವರಿಗೆ ರಾಜ್ಯ ಸಾಹಿತ್ಯ



ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳು ಲಭಿಸಿದ್ದು ಸರಸ್ವತಿ ಸಮ್ಮಾನ್ ಪ್ರಶಸ್ತಿಗಳಿಗೆ ಸಹಾ ಭಾಜನರಾಗಿದ್ದಾರೆ. ಸರ್ಕಾರೀ ಶಾಲೆಗಳನ್ನು ಉಳಿಸಬೇಕೆಂಬ ಸಂಕಲ್ಪದಿಂದ ಅವರಿಗೆ ಸರ್ಕಾರದಿಂದ ಬಂದ ಪ್ರಶಸ್ತಿಗಳ ಹಣವನ್ನು ಸರ್ಕಾರೀ ಶಾಲೆಗಳ ಅಭಿವೃದ್ಧಿಗಾಗಿ ಸರ್ಕಾರಕ್ಕೇ ಹಿಂದಿರುಗಿಸುತ್ತಿದ್ದರು. ಅವರ ಬದುಕು ಮತ್ತು ಬರಹ ಒಂದು ವಿಧದಲ್ಲಿ ತೆರೆದಿಟ್ಟ ಪುಸ್ತಕ ರೂಪದಂತಿದೆ. ಈ ರೀತಿಯಾದಂತಹ ಒಂದು ಬದುಕನ್ನು ನಡೆಸುತ್ತಿದ್ದ ಡಾ. ಎಸ್.ಎಲ್. ಭೈರಪ್ಪನವರ ಕುರಿತಾಗಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ. ಡಾ.ರುದ್ರೇಶ್ ಅದರಂಗಿ ತಮ್ಮ ವಿಷಯ ಮಂಡನೆ ಮುಗಿಸಿದರು.

ಅನಂತರ ಸಂಘದ ಕನ್ನಡ ಕಲಿಕಾ ಕೇಂದ್ರದ ಮಕ್ಕಳಿಂದ ಶ್ರೀ ಗೋವಿಂದ ಪೈ ಅವರ ಗೀತೆ 'ತಾಯೆ ಬಾರಾ ಮೊಗವ ತೋರ' ಪ್ರಸ್ತುಗೊಂಡಿತು. ಅನಂತರ ಡಾ. ಸಿದ್ದಲಿಂಗಯ್ಯ ಅವರ ಕುರಿತು ವಿಚಾರ ಮಂಡನೆ ಮಾಡಲು ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕ ಭಾಗವಹಿಸಿದ್ದ ಡಾ. ಡಿ.ಆರ್. ದೇವರಾಜ್, ಕನ್ನಡ ಅಧ್ಯಾಪಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚನ್ನಪಟ್ಟಣ ಇವರ ಪರಿಚಯವನ್ನು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮಾಡಿಕೊಟ್ಟರು.

ಡಾ. ಡಿ.ಆರ್. ದೇವರಾಜ್ ಅವರು ಮಾತನಾಡುತ್ತಾ ಡಾ. ಸಿದ್ದಲಿಂಗಯ್ಯನವರು ಬಹುಮುಖ ವ್ಯಕ್ತಿತ್ವವುಳ್ಳ ಒಬ್ಬ ಕವಿ, ಸಾಮಾಜಿಕ ಚಳವಳಿಯ ಗಾಯಕ, ರಾಜಕಾರಣಿ ಮತ್ತು ಕನ್ನಡ ಅಭಿವೃದ್ಧಿಯನ್ನು ಮಾಡಿದಂತಹ ಬಹುದೊಡ್ಡ ಚೇತನ. 1954ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಹಳ್ಳಿಯಲ್ಲಿ ಜನಿಸುತ್ತಾರೆ. ಬಾಲ್ಯವನ್ನು ತಮ್ಮ ಹುಟ್ಟೂರಿನಲ್ಲಿ ಕಳೆದ ನಂತರ ಬೆಂಗಳೂರಿನಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸುತ್ತಾರೆ. ಅವರು ವಿದ್ಯಾರ್ಥಿಯಾಗಿದ್ದಾಗಲೇ ಕಾವ್ಯಗಳನ್ನು ರಚಿಸುತ್ತಿದ್ದರು ಮತ್ತು ಪ್ರತಿದಿನ ಅದಕ್ಕಾಗಿ ಅವರ ಗುರುಗಳಿಂದ ಒಂದೊಂದು ರೂಪಾಯಿ ಬಹುಮಾನವನ್ನು ಪಡೆಯುತ್ತಿದ್ದರಂತೆ. ವಿದ್ಯಾರ್ಥಿಯಾಗಿದ್ದಾಗಲೇ ವಿಚಾರವಾದದ ಆದರ್ಶಗಳಿಗೆ ಒಳಗಾಗುತ್ತಾರೆ, ವಿಚಾರವಾದಿ ಪರಿಷತ್ತಿನ ಅಧ್ಯಕ್ಷರಾಗುತ್ತಾರೆ, ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವಿಚಾರವಾದಿ ಪರಿಷತ್ತಿನ ಸಮ್ಮೇಳನವನ್ನು ಆಯೋಜಿಸುತ್ತಾರೆ. 1972ರಲ್ಲಿ ಕರ್ನಾಟಕದಲ್ಲಿ ನಡೆದಂತಹ ಒಂದು ಬಹುದೊಡ್ಡ ಸಾಮಾಜಿಕ ವಿದ್ಯಮಾನವಾದ ಬಸವಲಿಂಗಪ್ಪನವರ ಬೂಸಾ ಈ ಪ್ರಕರಣದಲ್ಲಿ ತಮ್ಮ ಪೌರಾಡಳಿತ ಸಚಿವ ಸ್ಥಾನಕ್ಕೆ ಬಸವಲಿಂಗಪ್ಪನವರು ರಾಜೀನಾಮೆ ಕೊಡಬೇಕಾಗಿ ಬರುತ್ತದೆ. ಆ ಸಂದರ್ಭದಲ್ಲಿ ಬೂಸಾ ಚಳವಳಿಯನ್ನು ಮುನ್ನಡೆಸಿದಂತಹ ಬಹುದೊಡ್ಡ ವ್ಯಕ್ತಿ ಹಾಗೂ ಚಿಂತಕ ಡಾ. ಸಿದ್ದಲಿಂಗಯ್ಯನವರು ಎಂದರು.

ಅವರು ಕನ್ನಡ ಶಿಕ್ಷಕರಾಗಿ, ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕರಾಗಿ, ಪ್ರಾಧ್ಯಾಪಕರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಹಾಗು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಕರ್ನಾಟಕವನ್ನು, ಕನ್ನಡವನ್ನು, ಕನ್ನಡ ಸಮಾಜವನ್ನು ಅತ್ಯಂತ ಮಾನವೀಯವಾಗಿ ರೂಪಿಸುವಂತಹ ಕೆಲಸವನ್ನು ಮಾಡಿದಂತಹ ಕವಿ. ಅವರು 5 ಕವನ ಸಂಕಲನಗಳನ್ನು ಬರೆದಿದ್ದಾರೆ. 1975ರಲ್ಲಿ 'ಹೊಲೆ ಮಾದಿಗರ ಹಾಡು' 1979ರಲ್ಲಿ 'ಸಾವಿರಾರು ನದಿಗಳು', 1983ರಲ್ಲಿ 'ಕಪ್ಪು ಕಾಡಿನ ಹಾಡು' ಮತ್ತು 2015ರಲ್ಲಿ ತೃತೀಯ ನೀರಿನ ಕಡಲು





ಕವನ ಸಂಕಲನವನ್ನು ಪ್ರಕಟಗೊಳಿಸುತ್ತಾರೆ. ನಂತರ ತಮ್ಮ ಎಲ್ಲ ಕವಿತೆಗಳನ್ನು ಒಟ್ಟುಗೂಡಿಸಿ 'ಭೋಧಿವೃಕ್ಷದ ಕೆಳಗೆ' ಎನ್ನುವ ಸಮಗ್ರ ಕಾವ್ಯ ಸಂಕಲನವನ್ನು ಹೊರತರುತ್ತಾರೆ. ಶ್ರೀ ಜಿ.ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ 'ಗ್ರಾಮದೇವತೆಗಳು' ಎನ್ನುವ ವಿಷಯವಾಗಿ ಪಿ.ಎಚ್.ಡಿ ಅಧ್ಯಯನ ಮಾಡುತ್ತಾರೆ. ನಂತರ ಅವತಾರಗಳು ಎನ್ನುವ ಕೃತಿಯನ್ನು ಹೊರತರುತ್ತಾರೆ. ಇತರ ಕವಿಗಳಿಗೂ ಸಿದ್ದಲಿಂಗಯ್ಯನವರಿಗೂ ಒಂದು ರೀತಿ ಅವಿನಾಭಾವ ಸಂಬಂಧ. ಕರ್ನಾಟಕವನ್ನು ಕಟ್ಟಬೇಕೆಂದರೆ ಕರ್ನಾಟಕದೊಳಗಡೆ ಎಲ್ಲ ಜನವರ್ಗಗಳ ಸಾಮಾಜಿಕ ನ್ಯಾಯ, ಬದುಕಿನ ಹಕ್ಕು, ಘನತೆ, ಹೆಚ್ಚಿಸಬೇಕೆಂದು ಅವರು ಹೇಳಿದರು. ಅವರ ಒಟ್ಟು ಕಾವ್ಯದ ಧ್ವನಿ ಮೂಲ ಸ್ವಾದದಿಂದ ಕೊಳಲ ನಾದದ ಗಾನದವರೆಗೂ ಸಾಗಿದೆ. ಆ ನಿಟ್ಟಿನಲ್ಲಿ ಅವರು 1975ರಲ್ಲಿ ಕವಿತೆ ಹೊಲೆ ಮಾದಿಗರ ಹಾಡು ಪ್ರಸಿದ್ಧಿಯಾಗಿತ್ತು. ಸಿದ್ದಲಿಂಗಯ್ಯನವರ ಜೀವನ ಮತ್ತು ಸಾಧನೆ ಒಂದು ಮಾದರಿಯಾಗಿತ್ತು ಎಂದು ಹೇಳಿ, ತಮಗೆ ಅವರ ಬಗ್ಗೆ ವಿಚಾರಮಂಡನೆ ಮಾಡಲು ಅವಕಾಶ ನೀಡಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆ ಸಲ್ಲಿಸಿ ಡಾ. ದೇವರಾಜ್ ತಮ್ಮ ಮಾತನ್ನು ಮುಗಿಸಿದರು.

ಅನಂತರ ಶ್ರೀ ಗೋಪಾಲಕೃಷ್ಣ ಅಡಿಗರ ಒಂದು ಕವಿತೆ 'ಎಂದು ಕೊನೆ'ಯನ್ನು ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಶುಭಾದೇವಿ ಪ್ರಸಾದ್ ಮತ್ತು ಸಂಗಡಿಗರು ಪ್ರಸ್ತುತಪಡಿಸಿದರು. ಶ್ರೀಮತಿ ಶೋಭಾ ನಾಗರಾಜ್ ತಂಡದವರಿಂದ ಶ್ರೀ ಬಿ.ಎಂ. ಶ್ರೀಕಂಠಯ್ಯನವರ ಕವನ 'ವಸಂತ ಬಂದ ಋತುಗಳ ರಾಜ' ಪ್ರಸ್ತುತಿಗೊಂಡಿತು. ಶ್ರೀ ಶ್ರೀನಿವಾಸಯ್ಯ ಮತ್ತು ಸಂಗಡಿಗರು ಡಾ. ಸಿದ್ದಲಿಂಗಯ್ಯನವರ ಕವನ 'ಅ ಬೆಟ್ಟದಲಿ ಬೆಳದಿಂಗಳಲಿ ಸುಳಿದಾಡಬೇಡ ಗೆಳತಿ' ಎನ್ನುವ ಗೀತೆಯನ್ನು ಹಾಡಿದರು.

ತರುವಾಯ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಡಾ. ವಾಗೀಶ್ ಬಿ.ಜಿ. ಅವರು ಮಾತನಾಡಿ ಸಂಸ್ಕೃತದ 'ನವೋನ್ವೇಷ ಪ್ರತಿಭೆ'–ಶ್ಲೋಕವನ್ನು ಉದಾಹರಿಸುತ್ತಾ –ಪ್ರತಿಭೆ ಎನ್ನುವುದು ವಿವಿಧ ಅವತಾರಗಳಲ್ಲಿ ಮತ್ತೆ ಮತ್ತೆ ಅವತಾರ ಎತ್ತಿ ಬರುತ್ತದೆ. ಇವತ್ತು ಆ ರೀತಿಯ ಹಲವು ಅವತಾರಗಳು ಕಂಡುಬಂತು. ಚಿಕ್ಕ ಚಿಕ್ಕ ಮಕ್ಕಳು ತಮ್ಮ ಪ್ರತಿಭೆಯನ್ನು ತೋರಿಸಿದಾಗ ಹೃದಯ ತುಂಬಿ ಬರುತ್ತೆ. ಸಾವಿರಾರು ಮೈಲು ದೂರದಿಂದ ಬಂದು ಕನ್ನಡವನ್ನು ಕಲಿತು ಕನ್ನಡದ ಪ್ರತಿಭೆಯನ್ನು ತೋರಿಸುವುದು ಅದ್ಭುತವಾದ ವಿಷಯ. ಕನ್ನಡ ಸಾಹಿತ್ಯ ಲೋಕದ ಆರು ಮೇರು ಪರ್ವತಗಳನ್ನು ಒಂದೇ ಚೌಕಟ್ಟಿನಲ್ಲಿ ಹಿಡಿದಿಟ್ಟಿರುವಂತ ಒಂದು ಪ್ರಯತ್ನ ಇಂದಿನ ಸಾಹಿತ್ಯ ಕಾರ್ಯಕ್ರಮದಲ್ಲಿ ನಡೆದಿದೆ ಎಂದರು.

ಈ ಆರು ಮೇರು ಪರ್ವತಗಳಲ್ಲಿ ಡಾ. ಎಸ್. ಎಲ್. ಭೈರಪ್ಪನವರು 94 ವರ್ಷ ತುಂಬು ಜೀವನವನ್ನು ನಡೆಸಿದಂತಹ ಕನ್ನಡದ ಮೇರು ಪ್ರತಿಭೆ. ಹಾಗೆಯೇ ಶ್ರೀ ಗೋವಿಂದ ಪೈ ಅವರು ಅತ್ಯಂತ ಹಿರಿಯರಾದಂತಹ ಕವಿ ಇಂಗ್ಲೀಷ್ ಪ್ರೊಫೆಸರ್ ಆಗಿ ಕನ್ನಡದಲ್ಲಿ ಕೃಷಿ ಮಾಡಿದಂತಹ ಅದ್ಭುತ ಪ್ರತಿಭೆ ಶ್ರೀ ಬಿ.ಎಂ.ಶ್ರೀ. ಅವರು. ತಾವು ಯಾವುದನ್ನು ಮಾಡಿದರೂ ಅದರಲ್ಲಿ ಯಶಸ್ಸನ್ನು ಕಂಡವರು ಡಾ. ಸಿದ್ದಲಿಂಗಯ್ಯನವರು ರಾಜಕೀಯದಲ್ಲಿಯೂ ಕೂಡಾ ತಮ್ಮ ಕ್ರಾಂತಿಕಾರಿ ಚಳವಳಿಯ ಐಡಿಯಾಲಜಿ ಏನಿದೆ ಅದನ್ನು ಬಹಳ ಅದ್ಭುತವಾಗಿ ಮಂಡನೆ ಮಾಡಿದ್ದಾರೆ. ಅವರ ಕವನಗಳಲ್ಲಿ ಒಂದು ಕ್ರಾಂತಿಕಾರಿ ಭಾವನೆ ಎದ್ದು ಕಾಣುತ್ತದೆ. 'ಅವರ ಬಂಗಲೆಯ ಅಂಗಳದಲ್ಲಿ ನಮ್ಮ ರಕ್ತದ ರಂಗೋಲಿ' ಎನ್ನುವ ಕವಿತೆಯನ್ನು ಅವರು 'ಹೊಲೆ ಮಾದಿಗರು' ಕವನ ಸಂಕಲನದಲ್ಲಿ ಬರೆಯುತ್ತಾರೆ. ಈ ಕವಿತೆಯಲ್ಲಿ ಮನಸ್ಸುಗಳಲ್ಲಿದ್ದ ಭಾವನೆಗಳನ್ನ ಒಂದು ಸಮುದಾಯ ಅನುಭವಿಸಿದ ನೋವನ್ನು ಬಹಳ ಸೃಜನಾತ್ಮಕವಾಗಿ, ಕಲ್ಪನಾಶಕ್ತಿಗೂ ಮೀರಿ ಕ್ರಾಂತಿಕಾರಿ ರೀತಿಯಲ್ಲಿ ಪ್ರತಿಪಾದಿಸಿದಂತಹ ಅದೇ ಕವಿಯ ಗೀತೆಯನ್ನು 30 ವರ್ಷಗಳ ನಂತರ ಈಗ ನಮ್ಮ ಮುಂದೆ ಎಷ್ಟೊಂದು ಚೆನ್ನಾಗಿ ಇಲ್ಲಿನ ಕಲಾವಿದರು ಪ್ರಸ್ತುತಪಡಿಸಿದರು. ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ ಸುಳಿದಾಡಬೇಡ ಗೆಳತಿ, ಸುಟ್ಟಾವೋ ಬೆಳ್ಳಿಕಿರಣ ಎನ್ನುವ ಕವಿತೆಯನ್ನು ಸುಶ್ರಾವ್ಯವಾಗಿ ಹೇಳುತ್ತಾ–ಎರಡು ಪೋಲಾರೈಟ್ಸ್–ಒಂದು ಕಡೆ ಕ್ರಾಂತಿಕಾರಿಯಾಗಿ ಕಂಡರೆ ಇನ್ನೊಂದು ಕಡೆ ರೊಮ್ಯಾಂಟಿಕ್ ಮನುಷ್ಯ ಆಗಿ ಕಾಣುತ್ತಾರೆ. ಡಾ. ಸಿದ್ದಲಿಂಗಯ್ಯ 1978ರಲ್ಲಿ ವಿಧಾನ ಪರಿಷತ್ ಸದಸ್ಯರಾಗುತ್ತಾರೆ, ರಾಜಕೀಯದಲ್ಲಿ ಎಲ್ಲ ರೀತಿಯ ವಿಷಯ ಮಂಡನೆ ಮಾಡಿ ಒಳ್ಳೆ ಜನನಾಯಕನಾಗಿ ಬೆಳೆಯುತ್ತಾರೆ ಅಂತಹ ಒಬ್ಬ ವ್ಯಕ್ತಿ 1883ರಲ್ಲಿ ಜನಿಸಿದ ಶ್ರೀ ಗೋವಿಂದ ಪೈ ಅತ್ಯಂತ ಹಿರಿಯ ಕವಿ. ತಮಗೆ ಕನ್ನಡದ ಬಗ್ಗೆ, ಕನ್ನಡದ ನೆಲದ ಬಗ್ಗೆ ಇದ್ದಂತಹ ಪ್ರೀತಿಯನ್ನು ಕ್ರಾಂತಿಯ ಪದ್ಯವನ್ನು ಅದ್ಭುತವಾಗಿ ಪ್ರಸ್ತುತಪಡಿಸಿದವರು. ಡಾ. ಎಸ್.ಎಲ್. ಭೈರಪ್ಪನವರು ಹೇಳುವ ಒಂದು ವಿಷಯವನ್ನು ಇಲ್ಲಿ ಅವರು ಪ್ರಸ್ತಾಪಿಸುತ್ತಾರೆ–ಅಳು ಎನ್ನುವುದು ಒಂದು ರೀತಿಯಲ್ಲಿ ಹಾಲು ಉಕ್ಕಿದ ಹಾಗೆ. ಹಾಲು ಎರಡು ಸಾರಿ ಮಾತ್ರ ಉಕ್ಕುತ್ತದೆ, ಮೂರನೇ ಸಾರಿ ಕುದಿಯುತ್ತದೆ, ಅದೇ ರೀತಿ ಒಬ್ಬ ಮನುಷ್ಯನ ಭಾವನೆ ಕಣ್ಣೀರಿನ ಮೂಲಕ ಹೊರ ಬರುತ್ತಿದೆ ಎಂದಾದರೆ ಅದಕ್ಕೆ ಒಂದು ಮಿತಿ ಇರುತ್ತದೆ. ಕಣ್ಣೀರ ಕಟ್ಟೆ ಒಡೆಯಿತು ಎಂದಾದರೆ ಕ್ರಾಂತಿಕಾರಿಯಾಗಿ ಬದಲಾವಣೆಯಾಗಲು ಹೆಚ್ಚು

ಸಮಯವಿಲ್ಲ ಎಂದರ್ಥ. ತಮ್ಮ 'ದಾಟು' ಎನ್ನುವ ಕಾದಂಬರಿಯಲ್ಲಿ ಇದನ್ನು ಭೈರಪ್ಪನವರು ಚಿತ್ರಿಸಿದ್ದಾರೆ ಎಂದರು.

ಬಿ.ಎಂ. ಶ್ರೀಕಂಠಯ್ಯನವರ ಕುರಿತಾಗಿ ಹೇಳುತ್ತಾ, ಕನ್ನಡದ ಕಣ್ವ ಎಂದು ಬಹಳ ಪ್ರಸಿದ್ಧವಾದ ಕವಿ, 'ಕರುನಾಳು ಬಾ ಬೆಳಕೆ ಮುಸುಕಿದ ಮಬ್ಬಿನಲಿ ಕೈ ಹಿಡಿದು ನಡೆಸು ಎನ್ನನು'-ಇದು ಇಂಗ್ಲೀಷಿನಲ್ಲಿ ಇದ್ದ ಒಂದು ಕವಿತೆ, ಇದನ್ನು ಕನ್ನಡಕ್ಕೆ ಎಳೆದು ತರಬೇಕೆನ್ನುವ ವಿಚಾರ ಅದಕ್ಕೆ ನಾವು ನಮಸ್ಕರಿಸಬೇಕು. ಮುಂದೆ ಏನಾಗುತ್ತಿದೆ ಎಂದು ಗೊತ್ತಿಲ್ಲ ಎಲ್ಲವೂ ನೀನೆ, ನಿನ್ನ ಮೇಲೆ ಭಾರ ಹಾಕಿದ್ದೇನೆ, ನಿನ್ನನ್ನು ಸಂಪೂರ್ಣವಾಗಿ ನಂಬಿರುವ ನನ್ನ ಕೈ ಹಿಡಿದು ನಡೆಸು ಎನ್ನುವ ನಮ್ಮೆಲ್ಲರ ಮನದ ಭಾವ ಈ ಕವನದಲ್ಲಿ ವ್ಯಕ್ತವಾಗಿದೆ. ಹಾಗೆಯೇ ಶ್ರೀ ಗೋಪಾಲ ಕೃಷ್ಣ ಅಡಿಗರು ಕನ್ನಡ ಸಾರಸ್ವತ ಲೋಕದ ಅತ್ಯಂತ ಪ್ರತಿಭೆ ಅವರು. ಅಮೃತ ವಾಹಿನಿಯೊಂದು ಎದೆಯಿಂದ ಎದೆಗೆ ಹರಿಯಬೇಕು ಎನ್ನುವ ಭಾವನೆ ಸಮಸ್ತವನ್ನು, ಸೃಷ್ಟಿಯನ್ನು ಹಿಡಿದಿಡುವ ಒಂದು ಕಲ್ಪನೆ. ಇದು ಕವಿ ಕಾಲವನ್ನು ಅರ್ಥಮಾಡಿಕೊಂಡವರಿಗೆ ಗೊತ್ತಾಗುತ್ತದೆ ಎಂದರು. ಇನ್ನು ಶ್ರೀ ಡಿ.ವಿ.ಗುಂಡಪ್ಪನವರು ಮಂಕುತಿಮ್ಮನ ಕಗ್ಗ, ಕನ್ನಡದ ಭಗವದ್ಗೀತೆಯನ್ನು ಬರೆದವರು-ಎಲ್ಲರೊಳಗೆ ಒಂದಾಗು ಮಂಕುತಿಮ್ಮ -ವಿಶ್ವಮಾನವ ತತ್ವಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬಹುಶ: ಸಿಗಲಿಕ್ಕಿಲ್ಲ ಎಂದು ತಮ್ಮ ಅಭಿಪ್ರಾಯ ತಿಳಿಸುತ್ತಾ, ಈ ಒಂದು ಕನ್ನಡದ ಮೇರು ಸಾಹಿತಿಗಳ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ತಮ್ಮನ್ನು ಆಹ್ವಾನಿಸಿದ್ದಕ್ಕಾಗಿ ಸಂಘದ ಅಧ್ಯಕ್ಷರಿಗೆ ಹಾಗೂ ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಕಾರ್ಯಕ್ರಮದ ಕೊನೆಯ ಭಾಗದಲ್ಲಿ, ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ ಮತ್ತು ಗಾಯನ ಕಾರ್ಯಕ್ರಮ ನೀಡಿದ ಎಲ್ಲಾ ಸ್ಥಳೀಯ ಕಲಾವಿದರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಕನ್ನಡದ ಆರು ದಿಗ್ಗಜ ಕವಿಗಳು ಮತ್ತು ಸಾಹಿತಿಗಳ ಕುರಿತು ವಿಚಾರ ಮಂಡನೆ ಮಾಡಿದ ವಿಶೇಷ ಆಹ್ವಾನಿತರಿಗೆ, ಮುಖ್ಯ ಅತಿಥಿಗಳಿಗೆ ಮತ್ತು ಉಪಸ್ಥಿತರಿದ್ದ ದೆಹಲಿ ಕನ್ನಡಿಗರಿಗೆ ಕಾರ್ಯಕ್ರಮದ ನಿರೂಪಕರಾದ ಶ್ರೀ ಅರುಣ್ ಸಿ.ಎಸ್. ಅವರು ಧನ್ಯವಾದಗಳನ್ನು ಸಮರ್ಪಿಸುವುದರೊಂದಿಗೆ ಸಾಹಿತ್ಯೋತ್ಸವ-5 ಮುಕ್ತಾಯಗೊಂಡಿತು. ❑

***ಅಭಿಮತ ವರದಿ***

# ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಪುತಿನ, ಅನಕೃ, ಕೆ.ಎಸ್. ನರಸಿಂಹಸ್ವಾಮಿ, ಪಂಜೆ ಮಂಗೇಶರಾಯ ಮತ್ತು ಚೆನ್ನವೀರ ಕಣವಿ ಅವರ ಕುರಿತು ಸಾಹಿತ್ಯ ಸಂಜೆ

ದಿನಾಂಕ 14.09.2025 ರಂದು ಸಾಹಿತ್ಯೋತ್ಸವದ ಆರನೇ ಮಾಲಿಕೆಯ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯಲೋಕದ ಆರು ದಿಗ್ಗಜ ಕವಿಗಳು ಹಾಗು ಮೇರು ಸಾಹಿತಿಗಳಾದ ಶ್ರೀ ಪು.ತಿ. ನರಸಿಂಹಾಚಾರ್, ಶ್ರೀ ಅ.ನ. ಕೃಷ್ಣರಾಯ, ಶ್ರೀ ಕೆ.ಎಸ್. ನರಸಿಂಹಸ್ವಾಮಿ, ಶ್ರೀ ಪಂಜೆ ಮಂಗೇಶರಾಯ, ಮತ್ತು ಶ್ರೀ ಚೆನ್ನವೀರ ಕಣವಿ ಮತ್ತು ಅವರ ಕುರಿತು ಸಂವಾದ ಮತ್ತು ವಿಚಾರ ಸಂಕಿರಣವನ್ನು ಸಂಘದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನವದೆಹಲಿಯ ಬಿ.ಪಿ.ಆರ್&.ಡಿ. ನ ಹಿರಿಯ ಐಪಿಎಸ್ ಅಧಿಕಾರಿಗಳಾದ ಶ್ರೀ ರಾಜಶೇಖರ ಎನ್. ಹಾಗು ಗುರುಗ್ರಾಮ ಕನ್ನಡ ಸಂಘದ ಮಾಜಿ ಅಧ್ಯಕ್ಷರೂ ಹಾಗು ಸಂಘದ ಕಾವಲು ಸಮಿತಿಯ ಮಾಜಿ ಸದಸ್ಯರೂ ಆದ ಶ್ರೀ ಡಿ.ವಿ.ಎಸ್. ಮೂರ್ತಿ ಅವರು ಆಗಮಿಸಿದ್ದರು. ವಿಚಾರ ಸಂಕಿರಣದಲ್ಲಿ ವಿಶೇಷ ಆಹ್ವಾನಿತರಾಗಿ ಬೆಂಗಳೂರಿನಿಂದ ಆನ್‌ಲೈನ್‌ನಲ್ಲಿ ಡಾ. ಎಲ್.ಜಿ. ಮೀರಾ, ಡಾ. ಪ್ರಕಾಶ ಮಂಟೇದ, ಪ್ರೊ. ಸೆಲ್ವಕುಮಾರಿ, ಶ್ರೀ ರೇಣುಕಾರಾಧ್ಯ ಎಚ್.ಎಸ್. ಮತ್ತು ಡಾ. ಹಂ. ಗು. ರಾಜೇಶ್ ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅರುಣ್ ಸಿ.ಎಸ್. ಅವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಮತ್ತು ಆನ್‌ಲೈನ್‌ನಲ್ಲಿ ಭಾಗವಹಿಸಿದ್ದವರನ್ನು ಸಂಘದ ಪರವಾಗಿ ಸಂಘದ ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಆತ್ಮೀಯವಾಗಿ ಸ್ವಾಗತಿಸಿದರು.




ಮಹಾನ್ ಕವಿ, ನಾಟಕಕಾರ ಮತ್ತು ಲೇಖಕರಾದ ಶ್ರೀ ಪುತಿನ ಅವರು ಕುರಿತು ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾದ ಡಾ. ಎಲ್.ಜಿ. ಮೀರಾ ಅವರು ವಿಚಾರ ಮಂಡನೆ ಮಾಡಿದರು. ಅವರ ಮಾತಿನ ಮೊದಲು ಅವರ ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಮಾಡಿಕೊಟ್ಟರು. ಡಾ. ಮೀರಾ ಅವರು ಮಾತನಾಡಿ ಪುತಿನ ಅವರೊಬ್ಬ ವಿಶಿಷ್ಟ ಕವಿಯಾಗಿದ್ದರು, ಅವರ ಹಕ್ಕಿ ಹಾಡುತ್ತಿದೆ ಕವನ ಬಹಳ ಪ್ರಸಿದ್ಧವಾಗಿತ್ತು. ಆಗಿನ ಸಮಕಾಲೀನರಾದ ಕುವೆಂಪು, ಪುತಿನ ಮತ್ತು ಬೇಂದ್ರೆ ಆ ಕಾಲದಲ್ಲಿ ತ್ರಿಮೂರ್ತಿಗಳೆಂದೇ ಪ್ರಸಿದ್ಧರಾಗಿದ್ದರು. ದಿನಾಂಕ 07.03.1905ರಲ್ಲಿ ಮೇಲುಕೋಟೆಯಲ್ಲಿ ಜನಿಸಿದ ಪುತಿನ ಮೈಸೂರಿನಲ್ಲಿ ಓದಿದ ನಂತರ ಬೆಂಗಳೂರಿನಲ್ಲಿ ವೃತ್ತಿ ಜೀವನ ನಡೆಸಿದ್ದರು. ನಂತರ ಸಾಹಿತ್ಯ ಕ್ಷೇತ್ರಕ್ಕೆ ಅಡಿಯಿಟ್ಟು ಅವರು ಮಾಡಿದ ಸಾಧನೆಯಿಂದ ಜಿಜ್ಞಾಸೆಯ ಕವಿಯೆಂದೇ ಪ್ರಖ್ಯಾತರಾದರು. ಕನ್ನಡ ನವೋದಯ ಸಾಹಿತ್ಯದಲ್ಲಿ ಅಪಾರ ಕೃಷಿ ಮಾಡಿದ ಪುತಿನ ಹಲವಾರು ಕವನ ಸಂಕಲನ ಪ್ರಕಟಿಸಿದ್ದು ಅವುಗಳಲ್ಲಿ ಪ್ರಮುಖವು ಹಣತೆ, ಹಣತೆಯ ಹಾಡು, ಅಹಲ್ಯೆ, ಶಬರಿ, ಹಂಸ ದಮಯಂತಿ, ರಥಸಪ್ತಮಿ ಇತ್ಯಾದಿ. ಇವರ ಮಹಾಕಾವ್ಯ ಶ್ರೀಹರಿ ಚರಿತ್ರೆ, ಜಾಹ್ನವಿಗೆ ಜೋಡಿ ದೀವಿಗೆ ಮತ್ತು ಇತರ ನಾಟಕಗಳನ್ನು ಬರೆದಿರುವ ಪುತಿನ ಗೋಕುಲ ನಿರ್ಗಮನ, ಅಹಲ್ಯೆ, ಶ್ರೀಹರಿಚರಿತೆ ಮುಂತಾದ ಗೀತ ನಾಟಕಗಳನ್ನು ಹಾಗು ಗೀತರೂಪಕಗಳನ್ನು ಬರೆದಿದ್ದಾರೆ. ಇವಲ್ಲದೇ ಪುತಿನ ಅವರು ಸಣ್ಣಕಥೆ, ಗದ್ಯ ಚಿತ್ರಗಳನ್ನು ಬರೆದಿದ್ದಾರಲ್ಲದೇ ಅನೇಕ ಅನುವಾದಗಳನ್ನು ಸಹಾ ಮಾಡಿದ್ದಾರೆ. ಪುತಿನ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ. ಅವರು ಚಿಕ್ಕಮಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ಹಾಗು ಮೈಸೂರು ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ ಅವರಿಗೆ ದೊರಕಿತ್ತು ಎಂದು ಹೇಳುತ್ತಾ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ ಶ್ರೀ ಪುತಿನ ಕುರಿತು ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ತಮಗೆ ಅವಕಾಶ ನೀಡಿದ್ದಕ್ಕೆ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ತಿಳಿಸಿ ಡಾ. ಮೀರಾ ಅವರು ತಮ್ಮ ಮಾತುಗಳನ್ನು ಮುಗಿಸಿದರು.

ನಂತರ ಕನ್ನಡದ ಮೇರು ನಾಟಕಕಾರ, ಕಾದಂಬರಿಕಾರರಲ್ಲೊಬ್ಬರಾದ ಶ್ರೀ ಅ.ನ. ಕೃಷ್ಣರಾಯ ಅವರ ಕುರಿತು ಇತಿಹಾಸ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಕೆಂಗೇರಿ ಮತ್ತು ಬೆಂಗಳೂರಿನ ಕರ್ನಾಟಕ ರಾಜ್ಯ ಗ್ರಂಥಾಲಯ ಪುಸ್ತಕ ಆಯ್ಕೆ ಸಮಿತಿಯ ಸದಸ್ಯರೂ ಆದ ಡಾ. ಹಂ.ಗು. ರಾಜೇಶ್ ಅವರು ತಮ್ಮ ವಿಚಾರ ಮಂಡನೆ ಮಾಡಿದರು. ಅವರ ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೋಟ ಮಾಡಿಕೊಟ್ಟರು. ಡಾ. ರಾಜೇಶ್ ಮಾತನಾಡುತ್ತಾ, ಅನಕೃ ಅವರು ಕನ್ನಡದ ಅಸ್ಮಿತೆ; ಮೇ 8, 1908ರಲ್ಲಿ ಕೋಲಾರದಲ್ಲಿ ಜನಿಸಿದ ಅವರು ಬಾಲ್ಯದಿಂದ ಗಳಗನಾಥರ ಸಾಹಿತ್ಯದಿಂದ ಪ್ರಭಾವಿತರಾಗಿದ್ದರು. ಅನಂತರ ಕನ್ನಡ ಸಾಹಿತ್ಯ ಲೋಕದ ಹಾದಿಯಲ್ಲಿ ಸಾಗಿದ ಕಾದಂಬರಿ ಸಾರ್ವಭೌಮರೆಂದೇ ಖ್ಯಾತರಾದ ಅನಕೃ 200 ಕ್ಕೂ ಹೆಚ್ಚು ಕಾದಂಬರಿಗಳನ್ನು ಮತ್ತು ನಾಟಕಗಳನ್ನು ರಚಿಸಿದ್ದಾರೆ. ಇವರ ಮೊದಲ ಕಾದಂಬರಿ ಜೀವನಯಾತ್ರೆ, ಇವರ ಅನೇಕ ಕಾದಂಬರಿಗಳು ಚಲನಚಿತ್ರಗಳಾಗಿ ಹೊರಹೊಮ್ಮಿವೆ. ಅನಕೃ ಮಣಿಪಾಲ್‌ನಲ್ಲಿ ನಡೆದ 43ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ತುಂಬಿದಕೊಡ ಚಲನಚಿತ್ರದಲ್ಲಿ ನಟನೆಯನ್ನೂ ಮಾಡಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್

ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದರು ಎಂದು ಹೇಳುತ್ತಾ ಅವರ ಕುರಿತು ವಿಚಾರವನ್ನು ಹಂಚಿಕೊಳ್ಳಲು ಅವಕಾಶ ನೀಡಿದ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ತಿಳಿಸಿ ಡಾ. ಎಚ್.ಜಿ. ರಾಜೇಶ್ ತಮ್ಮ ವಿಚಾರ ಮಂಡನೆ ಮುಗಿಸಿದರು.

ಅನಂತರ, ಕನ್ನಡದ ಪ್ರಸಿದ್ಧ ಕವಿ ಶ್ರೀ ಕೆ.ಎಸ್. ನರಸಿಂಹ ಸ್ವಾಮಿ ಅವರ ಕುರಿತು ಬೆಂಗಳೂರಿನ ದೇವನಹಳ್ಳಿಯ ಸರ್ಕಾರಿ ಪ್ರಥಮ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪ್ರಕಾಶ್ ಮಂಟೇದ ಅವರು ತಮ್ಮ ವಿಚಾರ ಮಂಡಿಸಿದರು. ಅವರ ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಅವರು ಸಭೆಗೆ ಮಾಡಿಕೊಟ್ಟರು. ಡಾ. ಪ್ರಕಾಶ್ ಅವರು ನಿಸ್ತಂತು ಮಾಧ್ಯಮದ ಮೂಲಕ ಮಾತನಾಡಿ ಕನ್ನಡದ ಅತ್ಯಂತ ಪ್ರಖ್ಯಾತ ಕವನ ಸಂಕಲನಗಳಲ್ಲಿ ಒಂದಾದ 'ಮೈಸೂರು ಮಲ್ಲಿಗೆ'ಯ ಕರ್ತೃ ಶ್ರೀ ಕೆ.ಎಸ್. ನರಸಿಂಹ ಸ್ವಾಮಿ ಅವರು ಜನಿಸಿದ್ದು 26.01.1915ರಲ್ಲಿ ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ. ಅವರು ಕನ್ನಡಿಗರ ಪ್ರೇಮ ಕವಿ. ಅನೇಕ ಕವನ ಸಂಕಲನಗಳನ್ನು ಬರೆದಿದ್ದಾರೆ. ಇವರ ಅನೇಕ ಕವಿತೆಗಳು ಚಲನಚಿತ್ರಗೀತೆಗಳಾಗಿವೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಪಂಪ ಪ್ರಶಸ್ತಿ, ಗೊರೂರು ಪ್ರಶಸ್ತಿ ಹಾಗು ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ. ಕೆ.ಎಸ್. ನರಸಿಂಹಸ್ವಾಮಿ ಅವರು 1990ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇಂತಹ ಪ್ರಸಿದ್ಧ ಕವಿಯವರ ಬಗ್ಗೆ ಕೆಲವು ಮಾಹಿತಿಗಳನ್ನು ಹಂಚಿಕೊಳ್ಳಲು ತಮಗೆ ನೀಡಿದ ಅವಕಾಶಕ್ಕೆ ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿ ಡಾ. ಪ್ರಕಾಶ್ ಮಂಟೇದ ತಮ್ಮ ಮಾತುಗಳನ್ನು ಮುಕ್ತಾಯ ಮಾಡಿದರು.

ತದನಂತರ, ಕನ್ನಡದ ಪ್ರಸಿದ್ಧ ಕವಿ ಡಾ ಚೆನ್ನವೀರ ಕಣವಿ ಅವರ ಕುರಿತು ಇನ್ನೊರ್ವ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಬೆಂಗಳೂರಿನ ಪೀಣ್ಯದ ಸರ್ಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾದ ಶ್ರೀ ರೇಣುಕಾರಾಧ್ಯ ಎಚ್.ಎಸ್., ಅವರು ತಮ್ಮ ವಿಚಾರ ಮಂಡನೆ ಮಾಡಿದರು.ಅದಕ್ಕೂ ಮುನ್ನ ಅವರನ್ನು ಸಭೆಗೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಪರಿಚಯಿಸಿದರು.

ಶ್ರೀ ರೇಣುಕಾರಾಧ್ಯ ಮಾತನಾಡಿ ಚೆನ್ನವೀರ ಕಣವಿಯವರು ಕನ್ನಡದ ಅಪ್ರತಿಮ ಕವಿಗಳಲ್ಲೊಬ್ಬರಾಗಿದ್ದರು. ಕನ್ನಡದ ಸಮನ್ವಯ ಕವಿ, ಸುಗೀತಗಳ (ಸಾನೆಟ್ಸ್) ಸಾಮ್ರಾಟರೆಂದೇ ಖ್ಯಾತರಾಗಿದ್ದರು. ದಿನಾಂಕ 28.06.1928ರಲ್ಲಿ ಗದಗ ಜಿಲ್ಲೆಯುಲ್ಲಿ ಜನಿಸಿದ ಕಣವಿಯುವರು, ಧಾರವಾಡದಲ್ಲಿ ವಿದ್ಯಾಭ್ಯಾಸ ಪಡೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಅಲ್ಲಿನ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾಗಿ ನಂತರ ಅದರ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಕುವೆಂಪು, ಬೇಂದ್ರೆ, ಪು.ತಿ.ನ ರವರಿಂದ ಪ್ರಭಾವಿತರಾದ ಕಣವಿಯವರು 'ಕಾವ್ಯಾಕ್ಷಿ', 'ಭಾವಜೀವಿ', 'ಆಕಾಶ ಬುಟ್ಟಿ' ಮಣ್ಣಿನ ಮೆರವಣಿಗೆ, ದಾರಿದೀಪ, ಕಾರ್ತೀಕದ ಮೋಡ, ಹೊಂಬೆಳಕು ಮುಂತಾದ ಕಾವ್ಯ ಸಂಕಲನ/ ಸಂಗ್ರಹಗಳನ್ನು ಪ್ರಕಟಿಸಿದ್ದರು. ಅನೇಕ ವಿಮರ್ಶೆ ಲೇಖನಗಳು ಮತ್ತು ಪ್ರಬಂಧ ಸಂಕಲನಗಳನ್ನು, ಮಕ್ಕಳ ಕವಿತೆಗಳನ್ನು ರಚಿಸಿದ್ದಲ್ಲದೇ ಹಲವಾರು ಕೃತಿಗಳ ಸಂಪಾದಕರಾಗಿದ್ದರು ಎಂದರು.

ಚೆನ್ನವೀರ ಕಣವಿಯವರ ಬಹಳ ಪ್ರಖ್ಯಾತವಾದ 'ವಿಶ್ವವಿನೂತನ ವಿದ್ಯಾಚೇತನ' ಕವಿತೆ ಈಗಲೂ ಕನ್ನಡಿಗರ ಜನಮಾನಸದಲ್ಲಿ ಹಚ್ಚಹಸಿರಾಗಿದೆ. ಚೆನ್ನವೀರ ಕಣವಿಯವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1981), ಆಳ್ವಾಸ್ ನುಡಿಸಿರಿ ಪ್ರಶಸ್ತಿ (2008) ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ಕವಿರತ್ನ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಇವರಿಗೆ ಕರ್ನಾಟಕ ಕೇಂದ್ರೀಯ ವಿ.ವಿ.ಯಿಂದ ಗೌರವ ಡಾಕ್ಟರೇಟ್ ಲಭಿಸಿತ್ತು ಹಾಗೂ ಅವರು 1996ರಲ್ಲಿ ಹಾಸನದಲ್ಲಿ ನಡೆದ 65ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರು ಇತ್ತೀಚೆಗಷ್ಟೇ (16.02.2022ರಂದು) ಸಾವನ್ನಪ್ಪಿದ್ದು ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟವಾಗಿದ್ದು, ಇಂತಹ ಮಹಾನ್ ಕವಿಯ ಸ್ಮರಣೆ ಮಾಡಲು ಮತ್ತು ಅವರ ಜೀವನದ ಸಾಧನೆ ಮತ್ತು ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಬಗ್ಗೆ ಕೆಲವು ವಿಚಾರಗಳನ್ನು ಈ ಸಾಹಿತ್ಯೋತ್ಸವದಲ್ಲಿ ಹಂಚಿಕೊಳ್ಳಲು ತಮಗೆ ಸಿಕ್ಕ ಅವಕಾಶಕ್ಕೆ ಧನ್ಯವಾದ ತಿಳಿಸಿ ಶ್ರೀ ರೇಣುಕಾರಾಧ್ಯ ತಮ್ಮ ವಿಚಾರ ಮಂಡನೆ ಮುಗಿಸಿದರು.

ತರುವಾಯ, ಕವಿ ಪಂಜೆ ಮಂಗೇಶರಾಯರ ಕುರಿತು ಮತ್ತೊರ್ವ ವಿಶೇಷ ಆಹ್ವಾನಿತರಾದ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಸೆಲ್ವಕುಮಾರಿ, ಅವರು ತಮ್ಮ ವಿಚಾರ ಮಂಡಿಸಿದರು. ಅದಕ್ಕೂ ಮೊದಲು ಅವರ ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಜಯಶ್ರೀ ಬಸವರಾಜು ಮಾಡಿಕೊಟ್ಟರು.

ಪ್ರೊ. ಸೆಲ್ವಕುಮಾರಿ ಅವರು ಶ್ರೀ ಪಂಜೆ ಮಂಗೇಶರಾಯರ ಕುರಿತು ಮಾತನಾಡುತ್ತಾ ಅವರೊಬ್ಬ ನವೋದಯದ ಸಾಹಿತ್ಯಕ್ಕೆ ಅಡಿಪಾಯ ಹಾಕಿದ ಹರಿಕಾರ. ಸಣ್ಣ ಕಥೆಗಳು, ಪ್ರಬಂಧಗಳು ಮತ್ತು ಬಾಲ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡಿದ ಪ್ರಖ್ಯಾತ ಕವಿಯಾಗಿದ್ದರು. ಅವರ ಜೋಗುಳ ಪದಗಳು, ಹುತ್ತರಿ ಹಾಡುಗಳು ಮತ್ತು ಶಿಶುಗೀತೆಗಳು ಪ್ರಖ್ಯಾತವಾಗಿದ್ದವು. ನಾಗರ ಹಾವೇ ಹಾವೊಳು ಹೂವೇ... ಪ್ರಾಥಮಿಕ ಶಾಲೆಗಳಲ್ಲಿ ಜನಪ್ರಿಯ ಮಕ್ಕಳ ಪದ್ಯವಾಗಿತ್ತು. ದಿನಾಂಕ 22.02.1874ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಜನಸಿದ ಅವರು 1937ರ ವರೆಗಿನ ತಮ್ಮ ಜೀವಿತಾವಧಿಯಲ್ಲಿ ಬಿ.ಎ. ಪದವಿ ಮತ್ತು ಶಿಕ್ಷಕ ಡಿಪ್ಲೋಮಾ ಪಡೆದ ನಂತರ ದಕ್ಷ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಹಾಗೂ ವಿದ್ಯಾಧಿಕಾರಿಗಳಾಗಿ, ಲೇಖಕರಾಗಿ, ನಾಟಕಕಾರರಾಗಿ, ಜಾನಪದ ಮತ್ತು ಕವನ ಅನುವಾದಕರಾಗಿ ಮತ್ತು ಶಿಶು ಸಾಹಿತ್ಯದಲ್ಲಿ ಅಪಾರ ಸಾಧನೆ ಮಾಡಿದವರಾಗಿದ್ದರು. 'ಕವಿಶಿಷ್ಯ' ನಾಮದಿಂದ ಖ್ಯಾತರಾಗಿದ್ದ ಪಂಜೆಯವರು, ನವೋದಯ ಸಾಹಿತ್ಯವನ್ನು ಕೊಂಕಣಿ ಮತ್ತು ಕನ್ನಡದಲ್ಲಿ ಬರೆದರು. ತುಳು ದಂತಕಥೆ ಕೋಟಿ ಮತ್ತು ಚೆನ್ನಯ್ಯವೆಂಬ ಕಾದಂಬರಿ ರಚಿಸಿದರು. ಇದು ತುಳು ಭಾಷೆಯಲ್ಲಿ ಸಿನೆಮಾ ಆಗಿಯೂ ಹೊರಬಂದಿತ್ತು. 1984ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪ್ರವರ್ತಕರಾಗಿದ್ದ ಅವರ ಬಗ್ಗೆ ವಿಚಾರ ಮಂಡನೆ ಮಾಡಲು ಬಹಳ ಹೆಮ್ಮೆ ಮತ್ತು ಸಂತೋಷವಾಗುತ್ತಿದೆ, ಈ ಅವಕಾಶ ಮಾಡಿಕೊಟ್ಟಿದ್ದಕ್ಕೆ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿ ಪ್ರೊ.ಸೆಲ್ವಕುಮಾರಿ ತಮ್ಮ ಮಾತುಗಳನ್ನು ಮುಗಿಸಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಕಾವಲು ಸಮಿತಿಯ ಮಾಜಿ ಸದಸ್ಯರೂ ಹಾಗು ಸಂಘದ ಚುನಾವಣಾ ಅಧಿಕಾರಿಯಾಗಿ ಈ ಹಿಂದೆ ಕಾರ್ಯ ನಿರ್ವಹಿಸಿದ ಶ್ರೀ ಡಿ.ವಿ.ಎಸ್. ಮೂರ್ತಿ ಅವರ ಪರಿಚಯವನ್ನು ಶ್ರೀ ಪ್ರಭಾಕರ ಮಡ್ಡಿತೋಟ ಮಾಡಿಕೊಟ್ಟರು. ಶ್ರೀ ಡಿ.ವಿ.ಎಸ್. ಮೂರ್ತಿ ಅವರು ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘವು ಆಯೋಜಿಸುತ್ತಿರುವ ಕನ್ನಡ ಭಾಷೆ, ಕಲೆ, ಸಂಸ್ಕೃತಿ, ಸಾಹಿತ್ಯ ಕುರಿತಾದ ಇಂತಹ ಸಾಹಿತ್ಯೋತ್ಸವ ಕಾರ್ಯಕ್ರಮಕ್ಕೆ ಎಲ್ಲ ವರ್ಗಗಳ ಸ್ಪಂದನೆ ಸಿಕ್ಕಿದೆ. 75ನೇ ವರ್ಷದ ಅಮೃತ ಮಹೋತ್ಸವವನ್ನು ಬಹಳ ಅದ್ದೂರಿಯಾಗಿ ಸಂಘವು ಆಚರಿಸಿದೆ, ಹಲವು ಅಸಾಧ್ಯವಾದಂತಹ ಕೆಲಸಗಳನ್ನು ಸಾಧ್ಯವಾಗಿಸಿದೆ. ಶತಮಾನಗಳಿಂದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಹಾಗೂ ನವೋದಯ ಸಾಹಿತ್ಯಕ್ಕೆ ಚೌಕಟ್ಟು, ಬರವಣಿಗೆ ಹಿಡಿತವನ್ನು ನಮ್ಮ ಕನ್ನಡದ ಅಪ್ರತಿಮ ಸಾಹಿತಿಗಳು ಮತ್ತು ಕವಿಗಳು ನಮಗೆ ನೀಡಿದ್ದಾರೆ. ಈ ರೀತಿಯ ಕಾರ್ಯಕ್ರಮಗಳಿಂದ ಅವರ ಸಾಧನೆಗಳು ಮತ್ತು ಸಾಹಿತ್ಯ ಸಾವಿರಾರು ಜನರಿಗೆ ತಲುಪಲಿ, ಇಂದಿನ ಸಾಹಿತ್ಯ ಕಾರ್ಯಕ್ರಮದಲ್ಲಿ ಆರು ದಿಗ್ಗಜ ಸಾಹಿತಿಗಳು ಮತ್ತು ಕವಿಗಳ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಭಾಗಿಯಾಗಿದ್ದಕ್ಕೆ ತಮಗೆ ಅತ್ಯಂತ ಸಂತೋಷವಾಗಿದೆ, ಇದಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ.ನಾಗರಾಜ ಮತ್ತು ಇತರ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಶ್ರೀ ರಾಜಶೇಖರ ಎನ್. ಅವರು ಹೈದರಾಬಾದ್‌ನ ಸಿಡಿಟಿಐ ಪೋಲೀಸ್ ಡಿ.ಐ.ಜಿ/ನಿರ್ದೇಶಕರಾಗಿ, ನವದೆಹಲಿಯ ಬಿ.ಪಿ.ಆರ್.ಡಿ.ನಲ್ಲಿ ಡಿ.ಐ.ಜಿ (ಆಧುನೀಕರಣ) ಮತ್ತು ಭೋಪಾಲ್‌ನ ಸಿ.ಎ.ಪಿ.ಟಿನಲ್ಲಿ ಡಿಐಜಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಿ.ಬಿ.ಐ.ನಲ್ಲಿ ನಿಯೋಜನೆ ಮೇಲೆ ಕೆಲಕಾಲ ಕೆಲಸ ಮಾಡಿದ್ದಾರೆ. ಮೂಲತ: ಕರ್ನಾಟಕದವರಾದ ಶ್ರೀ ರಾಜಶೇಖರ ಅವರು ಕನ್ನಡದಲ್ಲಿ ಯು.ಪಿ.ಎಸ್.ಸಿ ಪರೀಕ್ಷೆ ನೀಡಿದ ನಾಗಾಲ್ಯಾಂಡ್ ಕೇಡರ್‌ನ ಐ.ಪಿ.ಎಸ್. ಅಧಿಕಾರಿಗಳ 2007ರ ಬ್ಯಾಚ್‌ಗೆ ಸೇರಿದವರು. ಅವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ನಮಗೆ ಹೆಮ್ಮೆಯ ವಿಷಯವೆಂದು ಹೇಳುತ್ತಾ ಸಂಘದ






ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಅವರು ಅವರನ್ನು ಸಭೆಗೆ ಪರಿಚಯಿಸಿ ಮಾತನಾಡಲು ಆಹ್ವಾನಿಸಿದರು.

ಶ್ರೀ ರಾಜಶೇಖರ ಅವರು ಮಾತನಾಡಿ ಇಂದು ಆರು ಮೇರು ಸಾಹಿತಿಗಳ ಕುರಿತು ವಿಚಾರ ಸಂಕಿರಣ ನಡೆದಿದೆ, ಪ್ರತಿಯೊಬ್ಬರೂ ತಮ್ಮ ತಮ್ಮ ಕಾಲದಲ್ಲಿ, ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದವರು ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರು ರಾಯರು ಬಂದರು ಮಾವನ ಮನೆಗೆ..ಗೀತೆಗೆ ಪ್ರಸಿದ್ಧರಾಗಿದ್ದರು, ಪ್ರಸಿದ್ಧ ಕಾದಂಬರಿಕಾರ ಅನಕೃರವರು ಸಾಹಿತ್ಯವನ್ನೇ ಪ್ರವೃತ್ತಿಯಾಗಿಸಿಕೊಂಡಿದ್ದವರು. ಅವರೊಬ್ಬ ವಿವಾದಿತ ಕವಿ ಕಿತ್ತೂರು ಚೆನ್ನಮ್ಮ ನಂತಹ ಐತಿಹಾಸಿಕ ಕೃತಿಯನ್ನು ರಚಿಸಿದ್ದವರು. ಕಥಾ ಸಂಕಲನ, ಪ್ರಗತಿಶೀಲ ಸಾಹಿತ್ಯ ಮತ್ತು ಅಭಿವ್ಯಕ್ತಿಶೀಲತೆಗೆ ಹೆಸರುವಾಸಿಯಾಗಿದ್ದರು. ಹಾಗೆಯೇ ಕವಿಶಿಷ್ಯ ಕಾವ್ಯನಾಮ ಹೊಂದಿದ್ದ ಪಂಜೆಯವರ ಶಿಶುಗೀತೆಗಳು, ಹುತ್ತರಿ ಹಾಡುಗಳು ಪ್ರಖ್ಯಾತವಾಗಿದ್ದವು. ತುಳು, ಕೊಂಕಣಿ ಮತ್ತು ಕನ್ನಡದಲ್ಲಿ ಸಾಹಿತ್ಯ ಕೃಷಿ ಮಾಡಿದ ಕನ್ನಡದ ಆಚಾರ್ಯ ಪುರುಷರವರಾಗಿದ್ದರು. ಇನ್ನು ಚೆನ್ನವೀರ ಕಣವಿಯವರು ಸಾನೆಟ್‌ಗೆ ಪ್ರಸಿದ್ಧರು ಹಾಗೂ ಕನ್ನಡದ ಸಮನ್ವಯ ಕವಿಯಾಗಿದ್ದರು, ಪುತಿನರವರು 19ನೇ ಶತಮಾನದಲ್ಲಿ ಗೀತನಾಟಕ, ಗದ್ಯ ಚಿತ್ರ ಮುಂತಾದ ನವೋದಯ ಸಾಹಿತ್ಯಕ್ಕೆ ಪ್ರಖ್ಯಾತರಾಗಿದ್ದರು ಮತ್ತು ಕೆ.ಎಸ್. ನರಸಿಂಹಸ್ವಾಮಿ ಅವರು ಪ್ರೇಮಕವಿಯಾಗಿದ್ದರು, ಇಂತಹ ನಾಡಿನ ಅನೇಕ ಮಹಾನ್ ಸಾಹಿತಿಗಳು ಮತ್ತು ಕವಿಗಳ ಕುರಿತು ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದವರನ್ನು ಸ್ಮರಿಸುವ ಮಹತ್ತರ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ನಾಗರಾಜರವರಿಗೆ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಭಾಗಿಯಾಗುತ್ತಿರುವ ಸಂಘದ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿ ಶ್ರೀ ರಾಜಶೇಖರ ಅವರು ತಮ್ಮ ಮಾತುಗಳನ್ನು ಮುಗಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡತಿಯರಾದ ಶ್ರೀಮತಿ ಜಯಶ್ರೀ ಬಸವರಾಜು ಬಿ.ಕೆ., ಶ್ರೀ ಉಮಾ ಶ್ರೀನಿವಾಸ್, ಶ್ರೀಮತಿ ಚೈತ್ರಾ ತೋಳ್ವಾಡಿ ಅವರಿಂದ (ಕೆ.ಎಸ್. ನರಸಿಂಹಸ್ವಾಮಿಯವರ 'ರಾಯರ ಬಂದರು' ಗೀತೆ), ಶ್ರೀ ಎಸ್. ರಮೇಶ್, ಶ್ರೀ ಅರುಣ್ ಸಿ.ಎಸ್. ತಂಡದವರಿಂದ (ಚೆನ್ನವೀರ ಕಣವಿಯವರ 'ವಿಶ್ವವಿನೂತನ' ಕವನ) ಮತ್ತು ಶ್ರೀಮತಿ ಭಾರ್ಗವಿ ಅವರಿಂದ (ಪಂಜೆ ಮಂಗೇಶರಾಯರ ಕವಿತೆ)ಸೇರಿದಂತೆ ಸ್ಥಳೀಯ ಕಲಾವಿದರಿಂದ ಇಂದಿನ





ವಿಚಾರ ಸಂಕಿರಣದ ಪ್ರಸಿದ್ಧ ಕವಿಗಳಿಂದ ರಚಿತ ಕವನಗಳ ಗಾಯನ ಪ್ರಸ್ತುತಿಯಾಯಿತು.

ನಂತರ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ, ವಿಚಾರ ಮಂಡನೆ ಮಾಡಿದ ವಿಶೇಷ ಆಹ್ವಾನಿತರಿಗೆ ಹಾಗೂ ವಿಶೇಷವಾಗಿ ಸಹಕರಿಸಿದ ಶ್ರೀ ಕೆ.ವೈ.ನಾರಾಯಣ ಸ್ವಾಮಿಯವರಿಗೆ, ಸಾಹಿತ್ಯೋತ್ಸವದಲ್ಲಿ ಭಾಗವಹಿಸಿದ ದೆಹಲಿ ಕನ್ನಡಿಗರಿಗೆ ಮತ್ತು ಕಾರ್ಯಕ್ರಮದಲ್ಲಿ ಪ್ರಸ್ತುತಿ ನೀಡಿದ ಸ್ಥಳೀಯ ಕಲಾವಿದರಿಗೆ ಕೃತಜ್ಞತೆ ಸಲ್ಲಿಸಿದರು. ಸಂಘದ ಮುಂಬರುವ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದ ಅಧ್ಯಕ್ಷರು ವಿಚಾರ ಸಂಕಿರಣದಲ್ಲಿ ಆನ್‌ಲೈನ್‌ನಲ್ಲಿ ಭಾಗವಹಿಸಿದ ಎಲ್ಲಾ ವಿಶೇಷ ಆಹ್ವಾನಿತರನ್ನು ಮುಂದಿನ ದಿನಗಳಲ್ಲಿ ಸಂಘದ ವೇದಿಕೆಯಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಆಹ್ವಾನಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ ಗೌರವ ಸಮರ್ಪಣೆ ನೀಡಲಾಯಿತು. ಗಾಯನ ಪ್ರಸ್ತುತಿ ನೀಡಿದ ಕಲಾವಿದರನ್ನು ಗೌರವಿಸಿ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಿಗೆ, ವಿಚಾರ ಮಂಡನೆ ಮಾಡಿದ ವಿಶೇಷ ಆಹ್ವಾನಿತರಿಗೆ, ಹಾಗೂ ನೆರೆದಿದ್ದ ದೆಹಲಿ ಕನ್ನಡಿಗರಿಗೆ ನಿರೂಪಕರಾದ ಶ್ರೀ ಅರುಣ್ ಸಿ.ಎಸ್. ಅವರು ವಂದನೆಗಳನ್ನು ಸಲ್ಲಿಸಿದರು.❑

***ಅಭಿಮತ ವರದಿ***

# ಮಾನಸಿಕ ಸ್ವಾಸ್ಥ್ಯ ಮತ್ತು ಆಯುರ್ವೇದ

ಆಯುರ್ವೇದದ ಮಹತ್ವಪೂರ್ಣ ಗ್ರಂಥಗಳಲ್ಲಿ ಒಂದಾದ **ಚರಕ ಸಂಹಿತೆ,** ಮುಖ್ಯವಾಗಿ **ಶರೀರಸ್ಥಾನ** ಭಾಗದಲ್ಲಿ, ಮನಸ್ಸಿನ ಗುಣಗಳ ಕುರಿತು ಸ್ಪಷ್ಟ ವಿವರಣೆ ನೀಡಲಾಗಿದೆ. ಮನಸ್ಸು ದ್ವಂದ್ವಮಯವಾದದ್ದು–ಇದು ಸುಖ–ದುಃಖ, ಶ್ರದ್ಧೆ–ಅಶ್ರದ್ಧೆ, ಧೈರ್ಯ–ಭಯ ಇತ್ಯಾದಿಗಳ ನಡುವೆ ಬಲಹೀನವಾಗಿ ಅಲೆದಾಡುತ್ತಿರುತ್ತದೆ. ಇದನ್ನು ಸಮ ಸ್ಥಿತಿಗೆ ತರುವುದೇ ಆಯುರ್ವೇದದ ಒಂದು ಮಹತ್ತರ ಗುರಿ.

ಆಯುರ್ವೇದವು ಮಾನವ ದೇಹ ಹಾಗೂ ಮನಸ್ಸಿನ ಸಮನ್ವಯವನ್ನು ಅತ್ಯಂತ ಮಹತ್ವದಿಂದ ಪರಿಗಣಿಸುತ್ತದೆ. ದೇಹದಂತೆ ಮನಸ್ಸಿಗೂ ತನ್ನದೇ ಆದ ಸ್ವಭಾವ, ಗುಣಧರ್ಮಗಳಿವೆ. ಈ ಗುಣಗಳನ್ನು "ಮಾನಸಿಕ ಗುಣ" ಅಥವಾ "ಮಾನಸಿಕ ದೋಷ" ಎಂಬುದಾಗಿ ಪರಿಗಣಿಸಲಾಗಿದೆ. ಆಯುರ್ವೇದದ ಪ್ರಕಾರ, ಮನಸ್ಸಿನಲ್ಲಿ ಪ್ರಮುಖವಾಗಿ ಮೂರು ರೀತಿಯ ಗುಣಗಳಿರುತ್ತವೆ: ಸತ್ತ್ವ (Sattva), ರಜಸ್ (Rajas), ಮತ್ತು ತಮಸ್ (Tamas). ಇವುಗಳನ್ನು "ತ್ರಿಗುಣಗಳು" ಎಂದು ಕರೆಯುತ್ತಾರೆ.

ಚರಕ ಸಂಹಿತೆಯಲ್ಲಿ (ಸೂತ್ರಸ್ಥಾನ 1/57), ಗುಣಗಳ ಕುರಿತು ಹೀಗೆ ಹೇಳಲಾಗಿದೆ:

**"ಸತ್ತ್ವಂ ರಜಸ್ತಮಶ್ಚೇತಿ ಗುಣಾ:**
**ಪ್ರಕೃತಯಸ್ತು ತೇ ।"**

ಅಂದರೆ, ಸತ್ತ್ವ, ರಜಸ್, ತಮಸ್ ಎಂಬವು ಪ್ರಕೃತಿಗೆ ಸೇರಿವೆ, ಇವು ಮನಸ್ಸಿನ ಗುಣಗಳು.

**1. ಸತ್ತ್ವ ಗುಣದ (Sattva Guna) ಲಕ್ಷಣಗಳು–** ಸತ್ತ್ವ ಗುಣವು ಶುದ್ಧತೆ, ವಿವೇಕ, ಶಾಂತಿ, ಸಾತ್ವಿಕತೆ, ಧೈರ್ಯ, ಧರ್ಮಬುದ್ಧಿ, ಸಹಾನುಭೂತಿಯನ್ನು ಪ್ರತಿನಿಧಿಸುತ್ತದೆ. ಈ ಗುಣವು ಮನುಷ್ಯನನ್ನು ಬುದ್ಧಿವಂತಿಕೆ, ನೈತಿಕತೆ ಮತ್ತು ಧ್ಯಾನದತ್ತ ಕರೆದುಕೊಂಡು ಹೋಗುತ್ತದೆ. ಸತ್ತ್ವಭಾವ ಹೆಚ್ಚಿದ ವ್ಯಕ್ತಿಗಳು ನಿಸ್ವಾರ್ಥ, ಶಾಂತ, ಸಹಾನುಭೂತಿಪೂರ್ಣ ಹಾಗೂ ಆತ್ಮಚಿಂತನೆಯುಳ್ಳವರಾಗಿರುತ್ತಾರೆ. ಅಧ್ಯಾತ್ಮಿಕ ಚಿಂತನೆ, ಧರ್ಮಪಾಲನೆ, ಸಾತ್ವಿಕ ಆಹಾರ, ಧ್ಯಾನ ಇತ್ಯಾದಿ ಸತ್ತ್ವವನ್ನು ವೃದ್ಧಿಸುತ್ತವೆ.

**2. ರಜಸ್ ಗುಣದ (Rajas Guna) ಲಕ್ಷಣಗಳು–** ರಜೋ ಗುಣವು ಚಲನಶೀಲತೆ, ಆವೇಶ, ಉತ್ಸಾಹ ಮತ್ತು ಇಚ್ಛಾಶಕ್ತಿ ಇತ್ಯಾದಿಗಳನ್ನು ಸೂಚಿಸುತ್ತದೆ. ಈ ಗುಣವು ಮನಸ್ಸನ್ನು ಕ್ರಿಯಾಶೀಲಗೊಳಿಸುವ ಮೂಲಕ ಬಾಹ್ಯ ಲೋಕದ ಮೇಲೆ ಗಮನಹರಿಸಲು ಪ್ರೇರೇಪಿಸುತ್ತದೆ. ಆದರೆ ರಜೋಗುಣ ಅಧಿಕವಾದಾಗ ದುರಾಸೆ, ದ್ವೇಷ, ಲಾಲಸೆ, ಕಾಮ, ಕ್ರೋಧ ಮುಂತಾದ ಅಶಾಂತ ಸ್ಥಿತಿಗಳು ಉಂಟಾಗಬಹುದು.ಹೆಚ್ಚು ಸ್ಪರ್ಧಾತ್ಮಕ ವಾತಾವರಣ, ಬಾಹ್ಯ ಆಸಕ್ತಿಗಳು, ಬಾಹ್ಯ ಇಂದ್ರಿಯ ಸುಖಾಸಕ್ತಿಗಳು ರಜಸ್ಸನ್ನು ಹೆಚ್ಚಿಸುತ್ತದೆ.







**ಲೇಖಕಿ : ಡಾ. ರೂಪಶ್ರೀ**
BAMS, MS( Ayu)
**ಹಿರಿಯ ಆಡಳಿತ ಶ್ರೇಣಿಯ ಮುಖ್ಯ ವೈದ್ಯಾಧಿಕಾರಿ**
I/C **ಆಯುರ್ವೇದಿಕ್ ಯೂನಿಟ್,**
**ದೀನ್ ದಯಾಳ್ ಉಪಾಧ್ಯಾಯ ಆಸ್ಪತ್ರೆ,**
**ಹರಿನಗರ, ದಿಲ್ಲಿ**-110064
(**ಮೊ.**) **:** 9868156060
**ಇಮೇಲ್ :** drroopaashok@gmail.com

**3. ತಮಸ್ ಗುಣದ (Tamas Guna) ಲಕ್ಷಣಗಳು–** ತಮೋ ಗುಣವು ಅಜ್ಞಾನ, ಆಲಸ್ಯ, ನಿರ್ಲಕ್ಷ್ಯ ಮತ್ತು ನಿರಾಸೆಯನ್ನು ಸೂಚಿಸುತ್ತದೆ. ತಮೋಗುಣದ ಪ್ರಭಾವದಿಂದ ವ್ಯಕ್ತಿ ಅಸ್ಥಿರ, ಜಡತೆ, ತಪ್ಪು ನಿರ್ಣಯಗಳು ಮತ್ತು ನಕಾರಾತ್ಮಕ ಚಿಂತನೆಗಳಲ್ಲಿ ಮುಳುಗಬಹುದು. ಆದರೆ ನಿಯಮಿತ ಪ್ರಮಾಣದಲ್ಲಿ ತಮಸ್ ಕೂಡ ಅಗತ್ಯವೇ, ನಿದ್ರೆ ಮತ್ತು ವಿಶ್ರಾಂತಿಯಂತಹ ಶಕ್ತಿಗಳಲ್ಲಿ ಇದು ಸಹಕಾರಿ. ತಮೋಗುಣ ಹೆಚ್ಚಿದರೆ ಅದು ಮಾನಸಿಕ ರೋಗಗಳಿಗೆ ಕಾರಣವಾಗಬಹುದು: ಅವಸಾದ, ಭಯ, ಆತ್ಮಹತ್ಯಾ ಪ್ರವೃತ್ತಿ ಇತ್ಯಾದಿ. ಭಾರೀ ಆಹಾರ, ಆಲಸ್ಯ, ಅಜ್ಞಾನಮಯ ವಾತಾವರಣ ತಮಸ್ಸನ್ನು ಉತ್ತೇಜಿಸುತ್ತದೆ.

ಮಾನಸಿಕ ಗುಣಗಳನ್ನು ತಿಳಿದುಕೊಳ್ಳುವುದು ನಮ್ಮ ನಿತ್ಯಜೀವನದ ಚಟುವಟಿಕೆಗಳಲ್ಲಿ ಸಮತೋಲನ ಮತ್ತು ಸಂಯಮವನ್ನು ಬೆಳೆಸಲು ಬಹುಮುಖ್ಯ. ಆಯುರ್ವೇದದ ಪ್ರಕಾರ, ನಮ್ಮ ಮಾನಸಿಕ ಗುಣಗಳನ್ನು ಶುದ್ಧಗೊಳಿಸುವ ಮೂಲಕ ನಾವು ಆರೋಗ್ಯವಂತ, ಸಂತುಷ್ಟ ಹಾಗೂ ಧರ್ಮನಿಷ್ಠ ಜೀವನವನ್ನು ಸಾಗಿಸಬಹುದು.

ಆಯುರ್ವೇದವು ಮನಸ್ಸನ್ನು ಶುದ್ಧಗೊಳಿಸಲು ಧ್ಯಾನ, ಯೋಗ, ಸಾತ್ವಿಕ ಆಹಾರ (ಹಸಿವಿರುವಾಗ ತಿನ್ನುವುದು, ತಾಜಾ ತರಕಾರಿಗಳು, ಹಣ್ಣುಗಳು, ಹಾಲು, ಧಾನ್ಯಗಳು), ಸದಾಚಾರ, ಸಂಯಮ,ಸತ್ಸಂಗ, ಜಪ, ಧಾರ್ಮಿಕ ಚಟುವಟಿಕೆಗಳು ಮತ್ತು ಆದರ್ಶ ಚಿಂತನೆಗಳನ್ನು ಪ್ರೋತ್ಸಾಹಿಸುತ್ತದೆ. ಈ ಎಲ್ಲದರ ಮೂಲಕ ಸತ್ತ್ವ ಗುಣವನ್ನು ಬೆಳೆಸಬಹುದು ಮತ್ತು ರಜೋ ಹಾಗೂ ತಮೋ ಗುಣಗಳನ್ನು ಸಮತೋಲನಗೊಳಿಸಬಹುದು.

ಈಗ ನಾವು "ಮಾನಸಿಕ ಗುಣಗಳ" ಬದಲಾವಣೆಗೆ ಕಾರಣವಾಗುವ ಅವಯವಗಳು, ಪಂಚಮಹಾಭೂತಗಳ ಪ್ರಭಾವ, ಮತ್ತು ಆಯುರ್ವೇದದಲ್ಲಿ ವ್ಯಕ್ತಿತ್ವ ನಿರ್ಮಾಣದ ದಾರಿಗಳನ್ನು




ತಿಳಿದುಕೊಳ್ಳೋಣ.

**ಪಂಚಮಹಾಭೂತ ಮತ್ತು ಮನಸ್ಸಿನ ಸಂಬಂಧ:**

ಆಯುರ್ವೇದದ ಪ್ರಕಾರ, ಈ ಬ್ರಹ್ಮಾಂಡದಲ್ಲಿರುವ ಎಲ್ಲವನ್ನೂ ಪಂಚಮಹಾಭೂತಗಳು (ಭೂಮಿ, ಜಲ, ಅಗ್ನಿ, ವಾಯು, ಆಕಾಶ) ರಚಿಸಿವೆ. ಮನಸ್ಸು ಸಹ ಇದಕ್ಕೆ ಹೊರತಲ್ಲ. ಇದರಲ್ಲಿ:

- **ಆಕಾಶ ಮಹಾಭೂತ :** ವಿವೇಕ, ಸ್ಮೃತಿ ಮತ್ತು ಧ್ಯಾನ ಶಕ್ತಿಗೆ ಜವಾಬ್ದಾರಿಯಾಗಿದೆ.
- **ವಾಯು ಮಹಾಭೂತ :** ಚಿಂತನ ಶಕ್ತಿ, ಚೇತನತೆ ಮತ್ತು ಚಲನೆಯ ಸೂಚಕವಾಗಿದೆ.
- **ಅಗ್ನಿ ಮಹಾಭೂತ :** ಗ್ರಹಣ, ಪಚನ ಹಾಗೂ ಬುದ್ಧಿಗಮ್ಯತೆ–ಜ್ಞಾನ ಶಕ್ತಿಗೆ ಕಾರಣ.
- **ಜಲ ಮಹಾಭೂತ :** ಭಾವನೆಗಳು, ಭಯ, ಮಮತೆ, ಸಹಾನುಭೂತಿ ಇತ್ಯಾದಿಗಳನ್ನು ಪ್ರತಿನಿಧಿಸುತ್ತದೆ.
- **ಭೂಮಿ ಮಹಾಭೂತ :** ಸ್ಥೈರ್ಯ, ಧೈರ್ಯ ಮತ್ತು ಆತ್ಮವಿಶ್ವಾಸಕ್ಕೆ ಜವಾಬ್ದಾರಿಯಾಗಿದೆ.

ಈ ಭೂತಗಳ ಸಮತೋಲನವೇ ವ್ಯಕ್ತಿಯ ಮಾನಸಿಕ ಗುಣಗಳ ಸಮತೋಲನವನ್ನು ಬಿಂಬಿಸುತ್ತದೆ.

**ತ್ರಿಗುಣಗಳು ಮತ್ತು ದೋಷಗಳ ಸಂಬಂಧ :**

ಮನಸ್ಸಿನ ತ್ರಿಗುಣಗಳು ದೇಹದ ಮೂರು ದೋಷಗಳಾದ ವಾತ, ಪಿತ್ತ, ಕಫಗಳೊಂದಿಗೆ ನಿರಂತರ ಸಂಪರ್ಕದಲ್ಲಿರುತ್ತವೆ:

- **ವಾತ ದೋಷ :** ಚಂಚಲತೆ, ಆತುರ, ಭಯ ಇತ್ಯಾದಿ ಮಾನಸಿಕ ಸ್ಥಿತಿಗಳಲ್ಲಿ ವಾತ ಪ್ರಾಬಲ್ಯ.
- **ಪಿತ್ತ ದೋಷ :** ಅಹಂಕಾರ, ಕೋಪ, ಹೆಮ್ಮೆ ಇವು ಪಿತ್ತದ ಹೆಚ್ಚಳದಿಂದಾಗುತ್ತವೆ.
- **ಕಫ ದೋಷ :** ಆಲಸ್ಯ, ನಿರಾಸಕ್ತಿ, ಹೆಚ್ಚು ನಿದ್ರೆ ಇತ್ಯಾದಿ ಕಫದ ಲಕ್ಷಣಗಳು.

ಆದ್ದರಿಂದ ದೋಷಗಳನ್ನು ನಿಯಂತ್ರಣದಲ್ಲಿಡುವುದು ಮನಸ್ಸಿನ ಗುಣಗಳ ಮೇಲಿನ ಪ್ರಭಾವವನ್ನು ಸಹ ಕಡಿಮೆ ಮಾಡುತ್ತದೆ.

**ಗುಣಗಳ ವಿಕೃತಿಗೆ ಕಾರಣವಾಗುವ ಪ್ರಮುಖ ಕಾರಣಗಳು:**

1. **ಆಹಾರ :** ತೇಜಸ್ವಿಯಿಲ್ಲದ, ದೂಷಿತ ಆಹಾರ; ಅಧಿಕ ಮಸಾಲೆ, ತೈಲ, ಮಾಂಸಾಹಾರ–ರಜಸ್/ತಮಸ್ ಗುಣವನ್ನು ಹೆಚ್ಚಿಸುತ್ತದೆ.
2. **ವ್ಯವಹಾರ :** ಅಸತ್ತ್ವ ಸಂಗತಿ (ಅಮಾನವೀಯ, ಧರ್ಮಹೀನ ಸಂಗ), ಮಾದಕ ಪದಾರ್ಥ ಸೇವನೆ, ಕಾಮ–ಕ್ರೋಧದ ನಿರಂತರ ಅನುಭವ.
3. **ಚಿಂತನೆ :** ನಕಾರಾತ್ಮಕ ಚಿಂತನ, ಭೀತಿಯ ಪ್ರಭಾವ,

ಆತ್ಮವಿಶ್ವಾಸದ ಕೊರತೆ.

**4. ಆಚಾರ :** ದಿನಚರ್ಯೆಯ ಅಲೆಮಾರಿ, ಸಮಯದ ನಿರ್ವಹಣೆಯ ಕೊರತೆ, ಕೀಳ್ವರ್ಗದ ಆಚಾರ. ಅತಿಯಾದ ಯಾಂತ್ರಿಕ ಜೀವನ, ಮಾನಸಿಕ ಒತ್ತಡ.

**ಆಚರಣಾತ್ಮಕ ಆಯುರ್ವೇದ: ವ್ಯಕ್ತಿತ್ವ ನಿರ್ಮಾಣದ ಮಾರ್ಗ:**

ಮಾನಸಿಕ ಗುಣಗಳನ್ನು ಸುಧಾರಿಸಲು ಆಯುರ್ವೇದದಲ್ಲಿ ಹಲವು ಕ್ರಮಗಳನ್ನು ಸೂಚಿಸಲಾಗಿದೆ (Ayurvedic Management):

1. **ದಿನಚರ್ಯೆ ಮತ್ತು ನಿತ್ಯಾನುಷ್ಠಾನ :**

• ಪ್ರಾತಃಕಾಲ ಎಚ್ಚರಿಕೆ, ಸ್ನಾನ, ಪ್ರಾಣಾಯಾಮ, ಧ್ಯಾನ
• ಸತ್ತ್ವವನ್ನು ವೃದ್ಧಿಸುತ್ತದೆ.
• ನಿಯಮಿತ ಶರೀರ ಚಟುವಟಿಕೆಗಳು ರಜಸ್ಸನ್ನು ಸಮತೋಲನಗೊಳಿಸುತ್ತವೆ.

2. **ಆಹಾರೋಪಚಾರ** (Diet therapy):

• ಸಾತ್ವಿಕ ಆಹಾರ (ಅತಿಯಾಗಿ ಬೇಯಿಸದ, ತುಪ್ಪ ಮತ್ತು ಹಾಲಿನೊಡನೆ ತಯಾರಾದ ಆಹಾರ) ಹಸಿರು ತರಕಾರಿ, ಹಣ್ಣುಗಳು, ನವಧಾನ್ಯ, ಹಾಲು, ಜೀರಿಗೆ ನೀರು.
• ರಾಜಸಿಕ ಆಹಾರ ನಿಯಂತ್ರಣ–ತುಲನೆಗೂ ಹೆಚ್ಚು ಖಾರ, ತೀಕ್ಷ್ಣ ಮಸಾಲೆ, ಒಣ ಆಹಾರ ತ್ಯಜನೆ.
• ತಾಮಸಿಕ ಆಹಾರ ನಿಯಂತ್ರಣ–ತೈಲಪೂರಿತ ಆಹಾರ, ಮಾಂಸ, ಮದ್ಯ, ದೂಷಿತ ಆಹಾರ ತ್ಯಜಿಸುವುದು.

3. **ಔಷಧೋಪಚಾರ (Medications):**

• **ಬ್ರಾಹ್ಮೀ**–ಸ್ಮೃತಿ, ತೀಕ್ಷ್ಣ ಬುದ್ಧಿ ವರ್ಧಕ. ಇದು ಧ್ಯಾನಕ್ಕೆ ಸಹಾಯಕ.
• **ಶಂಕಪುಷ್ಪಿ**–ಮಾನಸಿಕ ಶಾಂತಿ, ಉಲ್ಲಾಸ. ಇದು ನಿರಾಸೆ–ಮನೋವಿಕಾರದಲ್ಲಿ ಉಪಯುಕ್ತ.
• **ಅಶ್ವಗಂಧಾ**–ಬಲವರ್ಧಕ, ಮಾನಸಿಕ ಸ್ಥೈರ್ಯ ಹೆಚ್ಚಿಸುತ್ತದೆ. ದುರ್ಬಲತೆ ನಿವಾರಿಸುವಲ್ಲಿ ಸಹಾಯಕ.
• **ಜಟಾಮಾಂಸಿ**–ನಿದ್ರಾಸಹಾಯಕ, ಮನಸ್ಸಿಗೆ ತಂಪು. ಇದು ತಮೋಗುಣ ನಿವಾರಕ.

4. **ಪಂಚಕರ್ಮ (Detox Therapies):**

• **ಶಿರೋಧಾರಾ (Shirodhara):** ತೈಲ ಅಥವಾ ಕ್ಷೀರವನ್ನು ತಲೆಯ ಮೇಲೆ ಧಾರೆಯಾಗಿ ಸುರಿದು, ಮನಸ್ಸನ್ನು ತಂಪುಗೊಳಿಸಲಾಗುತ್ತದೆ.
• **ನಸ್ಯಕರ್ಮ (Nasyam):** ನಾಸಾದ್ವಾರದಿಂದ ಔಷಧ ಪ್ರಯೋಗ–ಬುದ್ಧಿ ಶುದ್ಧಿಗಾಗಿ.
• **ಅಭ್ಯಂಗ (Abhyanga):** ದೈಹಿಕ ಮತ್ತು ಮಾನಸಿಕ ವಿಶ್ರಾಂತಿಗೆ.

5. **ಮಾನಸೋಪಚಾರ (Psychotherapy) :**

• **ಸತ್ವಥ ಪಠನ:** ಧರ್ಮಗ್ರಂಥಗಳ ಓದುವಿಕೆ, ಸತ್ಸಂಗ, ಜಪ, ಪ್ರವಚನಗಳು, ಧಾರ್ಮಿಕ ಚಟುವಟಿಕೆಗಳು ಮನಸ್ಸಿನ ಶುದ್ಧತೆಯನ್ನು ವರ್ಧಿಸುತ್ತದೆ.
• **ಧ್ಯಾನ ಮತ್ತು ಪ್ರಾಣಾಯಾಮ :** ಮನಸ್ಸಿಗೆ ಶುದ್ಧತೆ ಮತ್ತು ಶಾಂತಿ ಕೊಡುತ್ತದೆ
• **ಸ್ವಾಧ್ಯಾಯ :** ತಮೋಗುಣ ನಿವಾರಣೆಗಾಗಿ ಆತ್ಮವಿಶ್ಲೇಷಣೆ.

**ಸಾರಾಂಶವಾಗಿ ಹೇಳಬೇಕಾದರೆ:**

ದೇಹವನ್ನು ವಾತ, ಪಿತ್ತ, ಕಫ ಎಂಬ ತ್ರಿದೋಷಗಳು ನಿಯಂತ್ರಿಸುತ್ತವೆ ಎಂದು ತಿಳಿಯುವ ಹಾಗೆ, ಮನಸ್ಸಿಗೆ ಸಹ ತ್ರಿ–ಗುಣಗಳಾದ ಸತ್ವ, ರಜಸ್ ಮತ್ತು ತಮಸ್ ನಿಯಂತ್ರಕ ಶಕ್ತಿಗಳಾಗಿವೆ.

ಭಗವದ್ಗೀತೆಯಲ್ಲಿ ಸಹ ತ್ರಿಗುಣಗಳ ಮಹತ್ವವನ್ನು ವಿವರಿಸಲಾಗಿದೆ:

**"ತ್ರಿಭಿರ್ಗುಣಮಯೈರ್ಭಾವೈರೇಭಿಃ**
**ಸರ್ವಮಿದಂ ಜಗತ್"**

ಈ ಜಗತ್ತಿನ ಎಲ್ಲಾ ಕಾರ್ಯಗಳೂ ಈ ಮೂರು ಗುಣಗಳಿಂದಲೇ ನಡೆಯುತ್ತವೆ. ಆದ್ದರಿಂದ, ಗುಣಗಳ ಸಮತೋಲನ ನಮ್ಮ ವ್ಯಕ್ತಿತ್ವ, ಆರೋಗ್ಯ ಮತ್ತು ಆತ್ಮೋನ್ನತಿಗೆ ಅತಿಮುಖ್ಯವಾದ ಸೇತುಬಂಧವಾಗಿದೆ.

"ತ್ರಿಗುಣಗಳು ಮಾತ್ರ ಭಾವನೆಗಳ ಗುಣಧರ್ಮವಲ್ಲ. ಅವು ವ್ಯಕ್ತಿತ್ವದ ಮೂಲ ಆಧಾರ, ಜೀವನದ ದೃಷ್ಟಿಕೋನ ಮತ್ತು ಧ್ಯೇಯದ ದಿಕ್ಕು ತೋರಿಸುತ್ತವೆ. ಆಯುರ್ವೇದವು ಈ ಗುಣಗಳನ್ನು ಪರಿಚಯಿಸುವ ಮೂಲಕ ಮಾನವತೆಯ ಒಳಗೊಂಡ ಮನಸ್ಸಿಗೆ ದಾರಿ ತೋರಿಸುತ್ತದೆ."

ಆಯುರ್ವೇದದ ಅಂತಿಮ ಗುರಿ ಶುದ್ಧ ಮನಸ್ಸು, ಶುದ್ಧ ಬುದ್ಧಿ ಮತ್ತು ಶುದ್ಧ ಆತ್ಮ ತತ್ವವನ್ನು ಅಂದರೆ ಮಾನಸಿಕ ತೃಪ್ತಿ ಮತ್ತು ಆತ್ಮೋನ್ನತಿಯನ್ನು ಅರಿತುಕೊಳ್ಳುವುದು. ಇದನ್ನು "ಆತ್ಮಸಾಕ್ಷಾತ್ಕಾರ" ಅಥವಾ "ಮೋಕ್ಷ" ಎಂದು ಹೇಳಲಾಗುತ್ತದೆ. ಈ ದಾರಿಯಲ್ಲೇ ತ್ರಿಗುಣಗಳನ್ನು ಸಮತೋಲನಗೊಳಿಸುವ ಪ್ರಕ್ರಿಯೆಯು ದೇಹ–ಮನಸ್ಸು–ಆತ್ಮದ ತ್ರಿವೇಣಿಗೆ ಸಂಗಮವಾಗಿದೆ.

ಮಾನಸಿಕ ಗುಣಗಳ ಸಮತೋಲನ ಆಯುರ್ವೇದದ ಮೂಲಸಿದ್ಧಾಂತಗಳಲ್ಲಿ ಒಂದು. ಸತ್ವದ ಬೆಳವಣಿಗೆ ಹಾಗೂ ರಜಸ್–ತಮಸ್ ಗುಣಗಳ ನಿಯಂತ್ರಣವೇ ಆರೋಗ್ಯದ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯ





ಮೂಲವಾಗಿದೆ. ಆಯುರ್ವೇದ ದೇಹ–ಮನಸ್ಸಿನ ಸಮಗ್ರ ಚಿಕಿತ್ಸೆ ನೀಡುವಲ್ಲಿ ವಿಶೇಷವಾದ ಮಾರ್ಗದರ್ಶನ ನೀಡುತ್ತದೆ.

ಆಯುರ್ವೇದದ ಪ್ರಕಾರ, "ಮಾನಸಿಕ ಸ್ವಾಸ್ಥ್ಯವೇ ಶಾರೀರಿಕ ಆರೋಗ್ಯದ ಮೂಲ." ಈ ನಿಟ್ಟಿನಲ್ಲಿ, ತ್ರಿ–ಗುಣಗಳ (ಸತ್ತ್ವ, ರಜಸ್, ತಮಸ್) ಸಮತೋಲನವೇ ಮನಸ್ಸಿನ ಶುದ್ಧತೆಯ ಮೂಲವಾಗಿದೆ.

**ಅಂತಿಮವಾಗಿ : ತ್ರಿಗುಣಗಳ ಸಮತೋಲನವೇ ಮಾನಸಿಕ ಆರೋಗ್ಯಕ್ಕೆ ಮೂಲ**


ಆಯುರ್ವೇದದ ತತ್ವದ ಪ್ರಕಾರ, ಮಾನಸಿಕ ಆರೋಗ್ಯ ಎಂದರೆ ಎಲ್ಲ ಮೂರು ಗುಣಗಳ ಸಮತೋಲನ. ಸತ್ತ್ವವನ್ನು ವೃದ್ಧಿಸಿ, ರಜಸ್ಸು ಮತ್ತು ತಮಸ್ಸನ್ನು ನಿಯಂತ್ರಣದಲ್ಲಿಡುವುದು ಮಾನಸಿಕ ಶಾಂತಿ, ಸ್ಥೈರ್ಯ ಮತ್ತು ಸಮರ್ಥ ಜೀವನದ ಚಾವಡಿ. ❑

## ಸಾಹಿತ್ಯೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಗಣ್ಯರು
















# ಶ್ರೀ ಶ್ರೀಹರಿ ಶೇಖರ್



ಏಪ್ರಿಲ್ 14, 1994. ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವದ ಅಂಗವಾಗಿ ನಡೆದ ಲಘು ಸಂಗೀತ ಸ್ಪರ್ಧೆ. ಆಗ ಸಂಘದಲ್ಲಿ ನಿಜಕ್ಕೂ ಅನೇಕ ಮಂದಿ ಒಳ್ಳೆಯ ಹಾಡುಗಾರರು ಇದ್ದರು. ಸ್ಪರ್ಧೆಯ ಗುಣಮಟ್ಟ ಬಹಳ ಉತ್ತಮವಾಗಿತ್ತು. ಹೊಸದಾಗಿ ಒಬ್ಬ ತರುಣ ಬಂದು "ತನುವು ನಿನ್ನದು ಮನವು ನಿನ್ನದು" ಎಂಬ ಹಾಡನ್ನು ಹಾಡಿ ಎರಡನೇ ಬಹುಮಾನ ಗೆದ್ದಾಗ, ನಮ್ಮ ಮನವು, ಅವನದಾಗಿತ್ತು. ಆ ದಿನವೇ ಸಂಘದ ಸದಸ್ಯತ್ವವನ್ನು ತೆಗೆದುಕೊಂಡ ಮೆಲು ನುಡಿಯ ಆ ತರುಣ, ಮತ್ತೆ 1996ರ ಕಾರ್ಯಕಾರಿ ಸಮಿತಿಗೆ ಅತಿ ಹೆಚ್ಚು ಮತಗಳನ್ನು ಗಳಿಸಿ ಆಯ್ಕೆಯಾಗಿದ್ದರು. ಆ ತರುಣನೇ ಡಿ. ಎಸ್. ಶೇಕಪ್ಪ. ಅಂದರೆ, ಇತ್ತೀಚಿಗೆ ನಿವೃತ್ತಿ ಹೊಂದಿ ಬೆಂಗಳೂರಿಗೆ ತೆರಳಿದ ನಮ್ಮೆಲ್ಲರ ಆತ್ಮೀಯ ಮಿತ್ರ ಶ್ರೀಹರಿ ಶೇಖರ.

ಕೇಂದ್ರ ಸರಕಾರದ ಜಲ ಸಂಪನ್ಮೂಲ ಖಾತೆಯ ಸೆಂಟ್ರಲ್ ವಾಟರ್ ಕಮಿಷನ್‌ನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಸೇರಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿದ ಡಿ.ಎಸ್. ಶೇಕಪ್ಪ, ಶ್ರೀಹರಿ ಶೇಖರನಾಗಿದ್ದು ಹೇಗೆ ಎಂಬ ಕುತೂಹಲವಿತ್ತು. ಮೊನ್ನೆ ತಾನೆ ಅವರು ಅದನ್ನು ನಿವಾರಿಸಿದರು. ರಂಗನಾಥನ ಭಕ್ತೆಯಾದ, ವೃತ್ತಿಯಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರ್ ಆದ, ತಮ್ಮ ಧರ್ಮಪತ್ನಿ ಛಾಯಾದೇವಿಯವರೇ ಇದಕ್ಕೆ ಮೂಲ ಕಾರಣ ಎಂದು ಹೇಳಿದ್ದಾರೆ.

ದೆಹಲಿ ಕರ್ನಾಟಕ ಸಂಘವನ್ನು ಗಟ್ಟಿಗೊಳಿಸುವಲ್ಲಿ ಶ್ರೀಹರಿ ಶೇಖರ್ ಅವರ ಕೊಡುಗೆ ಕೂಡ ದಾಖಲಾರ್ಹ. ದೆಹಲಿ ಕರ್ನಾಟಕ ಸಂಘದ ಹಳೆಯ ಕಟ್ಟಡವಿದ್ದ ಸಮಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಸಮಾನ ಮನಸ್ಕ ಆತ್ಮೀಯ ಯುವಜನರನ್ನು ಒಗ್ಗೂಡಿಸಿ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವಲ್ಲಿ ಶೇಕಪ್ಪ ಮತ್ತು ಗೆಳೆಯ ಬಸವರಾಜ ಮೇಟಿಯವರು ಹೆಚ್ಚು ಮುಂಚೂಣಿಯಲ್ಲಿ ಇರುತ್ತಿದ್ದರು. 1998ರ ಯುಗಾದಿಯ ಸಂದರ್ಭ, ಅಂದಿನ ಉಪರಾಷ್ಟ್ರಪತಿ ಶ್ರೀ ಕೃಷ್ಣಕಾಂತ್ ಅವರ ಮನೆಯಲ್ಲಿ, ಸಂಘದ ವತಿಯಿಂದ ನೀಡಿದ ದೆಹಲಿ ಕನ್ನಡ ಶಾಲೆಯ 9ನೇ ತರಗತಿಯ ಮಕ್ಕಳ ಕಾರ್ಯಕ್ರಮ ಹಾಗೂ ನಮ್ಮ ನೆಚ್ಚಿನ ಗೆಳೆಯ ಶ್ರೀ ಟಿ.ಎಸ್. ರಮೇಶ್, ಕಲಾವಿದೆ ಶ್ರೀಮತಿ ಬಿ.ಕೆ. ಜಲಜ, ಶ್ರೀ ಬಿ.ವಿ. ಅಡ್ಕೋಳಿ, ಶ್ರೀ ಸಂತೋಷ ಉಪಾಧ್ಯಾಯ, ಶ್ರೀ ಶೇಕಪ್ಪ ಇವರೆಲ್ಲ ಸೇರಿ ಸ್ಥಳೀಯ ಪ್ರತಿಭೆಗಳೇನೂ ಕಡಿಮೆ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದರು. ಉಪರಾಷ್ಟ್ರಪತಿಗಳವರ ಮನೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಕರ್ನಾಟಕದಿಂದ ಒಂದು ತಂಡವನ್ನು ತರಿಸೋಣ ಎಂದು ಅಂದಿನ ಅಧ್ಯಕ್ಷ ಶ್ರೀ ಕೆ.ಆರ್. ನಾಗರಾಜರವರು ಹೇಳಿದಾಗ, ನಾವು ಸ್ಥಳೀಯ ಕಲಾವಿದರೇ ಕಾರ್ಯಕ್ರಮ ಕೊಡುತ್ತೇವೆ ಎಂದು ಹಠ ಹಿಡಿದ ಶೇಕಪ್ಪ, ಈ ಎಲ್ಲಾ ಕಲಾವಿದರ ಜೊತೆ ಸೇರಿ, ಬಿ.ವಿ. ಅಡ್ಕೋಳಿಯವರು ರಚಿಸಿದ ಗೀಯ ಪದ–"ನಾವು ಬಂದೇವಾ ದಿಲ್ಲಿ ನಗರ ನೋಡೋದಕ್ಕ... ನೋಡಿ ವಾಸಾ ಮಾಡಿ ಮತ್ತ ಹೋಗೋಕ್ಕ... ಗೀಯ ಗೀಯ ಗಾಗಿಯ ಗೀಯ" ಹಾಡಿಗೆ ತಾಳ ಹಾಕದ ಮನಸುಗಳೇ ಇಲ್ಲ! ಕನ್ನಡ ಶಾಲೆಯ ಮಕ್ಕಳು ಪ್ರಸ್ತುತಪಡಿಸಿದ "ಮುಂಜಾನೆದ್ದು ಕುಂಬಾರಣ್ಣ" ಜಾನಪದ ನೃತ್ಯವನ್ನು ಅಂದು ಉಪರಾಷ್ಟ್ರಪತಿಯವರ ಜೊತೆ ಶ್ರೀ ಎಲ್.ಕೆ. ಅಡ್ವಾಣಿಯವರು ಸಹ ವೀಕ್ಷಿಸಿದರು. ಅಂದು ಹದಿನೈದು ಸಾವಿರ ರೂಪಾಯಿಗಳ ಗೌರವ ಧನ ಪಡೆದ ಈ ತಂಡ, ದೆಹಲಿ ಕರ್ನಾಟಕ ಸಂಘಕ್ಕೆ ಅದನ್ನು ಒಪ್ಪಿಸಿದ್ದು ಉಲ್ಲೇಖನೀಯ.

15 ನವೆಂಬರ್ 2000. ರಾತ್ರಿ 10 ಗಂಟೆಯ ಸಮಯ. ನಾನು, ಶ್ರೀ ಬಿ.ಎಸ್. ಮೇಟಿ ಮತ್ತು ಶೇಕಪ್ಪ ಅವರ ಜೊತೆ ಸಂಘದಲ್ಲಿ ಕುಳಿತು ಏನನ್ನೋ ಚರ್ಚಿಸುತ್ತಿದ್ದಾಗ, ಅಧ್ಯಕ್ಷ ಶ್ರೀ ಕೆ.ಆರ್. ನಾಗರಾಜ್ ರವರ ದೂರವಾಣಿ ಕರೆ ಬಂತು. ಮರುದಿನ, ಅಂದರೆ 16 ನವೆಂಬರ್ ಮುಂಜಾನೆ ಆರು ಗಂಟೆಗೆ, ದೆಹಲಿಯ ಕರ್ನಾಟಕ ಭವನದಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ಅವರ ಭೇಟಿ ನಿಗದಿ ಆಗಿರುವುದರಿಂದ ತಪ್ಪದೆ ಬರುವಂತೆ ತಿಳಿಸಿದರು. ಬೆಳಗಿನ ಜಾವ ಅಷ್ಟು ಕಡಿಮೆ ಸಮಯದಲ್ಲಿ ಇತರ ಪದಾಧಿಕಾರಿಗಳಿಗೆ ತಿಳಿಸಲಾಗದಿದ್ದರೂ, ಸಂಘದಲ್ಲಿ ನನ್ನ ಜೊತೆಗಿದ್ದ ಮೇಟಿ ಮತ್ತು ಶೇಕಪ್ಪ ಅವರನ್ನು ಪಶ್ಚಿಮ ವಿಹಾರದ ನಮ್ಮ ಮನೆಗೆ ಕರೆದುಕೊಂಡು ಹೋದೆ. ಅಲ್ಲಿ ಊಟ ಮಾಡಿ ಬೆಳಗಿನ ಜಾವ ಐದು ಗಂಟೆಗೆ ನಾವು ಮೂವರೂ ಕರ್ನಾಟಕ ಭವನಕ್ಕೆ ಬಂದಾಗ ಕರ್ನಾಟಕ ಭವನದಲ್ಲಿ, ಮುಖ್ಯಮಂತ್ರಿಗಳ ಸಹಾಯಕರಾಗಿದ್ದ ಶ್ರೀ ಕುಂಬಾರ್ ಅವರು ನಮ್ಮೆಲ್ಲರನ್ನು ಬರಮಾಡಿಕೊಂಡು ಮುಖ್ಯಮಂತ್ರಿಯವರ ಭೇಟಿ ಮಾಡಿಸಿ, ನಮ್ಮ ಬೇಡಿಕೆ ಈಡೇರಿಸುವಲ್ಲಿ ಸಹಕಾರಿ ಆಗಿದ್ದು ಇನ್ನೂ ನೆನಪಿದೆ.

ಮೂಲತಃ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಹನುಮಾಪುರದ ಶೇಕಪ್ಪ ಅವರು ಪ್ರೈಮರಿ ಶಾಲೆಯಲ್ಲಿ ಇರುವಾಗಲೇ ಸಂಗೀತದ ಆಸಕ್ತಿಯನ್ನು ಬೆಳೆಸಿಕೊಂಡರು. ಶ್ರೀ ಸಿದ್ದೇಶ್ವರ ವಸತಿ ಪ್ರೌಢಶಾಲೆ ಗುದ್ಲೆಪ್ಪ ಹಳ್ಳಿಕೇರಿ ಕಾಲೇಜ್ ಹಾವೇರಿಯಲ್ಲಿ ಪಿಯುಸಿ ಮುಗಿಸಿ, ರಾಣೇಬೆನ್ನೂರಿನ ತರಳಬಾಳು ತಾಂತ್ರಿಕ ವಿದ್ಯಾಲಯದಲ್ಲಿ ಬಿ.ಇ. ಪದವಿ ಪಡೆದು, ಸುರತ್ಕಲ್ಲಿನ ಎನ್‌ಐಟಿಯಲ್ಲಿ ಎಂ.ಟೆಕ್. ಮುಗಿಸಿ, ಸೆಂಟ್ರಲ್ ವಾಟರ್ ಕಮಿಷನ್ ನಲ್ಲಿ ಅಸಿಸ್ಟೆಂಟ್ ಎಂಜಿನಿಯರ್ ಆಗಿ ಸೇರಿ, ಬೆಂಗಳೂರು, ಶಿಲ್ಲಾಂಗ್ ಮುಂತಾದೆಡೆಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದರು.

ಶಿಲಾಂಗ್‌ನಲ್ಲಿ ಸಹ ಇವರ ಕನ್ನಡ ಚಟುವಟಿಕೆಗಳು ಅವ್ಯಾಹತವಾಗಿ ನಡೆದವು. ಪ್ರತಿ ವರ್ಷ ಗಣಪತಿ ಹಬ್ಬ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವಲ್ಲಿ ಇವರಿಗೆ ಅಲ್ಲಿನ ಅಧ್ಯಕ್ಷ ಶ್ರೀ ರಾಮಾನುಜಮ್ ಅವರ ಮಾರ್ಗದರ್ಶನವು ಸಿಕ್ಕಿತ್ತೆಂದು ಕೃತಜ್ಞತೆಯಿಂದಲೇ ಸ್ಮರಿಸುತ್ತಾರೆ. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅದೃಷ್ಟ ಶಾಲಿ ಎಂದೇ ಪರಿಗಣಿಸಲ್ಪಡುವ ಶ್ರೀಹರಿ ಶೇಖರ್ ಕೌಟುಂಬಿಕವಾಗಿಯೂ ಅತ್ಯಂತ ಸಂತೃಪ್ತ ವ್ಯಕ್ತಿ. ಪುತ್ರರಾದ ರಾಹುಲ್ ಶ್ರೀಹರಿ ಮತ್ತು ರೋಹಿತ್ ಶ್ರೀಹರಿ ವಿದ್ಯಾವಂತರಾಗಿ ಉತ್ತಮ ಹುದ್ದೆಯಲ್ಲಿದ್ದಾರೆ. ತಮ್ಮ ಯಶಸ್ಸಿನ ಹಿಂದೆ ಶ್ರೀರಂಗನಾಥನ ಭಕ್ತೆಯಾಗಿರುವ ಪತ್ನಿ ಛಾಯಾದೇವಿಯವರ ಕೊಡುಗೆಯನ್ನು ಮತ್ತೆ ಮತ್ತೆ ಪ್ರೀತಿ ಪೂರ್ವಕ ನೆನಪಿಸಿಕೊಳ್ಳುತ್ತಾರೆ–ಶ್ರೀಹರಿ ಶೇಖರ್ 1998ರಲ್ಲಿ ನವದೆಹಲಿಯ ಸಿರಿಫೋರ್ಟ್ ಸಭಾಂಗಣದಲ್ಲಿ ನಡೆದ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮದ ಆಯೋಜನೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಅಂದಿನ ಸಂಗೀತ ಸಂಜೆಗೆ ಆಗಮಿಸಿದ್ದ ವರನಟ ಡಾ. ರಾಜ್‌ಕುಮಾರ್ ಅವರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಳ್ಳುವುದರಿಂದ ಹಿಡಿದು ಕರ್ನಾಟಕಕ್ಕೆ ತೆರಳುವವರೆಗೂ ಅವರ ಸಂಪೂರ್ಣ ಉಸ್ತುವಾರಿಯನ್ನು ಜವಾಬ್ದಾರಿಯುತವಾಗಿ ನಿಭಾಯಿಸಿದ ಶ್ರೇಯ ಶ್ರೀಹರಿಯವರಿಗೆ ಸಲ್ಲುತ್ತದೆ.

ಶ್ರೀಹರಿ ಶೇಖರರಂತಹ ಗೆಳೆಯರಿದ್ದರೆ, ಎಂತಹ ಕೆಲಸವನ್ನಾದರೂ ಕೈಗೊಳ್ಳಬಹುದು ಎಂಬುದನ್ನು ಕಾರ್ಯಕಾರಿ ಸಮಿತಿಯ ಅನೇಕ ಸಭೆಗಳಲ್ಲಿ, ಉಪ ಸಮಿತಿಯ ಸಭೆಗಳಲ್ಲಿ ಕಂಡುಕೊಂಡಿದ್ದೆ. ಪ್ರಧಾನ ಕಾರ್ಯದರ್ಶಿಯಾಗಿ ನಾನು ಕೆಲಸ ಮಾಡುತ್ತಿದ್ದ ಆ ದಿನಗಳಲ್ಲಿ, ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ ಶ್ರೀಹರಿ ಶೇಖರ್, ಯಾವತ್ತೂ ಸಹ ಸಮಸ್ಯೆಯ ಭಾಗವಾಗಿರದೆ, ಕೇವಲ ಸಮಾಧಾನದ ಭಾಗವಾಗಿ, ನಿಸ್ಪೃಹತೆಯಿಂದ ದುಡಿದವರು. ಹಾಗಾಗಿಯೇ ಶ್ರೀಹರಿ ಶೇಖರ ಅವರು ನನ್ನ ಬದುಕಿನ ಪುಟಗಳಲ್ಲಿ ಅಚ್ಚಳಿಯದೆ ಉಳಿಯುತ್ತಾರೆ. ಅವರ ನಿವೃತ್ತ ಜೀವನ ಸದಾ ಸುಗಮವಾಗಿ ಸಾಗಲೆಂದು ಹಾರೈಸುವೆ.❑



ಲೇಖಕರು:

***ಸರವು ಕೃಷ್ಣ ಭಟ್***





# ದೆಹಲಿ ಕನ್ನಡಿಗರ ಅಪಾರ ಜನಮನ್ನಣೆ ಪಡೆದ 'ಸಾಹಿತ್ಯೋತ್ಸವ'ದ ಸಮಾರೋಪ ಸಮಾರಂಭ



ಸಾಹಿತ್ಯದ ಸದಭಿರುಚಿಯನ್ನು ತಿಂಗಳುಗಟ್ಟಲೆ ಸಾಹಿತ್ಯೋತ್ಸವದ ಮುಖಾಂತರ ಕಟ್ಟಿಕೊಟ್ಟು ದೆಹಲಿ ಕನ್ನಡಿಗರಿಗೆ ಉಣಬಡಿಸಿದ ಕೀರ್ತಿ ನಮ್ಮ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರಿಗೆ ಸಲ್ಲುತ್ತದೆ. ಇಂತಹ ಸಾಹಿತ್ಯೋತ್ಸವದ ಕಾರ್ಯಕ್ರಮ ಮಾಡುವುದರ ಮೂಲಕ ನಮ್ಮ ಕನ್ನಡ ಸಾಹಿತ್ಯ ಲೋಕದ ಖ್ಯಾತ ಕವಿಗಳ ಮತ್ತು ಸಾಹಿತಿಗಳ ನೆನಪುಗಳನ್ನು ಮೆಲುಕು ಹಾಕುವುದರ ಜೊತೆಗೆ ಅವರ ಸಾಹಿತ್ಯದ ಬಗ್ಗೆ ಒಲವು ಮೂಡಿಸುವುದಲ್ಲದೆ ಈಗಿನ ಪೀಳಿಗೆಯವರು ನಮ್ಮ ಹೆಸರಾಂತ ಸಾಹಿತಿಗಳ ಬಗ್ಗೆ ಕುತೂಹಲ ಹೊಂದಿ ಓದುವ ಆಸಕ್ತಿ ಮೂಡುವಂತೆ ಮಾಡಲು ಸಹಕಾರಿಯಾಗಿದೆ. ಆ ಸಾಹಿತಿಗಳ ಹಲವಾರು ಪುಸ್ತಕಗಳ ಸಹಸ್ರಾರು ಪುಟಗಳ ಬರಹವನ್ನು ಸಾಹಿತ್ಯೋತ್ಸವದ ಮೂರ್ನಾಲ್ಕು ಗಂಟೆಗಳಲ್ಲಿ ಓದಿ ತಿಳಿದುಕೊಂಡಂತೆ ವಿಚಾರ ಮಂಡನೆ ಏರ್ಪಡಿಸಿ ಈಗಿನ ಕವಿಗಳು ಬರಹಗಾರರನ್ನು ಪರಿಚಯಿಸಿ ಪ್ರೋತ್ಸಾಹಿಸಿದ್ದಲ್ಲದೇ ಹಿಂದಿನ ನಮ್ಮ ಕನ್ನಡದ ಅಗಾಧ ಸಾಹಿತ್ಯ ಜಗತ್ತನ್ನು ಪರಿಚಯಿಸಿದ ಹೊಸ ಪ್ರಯತ್ನವೂ ಅಧ್ಯಕ್ಷರ ಮುಡಿಗೆ ಗರಿಯಾಗಿ ಸಲ್ಲುತ್ತದೆ. ಅವರ ಪರಿಕಲ್ಪನೆ ಮತ್ತು ದೂರದೃಷ್ಟಿಯಿಂದ ಸಭಾಂಗಣವನ್ನು ಉನ್ನತೀಕರಿಸುವ ಸಲುವಾಗಿ ಕೈಗೆತ್ತಿಕೊಂಡಿದ್ದ ಸಂದರ್ಭ, ಸಣ್ಣ ರೀತಿಯಲ್ಲಿ ಕಾರ್ಯಕ್ರಮ ಮಾಡಬೇಕೆಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಶುರು ಮಾಡಿದ ಈ ಸಾಹಿತ್ಯೋತ್ಸವ ಸತತ ಏಳು ವಾರಗಳ ಸುದೀರ್ಘ ಕಾರ್ಯಕ್ರಮವಾಗಿ ಆಯೋಜಿಸಲಾಯಿತು. ಕೊನೆಗೆ ಈ ಸಾಹಿತ್ಯೋತ್ಸವ ಸರಣಿಯ ಕೊನೆಯ ಮಾಲಿಕೆ ಮತ್ತು ಸಮಾರೋಪ ಸಮಾರಂಭವು ಮಾತ್ರ ಉನ್ನತೀಕರಿಸಿದ ಧ್ವನಿ ಸಿಸ್ಟಮ್ ಮತ್ತು ಹೊಸದಾಗಿ ಅಲಂಕರಿತ ಆಸನಗಳೊಂದಿಗೆ ಹೊಸ ರೂಪುರೇಷೆ ಪಡೆದ ಸಂಘದ ಸಭಾಂಗಣದಲ್ಲಿಯೇ ನಡೆದಿದ್ದು ಒಂದು ವಿಶೇಷವೆಂದೇ ಹೇಳಬೇಕು.

ಕಾರ್ಯಕ್ರಮ ಶುರುವಾಗುವುದಕ್ಕೂ ಮೊದಲು ಶ್ರೀಮತಿ ರಾಧಾ ಕೌಜಲಗಿಯರು ಪ್ರಾರ್ಥನೆ ಗೀತೆ ಹಾಡಿದರು, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ಸ್ವಾಗತ ಭಾಷಣವನ್ನು ಮಾಡಿದರು.

ಕಾರ್ಯಕ್ರಮದ ಮೊದಲಿಗೆ ಆರ್.ಸಿ. ಕಾಲೇಜ್ ಬೆಂಗಳೂರಿನ ಕನ್ನಡ ಸಹ ಪ್ರಾಧ್ಯಾಪಕರಾದ ಡಾ. ಪ್ರೇಮಾವತಿ ಅವರು ಖ್ಯಾತ ಸಾಹಿತಿ ಶ್ರೀ ಕೆ.ಎಸ್. ನಿಸಾರ್ ಅಹಮದ್ ಅವರ ಬಗ್ಗೆ ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಮಾಡಿಕೊಟ್ಟರು. ಡಾ. ಪ್ರೇಮಾವತಿ ಅವರು ದೂರದ ಬೆಂಗಳೂರಿನಿಂದ ನಿಸ್ತಂತು ಮಾಧ್ಯಮದ ಮೂಲಕ ಮಾತನಾಡುತ್ತಾ ನಿಸಾರ್ ಅಹಮದ್ ಅವರು ದಿನಾಂಕ : 05.02.1936ರಲ್ಲಿ ಈಗಿನ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ್ದರು. 84 ವರ್ಷ ಜೀವಿಸಿ 2020ರ ಮೇ 3ರಂದು ಬೆಂಗಳೂರಿನಲ್ಲಿ ಮರಣ ಹೊಂದಿದ್ದಾರೆ. ಭೂವಿಜ್ಞಾನ ಪ್ರಾಧ್ಯಾಪಕರಾಗಿದ್ದರಲ್ಲದೇ ಜೊತೆಗೆ ಕನ್ನಡ ನಾಡು ನುಡಿ ಇಲ್ಲಿನ ಆಚಾರ ವಿಚಾರಗಳು ಪರಂಪರೆ, ಸಾಹಿತ್ಯ ಇವುಗಳ ಬಗ್ಗೆ ಅಪಾರ ಪ್ರೇಮವನ್ನು ಹೊಂದಿದವರಾಗಿದ್ದರು ಇವರ ಕೆಲವು ಕಾವ್ಯ ಸಂಕಲನಗಳು 'ಮನಸು ಗಾಂಧಿ ಬಜಾರ್', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ನಿತ್ಯೋತ್ಸವ', 'ಸ್ವಯಂ ಸೇವೆಯ ಗಿಳಿಗಳು' ಇತ್ಯಾದಿಗಳು. ಅಚ್ಚುಮೆಚ್ಚು, ಇದು ಬರಿ ಬೆಡಗಲ್ಲೊ ಅಣ್ಣ ಮುಂತಾದ ಗದ್ಯಗಳು ಒಥೆಲ್ಲೊ ಮತ್ತು ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಮಾಸ್ತಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೊರೂರು ಪ್ರಶಸ್ತಿ, ಅನಕೃ ಪ್ರಶಸ್ತಿ, ಹಾಗೆಯೇ 1981ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2003ರಲ್ಲಿ ನಾಡೋಜ ಪ್ರಶಸ್ತಿ, 2006ರಲ್ಲಿ ಅರಸು ಪ್ರಶಸ್ತಿ, ಹೀಗೆ ಹಲವು ಪ್ರಶಸ್ತಿಗಳಿಗೆ ಕವಿ ನಿಸಾರ್ ಅಹಮದ್ ಅವರು ಭಾಜನರಾಗಿದ್ದಾರೆ ಎಂದರು.

ಕನ್ನಡ ಕಾವ್ಯಲೋಕದಲ್ಲಿ ಕವಿ ನಿಸಾರ್ ಅಹಮದ್ ಅವರಿಗೆ ಅವರದ್ದೇ ಆದಂತಹ ಒಂದು ವಿಶಿಷ್ಟ ಸ್ಥಾನವಿದೆ ಮತ್ತು ಕಾವ್ಯ ರಚನೆಯಲ್ಲಿ ತಮ್ಮದೇ ಆದಂತಹ ವಿಶಿಷ್ಟ ಛಾಪನ್ನು ಮೂಡಿಸಿದಂತಹವರು. ಕಾವ್ಯ ಕಟ್ಟುವಂತಹ ಕಲೆಯಲ್ಲಿ ಅವರು ಬಹಳ ನಿಷ್ಣಾತರಾಗಿದ್ದರು ಹಾಗೂ ಅರ್ಥಪೂರ್ಣ ಕಲಾವಂತಿಕೆಯನ್ನು, ಸೂಕ್ಷ್ಮ ಶೈಲಿಯ ಪದಬಂಧಗಳ ಜೋಡಣೆಯ ಕೌಶಲ್ಯವನ್ನು ಹೊಂದಿದ್ದರು. ನಮಗೆ ಕವಿ ನಿಸಾರ್ ಅಹಮದ್ ಎಂದಾಗ ಮೊದಲಿಗೆ ತಕ್ಷಣ ನೆನಪಾಗುವುದು ಅವರ ನಿತ್ಯೋತ್ಸವ ಕವಿತೆ. ಏಕೆಂದರೆ ಕನ್ನಡವನ್ನು ಕುರಿತಂತೆ ಮತ್ತು ಕನ್ನಡಾಂಬೆಯನ್ನು ಕುರಿತಂತೆ ಸಾಕಷ್ಟು ಕವಿಗಳು ಅನೇಕ ಕವನಗಳನ್ನು ಬರೆದಿದ್ದಾರೆ ಆದರೆ ನಿತ್ಯೋತ್ಸವ ಕವಿತೆಯಲ್ಲಿ ಅವರು ಕನ್ನಡ ನೆಲ, ಜಲ, ಪ್ರಕೃತಿ ಸಂಪತ್ತು, ಶಾಸನಗಳು, ದೇವಾಲಯಗಳು, ವಾಸ್ತುಶಿಲ್ಪ ಮುಂತಾದವುಗಳನ್ನು ವರ್ಣಿಸುವ ಮೂಲಕ ಕನ್ನಡಾಂಬೆಯ ಪ್ರತಿದಿನದ ನಿತ್ಯೋತ್ಸವ ನಮಗೆ ಬಹಳ ವಿಶೇಷವಾಗಿ ಕಾಣಿಸುತ್ತೆ. ಇಲ್ಲಿರುವ ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ ನಿತ್ಯೋತ್ಸವ ತಾಯಿ ನಿನಗೆ ನಿತ್ಯೋತ್ಸವ ಎನ್ನುವಾಗ ಕನ್ನಡನಾಡಿನ ಆ ಪ್ರಕೃತಿಯ ಬಗೆಗೆ ಇರುವಂತಹ ಅಸ್ಸೀಮ ಪ್ರೀತಿ ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ, ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ, ಓಲೆಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಯಲ್ಲಿ ನಿತ್ಯೋತ್ಸವ ತಾಯಿ ನಿನಗೆ ನಿತ್ಯೋತ್ಸವ ಎಂದು ಹೇಳುವಾಗ ಒಟ್ಟಾರೆಯಾಗಿ ನಮ್ಮ ಕನ್ನಡ ನಾಡಿನ ಭಾಷೆ, ಇತಿಹಾಸ, ಶಾಸನಗಳು ಇಲ್ಲಿನ ಪ್ರಕೃತಿ ಎಲ್ಲವನ್ನು ಒಟ್ಟಿಗೆ ಒಂದು ರೀತಿ ಕಣ್ಣಿಗೆ ಮುಟ್ಟುವ ಹಾಗೆ ಒಂದು ರೂಪಕವನ್ನೇ ನಮ್ಮ ಕಣ್ಣಮುಂದೆ ತರುವಂತೆ ಈ ಕವಿತೆಯನ್ನು ರಚನೆ ಮಾಡಿರುವುದು ವಿಶೇಷ. ಇವರಿಗೆ ಈ ಕವಿತೆಯು ಅಪಾರವಾದ ಜನಪ್ರಿಯತೆಯನ್ನು ತಂದುಕೊಟ್ಟಿತ್ತು. ನಿತ್ಯ ಜೀವನದಲ್ಲಿ ನಿಸಾರ್ ಅವರಿಗೆ ಒಂದು ರೀತಿ ಈ ಕವಿತೆ ನಿತ್ಯ ಉತ್ಸವವನ್ನೇ ತಂದು ಕೊಟ್ಟಿದೆ ಎಂದರೂ ತಪ್ಪಾಗಲಿಕ್ಕಿಲ್ಲ. ಬಹಳ ಸಲ ಇವರನ್ನು ನಿತ್ಯೋತ್ಸವದ ನಿಸಾರರು ಅಂತ ಕರೆಯುವುದನ್ನೂ ಕೂಡಾ ನಾವು ಕೇಳಿಸಿಕೊಂಡಿದ್ದೇವೆ. ಗೀತೆಗಳಲ್ಲಿ ದೇಶಪ್ರೇಮ, ನಿಸರ್ಗ ಮತ್ತು ಜೀವನಪ್ರೇಮ, ನಗರ ಚಿತ್ರಣ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಪ್ರತ್ಯೇಕ ಕವಿತೆಗಳನ್ನು, ಬೆಂಗಳೂರು ಬಗೆಗಿನ ಪ್ರೀತಿಯನ್ನೂ, ಕೆಲವೊಮ್ಮೆ ನಗರ ಚಿತ್ರಣದ ಒಂದು ಕವಿತೆಯ ಕೆಲವು ಸಾಲುಗಳನ್ನು ಪ್ರಸ್ತಾಪ ಮಾಡುತ್ತ ಪ್ರಕೃತಿಯ ನಂಟನ್ನು ತೊರೆಯುತ್ತ ಕಾಂಕ್ರೀಟ್ ಜಂಗಲುಗಳ ಬಿಲ ಹೊಕ್ಕವರು, ಇಲ್ಲಿನ ಬೆಂಗಳೂರಿನ ನಗರವಾಸಿಗಳು ಡೀಸೆಲ್, ಪೆಟ್ರೋಲ್ ಹೊಗೆ ಹವೆ ಸೇರಿಸಿ ತಂಗಲು ಜಗವನೇ ಮುಕ್ಕುವರು ಲಾಲ್‌ಬಾಗ್ ಕಬ್ಬನ್ ಪಾರ್ಕಿಗೆ ಹೋದರೂ ಮರಗಿಡ ನೋಡದೇ ಬರುವವರು ಎಂದು ನಗರ ಜೀವನದ ಬಗ್ಗೆ ನವಿರಾಗಿ ಹೇಳಿದ್ದಾರೆ ಎಂದು ತಿಳಿಸಿದರು.

ನಂತರ, ಸೆಂಟ್ರಲ್ ಯುನಿವರ್ಸಿಟಿ ಕಲಬುರಗಿಯ ಕನ್ನಡ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಡಾ. ವಿಜಯ

ಕುಮಾರ್ ಅವರು ಖ್ಯಾತ ಸಾಹಿತಿ ಶ್ರೀ ಡಿ.ಎಸ್. ಕರ್ಕಿ ಅವರ ಬಗ್ಗೆ ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೋಟ ಅವರು ಮಾಡಿಕೊಟ್ಟರು. ಡಾ. ವಿಜಯ ಕುಮಾರ್ ಅವರು ದೂರದ ಕಲಬುರಗಿಯಿಂದ ನಿಸ್ತಂತು ಮಾಧ್ಯಮದ ಮೂಲಕ ಮಾತನಾಡುತ್ತಾ ಎನಿತು ಇನಿದು ಈ ಕನ್ನಡ ನುಡಿಯು ಮನವನು ತಣಿಸುವ ಮೋಹನ ಸುಧೆಯು ಎಂಬ ಬೆಟಗೇರಿ ಕೃಷ್ಣ ಶರ್ಮಾ ಅವರ ಮಾತುಗಳನ್ನು ನೆನಪಿಸಿಕೊಂಡರು. ಕನ್ನಡ ಸಾಹಿತ್ಯದ ಆಳ ಮತ್ತು ಅದರ ಅರಿವು ಅಂತರ್ಗತವಾಗಿರುವ ತಿಳುವಳಿಕೆಗಳು ನಮಗೆ ತುಂಬ ಸುಭೀಕ್ಷೆಯಾಗಿ ಕಾಣುತ್ತದೆ ಅನ್ನುವಂತಹದ್ದು ಅರಿವಾಗುತ್ತಾ ಹೋಗುತ್ತದೆ. ಕನ್ನಡ ಸಾಹಿತ್ಯದ ಅನೇಕ ವಿಧಾನಗಳನ್ನು, ವಿಚಾರಗಳನ್ನು ನಾಡಿನ ಕನ್ನಡಿಗರಿಗೆ ಅದು ದೆಹಲಿಯಲ್ಲಿದ್ದುಕೊಂಡು ಈ ರೀತಿಯ ಕಾರ್ಯಕ್ರಮಗಳನ್ನು ಮಾಡುತ್ತಾ ಇರುವ ದೆಹಲಿ ಕನ್ನಡಿಗರಿಗೆ ಇವರಿಗೆ ಯಾವ ರೀತಿಯ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ನಾವು ಕರ್ಕಿಯವರನ್ನು ಗುರುತಿಸುವುದೇ ಅವರ ಒಂದು ಗೀತೆಯ ಮೂಲಕವಾಗಿ. 50ರ ದಶಕದ ಕಾಲದ ಒಳಗಡೆ ಕನ್ನಡವನ್ನು ಕಟ್ಟುವ ನಾಡನ್ನು ಮತ್ತೆ ನಾಮಕರಣ ಮಾಡುವವರೆಗೆ ನಾಡು–ನುಡಿಯ ಜೊತೆಗೆ ಬದುಕಿದಂತಹ ದೊಡ್ಡ ಗೀತೆ 'ಹಚ್ಚೇವು ಕನ್ನಡದ ದೀಪ' ಅನ್ನುವಂತಹ ಮಾತು. ಇವರು ನವೋದಯದ ಒಬ್ಬ ಬಹುದೊಡ್ಡ ಕವಿಯಾಗಿ ನಮ್ಮ ಜೊತೆಗೆ ಕಾಣಿಸಿಕೊಳ್ಳುತ್ತಾರೆ. ಅತ್ಯುತ್ತಮ ಶಿಕ್ಷಕರಾಗಿ, ಶಾಸ್ತ್ರಜ್ಞರಾಗಿ, ಬಹಳ ಮಾನವೀಯವಾದ ಅಂತಃಕರಣೀಯುಗಳನ್ನಿಟ್ಟುಕೊಂಡು ಸಾಹಿತ್ಯದ ಬೇರೆ ಬೇರೆ ತಿಳುವಳಿಕೆಗಳನ್ನಿಟ್ಟುಕೊಂಡು ಕನ್ನಡಕ್ಕೆ ಕೊಡುಗೆಯನ್ನು ನೀಡಿದವರು ಡಿ.ಎಸ್. ಕರ್ಕಿ ಅವರು. ಡಿ. ಎಂದರೆ ದುಂಡಪ್ಪ, ಸಿ–ಎಂದರೆ ಸಿದ್ದಪ್ಪ ದುಂಡಪ್ಪ ಸಿದ್ದಪ್ಪ ಕರ್ಕಿಯವರು 1907ರಲ್ಲಿ ನವೆಂಬರ್ 15ರಂದು ಬೆಳಗಾವಿ ಜಿಲ್ಲೆಯ ರಾಮದುರ್ಗಾ ತಾಲ್ಲೂಕಿನ ಹಿರೇಕೊಪ್ಪದಲ್ಲಿ ಜನಿಸಿದರು. ಇವರ ಮೂಲ ಮನೆತನದ ಹೆಸರು ಅಂಗಡಿ. ಉತ್ತರ ಕರ್ನಾಟಕದಲ್ಲಿ ಜನಿಸಿದ ಇವರು ತಮ್ಮ ತಂದೆ–ತಾಯಿ ಮತ್ತು ಪೋಷಕರನ್ನು ಬಹಳ ಚಿಕ್ಕಂದಿನಲ್ಲಿಯೇ ಕಳೆದುಕೊಳ್ಳುತ್ತಾರೆ. ಅದಾದ ಮೇಲೆ ಅವರ ತಾಯಿಯ ಊರಾದ ಬೆಲ್ಲದಮಾಗೇವಾಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಾರೆ. ನಂತರ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಬೆಳಗಾವಿ ಮತ್ತು ಧಾರವಾಡಗಳಲ್ಲಿ ಅಭ್ಯಾಸ ಮಾಡಿ 1932ರಲ್ಲಿ ಬಿ.ಎ. ಪದವಿಯನ್ನು ಕರ್ನಾಟಕ ಕಾಲೇಜಿನಿಂದ ಪಡೆದುಕೊಳ್ಳುತ್ತಾರೆ. ನಂತರ 1935ರಲ್ಲಿ ಎಂ.ಎ. ಪದವಿಯನ್ನು ಹೊಂದಿ ಮುಂಬೈನ ಟಿ.ಎಸ್. ಕಾಲೇಜಿನಿಂದ ಬಿಟಿ ಪದವಿಯನ್ನು ಕೂಡಾ ಅವರು ಪಡೆದುಕೊಳ್ಳುತ್ತಾರೆ. ತರುವಾಯ ತಮ್ಮ ವೃತ್ತಿ ಜೀವನವನ್ನು ಜಿಎ ಹೈಸ್ಕೂಲ್‌ನಲ್ಲಿ ಪ್ರಾರಂಭ ಮಾಡುತ್ತಾರೆ. ನಂತರ ಕೆಎಲ್ಇ ಸೊಸೈಟಿ ಆರಂಭ ಆದಾಗ ಕನ್ನಡ ಶಿಕ್ಷಕರ ಪ್ರಾಥಮಿಕ ತರಬೇತಿ ಸಂಸ್ಥೆಗೆ ಸೇರಿಕೊಳ್ಳುತ್ತಾರೆ. ಕನ್ನಡದ ಬಗೆಗೆ ತುಂಬಾ ಕಾಳಜಿಯನ್ನು ವಹಿಸಿಕೊಂಡು ಅವರು ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ 1949ರಲ್ಲಿ ಕೆ.ಜಿ. ಕುಂದಣಗಾರರ ಪರಿಚಯ ಆಗುತ್ತದೆ. ಆಗ ಇವರು ಕನ್ನಡದ ಛಂದಸ್ಸಿನ ವಿಕಾಸ ಅನ್ನುವಂತಹ ಒಂದು ಮಹಾ ಪ್ರಬಂಧವನ್ನು ಬರೆದು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ ಪದವಿಯನ್ನೂ ಕೂಡಾ ಪಡೆದುಕೊಳ್ಳುತ್ತಾರೆ. ಇವರು ಬರೆದಿರುವಂತಹ ಹಚ್ಚೇವು ಹಾಡು ನಮ್ಮ ಜನಮಾನಸದಲ್ಲಿಯೇ ಉಳಿದಿರುವಂತಹದ್ದಕ್ಕೆ ಸಾಕ್ಷಿಯಾಗಿದೆ. ಅದು ಆ ಕಾಲಕ್ಕೆ ನಾಡನ್ನು ಕಟ್ಟುವುದಕ್ಕೆ ನಾಡಗೀತೆಯಾಗಿ ನಾಡನ್ನು ಕಟ್ಟಿದ ಗೀತೆ. ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ, ಒಲವೆತ್ತಿ ತೋರುವ ದೀಪ, ಹಚ್ಚೇವು ಕನ್ನಡದ ದೀಪ ಎಲ್ಲೇ ಇರಲಿ, ಹೇಗೇ ಇರಲಿ ಪ್ರತಿಯೊಬ್ಬ ಕನ್ನಡಿಗರ ಮನ ಮನೆಗಳಲ್ಲಿ ಕನ್ನಡದ ದೀಪ ಬೆಳಗಿಸಿದಂತಹ ಕವಿ, ಶಾಸ್ತ್ರಕಾರ ಹಾಗೂ ಗದ್ಯ ಮತ್ತು ಪದ್ಯಗಳ ಮೂಲಕ ಒಲವಿನ ಶ್ರೇಷ್ಠ ಉನ್ಮಾದದ ಅರ್ಥಪೂರ್ಣ ಬರಹಗಾರ ಅವರಾಗಿದ್ದರು, ಕನ್ನಡ ಭಾಷೆ ಎಂಬುವುದು ಬೆಳಕು ನೀಡುವ ದೀಪ ಇದ್ದ ಹಾಗೆ, ಅದು ಪ್ರಜ್ವಲಿಸುತ್ತ ಎಲ್ಲರ ಮನ ಮಂದಿರಗಳಲ್ಲಿ ಬೆಳಗಲಿ ಎನ್ನುವಂತಹ ಆಶಯವನ್ನಿಟ್ಟುಕೊಂಡಂತಹ ಕವಿ ಯಾರಾದ್ರೂ ಇದ್ರೆ ಅದು ಡಿ.ಎಸ್. ಕರ್ಕಿ ಅವರು ಎಂದು ಹೇಳಿ ತಮ್ಮ ವಿಚಾರ ಮಂಡನೆ ಮುಗಿಸಿದರು.

ಬೆಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಅಮರೇಂದ್ರ ಶೆಟ್ಟಿ ಅವರು ಖ್ಯಾತ ಸಾಹಿತಿ ಶ್ರೀ ಜಿ.ಪಿ. ರಾಜರತ್ನಂ ಅವರ ಬಗ್ಗೆ ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎನ್. ಆರ್. ಶ್ರೀನಾಥ ಅವರು ಮಾಡಿಕೊಟ್ಟರು. ಡಾ. ಅಮರೇಂದ್ರ ಶೆಟ್ಟಿ ಬೆಂಗಳೂರಿನಿಂದ ನಿಸ್ತಂತು ಮಾಧ್ಯಮದ ಮೂಲಕ ಮಾತನಾಡುತ್ತಾ ಎಲ್ಲ ಕನ್ನಡಿಗರಿಗೆ ಹೆಚ್ಚು ಪರಿಚಯವಾಗಿರುವಂತಹ ಹೆಸರು ಡಾ. ಜಿ.ಪಿ. ರಾಜರತ್ನಂ. ಅವರು ಶಿಶು ಸಾಹಿತ್ಯ, ಹಾಸ್ಯ, ನಾಟಕಗಳು, ಜೀವನ ಚರಿತ್ರೆ, ವಿಮರ್ಶೆ ಹೀಗೆ ಅನೇಕ ಕೃತಿಗಳನ್ನು ಬರೆದವರು. ಬಹುಶಃ ಸಿನಿಮಾಗಳಲ್ಲಿ ಮತ್ತು ಬೇರೆ ಬೇರೆ ಗಾಯನ ಕಾರ್ಯಕ್ರಮಗಳಲ್ಲಿ ಅವರ 'ಹೆಂಡ ಹೆಂಡ್ತಿ ಕನ್ನಡ ಪದಗೊಳ್ ಅಂದ್ರೆ ರತ್ನಂಗ್ ಪ್ರಾಣ' ಇದು ಬಹುಶಃ 20ನೇ ಶತಮಾನದುದ್ದಕ್ಕೂ 1956ರಲ್ಲಿ ನಮ್ಮ ನಾಡು ಏಕೀಕೃತ ಮೈಸೂರು ರಾಜ್ಯವಾದ ನಂತರ ಮತ್ತು 1973ರಲ್ಲಿ ಕರ್ನಾಟಕವೆಂದು ಹೆಸರಾದಾಗ, ಆ ಸಂದರ್ಭದಲ್ಲಿ ಕೂಡಾ ಕನ್ನಡಪರವಾದಂತಹ ಮಾತುಗಳು, ಹೋರಾಟಗಳು, ಚಳುವಳಿಗಳು ತುಂಬಾ ತೀವ್ರಗತಿಯಲ್ಲಿ ಬೆಳೆದಂತಹ ಕಾಲಘಟ್ಟ ಅದು. ಕಷ್ಟದ ದಿನಗಳಲ್ಲೂ ಕೂಡಾ ಕನ್ನಡಿಗರ ಆತ್ಮಾಭಿಮಾನವನ್ನು ಅವರ ಭರವಸೆಗಳನ್ನು ಮತ್ತೆ ಮತ್ತೆ ಎತ್ತಿ ಹಿಡಿಯುವಂತಹ ಒಂದು ಮಂತ್ರಶಕ್ತಿಯ ಹಾಗೆ ಜಿ.ಪಿ. ರಾಜರತ್ನಂ ಅವರ ಈ ಪದ್ಯಗಳು ನಮ್ಮ ಮುಂದೆ ಇರುತ್ತವೆ. ಕನ್ನಡದ ಬಹು ದೊಡ್ಡ ಲೇಖಕರು ಮಾಸ್ತಿ, ಡಿವಿಜಿ, ಗೋಕಾಕರು, ಬೇಂದ್ರೆ, ಅವರುಗಳ ಮನೆ ಮಾತು ಕನ್ನಡವೇನಲ್ಲ, ಅವರು ಬೇರೆ ಬೇರೆ ತಾಯಿಭಾಷೆಗಳನ್ನು ಹೊಂದಿದ್ದವರು. ಜಿ.ಪಿ. ರಾಜರತ್ನಂ ಅವರು ಕೂಡಾ ತಮಿಳುನಾಡಿನ ನಾಗಪಟ್ಟಂ ಕಡೆಯಿಂದ ಬಂದಂತವರು. ಆ ಕಾಲದಲ್ಲಿ ಚಾಮರಾಜನಗರದ ಗುಂಡ್ಲುಪೇಟೆಗೆ ಅವರ ಕುಟುಂಬ ವಲಸೆ ಬಂದು ಇಲ್ಲಿಯೇ ವಾಸವಾದರು. ಜಿ.ಪಿ. ರಾಜರತ್ನಂ ಅವರ ಮೊದಲ ಹೆಸರು ಜಿ.ಪಿ. ರಾಜೇಅಯ್ಯಂಗಾರ್!. ಅವರು ವಿದ್ಯಾರ್ಥಿಯಾಗಿದ್ದಾಗಲೇ ತುತ್ತೂರಿ ಎಂಬ ಶಿಶುಗೀತೆಗಳ ಸಂಕಲನವನ್ನು ರಚಿಸಿದರು. ನಂತರ ಅವರು ಬೆಂಗಳೂರು ಜನಗಣತಿ ಕೇಂದ್ರದಲ್ಲಿ ಕೆಲಸ ಮಾಡಿದರು. 1938ರಲ್ಲಿ ಕನ್ನಡ ಪಂಡಿತರಾದರು. ಶಿಶು ಕಾವ್ಯ ಮತ್ತು ಪದ್ಯಗಳಿಗೆ ಹೆಚ್ಚು ಹೆಸರುವಾಸಿಯಾಗಿ ಕನ್ನಡದಲ್ಲಿ ಬೌದ್ಧ ಧರ್ಮ ಮತ್ತು ಜೈನ ಧರ್ಮದ ಅಪರೂಪದ ಪದ್ಯಗಳನ್ನು ತಂದವರು ಜಿ.ಪಿ. ರಾಜರತ್ನಂ ಹಾಗು ಅವರು ಸರ್ವಧರ್ಮದ ಪರಿಚಾರಕರು ಎಂದು ಡಾ. ಅಮರೇಂದ್ರ ವಿವರಿಸಿ ತಮ್ಮ ಮಾತುಗಳನ್ನು ಮುಗಿಸಿದರು.

ಬೆಂಗಳೂರಿನ ಎನ್.ಎಂ.ಕೆ.ಆರ್.ವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸಂಧ್ಯಾ ಹೆಗಡೆ ದೊಡ್ಡಹೊಂಡ ಅವರು ಖ್ಯಾತ ಸಾಹಿತಿ ಶ್ರೀ ಜಿ.ಎಸ್. ಶಿವರುದ್ರಪ್ಪ ಅವರ ಬಗ್ಗೆ ವಿಚಾರಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಪೂಜಾ ಪಿ. ರಾವ್ ಮಾಡಿಕೊಟ್ಟರು. ಡಾ. ಸಂಧ್ಯಾ ಹೆಗಡೆ ಅವರು ಮಾತನಾಡುತ್ತಾ ಪ್ರೀತಿ ಇಲ್ಲದ ಮೇಲೆ–ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡೀತು ಹೇಗೆ? ಪ್ರೀತಿ ಇಲ್ಲದ ಮೇಲೆ– ಮಾತಿಗೆ ಮಾತು ಕೂಡೀತು ಹೇಗೆ? ಅರ್ಥ ಹುಟ್ಟೀತು ಹೇಗೆ? ಬರಿ ಪದಕ್ಕೆ ಪದ ಜೊತೆಗಿದ್ದ ಮಾತ್ರಕ್ಕೆ ಪದ್ಯವಾದೀತು ಹೇಗೆ? ಪ್ರೀತಿ ಇಲ್ಲದ ಮೇಲೆ– ಸಂಶಯದ ಗಡಿಗಳುದ್ದಕ್ಕು ಸಿಡಿಗುಂಡುಗಳ ಕದನ ನಿಂತೀತು ಹೇಗೆ? ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ ನರಳುವ ಪಾಡು ತಪ್ಪೀತು ಹೇಗೆ? ನಮ್ಮ ನಿಮ್ಮ ಮನಸ್ಸು ಮರುಭೂಮಿಯಾಗದ ಹಾಗೆ ತಡೆಗಟ್ಟುವುದು ಹೇಗೆ? ಎಂಬ ಅದ್ಭುತ ಕಾವ್ಯ ಬರೆದಂತಹ ಜಿ.ಎಸ್. ಶಿವರುದ್ರಪ್ಪ ಅವರ ಬಗೆಗೆ ಅತ್ಯಂತ ಸಂತೋಷದಿಂದ ಮಾತನಾಡಲು ಬಯಸುತ್ತೇನೆ ಎಂದರು.

ಶ್ರೀ ಜಿ.ಎಸ್. ಶಿವರುದ್ರಪ್ಪನವರು ಹುಟ್ಟಿದ್ದು ಫೆಬ್ರವರಿ 7ರಂದು 1926ರಂದು ಕನ್ನಡನಾಡಿಗೆ ಬಹಳಷ್ಟು ಕವಿಗಳನ್ನು ಕೊಟ್ಟಂತಹ ನಾಡು ಶಿವಮೊಗ್ಗ ಜಿಲ್ಲೆಯಲ್ಲಿ. 2013ರಲ್ಲಿ ಅವರು ನಮ್ಮನ್ನಗಲಿದರು. ಕವಿ, ವಿದ್ವಾಂಸ, ವಿಮರ್ಶಕ ಮತ್ತು ಸಾಹಿತಿಯಾದ ಇವರು ಕಾವ್ಯವನ್ನು, ಗದ್ಯವನ್ನು, ವಿಮರ್ಶೆಯನ್ನು, ಪ್ರವಾಸ ಕಥನವನ್ನು ಇವರು ಅತ್ಯಂತ ಅಚ್ಚುಕಟ್ಟಾಗಿ ಬರೆದಿದ್ದಾರೆ. ಸಾಮಗಾನದಿಂದ ಆರಂಭವಾದ ಇವರ ಕವಿತೆಯ ಯಾತ್ರೆ ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಪ್ರೀತಿ ಇಲ್ಲದ ಮೇಲೆ, ಗೋಡೆ, ಎದೆ ತುಂಬಿ ಹಾಡಿದೆನು, ಮೇರಾ ದಿಯಾ ಮತ್ತು ಇತರ ಕವನಗಳು. ಸುಮಾರು 18ಕ್ಕಿಂತ ಹೆಚ್ಚು ಕವನ ಸಂಕಲನಗಳನ್ನು



ಜಿ.ಎಸ್. ಶಿವರುದ್ರಪ್ಪ ಅವರು ರಚಿಸಿದ್ದರು. ಆಮೇಲೆ ಗದ್ಯ ಹಾಗೂ ಸಮಾರು 17ಕ್ಕಿಂತ ಹೆಚ್ಚು ವಿಮರ್ಶಾ ಕೃತಿಗಳನ್ನು ಪೂರ್ವ ಪಶ್ಚಿಮ ಇರಬಹುದು, ಸೌಂದರ್ಯ ಸಮೀಕ್ಷೆ, ಕನ್ನಡ ಕವಿಗಳ ಕಾವ್ಯ ಕಲ್ಪನೆ, ಬರೆದಿದ್ದರು. ಇವತ್ತು ಕನ್ನಡ ಸಾಹಿತ್ಯದ ವಿಮರ್ಶೆ ಎಂದು ಬಂದಾಗ ಬಿಟ್ಟು ಹೋಗ್ಲಿಕ್ಕೆ ಸಾಧ್ಯ ಇಲ್ಲ ಅಂತ ಅನ್ನುವಂತಹ ಒಂದು ವಿಮರ್ಶಾ ಪ್ರಕ್ರಿಯೆಯನ್ನು ಹುಟ್ಟು ಹಾಕಿದವರು ಜಿ.ಎಸ್. ಶಿವರುದ್ರಪ್ಪ ಅವರು. ಇವರ ನಾಲ್ಕು ಪ್ರವಾಸ ಕಥನಗಳು, 'ಮಾಸ್ಕೋದಲ್ಲಿ 22 ದಿವಸ,'– ಕನ್ನಡಕ್ಕೆ ಇದು ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿಯನ್ನು ತಂದು ಕೊಟ್ಟಂತಹ ಒಂದು ಕೃತಿ. 'ಇಂಗ್ಲೆಂಡಿನಲ್ಲಿ ಚತುರ್ಮಾಸ', 'ಅಮೆರಿಕದಲ್ಲಿ ಕನ್ನಡಿಗ,' ಮತ್ತು 'ಗಂಗೆಯ ಶಿಖರಗಳಲ್ಲಿ' ಇವೆಲ್ಲವುಗಳು ಕೂಡಾ ಪ್ರವಾಸದ ಬಗೆಗಿನ ಅನುಭವಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಕಟ್ಟಿಕೊಡುವಂತಹ ಅದ್ಭುತ ಕಥೆಗಳಾಗಿವೆ. ದಾವಣಗೆರೆಯಲ್ಲಿ ನಡೆದ 61ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದಂತಹ ಇವರಿಗೆ 2006ರಲ್ಲಿ ರಾಷ್ಟ್ರಕವಿ ಪ್ರಶಸ್ತಿ ಬಂತು, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಇನ್ನು ಮುಂತಾದ ಪ್ರಶಸ್ತಿಗಳು ಮತ್ತು ಡಾಕ್ಟರೇಟ್ ಇವರಿಗೆ ಲಭಿಸಿವೆ ಎಂದರು.

ಮುಂದುವರಿದು ಮಾತನಾಡುತ್ತಾ, ಕನ್ನಡ ಕಟ್ಟುವಲ್ಲಿ ಅತ್ಯಂತ ಶ್ರಮವಹಿಸಿದಂತಹ ಕನ್ನಡನಾಡಿನ ಕನ್ನಡಿಗರ ಮನಸ್ಸನ್ನು ಸದಾ ಕನ್ನಡದ ಪರವಾಗಿ ಎಚ್ಚರ ಇರುವಂತೆ ನೋಡಿಕೊಂಡಂತಹ ಒಬ್ಬ ಅದ್ಭುತ ಕವಿ ಶಿವರುದ್ರಪ್ಪನವರು. ನವೋದಯ ರೀತಿಯಿಂದ ಆರಂಭ ಆದಂತಹ ಇವರ ಕಾವ್ಯ ಯಾತ್ರೆ ಅದು ಕೊನೆಗೆ ನವ್ಯ, ದಲಿತ ಬಂಡಾಯ, ಮಹಿಳಾ ಸಾಹಿತ್ಯ ಇತರ ಕಾಲಘಟ್ಟದವರೆಗೂ ಕೂಡಾ ಮುಂದುವರಿದುಕೊಂಡು ಹೋಯಿತು ಎಂದು ಹೇಳಿ ಡಾ. ಸಂಧ್ಯಾ ಹೆಗಡೆ ತಮ್ಮ ಮಾತುಗಳನ್ನು ಮುಕ್ತಾಯ ಮಾಡಿದರು.

ಅಮೇರಿಕಾದ ಲಾಸ್ ಎಂಜೆಲೀಸ್‌ನಲ್ಲಿ ಆರಂಭವಾಗಿರುವ ಭಾರತದ ಹೊಸ ಕಾನ್ಸುಲೇಟ್ ಕಚೇರಿಯಲ್ಲಿ ಅದರ ಪ್ರಥಮ ಕಾನ್ಸುಲೇಟ್ ಜನರಲ್ ಆಗಿ ನಿಯುಕ್ತರಾದ ಡಾ. ಕೆ.ಜೆ. ಶ್ರೀನಿವಾಸ, ಐ.ಎಫ್. ಎಸ್ ಅವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರ ಕಿರು ಪರಿಚಯವನ್ನು ಮತ್ತು ವಿದೇಶಾಂಗ ವ್ಯವಹಾರಗಳ ಇಲಾಖೆಯಲ್ಲಿ ಪ್ರಸ್ತುತ ಜಂಟಿ ಕಾರ್ಯದರ್ಶಿಯಾಗಿ ಹಾಗು ಹಿಂದೆ ಹಲವಾರು ರಾಷ್ಟ್ರಗಳಿಗೆ ಭಾರತದ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ್ದರ ವಿವರಗಳನ್ನು ನೀಡುತ್ತಾ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ. ಎಸ್. ಮೂರ್ತಿ ಸಭಿಕರಿಗೆ ಮಾಡಿಕೊಟ್ಟರು. ಅಮೇರಿಕಾಗೆ ತೆರಳುತ್ತಿರುವ ಅವರನ್ನು ಸಂಘದ ಪರವಾಗಿ ಕಾರ್ಯಕ್ರಮದಲ್ಲಿ ಗೌರವಪೂರ್ವಕವಾಗಿ ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ನಡುವೆ ಅವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ 2023 ರಲ್ಲಿ ನಾನು ದೆಹಲಿಗೆ ಬಂದಾಗ ನನ್ನನ್ನು ಮೊದಲನೆ ಬಾರಿ ಭೇಟಿಯಾದದ್ದು ತಮಗೆ ನೆನಪಿರಬಹುದು. ಯಕ್ಷಗಾನದ ಕಾರ್ಯಕ್ರಮವಿತ್ತು. ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ನಿಮ್ಮನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ಬರುತ್ತೇನೆ ಎಂದರು. ನಾನು ಆಗಷ್ಟೇ ವೆಸ್ಟ್ ಇಂಡೀಸ್‌ನಿಂದ ಅಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ ತರುವಾಯ ವರ್ಗಾವಣೆಗೊಂಡು ದೆಹಲಿಗೆ ಬಂದಿದ್ದೆ. ಆ ದಿನ ಆಹೋರಾತ್ರಿ ಯಕ್ಷಗಾನ ಪ್ರದರ್ಶನಗೊಂಡು, ಬಹಳ ವರ್ಷಗಳ ನಂತರ ಯಕ್ಷಗಾನದ ಸುಮಧುರ ಅನುಭವವನ್ನು ಈ ದೆಹಲಿ ಕರ್ನಾಟಕ ಸಂಘ ನನಗೆ ಕೊಟ್ಟಿತ್ತು. ನಾನು ಸಂಘವು ಆಯೋಜಿಸಿದ ಹಲವಾರು ಕಾರ್ಯಕ್ರಮಗಳಲ್ಲಿ ಪ್ರೇಕ್ಷಕನಾಗಿ ಭಾಗವಹಿಸಿದ್ದೇನೆ. ದೆಹಲಿಯಲ್ಲಿ ಇಂತಹ ಒಂದು ಕನ್ನಡದ ಕಂಪನ್ನು ಎಲ್ಲಾ ಕಡೆ ಹಬ್ಬಿಸಿದಂತಹ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಸಂಘದ ಪದಾಧಿಕಾರಿಗಳಿಗೆ ಧನ್ಯವಾದಗಳು ಮತ್ತು ಎಲ್ಲರಿಗೂ ಶುಭವಾಗಲಿ ಎಂದರು.

ಅನಂತರ ಬೆಂಗಳೂರಿನ ವಿಜಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಸ್.ಎಲ್. ಮಂಜುನಾಥ ಅವರು ಖ್ಯಾತ ಕವಿ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ ಅವರ ಬಗ್ಗೆ ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಅವರು ಮಾಡಿಕೊಟ್ಟರು. ಡಾ. ಎಸ್.ಎಲ್. ಮಂಜುನಾಥ್ ಅವರು ಮಾತನಾಡುತ್ತಾ ಡಾ. ಎನ್.ಎಸ್.ಎಲ್. ನನ್ನ ಅಚ್ಚುಮೆಚ್ಚಿನ ಮೇಷ್ಟ್ರು ಹಾಗು ನನ್ನಂತಹ ನೂರಾರು ವಿದ್ಯಾರ್ಥಿಗಳಿಗೆ ಆಕರ್ಷಕವಾಗಿ ಪಾಠ ಮಾಡುತ್ತಿದ್ದಂತಹ ಮೇಷ್ಟ್ರಾಗಿದ್ದಂತವರು. ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರು ಮೊದಲಿಗೆ ಬೆಂಗಳೂರಿನ ಎಪಿಎಸ್ ಕಾಲೇಜಿನಲ್ಲಿ ಕನ್ನಡದ ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸುತ್ತಾರೆ. ನಂತರ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಉಪನ್ಯಾಸಕರಾಗಿ ಆಯ್ಕೆಗೊಂಡು ಮುಂದೆ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಮತ್ತು ಆರ್ಟ್ಸ್ ವಿಭಾಗಕ್ಕೆ ಡೀನ್ ಆಗಿ ಕಾರ್ಯ ನಿರ್ವಹಿಸಿ ನಿವೃತ್ತರಾದರು ಎಂದು ತಿಳಿಸಿದರು.

ಎನ್.ಎಸ್.ಎಲ್. ಅವರು ನಾಡಿನ ಶ್ರೇಷ್ಠ ಕವಿಗಳು ಪ್ರೌಢ ವಿಮರ್ಶಕರು, ಜನಪ್ರಿಯ ಭಾವಗೀತಾಕಾರರು, ಸಮಗ್ರ ಅನುವಾದಕರು, ವಿದ್ವಾಂಸರು ಮತ್ತು ಅತ್ಯುತ್ತಮ ವಾಗ್ಮಿಗಳಾಗಿದ್ದಂತವರು. ಇವರು 1936 ಅಕ್ಟೋಬರ್ 29ರಂದು ಕರ್ನಾಟಕದ ಶಿವಮೊಗ್ಗದಲ್ಲಿ ಜನಿಸಿದರು. ಅವರು ಒಂದೂವರೆ ವರ್ಷದ ಮಗುವಾಗಿರುವಾಗಲೇ ತಂದೆಯನ್ನು ಕಳಕೊಂಡಂತವರು. ತಾಯಿಗೆ ಅಷ್ಟೊಂದು ವಿದ್ಯಾಭ್ಯಾಸ ಇರಲಿಲ್ಲ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರು ದೊಡ್ಡವರಾಗುತ್ತಲೇ ಮಕ್ಕಳಿಗೆ ಮನೆ ಪಾಠ ಹೇಳಿ ಸಿಗುವ ಸಂಪಾದನೆಯಿಂದಲೇ ಮನೆಯನ್ನು ನಡೆಸುವಂತಹ ಜವಾಬ್ದಾರಿಯನ್ನು ಹೊತ್ತಂತವರು. ಹೀಗೆ ಕಷ್ಟದಲ್ಲಿಯೇ ಬೆಳೆದ ಅವರು ತನ್ನ ಎಸ್.ಎಸ್.ಎಲ್.ಸಿ. ಓದನ್ನು ಮತ್ತು ಇಂಟರ್‌ಮೀಡಿಯೇಟ್ ಕೋರ್ಸನ್ನು ಶಿವಮೊಗ್ಗದಲ್ಲಿ ಮುಗಿಸುವಾಗ ಅವರಿಗೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಕನ್ನಡ ಅಧ್ಯಾಪಕರಾಗಿದ್ದರು. ನವೋದಯದ ಕಾಲ ಮುಗಿಯಿತು ಎನ್ನುವ ಸಮಯದಲ್ಲಿ ಭರವಸೆಯ ಬೆಳಕಾಗಿ ಬಂದವರೆಂದರೆ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರು. ತಮ್ಮ ನವ್ಯ ಕವಿತೆಗಳ ಜೊತೆ ಜೊತೆಯಲ್ಲಿಯೇ ನೂರಾರು ಭಾವಗೀತೆಗಳನ್ನು ಬರೆದವರು. ಇವರಿಗೆ ಬೆಂಬಲವಾಗಿ ನಿಂತ ಗಾಯಕರೆಂದರೆ ಮೈಸೂರು ಅನಂತಸ್ವಾಮಿ, ಸಿ. ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ರತ್ನಮಾಲಾ ಪ್ರಕಾಶ್, ಮಾರುತಿ ಶರ್ಮ ಮೊದಲಾದ ಹೆಸರಾಂತ ಗಾಯಕರುಗಳು, ಇವರು ರಚನೆ ಮಾಡಿದಂತಹ ಭಾವಗೀತೆಗಳನ್ನು ಹಾಡಿ ಹೆಚ್ಚು ಹೆಚ್ಚು ಜನಪ್ರಿಯ ಮಾಡಿದ್ದಾರೆ. ವೃತ್ತ ಎನ್ನುವಂತಹ ಕವನ ಸಂಕಲನವನ್ನು ಹೊರತಂದ ನಂತರ ಸುಳಿ, ನಿನ್ನೆಗೆ ನನ್ನ ಮಾತು, ಚಿತ್ರಕೂಟ, ಹೊಳೆ ಸಾಲಿನ ಮರ ಕವನಸಂಕಲನಗಳನ್ನು ರಚನೆ ಮಾಡಿದ್ದಾರೆ. ಭಾವಗೀತೆಗಳನ್ನು ಹೆಚ್ಚು ಜನಪ್ರಿಯಗೊಳಿಸಿದಂತಹ ಕವಿ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಎಂದು ತಿಳಿಸುತ್ತಾ ಡಾ. ಎಸ್.ಎಲ್. ಮಂಜುನಾಥ್ ತಮ್ಮ ವಿಚಾರ ಮಂಡನೆ ಮುಕ್ತಾಯಗೊಳಿಸಿದರು.

ತರುವಾಯ ಬೆಂಗಳೂರಿನ ಆಕ್ಸ್‌ಫರ್ಡ್ ಕಾಲೇಜಿನ ಅಧ್ಯಾಪಕರು ಮತ್ತು ಲೇಖಕರಾದ ಶ್ರೀ ಅಶ್ವಥ್ ಕಲ್ಲದೇವರಹಳ್ಳಿ ಅವರು ಈಗಾಗಲೇ ಕವನ ಸಂಕಲನ ಕಥಾ ಸಂಕಲನ ಬಿಡಿ ಲೇಖನ ಮತ್ತು ನಾಟಕ ಸಾಹಿತ್ಯವನ್ನು ರಚಿಸಿ ಹಾಗೂ ಎರಡು ಕಿರು ಚಿತ್ರಗಳನ್ನು ನಿರ್ದೇಶಿಸಿ ಅಪಾರ ಅಭಿಮಾನಿಗಳನ್ನು ಹೊಂದಿದಂತ ಬಹುಮುಖ ಪ್ರತಿಭೆ. ಇವರು ಕುವೆಂಪು ಅವರ ಪುತ್ರ ಖ್ಯಾತ ಸಾಹಿತಿ ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬಗ್ಗೆ ವಿಚಾರ ಮಂಡನೆ ಮಾಡುವುದಕ್ಕೂ ಮೊದಲು ಅವರ ಕಿರು ಪರಿಚಯವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೋಟ ಮಾಡಿಕೊಟ್ಟರು. ಶ್ರೀ ಅಶ್ವಥ್ ಕಲ್ಲದೇವರಹಳ್ಳಿ ಅವರು ಮಾತನಾಡುತ್ತಾ ಹಿಮಾಲಯದಷ್ಟು ಎತ್ತರದಲ್ಲಿ ನಿಂತಂತಹ ಒಂದು ಅದ್ಭುತ ಶಕ್ತಿ ತೇಜಸ್ವಿಯವರದ್ದು. ಯಾವುದೇ ವಿಚಾರಗಳಿರಬಹುದು, ಅವರು ಬರೀ ಲೇಖಕರಾಗಿ ಕಾಣಲಿಲ್ಲ, ವೈಚಾರಿಕವಾಗಿ ಕಾಣಲಿಲ್ಲ, ಪರಿಸರದಲ್ಲಿ ಎಲ್ಲ ವಿಚಾರದಲ್ಲೂ ರೀತಿಯಲ್ಲೂ ಸಾಹಿತ್ಯದ ಒಳಗೂ ಪರಿಸರದ ಮೂಲಕ, ನಿಸರ್ಗದ ಮೂಲಕ ಆ ಪ್ರಕೃತಿಯ ಮೂಲಕ ಕಟ್ಟಿಕೊಟ್ಟದ್ದು ಇವತ್ತಿನ ಕಾಲಘಟ್ಟಕ್ಕೆ ಎಷ್ಟು ಸಶಕ್ತವಾಗಿದೆ, ಇವತ್ತಿನ ಕಾಲಘಟ್ಟಕ್ಕೆ ತೇಜಸ್ವಿಯವರ ಕೊಡುಗೆ ನಗರ ಜೀವನದಿಂದ ಹಳ್ಳಿ ಕಡೆ ಮುಖಮಾಡಿದಂತಹ ಅವರ ವ್ಯಕ್ತಿತ್ವ, ಅದನ್ನು ಹೇಗೆ ಸಮಾಜ ಸುಧಾರಣೆಗಳ ಮೂಲಕ ಪ್ರಕೃತಿಯ ಜೊತೆಜೊತೆಗೆ ತಿಳಿಸಿಕೊಟ್ಟ ಶ್ರೇಯ ಅವರದ್ದು ಎಂದರು.

ಮಂತ್ರ ಮಾಂಗಲ್ಯದ ಮಹತ್ವವನ್ನು ಕುವೆಂಪು ಅವರು ಜಾರಿ ಮಾಡಿದರು ಅದನ್ನು ಚಾಚೂ ತಪ್ಪದೆ ಪಾಲಿಸಿದ್ದು ತೇಜಸ್ವಿಯವರು 60–70ರ



ದಶಕದಲ್ಲಿ ಈ ರೀತಿಯ ಸಾಮಾಜಿಕ ಚಿಂತನೆಗಳನ್ನು ಒಳಗೊಂಡಂತಹ ಅನೇಕ ಸಾಹಿತ್ಯದ ಒಡನಾಡಿಗಳಾದ ಲೇಖಕ ಪಿ. ಲಂಕೇಶ್, ರೈತ ಚಳುವಳಿಗಾರ ಪ್ರೊ. ನಂಜುಂಡಸ್ವಾಮಿ ಮತ್ತು ಗಾಯಕ ಅನಂತಮೂರ್ತಿ ಅವರೊಟ್ಟಿಗಿದ್ದರು. ತೇಜಸ್ವಿಯವರು ಬಹುಶಃ ಸಾಮಾಜಿಕ ಸುಧಾರಣೆಗಳತ್ತ ಮನಸ್ಸು ಮಾಡಿದ್ದರು. ಅವರನ್ನು ನೋಡುತ್ತಾ ಹೋದರೆ ಕ್ರಿಯಾಶೀಲತೆ ಮತ್ತು ಚಲನಶೀಲತೆಗೆ ಅವರು ಕೇಂದ್ರ ಬಿಂದು ಎಂದೆನಿಸುತ್ತದೆ ಎಂದರು. ದೂರದ ದೆಹಲಿಯಲ್ಲಿ ಸದಾ ಒಂದಿಲ್ಲೊಂದು ಅದ್ಭುತ ಕಾರ್ಯಕ್ರಮಗಳನ್ನು ಏರ್ಪಡಿಸಿ ಇಲ್ಲಿನ ನಮ್ಮ ಕನ್ನಡ ನಾಡಿನ ಜನರಿಗೆ ಕರುನಾಡಿನಲ್ಲಿಯೇ ಇದ್ದಂತೆ ಭಾಸವಾಗುವ ಹಾಗೆ ಕಾರ್ಯಕ್ರಮ ರೂಪಿಸುತ್ತಾ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ನಾಡಿನಲ್ಲಿಯೇ ಅಲ್ಲದೆ ದೇಶ ವಿದೇಶದಲ್ಲೂ ಜನ ಮನ್ನಣೆ ಗಳಿಸಿದ್ದಾರೆ ಎಂದು ಶ್ಲಾಘಿಸುತ್ತಾ ಈ ಕಾರ್ಯಕ್ರಮದಲ್ಲಿ ವಿಚಾರ ಮಂಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ತಮ್ಮ ಮಾತನ್ನು ಮುಗಿಸಿದರು.

ಕಾರ್ಯಕ್ರಮದ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ ಕುಮಾರ್ ಅವರು ಮಾತನಾಡುವ ಮೊದಲು ಸಂಘದ ಅಭಿಮತ ಪತ್ರಿಕೆ ಸಂಪಾದಕರಾದ ಶ್ರೀ ಕೆ.ಎಸ್. ಮೂರ್ತಿ ಅವರನ್ನು ಸಭೆಗೆ ಪರಿಚಯಿಸಿದರು ಶ್ರೀ ಪ್ರಶಾಂತ ಕುಮಾರ್ ಅವರು ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಾಲೆ ಈ ಎರಡೂ ಸಂಸ್ಥೆಗಳಲ್ಲಿ 2014ರಿಂದ ಸಕ್ರಿಯವಾಗಿದ್ದೇನೆ. ಈ ರೀತಿಯ ಸಾಹಿತ್ಯ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ಇದೇ ಮೊದಲ ಬಾರಿಗೆ ಅಂದುಕೊಂಡಿದ್ದೇನೆ ಎಂದರು. ಈ ಸಂದರ್ಭದಲ್ಲಿ ಅವರು ಕವಿ ಜಿ.ಪಿ. ರಾಜರತ್ನಂ ಅವರನ್ನು ನೆನೆಪಿಸಿಕೊಳ್ಳುತ್ತಾ ಅವರಿಗೂ ಹಾಗೂ ದೆಹಲಿ ಕನ್ನಡ ಶಾಲೆಗೂ ಒಂದು ಸಂಬಂಧವಿದೆ, ಅದೇನೆಂದರೆ 1978ರಲ್ಲಿ, 50ನೇ ಅಖಿಲ ಭಾರತ ಸುವರ್ಣ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿದ್ದು ದೆಹಲಿ ಕನ್ನಡ ಶಾಲೆಯಲ್ಲಿ ಮತ್ತು ಅದರ ಅಧ್ಯಕ್ಷತೆಯನ್ನು ವಹಿಸಿದ್ದವರು ಶ್ರೀ ಜಿ.ಪಿ. ರಾಜರತ್ನಂ. ಅವರ ಸವಿನೆನಪಿಗಾಗಿ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿದ ಸಭಾಂಗಣಕ್ಕೆ ಅವರ ಹೆಸರನ್ನು ಇಡಲಾಗಿದೆ. ಇಂದು ಸಾಂಸ್ಕೃತಿಕ ಕಾರ್ಯಕ್ರಮ ನೀಡುತ್ತಿರುವ ಎರಡು ತಂಡಗಳ ವಿಶೇಷತೆ ಎಂದರೆ ಒಂದು ತಂಡ ಕನ್ನಡದ ಮಕ್ಕಳಾದರೆ ಇನ್ನೊಂದು ತಂಡ ಕನ್ನಡೇತರರ ಮಕ್ಕಳು, ಅವರ ಮಾತೃ ಭಾಷೆ ಕನ್ನಡವಲ್ಲ. ಈ ಕನ್ನಡೇತರ ಮಕ್ಕಳು ಪ್ರಸ್ತುತಪಡಿಸಿದ ಹಾಡು ಅತ್ಯಂತ ಚೆನ್ನಾಗಿ ಮೂಡಿ ಬಂದು ಪ್ರಶಂಸೆಗೆ ಒಳಗಾಗಿದೆ ಇದಕ್ಕೆ ಶ್ರಮಿಸಿದ ಕನ್ನಡ ಶಿಕ್ಷಕರಾದ ಶ್ರೀ ಅರವಿಂದ ಬಿಜ್ಜಿ ಹಾಗೂ ಶಾಲೆಯ ಎಲ್ಲಾ ಶಿಕ್ಷಕರಿಗೂ ಮತ್ತು ಆಡಳಿತ ಮಂಡಳಿಗೆ ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಜಿ.ಪಿ. ರಾಜರತ್ನಂ ಅವರು ಮಕ್ಕಳ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅದಕ್ಕಾಗಿ ಆ ಸಭಾಂಗಣದಲ್ಲಿ ಪ್ರತೀ ವರ್ಷ ನಮ್ಮ ವಾರ್ಷಿಕ ಕಾರ್ಯಕ್ರಮದಲ್ಲಿ ಕನ್ನಡ ವಿಭಾಗಕ್ಕೆ ಸಂಬಂಧಿಸಿದಂತಹ, ಸಾಹಿತಿಗಳಿರಬಹುದು, ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಕವಿಗಳಿರಬಹುದು, ಅವರ ಕಾರ್ಯಕ್ರಮವನ್ನು ಸದಾ ಆಯೋಜನೆ ಮಾಡುತ್ತೇವೆ. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೇ ವಿಚಾರ ಮಂಡನೆಯನ್ನು ಮಾಡುತ್ತಾರೆ, ಅವರಿಗೆ ಶಿಕ್ಷಕರಿಂದ ತರಬೇತಿಯನ್ನು ನೀಡಲಾಗುತ್ತದೆ. ಒಂದು ಕವಿಯ ಕುರಿತಾಗಿ ವಿಚಾರ ಮಂಡನೆಗೆ 5 ಜನರಿಗೆ ಅವಕಾಶವನ್ನು ಕೊಡುತ್ತೇವೆ. ಈ ರೀತಿಯಾಗಿ ಒಂದು ವರ್ಷದಲ್ಲಿ ಸುಮಾರು 40





ರಿಂದ 50 ಮಕ್ಕಳನ್ನು ತಯಾರು ಮಾಡುತ್ತೇವೆ. ಅದರ ಪ್ರತಿಫಲವಾಗಿ ಇಂದು ಇಲ್ಲಿ ನಮ್ಮ ಶಾಲೆಯ ಮಕ್ಕಳು ಕಾರ್ಯಕ್ರಮವನ್ನು ಅತ್ಯಂತ ಚೆನ್ನಾಗಿ ನೀಡಲು ಸಾಧ್ಯವಾಯಿತು ಎಂದರೆ ಅತಿಶಯೋಕ್ತಿಯಾಗಲಾರದು ಎಂದು ಹೇಳಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ಅವರು ತಮ್ಮ ಮಾತುಗಳನ್ನು ಮುಗಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮತ್ತೋರ್ವ ಮುಖ್ಯ ಅತಿಥಿಗಳಾದ ಡಾ. ಎಚ್. ಸಿ. ಲಿಂಗರಾಜ್, ಐಜಿ/ ಡೈರೆಕ್ಟರ್ ಮೆಡಿಕಲ್, ಐಟಿಬಿಪಿ, ಗೃಹ ಮಂತ್ರಾಲಯ, ಭಾರತ ಸರ್ಕಾರ ಅವರ ಕಿರು ಪರಿಚಯವನ್ನು ಶ್ರೀ ಕೆ.ಎಸ್. ಮೂರ್ತಿ ಅವರು ಮಾಡಿಕೊಟ್ಟರು. ಡಾ. ಲಿಂಗರಾಜ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ ಐಟಿ ಬಿಪಿ ನಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಂಡು ತಾವು ತಮ್ಮ ಸೇವಾವಧಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ತಮ್ಮನ್ನು ಆಹ್ವಾನಿಸಿದ್ದಕ್ಕೆ ಸಂಘದ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ ಧನ್ಯವಾದ ಸಲ್ಲಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಸಂಘದ ಸಭಾಂಗಣದ ಕೆಲಸ ಕಾರ್ಯಗಳು ನಡೆಯುತ್ತಿದ್ದುದರಿಂದ ಕಾರ್ಯಕ್ರಮಗಳು ನಿಲ್ಲಬಾರದು ಎಂಬ ಉದ್ದೇಶದಿಂದ ಸೆಮಿನಾರ್ ಹಾಲ್‌ನಲ್ಲಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಯೋಚನೆಯಿಂದ ಸಾಹಿತ್ಯ ಕಾರ್ಯಕ್ರಮಗಳನ್ನ ಏರ್ಪಡಿಸುವ ಪರಿಕಲ್ಪನೆಯೊಂದಿಗೆ ಮೊದಲು ಎಂಟು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕುರಿತಾದ ಸಾಹಿತ್ಯ ಕಾರ್ಯಕ್ರಮಗಳನ್ನು ಹಾಗೂ ನಂತರದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರುಗಳಿಸಿದ ಹಿರಿಯ ಸಾಹಿತಿಗಳು ಹಾಗೂ ಕವಿಗಳ ಕಾರ್ಯಕ್ರಮವನ್ನು ಆಯೋಜಿಸುವ ನಿರ್ಧಾರ ತೆಗೆದುಕೊಂಡು ಸಾಹಿತ್ಯೋತ್ಸವವನ್ನು ಪ್ರಾರಂಭಿಸಿದ್ದೆವು. ಇಂದು ಅದರ ಸಮಾರೋಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸುಮಾರು 7 ವಾರಗಳಲ್ಲಿ 25 ಜನ ಸಾಹಿತಿಗಳು ಹಾಗೂ ಕವಿಗಳ ಕಾರ್ಯಕ್ರಮವನ್ನು ಮಾಡಲಾಗಿದೆ. ಒಟ್ಟು 40 ಜನ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸುಮಾರು 25 ಅತಿಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಸುಮಾರು 70 ಜನ ಚಿಕ್ಕ ಮಕ್ಕಳು ಸೇರಿದಂತೆ ಸ್ಥಳೀಯ ಕಲಾವಿದರು ಜ್ಞಾನಪೀಠ ಪುರಸ್ಕೃತರ ಹಾಗೂ ಸಾಹಿತಿಗಳ ಕವಿತೆಗಳನ್ನು ಹಾಡಿದ್ದಾರೆ. ಈ ಸಾಹಿತ್ಯೋತ್ಸವ ಕಾರ್ಯಕ್ರಮದ ನಂತರ ಗೀತೋತ್ಸವ ಕಾರ್ಯಕ್ರಮವನ್ನು ತದ ನಂತರ ನಾಟಕೋತ್ಸವವನ್ನು ಹಾಗು ಪ್ರತೀ ಶನಿವಾರ ಮತ್ತು ಭಾನುವಾರ ವಿವಿಧ ಕಾರ್ಯಕ್ರಮವನ್ನು ಸಂಘದಲ್ಲಿ ಹಮ್ಮಿಕೊಳ್ಳುವುದಾಗಿ ತಿಳಿಸಿದರು. ಈ ಸಾಹಿತ್ಯ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಎಲ್ಲ ಅತಿಥಿಗಳಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ನಮ್ಮ ಸ್ಥಳೀಯ ಕಲಾವಿದರುಗಳಿಗೆ, ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಾಗೂ ಎಲ್ಲ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿ ತಮ್ಮ ಅಧ್ಯಕ್ಷೀಯ ಭಾಷಣ ಮುಗಿಸಿದರು.

ಸ್ಥಳೀಯ ಕಲಾವಿದರಾದ ಶ್ರೀಮತಿ ಪೂಜಾ ಪಿ. ರಾವ್ ಅವರು ಜಿ.ಎಸ್. ಶಿವರುದ್ರಪ್ಪನವರ 'ಎಲ್ಲೋ ಹುಡುಕಿದೆ ಇಲ್ಲದ ದೇವರ', ಶ್ರೀಮತಿ ಜಯಶ್ರೀ ಬಸವರಾಜು ಅವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ರಚಿತ 'ನಿಂತ ನೀರ ಕಲಕಬೇಡಿ', ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ರಚಿತ 'ಮಲಗು ಮಲಗೆನ್ನ ಮಗುವೇ', ಶ್ರೀಮತಿ ಚೈತ್ರಾ ತೋಳ್ಪಾಡಿ ಅವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ರಚಿತ 'ಎಲ್ಲಿ ಜಾರಿತೋ ಮನವು', ಶ್ರೀಮತಿ

ಉಮಾ ಶ್ರೀನಿವಾಸ್ ಜಿ.ಎಸ್. ಶಿವರುದ್ರಪ್ಪನವರ 'ಕಾಣದ ಕಡಲಿಗೆ', ಶ್ರೀಮತಿ ಮಮತಾ ಶಿವರಾಮ್ ಅವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರ ರಚಿತ 'ಬಾ ಒಲವೇ ಬಂಜೆ ಎದೆಯಲ್ಲಿ ಬೆಳೆ', ಶ್ರೀಮತಿ ಮಂಜುಳಾ ನಾಗರಾಜ ಅವರು ಜಿ.ಎಸ್. ಶಿವರುದ್ರಪ್ಪನವರ 'ಹಾಡು ಹಳೆಯದಾದರೇನು', ಶ್ರೀ ಎಚ್.ಜಿ. ಶಿವರಾಮ್ ಅವರು ಜಿ.ಪಿ. ರಾಜರತ್ನಂ ಅವರ 'ಬ್ರಹ್ಮ ನಿಂಗೆ ಜೋಡಿಸ್ತೀನಿ' ಗೀತೆ ಮತ್ತು ಜನಕಪುರಿ ಮಹಿಳಾ ಮಂಡಳಿಯ ಸದಸ್ಯರು ಕೆ.ಎಸ್. ನಿಸಾರ್ ಅಹಮದ್ ಅವರ ಕವಿತೆ 'ಜೋಗದ ಸಿರಿ ಬೆಳಕಿನಲ್ಲಿ', ಗುರುಗಾಂವ್ ಕನ್ನಡ ಸಂಘದ ಸದಸ್ಯೆಯರು ಕೆ.ಎಸ್. ನಿಸಾರ್ ಅಹಮದ್ ಅವರಿಂದ ರಚಿತ 'ಕನ್ನಡವೆಂದರೆ ಬರೀ ನುಡಿಯಲ್ಲ', ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ಮಕ್ಕಳು ಡಿ.ಎಸ್. ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ' ಹಾಗು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರ 'ಮಳೆ ಬರಲಿ ಪ್ರೀತಿಯ ಬನಕ್ಕೆ' ಕವನಗಳನ್ನ ತಮ್ಮ ಸುಶ್ರಾವ್ಯ ಕಂಠಸಿರಿಯಲ್ಲಿ ಹಾಡಿ ಸಭಿಕರನ್ನು ರಂಜಿಸಿ ಸಂಗೀತದ ರಸದೌತಣ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಎಲ್ಲರಿಗೂ ವಂದನೆಗಳನ್ನು ಅರ್ಪಿಸುವುದರೊಂದಿಗೆ ಸಾಹಿತ್ಯೋತ್ಸವದ ಸಮಾರೋಪ ಕಾರ್ಯಕ್ರಮ ಸಂಪನ್ನವಾಯಿತು.

***ವೆಂಕಟೇಶ ಹೆಚ್.***

ಚಿತ್ರದುರ್ಗ, ನವದೆಹಲಿ





























ಕಳೆದ 40 ವರ್ಷಗಳಿಂದ ಬಯಲು ಸೀಮೆಯ ಜಲಮೂಲಗಳ ಸಂರಕ್ಷಣೆ ಕುರಿತು ಅಧ್ಯಯನ, ನದಿ ಜೋಡಣೆ, ಕೃಷಿ, ಪರಿಸರ ಬಗ್ಗೆ ಅಪಾರ ಕಾಳಜಿಯುಳ್ಳ ಮತ್ತು ಹೋರಾಟ ನಡೆಸಿದವರಾದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಶ್ರೀ ಸಿ.ಎ. ಚೌಡಪ್ಪನವರನ್ನು ದಿನಾಂಕ 10.08.2025 ರಂದು ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರ ಪರವಾಗಿ ಅಭಿನಂದಿಸಲಾಯಿತು.

Saujanya PRINTING PRESS

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.



ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ



B-303, Okhla Industrial Area,
Phase-I, New Delhi - 110020
Tel.: 011-40520770
Mob.: +91 - 9811104398, 9811604398
Email: saujanyapp2010@gmail.com,
hpgp2006@gmail.com

Delhi Karnataka Sangha Abhimata
Sept-2025, Vol. No.35, Issue No.12, Price Rs.1/-
RNI Regn. No. 53405/91, DL-SW-01/4016/22-24
Date of Publication : Sept 8th / 9th, Posting Date : 10th / 11th, Total Pages-48 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy

## ಕನ್ನಡದ ಮೇರು ಸಾಹಿತಿಗಳ ಮತ್ತು ಕವಿಗಳ ಕುರಿತು ಹಮ್ಮಿಕೊಂಡ ಸಾಹಿತ್ಯೋತ್ಸವ ಕಾರ್ಯಕ್ರಮಗಳು


ಡಾ. ಡಿ.ವಿ. ಗುಂಡಪ್ಪ


ಡಾ. ಎಂ. ಗೋಪಾಲಕೃಷ್ಣ ಅಡಿಗ


ಶ್ರೀ ಬಿ.ಎಂ. ಶ್ರೀಕಂಠಯ್ಯ


ಡಾ. ಎಸ್.ಎಲ್. ಭೈರಪ್ಪ


ಸಾಹಿತ್ಯೋತ್ಸವ ಮಾಲಿಕೆ–5


ಶ್ರೀ ಎಂ. ಗೋವಿಂದ ಪೈ


ಡಾ. ಸಿದ್ಧಲಿಂಗಯ್ಯ


ಶ್ರೀ ಪು.ತಿ. ನರಸಿಂಹಾಚಾರ್


ಶ್ರೀ ಕೆ.ಎಸ್. ನರಸಿಂಹಸ್ವಾಮಿ


ಸಾಹಿತ್ಯೋತ್ಸವ ಮಾಲಿಕೆ–6


ಶ್ರೀ ಪಂಜೆ ಮಂಗೇಶರಾಯ


ಡಾ. ಚೆನ್ನವೀರ ಕಣವಿ


ಶ್ರೀ ಅ.ನ. ಕೃಷ್ಣರಾಯ


ಶ್ರೀ ಡಿ.ಎಸ್. ಕರ್ಕಿ


ಶ್ರೀ ಜಿ.ಪಿ. ರಾಜರತ್ನಂ


ಡಾ. ಜಿ.ಎಸ್. ಶಿವರುದ್ರಪ್ಪ


ಸಾಹಿತ್ಯೋತ್ಸವ ಮಾಲಿಕೆ–7


ಶ್ರೀ ಎನ್.ಎಸ್. ಲಕ್ಷ್ಮೀನಾರಾಯಣ ಭಟ್


ಶ್ರೀ ಕೆ.ಎಸ್. ನಿಸಾರ್ ಅಹಮದ್


ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ